ಅಖಿಲ ಭಾರತ ೭೭ನೆಯ ಕನ್ನಡ ಸಾಹಿತ್ಯ ಸಮ್ಮೇಳನ

ತಿರುಮಲಾರ್ಯ ವಿರಚಿತ

ಚಿಕ್ಕದೇವರಾಯ ವಂಶಾವಳಿ

ಅನುವಾದ

ಮ. ಭಾ. ಭೋಯಿ

ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು-೧೮

ಅಖಿಲ ಭಾರತ ೬೭ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಕಟಣೆ

ತಿರುಮಲಾರ್ಯ ವಿರಚಿತ

ಚಿಕ್ಕದೇವರಾಯ ವಂಶಾವಳಿ

ಗದ್ಯಾನುವಾದ

ಮ.ಬಾ. ಭೋಯಿ

ಕನ್ನಡ ಸಾಹಿತ್ಯ ಪರಿಷತ್ತು

ಪಂಪಮಹಾಕವಿ ರಸ್ತೆ ಚಾಮರಾಜಪೇಟೆ

ಬೆಂಗಳೂರು - ೫೬೦ ೦೧೮

CHIKKADEVARAYA VAMSHAVALI - by Thirumalarya
Published by : Kannada Sahitya Parishat Pampa Mahakavi Road
Chamarajpet Bangalore - 560 018
Pages : xvi + 130 ; Price : 25.00, 1999

ಎರಡನೆಯ ಮುದ್ರಣ : ೧೯೯೯
ಬೆಲೆ : ರೂ. ಇಪ್ಪತ್ತೈದು

ಮುದ್ರಣ : ಬಿ. ಎಂ. ಶ್ರೀ. ಅಚ್ಚುಕೂಟ ಆಫ್‌ಸೆಟ್
ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ ಚಾಮರಾಜಪೇಟೆ ಬೆಂಗಳೂರು - ೧೮

ಅಧ್ಯಕ್ಷರ ನುಡಿ

ಕನ್ನಡ ನಾಡಿನ ಸಾಹಿತ್ಯಾಸಕ್ತರೆಲ್ಲರೂ ಆದರದಿಂದ ಎದುರುನೋಡುತ್ತಿರುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಇನ್ನಷ್ಟು ಅರ್ಥಪೂರ್ಣವಾಗಿ ಮಾಡಬೇಕೆಂಬುದು ಕನ್ನಡ ಸಾಹಿತ್ಯ ಪರಿಷತ್ತಿನ ಹಂಬಲ. ಈ ದಿಸೆಯಲ್ಲಿ ೧೯೯೮ರ ಫೆಬ್ರವರಿ ೨೬, ೨೭ ಮತ್ತು ೨೮ರಂದು ಕನಕಪುರದಲ್ಲಿ ಜರುಗುವ ಅರವತ್ತೇಳನೆಯ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಅರವತ್ತೇಳು ಪುಸ್ತಕಗಳನ್ನು ಪ್ರಕಟಿಸುವ ಮಹತ್ವದ ನಿರ್ಧಾರವನ್ನು ಪರಿಷತ್ತು ಕೈಗೊಂಡಿತು.

ಈ ಪುಸ್ತಕಗಳ ಆಯ್ಕೆಯ ಬಗ್ಗೆ ಸಮಿತಿಯೊಂದು ಚಿಂತನೆ ನಡೆಸಿದಾಗ, ಕನ್ನಡ ಸಾಹಿತ್ಯದ ಅನೇಕ ಹೆಮ್ಮೆಯ ಕೃತಿಗಳು ಈಗ ವಿದ್ವಾಂಸರ, ವಿದ್ಯಾರ್ಥಿಗಳ ಮತ್ತು ಆಸಕ್ತರ ಕೈಗೆ ಲಭ್ಯವಾಗುತ್ತಿಲ್ಲ ಎಂಬ ಕೊರತೆ ಎದ್ದು ಕಂಡಿತು. ಅವುಗಳನ್ನು ಕನ್ನಡಿಗರ ಕೈಗೆ ಮತ್ತೆ ಕೊಡಬೇಕು ಮತ್ತು ಇನ್ನೂ ಹಲವು ಹೊಸ ಪುಸ್ತಕಗಳನ್ನು ಪ್ರಕಟಿಸಬೇಕು ಎಂದು ನಿರ್ಧರಿಸಲಾಯಿತು. ಹೀಗಾಗಿ ಹಳೆಯ ಮತ್ತು ಹೊಸ ಪ್ರಕಟಣೆಗಳು ಸೇರಿದ ಅರವತ್ತೇಳು ಪುಸ್ತಕಗಳ ಮಾಲಿಕೆಯನ್ನು ಅರವತ್ತೇಳನೆಯ ಸಮ್ಮೇಳನದ ಸವಿನೆನಪಿಗೆ ಪರಿಷತ್ತು ಅರ್ಪಿಸುತ್ತಿದೆ. ಪರಿಷತ್ತಿನ ಬಿ.ಎಂ.ಶ್ರೀ. ಅಚ್ಚುಕೂಟವನ್ನು ಬಲಪಡಿಸಲು ಡಿ.ಟಿ.ಪಿ. ವಿಭಾಗ ಮತ್ತು ಆಫ್‌ಸೆಟ್ ಮುದ್ರಣಯಂತ್ರವನ್ನು ಸ್ಥಾಪಿಸಿದ್ದೇವೆ. ಪರಿಷತ್ತಿನ ಶಾಶ್ವತ ಆಸ್ತಿಯಾಗಿ ಈ ಮುದ್ರಣಾಲಯವು ನಮ್ಮ ಎಲ್ಲಾ ಪ್ರಕಟಣೆಗಳನ್ನೂ ಮುದ್ರಿಸಿ ಹೊರತರಲೆಂಬುದೇ ನಮ್ಮ ಆಶಯ.

ಅರವತ್ತೇಳು ಎಂಬ ಸಂಖ್ಯೆ ಕೇವಲ ಸಾಂಕೇತಿಕ ಎಂದು ಪರಿಷತ್ತು ಭಾವಿಸುತ್ತದೆ. ವರ್ತಮಾನದ ಬೆಳವಣಿಗೆಗಳನ್ನು ಅನುಸರಿಸಿ ಕನ್ನಡ ಸಾಹಿತ್ಯವನ್ನು ಸಮಗ್ರವಾಗಿ ಬೆಳೆಸುವ ಜವಾಬ್ದಾರಿಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕೆಂಬ ಅರಿವು ಪರಿಷತ್ತಿಗಿದೆ. ಆದ್ದರಿಂದ ಪ್ರಖ್ಯಾತ ಮತ್ತು ಉದಯೋನ್ಮುಖ ಸಾಹಿತಿ - ವಿದ್ವಾಂಸರ ಕೃತಿಗಳನ್ನು ಅದು ನಿರಂತರವಾಗಿ ಪ್ರಕಟಿಸಲಿದೆ. ಕನ್ನಡ - ಕನ್ನಡ - ಇಂಗ್ಲಿಷ್ ನಿಘಂಟು, ಸಂಕ್ಷಿಪ್ತ ನಿಘಂಟುಗಳಂತಹ ಮಹತ್ವದ ಯೋಜನೆಗಳು ಕನ್ನಡದ ಅಗತ್ಯವನ್ನು ಸದಾ ಪೂರೈಸಲಿವೆ. ಪರಿಷತ್ತು ತನ್ನ ಈ ಹೊಣೆಗಾರಿಕೆಯನ್ನು ನಿರ್ವಹಿಸಲು ರಾಜ್ಯಸರ್ಕಾರ ಮತ್ತು ಸಾರ್ವಜನಿಕರ ಉದಾರ ಸಹಕಾರ ಬಹಳ ಅಗತ್ಯ. ಇದು ಅಬಾಧಿತವಾಗಿ ಮುಂದುವರೆಯಲಿ ಎಂದು ಪರಿಷತ್ತು ಆಶಿಸುತ್ತದೆ.

ಅರವತ್ತೇಳು ಪುಸ್ತಕಗಳ ಆಯ್ಕೆಗೆ ಸಹಕರಿಸಿದ ಪ್ರಕಟಣಾ ಸಮಿತಿಗೆ, ಈ ಯೋಜನೆಗೆ ನೆರವು ನೀಡಿದ ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀ. ಪಿ.ಜಿ.ಆರ್. ಸಿಂಧ್ಯ ಅವರಿಗೆ ಮತ್ತು ಅಚ್ಚು ಕೂಟದ ಸಿಬ್ಬಂದಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಎನ್. ಬಸವಾರಾಧ್ಯ

ಅಧ್ಯಕ್ಷರು

ಉಪೋದ್ಘಾತ

ನಮ್ಮ ನಾಡಿನ ಪ್ರಾಚೀನ ಚರಿತ್ರೆಯನ್ನು ತಿಳಿಯಬಯಸುವವರಿಗೆ ನಮ್ಮ ಸಾಹಿತ್ಯದಲ್ಲಿಯ ಚಾರಿತ್ರಿಕ ಕೃತಿಗಳ ಕೊರತೆ ಎದ್ದು ಕಾಣುತ್ತದೆ. ಅಷ್ಟೇ ಅಸಮಾಧಾನವೂ ಉಂಟಾಗುತ್ತದೆ. ಇದು ಒಟ್ಟು ಭಾರತೀಯ ಸಾಹಿತ್ಯಕ್ಕೇ ಅನ್ವಯಿಸುವ ಮಾತು. ಸಂಸತದ 'ರಾಜ ತರಂಗಿಣಿ'ಯೊಂದು ಮಾತ್ರ ಈ ಮಾತಿಗಿರುವ ಅಪವಾದ. ಕನ್ನಡದಲ್ಲಿ ಪಂಪನ 'ವಿಕ್ರಮಾರ್ಜುನ ವಿಜಯ' ಮತ್ತು ರನ್ನನ 'ಗದಾಯುದ್ಧ'ಗಳಲ್ಲಿ ಇತಿಹಾಸವನ್ನು ಪೌರಾಣಿಕ ವ್ಯಕ್ತಿ ಹಾಗೂ ಘಟನೆಗಳೊಂದಿಗೆ ತಗುಳ್ಚಿ ಹೇಳುವ ಪ್ರಯತ್ನವೇನೋ ಕಂಡುಬರುತ್ತದೆ. ಆದರೆ ಅಂಥ ಕೃತಿಗಳಿಂದ ನಮ್ಮ ನಾಡಿನ ಇತಿಹಾಸ ನಿಚ್ಚಳವಾಗಿ ತಿಳಿದುಬರುತ್ತದೆಂದಾಗಲೀ ಪಾಶ್ಚಾತ್ಯರ ಇತಿಹಾಸ ಕೃತಿಗಳಿಂದ ಮಾನವ ಕುಲಕ್ಕೆ ದೊರೆಯುವಂಥ ಪ್ರಯೋಜನಗಳು ದೊರೆಯುತ್ತವೆಯೆಂದಾಗಲೀ ಭಾವಿಸಬಾರದು. ಕಾರಣ ಭಾರತೀಯ ಸಾಹಿತ್ಯದ ಈ ಲೋಪದಿಂದಾಗಿ ನಮ್ಮ ಸಮಾಜ ಮತ್ತು ಸಂಸತಿಗಳು ಹೇಳತೀರದಷ್ಟು ಹಾನಿ ಅನುಭವಿಸಿವೆ. ನಮ್ಮ ದೇಶದ ಪ್ರಾಚೀನರಿಗೆ ಚರಿತ್ರೆ ಮತ್ತು ಭೂಗೋಲಗಳ ಸರಿಯಾದ ಜ್ಞಾನವಿದ್ದಿದ್ದರೆ ಮೊನ್ನೆ ಮೊನ್ನೆಯವರೆಗೆ ಬರಿದಾಗಿದ್ದ ಆಸ್ಟ್ರೇಲಿಯದಂಥ ವಿಶಾಲ ಭೂಖಂಡ ದೂರದ ಯೂರೋಪಿನ ಜನತೆಯ ಪಾಲಾಗುತ್ತಿರಲಿಲ್ಲ.

ಪಂಪ-ರನ್ನರಂತೆ ಕನ್ನಡದಲ್ಲಿ ಹಲವಾರು ಜನ ಕವಿಗಳು ಚರಿತ್ರೆಯನ್ನು ಕಾವ್ಯಗಳಲ್ಲು ಮುಚ್ಚುಮರೆಯಿಂದ ತಂದು ತಮ್ಮ ನಾಡಿನ ದೊರೆಗಳನ್ನೂ ಆಶ್ರಯದಾತರನ್ನೂ ಸುಪ್ರೀತಗೊಳಿಸುವ ಪ್ರಯತ್ನ ಮಾಡಿದ್ದಾರೆ. ಈ ಅಭಿಪ್ರಾಯದ ಕಕ್ಷೆಯಲ್ಲಿ ಕನ್ನಡದ ಪ್ರಥಮ ಉಪಲಬ್ಧ ಕೃತಿಯಾದ ಕವಿರಾಜಮಾರ್ಗವೂ ಸೇರುತ್ತದೆ. ತರುವಾಯದ ಒಂದನೆಯ ಗುಣವರ್ಮನ ಶೂದ್ರಕ, ಪೊನ್ನನ ಭುವನೈಕರಾಮಾಭ್ಯುದಯಗಳೂ ಈ ಸಾಲಿಗೆ ಸೇರತಕ್ಕ ಕೃತಿಗಳಾದರೂ ಇಂದು ಇವು ಉಪಲಬ್ಧವಿಲ್ಲ.

'ಚಿಕ್ಕದೇವರಾಯ ವಂಶಾವಳಿ', 'ಚಿಕ್ಕದೇವರಾಯ ವಿಜಯ'ದಂಥ ನೇರ ಚಾರಿತ್ರಿಕ ಕಾವ್ಯಗಳು ವಿಜಯನಗರ ಸಾಮ್ರಾಜ್ಯಪೂರ್ವದ ಕನ್ನಡ ಸಾಹಿತ್ಯದಲ್ಲಿ ಇದ್ದ ಬಗೆಗೆ ಈವರೆಗೆ ಖಚಿತವಾದ ಆಧಾರಗಳಾವವೂ ಬೆಳಕಿಗೆ ಬಂದಿಲ್ಲ. ತರುವಾಯದಲ್ಲಿ ಮಾತ್ರ ಕುಮಾರರಾಮ ಸಾಂಗತ್ಯ, ಕಂಠೀರವ ನರಸರಾಜ ವಿಜಯಯಂಥ ಕೃತಿಗಳು ರಚನೆಗೊಂಡದ್ದು ಸ್ಪಷ್ಟವಿದೆ. ಅದಕ್ಕೂ ಮುಂಚೆ ಇಂಥ ಕಾವ್ಯ ಪರಂಪರೆಯೊಂದು ಕನ್ನಡದಲ್ಲಿತ್ತೆ ? ವಿಚಾರಣೀಯವಾದ ಅಂಶ. ಮತಕ್ಕೆ ಅತಿಯಾದ ಪ್ರಾಧಾನ್ಯ ಬಂದು ತಮ್ಮ ತಮ್ಮ ಮತವನ್ನು ಸಮರ್ಥಿಸುವುದೇ ಕವಿಗಳಿಗೆ ಮುಖ್ಯವಾಗಿದ್ದುದರಿಂದ ಇಂಥ ಪ್ರಯತ್ನಗಳು ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ನಡೆದಿರಲಿಕ್ಕಿಲ್ಲವೆಂಬ ಭಾವನೆ ಉಂಟಾಗುತ್ತದೆ. ಮೇಲುನೋಟಕ್ಕೆ ಈ ಭಾವನೆ ಸರಿ ಎಂದೆನಿಸಿದರೂ ಚಾರಿತ್ರಿಕ ಕಾವ್ಯಗಳು ಇದ್ದಿರಬಹುದಾದ ಸಾಧ್ಯತೆಯನ್ನು ಸಂಪೂರ್ಣವಾಗಿ ತಳ್ಳಿಹಾಕಲಾಗದು. ಈ ಸಂದರ್ಭದಲ್ಲಿ ಹರಿಹರ ಕವಿಯ ಪ್ರತಿಭಟನಾತ್ಮಕ ಧ್ವನಿಯನ್ನು ಗಮನಿಸಬೇಕು.

"ಮನುಜರ ಮೇಲೆ ಸಾವವರ ಮೇಲೆ ಕನಿಷ್ಠರ ಮೇಲೆ ಪದ್ಯಮಂ ತನತನಗಿಂದ್ರ ಕರ್ಣ ದಧೀಚಿ ಬಲೀಂದ್ರನೆಂದು ತಾನನವರತಂ ಪೊಗಟ್ಟು ಕೆಡಬೇಡಲೆ ಮಾನವ".

ಹರಿಹರನ ಈ ಮಾತುಗಳಿಂದ ಆತನಿಗಿಂತ ಪ್ರಾಚೀನರೂ ಸಮಕಾಲೀನರೂ ಆದ ಅನೇಕ ಕವಿಗಳು ರಾಜಮಹಾರಾಜರುಗಳನ್ನು ಸ್ತುತಿಸುವ ಉದ್ದೇಶದಿಂದ ಕಾವ್ಯ ರಚಿಸುತ್ತಿದ್ದುದು ಸ್ಪಷ್ಟವಿದೆ. ಹರಿಹರನ ಈ ಪ್ರತಿಭಟನೆ ತಗುಳ್ಚಿ ಹೇಳುವ ಕಾವ್ಯಗಳಿಗೆ ಮಾತ್ರ ಸೀಮಿತವಾಗಿರದೆ ನಂಜುಂಡ, ಗೋವಿಂದ ವೈದ್ಯ, ತಿರುಮಲಾರ್ಯರಂಥ ಕವಿಗಳು ರಚಿಸಿದ ಚಾರಿತ್ರಿಕ ಕಾವ್ಯಗಳಿಗೂ ಅನ್ವಯಿಸಬಹುದಾಗಿದೆ. ಆರನೆಯ ವಿಕ್ರಮಾದಿತ್ಯನನ್ನು ಕುರಿತು ರಚಿಸಿದ 'ವೀರ ವಿಕ್ರಮಾಂಕದೇವ ಚರಿತ'ವು ಸಂಸತದಲ್ಲಿದೆ. ಜೊತೆಗೆ ಆಗಿನ ಕಾಲದ ಕರ್ನಾಟಕದ ಶಾಸನಗಳಲ್ಲಿ ಬರುವ ರಾಜಮಹಾರಾಜರುಗಳು ಗದ್ಯ-ಪದ್ಯರೂಪದ ವರ್ಣನೆಗಳು ವೈಭವಪೂರ್ಣವಾದ ಶೈಲಿಯಲ್ಲಿ ಸಾವಿರ-ಸಾವಿರ ಸಂಖ್ಯೆಯಲ್ಲಿ ದೊರೆತುದನ್ನು ಇಲ್ಲಿ ಲಕ್ಷಿಸಬೇಕು. ಶಾಸನಗಳ ವೈಖರಿ ಮತ್ತು ಧಾಟಿಗಳನ್ನು ಗಮನಿಸಿದರೆ ಕನ್ನಡದಲ್ಲಿ ನೇರವಾದ ಚಾರಿತ್ರಿಕ ಕಾರ್ಯಗಳು ಮೊದಲಲ್ಲಿ ರಚನೆಗೊಳ್ಳುತ್ತಿದ್ದವೆಂಬ ಭಾವನೆ ನಮಗುಂಟಾಗುತ್ತದೆ. ಈ ಭಾವನೆ ಸಂಪೂರ್ಣ ಸರಿ ಎಂದು ನಿರ್ಧಾರವಾಗಿ ಹೇಳುವುದು ಸಧ್ಯಕ್ಕೆ ಸಾಧ್ಯವಿಲ್ಲದ್ದರಿಂದ ಈಗಿನ ಮಟ್ಟಿಗೆ ನಂಜುಂಡನೇ ಇಂಥ ಕೃತಿಯನ್ನು ಕನ್ನಡದಲ್ಲಿ ರಚಿಸಿದ ಪ್ರಥಮಕವಿಯೆಂದು ಹೇಳಬೇಕಾಗಿದೆ.

ನಂಜುಂಡನ ಕುಮಾರರಾಮ ಚರಿತೆಯ ತರುವಾಯ ಗೋವಿಂದವೈದ್ಯನು 'ರಣಧೀರ ಕಂಠೀರವ ನರಸರಾಜ ವಿಜಯ'ವನ್ನು ರಚಿಸಿದ್ದಾನೆ. ಕಂಠೀರವ ನರಸರಾಜ ವಿಜಯವು ಮೈಸೂರು ದೊರೆಗಳನ್ನು ಕುರಿತಿರುವ ಚಾರಿತ್ರಿಕ ಕಾವ್ಯವಾದುದರಿಂದ ತಿರುಮಲಾರ್ಯನು ಇದರಿಂದ ನೇರವಾದ ಪ್ರೇರಣೆ ಪಡೆದಿದ್ದಾನೆನ್ನಬಹುದು. ಆತನ 'ಚಿಕ್ಕದೇವರಾಯ ವಂಶಾವಳಿ'ಯಲ್ಲದೆ 'ಚಿಕ್ಕದೇವರಾಯ ವಿಜಯ'ವೂ ಇದೇ ಮಾದರಿಯ ಕಾವ್ಯವಾಗಿದೆ. 'ಅಪ್ರತಿಮ ವೀರಚರಿತ'ವು ಅಲಂಕಾರಶಾಸ್ತ್ರ ಗ್ರಂಥವಾಗಿದ್ದರೂ ಅದರಲ್ಲಿ ಚರಿತ್ರೆಯು ಗಣನೀಯ ಪ್ರಮಾಣದಲ್ಲಿ ಹಣೆಕಿಕ್ಕಿದೆ. ಇದರಿಂದ ಕನ್ನಡದ ಚಾರಿತ್ರಿಕ ಕಾವ್ಯಗಳಿಗೆ ತಿರುಮಲಾರ್ಯನ ಕಾಣಿಕೆ ತುಂಬ ಗಮನಾರ್ಹವಾದುದೆಂದು ಕಂಡುಬರುತ್ತದೆ.

ತಿರುಮಲಾರ್ಯನು ಮೈಸೂರು ದೊರೆ ದೊಡ್ಡದೇವರಾಯನ ಪುರಾಣಿಕನಾಗಿದ್ದ ಅಳಹಿಯ ಸಿಂಗರಾರ್ಯನ ಮಗನು. ಚಿಕ್ಕದೇವರಾಯನು ಹುಟ್ಟಿದ ವರ್ಷವೇ ಅಂದರೆ ಕ್ರಿ.ಶ. ೧೬೪೫ಕ್ಕೆ ಸರಿಹೊಂದುವ ಪಾರ್ಥಿವ ಸಂವತ್ಸರದಲ್ಲಿ, ಚಿಕ್ಕದೇವರಾಯನಿಗಿಂತ ಸ್ವಲ್ಪ ಮುಂಚೆ ಕವಿ ತಿರುಮಲಾರ್ಯನು ಜನಿಸಿದನು. ಈ ಸಂಗತಿ ಪ್ರಸ್ತುತ ಕಾವ್ಯದಿಂದಲೂ 'ಚಿಕ್ಕದೇವರಾಯ ವಿಜಯ'ದಿಂದಲೂ ತಿಳಿದುಬರುತ್ತದೆ. ಕಂಠೀರವ ನರಸರಾಜನ ಪ್ರಧಾನಿಯಾಗಿದ್ದ ಅಪ್ಪಾಜಯ್ಯನ ಮಗಳು ಸಿಂಗಮ್ಮನೆಂಬವಳು ಇವನ ತಾಯಿ. ಮೊದಲಲ್ಲಿ ಈತನು ಆಸ್ಥಾನ ವಿದ್ವಾಂಸನಾಗಿದ್ದು ಕ್ರಿ.ಶ. ೧೬೮೫ರಲ್ಲಿ, ಮೊದಲಿದ್ದ ಮಂತ್ರಿ ವಿಶಾಲಾಕ್ಷ ಪಂಡಿತನ ಮರಣದ ತರುವಾಯ ಮಂತ್ರಿಯಾದನು. ಈ ನಡುವೆ ಕ್ರಿ.ಶ. ೧೬೯೫ ರಿಂದ ಮೂರು

ವರ್ಷಗಳ ಕಾಲ ಮಂತ್ರಿಪದವಿಯನ್ನು ತ್ಯಜಿಸಿದ್ದು ಆಮೇಲೆ ಕ್ರಿ. ಶ. ೧೬೯೮ ರಿಂದ ೧೭೦೬ ವರೆಗೆ ಆ ಅಧಿಕಾರದಲ್ಲಿದ್ದನು. ಈತನ ತಂದೆ ಅಳಹಿಯ ಸಿಂಗರಾರ್ಯನಿಗೂ ಈತನಿಗೂ ಸಿಂಗಮಾರನಹಳ್ಳಿ ಮೊದಲಾದ ಗ್ರಾಮಗಳು ದೊಡ್ಡದೇವರಾಯನ ಕಾಲದಿಂದಲೇ ಸರ್ವಮಾನ್ಯವಾಗಿ ದೊರೆತಿದ್ದವು. ಚಿಕ್ಕದೇವರಾಯನು ಕ್ರಿ. ಶ. ೧೭೦೪ರಲ್ಲಿ ತೀರಿಕೊಳ್ಳುವಾಗ ಚಿಕ್ಕವಯಸ್ಸಿನ ತನ್ನ ಮಗ ಕಂಠೀರವ ನರಸರಾಜನನ್ನು ಮಂತ್ರಿ ತಿರುಮಲಾರ್ಯ ಹಾಗೂ ಪ್ರಧಾನಿ ಅಪ್ಪಾಜಯ್ಯನ ಕೈಗೆ ಒಪ್ಪಿಸಿ ಅವರಿಗೆ ರಾಜ್ಯದ ಸರ್ವಾಧಿಕಾರವನ್ನು ಒಪ್ಪಿಸಿದನೆಂದು ತಿಳಿಯುತ್ತದೆ. ಇದರಿಂದ ಚಿಕ್ಕದೇವರಾಯನಿಗೆ ತಿರುಮಲಾರ್ಯನ ಮೇಲೆ ವಿಶೇಷ ವಿಶ್ವಾಸವಿದ್ದಂತೆ ವ್ಯಕ್ತವಾಗುತ್ತದೆ ಹಾಗೂ ಚಿಕ್ಕದೇವರಾಯನ ರಾಜ್ಯಾಭಿವೃದ್ಧಿಯ ಕಾರ್ಯದಲ್ಲಿ ತಿರುಮಲಾರ್ಯನು ಬಹುಮಹತ್ವದ ಪಾತ್ರ ನಿರ್ವಹಿಸಿದನೆಂದು ಗೊತ್ತಾಗುತ್ತದೆ.

ಎಂ. ಎ. ರಾಮಾನುಜಯ್ಯಂಗಾರ್ಯರು 'ಅಪ್ರತಿಮವೀರಚರಿತ'ದಲ್ಲಿ ಬಂದಿರುವ ಯುದ್ಧವರ್ಣನೆಗಳ ಬಲದಿಂದ ಅಪ್ರತಿಮವೀರಚರಿತವು ಚಿಕ್ಕದೇವರಾಯನು ಯುವರಾಜ ನಾಗಿದ್ದಾಗ ರಚಿತವಾದುದೆಂದು ಊಹಿಸಿದ್ದಾರೆ (ಅಪ್ರತಿಮವೀರಚರಿತದ ಉಪೋದ್ಘಾತ). ಚಿಕ್ಕದೇವರಾಯನು ಪಟ್ಟವೇರಿದ್ದು ಕ್ರಿ.ಶ. ೧೬೭೨ರಲ್ಲಿ ಎಂದು ತಿಳಿದುಬರುತ್ತದೆ. ಎಂ. ಎ. ರಾಮಾನುಜಯ್ಯಂಗಾರ್ಯರ ಅಭಿಪ್ರಾಯವನ್ನು ಒಪ್ಪುವುದಾದರೆ ತಿರುಮಲಾರ್ಯನು ಆ ಕೃತಿಯನ್ನು ಆ ಪೂರ್ವದಲ್ಲಿಯೇ ಎಂದರೆ ತನ್ನ ೨೭ನೆಯ ವರ್ಷಕ್ಕಿಂತ ಪೂರ್ವದಲ್ಲಿಯೇ ರಚಿಸಿದನೆನ್ನಬೇಕಾಗುತ್ತದೆ. ಆದರೆ ವಸ್ತುಸ್ಥಿತಿ ಹೀಗಿದ್ದಂತೆ ತೋರುವುದಿಲ್ಲ. 'ಅಪ್ರತಿಮ ವೀರಚರಿತ'ದಲ್ಲಿ ಸ್ವತಃ ಕವಿ "ಚಿಕ್ಕದೇವರಾಯಂ ಶ್ರೀರಂಗಪಟ್ಟಣದೊಳ್ ರತ್ನ ಸಿಂಹಾಸನಾ ರೂಢನಾಗಿ ಸಾಮ್ರಾಜ್ಯಗೈಯ್ಯುತ್ತಿರೆ" (ಅ. ವೀ. ಚ. ೬೪) ಎಂದು ಹೇಳಿದ್ದಾನೆ. ಅವನ ಪಡೆಯವರು ನಾಲ್ಕೂ ದಿಕ್ಕುಗಳಲ್ಲಿ ದಿಗ್ವಿಜಯಗೈದು ಕಪ್ಪ ಕಾಣಿಕೆಗಳನ್ನು ಎತ್ತಿ ತಂದರೆಂದು ಅದರಲ್ಲಿಯೇ (೧-೭ ; ೧-೮ ; ೧-೯) ಸ್ಪಷ್ಟವಾಗಿ ಉಲ್ಲೇಖಿಸಿದ್ದಾನೆ. ಕಾರಣ ಪ್ರಸ್ತುತ ಕಾರ್ಯವನ್ನು ಚಿಕ್ಕದೇವರಾಯನು ರಾಜ್ಯಾಧಿಕಾರ ವಹಿಸಿಕೊಂಡ ಮೇಲೆಯೇ ರಚಿಸಿದ್ದು ಸ್ಪಷ್ಟವಾಗುತ್ತದೆ. ಇದರಿಂದ ಕವಿ ತಿರುಮಲಾರ್ಯ ಆ ವೇಳೆಗೆ ತಕ್ಕಷ್ಟು ಪ್ರೌಢಾವಸ್ಥೆಗೆ ಬಂದಿದ್ದನೆಂಬುದು ಸ್ಪಷ್ಟಪಡುತ್ತದೆ.

'ಚಿಕ್ಕದೇವರಾಯ ವಂಶಾವಳಿ'ಯನ್ನು ಮೊದಲು ರಚಿಸಿ ತರುವಾಯ 'ಚಿಕ್ಕದೇವರಾಯ ವಿಜಯ'ವನ್ನು ಬರೆದಿರಬೇಕೆಂದು ಅವುಗಳ ಪರಸ್ಪರ ಹೋಲಿಕೆಯಿಂದ ಕಂಡುಕೊಳ್ಳ ಬಹುದಾಗಿದೆ. ಗದ್ಯಕಾವ್ಯವನ್ನು ಮೊದಲು ರಚಿಸಿ ಪದ್ಯಕಾವ್ಯವನ್ನು ತರುವಾಯ ಬರೆದಿರ ಬೇಕೆನ್ನುವ ಸಾಧ್ಯತೆಯಷ್ಟೆ ಈ ಅಭಿಪ್ರಾಯಕ್ಕೆ ಕಾರಣವಲ್ಲ. ಚಿಕ್ಕದೇವರಾಯ ವಂಶಾವಳಿಯು ಮೊಟಕಾಗಿದ್ದು ಅದರಲ್ಲಿ ಚಿಕ್ಕದೇವರಾಯನ ದಿಗ್ವಿಜಯ ವರ್ಣನೆಯು ಪೂರ್ಣವಾಗಿಲ್ಲ. ಅದೇ ಚಿಕ್ಕದೇವರಾಯ ವಿಜಯದಲ್ಲಿ ದೇವರಾಜನ ದಿಗ್ವಿಜಯ ಚಿಕ್ಕದೇವರಾಯನ ರಾತ್ರಿ ವಿಹಾರಾದಿಗಳು ಸಂಪೂರ್ಣವಾಗಿ ವರ್ಣಿತವಾಗಿವೆ. ಆದುದರಿಂದ 'ಚಿಕ್ಕದೇವರಾಯ ವಂಶಾವಳಿ'ಯ ತರುವಾಯವೇ 'ಚಿಕ್ಕದೇವರಾಯ ವಿಜಯ'ವು ರಚಿಸಲ್ಪಟ್ಟಿದೆಯೆಂದು ಹೇಳಬಹುದು.

ಇದಲ್ಲದೆ 'ಅಪ್ರತಿಮವೀರಚರಿತ'ದಲ್ಲಿ ಚಿಕ್ಕದೇವರಾಯನು 'ತನ್ನ ದಿಗ್ವಿಜಯಾದಿಗಳನ್ನು ಮುಗಿಸಿ, ಸಕಲ ಪ್ರಜೆಗಳನ್ನು ಕಾಪುಗೈದು ತರುವಾಯವೇ ಸಂಗೀತ-ಸಾಹಿತ್ಯಗಳ ಒಳ್ಪನ್ನು ಆರೈದ'ನೆಂದು ಹೇಳಿರುವುದರಿಂದ (ಅ. ವೀ. ಚ. ೧-೧೦) ಚಿಕ್ಕದೇವರಾಯನು ತನ್ನ ಕಾಲದ ಮುಖ್ಯ ಯುದ್ಧಗಳನ್ನು ಮುಗಿಸಿ ವಿರಾಮವಾಗಿದ್ದ ಕಾಲದಲ್ಲಿ 'ಅಪ್ರತಿಮವೀರಚರಿತ'ವು ರಚಿತವಾಗಿದೆಯೆಂಬುದು ಸ್ಪಷ್ಟಪಡುತ್ತದೆ. ಚಿಕ್ಕದೇವರಾಯ ವಂಶಾವಳಿ ಮತ್ತು ಚಿಕ್ಕದೇವರಾಯ ವಿಜಯಗಳಲ್ಲಿ ನಾಯಕನು ಇನ್ನೂ ಯುವರಾಜನಾಗಿದ್ದ ಸಂಗತಿಯನ್ನು ಮಾತ್ರ ಹೇಳಿದೆಯಲ್ಲದೆ ಆತನು ಪಟ್ಟವೇರಿದ ಉಲ್ಲೇಖವಿಲ್ಲ. ಆದುದರಿಂದ ತಿರುಮಲಾರ್ಯನು ತನ್ನ ಕನ್ನಡ ಕೃತಿಗಳನ್ನು 'ಚಿಕ್ಕದೇವರಾಯ ವಂಶಾವಳಿ, ಚಿಕ್ಕದೇವರಾಯ ವಿಜಯ, ಅಪ್ರತಿಮವೀರಚರಿತ' ಈ ಕ್ರಮದಲ್ಲಿ ರಚಿಸಿದ್ದಾನೆಂದು ಧಾರಾಳವಾಗಿ ಹೇಳಬಹುದು.

ಚಾರಿತ್ರಿಕ ಸಂಗತಿಗಳು :

ಈ ಕಾವ್ಯದಲ್ಲಿ ಬೋಳ ಚಾಮರಾಜನ ಮಗ ರಾಜರಸನಿಂದ ಮೊದಲು ಮಾಡಿ ಯುವರಾಜ ಚಿಕ್ಕದೇವರಾಯನ ದಿಗ್ವಿಜಯ ಯಾತ್ರೆಯವರೆಗಿನ ಮೈಸೂರು ದೊರೆಗಳ ಚರಿತ್ರೆಯನ್ನು ವರ್ಣಿಸಿದೆ. ರಾಜರಸನ ಅಧಿಕಾರಾವಧಿ ಕ್ರಿ. ಶ. ೧೫೭೮ರಿಂದ ಕ್ರಿ.ಶ. ೧೬೧೭ರವರೆಗೆ ಎಂದೂ, ಚಿಕ್ಕದೇವರಾಯನ ಆಳ್ವಿಕೆಯ ಕಾಲ ಕ್ರಿ. ಶ. ೧೬೭೨ರಿಂದ ೧೭೦೪ ಎಂದೂ ತಿಳಿದುಬರುತ್ತದೆ. ಎಂದರೆ ಚಿಕ್ಕದೇವರಾಯ ವಂಶಾವಳಿಯಲ್ಲಿ ಕವಿ ತಿರುಮಲಾರ್ಯನು ಸುಮಾರು ಒಂದುನೂರು ವರ್ಷಗಳ ಚರಿತ್ರೆಯನ್ನು ಅಡಕಗೊಳಿಸಿದ್ದಾನೆ.

ಬೋಳಚಾಮರಾಜನ ಮಗ ರಾಜರಸನ ವರ್ಣನೆಯಿಂದ ಕಾವ್ಯ ಪ್ರಾರಂಭವಾಗುತ್ತದೆ. ಅವನ ನಾಲ್ಕು ಜನ ಮಕ್ಕಳಲ್ಲಿ ಹಿರಿಯನಾದ ರಾಜರಸನು ತನ್ನ ತಮ್ಮಂದಿರುಗಳಾದ ಬೆಟ್ಟದ ಚಾಮರಾಜ, ದೇವರಾಜ ಮತ್ತು ಚನ್ನರಾಜರ ಜೊತೆಗೆ ಮೈಸೂರಿನಲ್ಲಿ ಸುಖವಾಗಿ ರಾಜ್ಯವಾಳುತ್ತಿದ್ದನೆಂದು ಹೇಳಿದೆ. ತರುವಾಯ ವಿಜಯನಗರ ಸಾಮ್ರಾಜ್ಯದ ಇತಿಹಾಸವನ್ನು ಸಂಕ್ಷಿಪ್ತವಾಗಿ ಹೇಳಿ, ಶ್ರೀರಂಗಪಟ್ಟಣದಲ್ಲಿ ಪ್ರತಿನಿಧಿಯಾಗಿ ಆಳುತ್ತಿದ್ದ ತಿರುಮಲರಾಯನನ್ನು ಸೋಲಿಸಿ ರಾಜರಸನು ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡ ಘಟನೆ ಸುಂದರವಾಗಿ ಚಿತ್ರಿತವಾಗಿದೆ. ಮಧುರೆಯ ಮುತ್ತಿಗೆಯಲ್ಲಿ ತಿರುಮಲರಾಯನು ತನ್ನ ಚಿಕ್ಕಪ್ಪನಿಗೆ ದ್ರೋಹಬಗೆದು ಶ್ರೀರಂಗಪಟ್ಟಣಕ್ಕೆ ಬಂದುದು, ಈ ತೆಲುಗರಾಯನ ಆಡಳಿತ ವೈಖರಿ, ಪಾಳೆಯಗಾರರೆಲ್ಲ ಸೇರಿ ಮೈಸೂರವರ ವಿರುದ್ಧ ರಾಯನಿಗೆ ಚಾಡಿ ಹೇಳುವುದು, ತಿರುಮಲರಾಯ-ರಾಜರಸರ ವಿರಸ, ಕೆಸರೆಯ ಕಾಳಗ, ಶ್ರೀರಂಗಪಟ್ಟಣದ ಮುತ್ತಿಗೆ, ಅದಕ್ಕೆ ಹೆದರಿ ತಿರುಮಲೆರಾಯನು ಪಟ್ಟಣದಿಂದ ಹೊರಬಿದ್ದು ಹೋಗಿ ಮಾಲಂಗಿ ಮಡುವಿನಲ್ಲಿ ಮುಳುಗಿ ಆತ್ಮಹತ್ಯೆ ಮಾಡಿಕೊಂಡದ್ದು ಮುಂತಾದುವು ಆಕರ್ಷಕವಾಗಿ ಮೂಡಿನಿಂತಿವೆ. ರಾಜರಸನು ಆ ಪೂರ್ವದಲ್ಲಿಯೇ ಶ್ರೀರಂಗಪಟ್ಟಣದ ರಂಗನಾಥ

ದೇವಾಲಯಕ್ಕೆ ಪ್ರಾಕಾರ ಕಟ್ಟಿಸಿದ್ದನೆಂಬ ಸಂಗತಿಯೂ ಉಲ್ಲೇಖಗೊಂಡಿದೆ. ಇದರಿಂದ ರಾಜರಸನ ಕಾಲಕ್ಕಾಗಲೇ ಮೈಸೂರು ದೊರೆಗಳು ಶ್ರೀ ವೈಷ್ಣವ ಮತದತ್ತ ಒಲವುಳ್ಳವರಾಗಿದ್ದರೆಂದು ತಿಳಿದುಬರುತ್ತದೆ.

ರಾಜರಸನ ತರುವಾಯ ಪಟ್ಟವೇರಿದ ಚಾಮರಾಜ, ಇಮ್ಮಡಿ ರಾಜರಸರ ಚರಿತ್ರೆಗಳು ಸಂಕ್ಷಿಪ್ತವಾಗಿ ಚಿತ್ರಿಸಲ್ಪಟ್ಟಿವೆ. ಆಮೇಲೆ ಕಂಠೀರವ ನರಸರಾಜ ಅಥವಾ ರಣಧೀರ ಕಂಠೀರವ ನರಸರಾಜನ ಚರಿತ್ರೆಯಲ್ಲಿ ರಣದುಲ್ಲಾಖಾನನ ದಾಳಿ ಪ್ರಾಮುಖ್ಯ ಪಡೆದಿದೆ. ವಿಜಾಪುರದ ಸೇನಾನಿಯಾದ ಖಾನನು ಸೋತು ಹಿಮ್ಮೆಟ್ಟುವಿಕೆ ಮೈಸೂರಿನ ಚರಿತ್ರೆಯಲ್ಲಿ ಒಂದು ಮಹತ್ತರ ಘಟನೆ. ತಿರುಮಲಾರ್ಯನು ತನ್ನ ದೃಷ್ಟಿಯನ್ನು ಈ ಘಟನೆಯ ಮೇಲೆಯೇ ಕೇಂದ್ರೀಕರಿಸಿದ್ದಾನೆ. ಕಂಠೀರವ ನರಸರಾಜನ ಜೀವನದ ಇತರ ಸಂಗತಿಗಳನ್ನು ಕೈಬಿಡಲಾಗಿದೆ. ಹೀಗೆ ಮಾಡಿದ್ದು ಉದ್ದೇಶ ಪೂರ್ವಕವಾಗಿ ಎಂಬುದು ಸ್ಪಷ್ಟವಿದೆ. ಆಮೇಲೆ ಚಿಕ್ಕದೇವರಾಯನ ತಂದೆ ದೊಡ್ಡದೇವರಾಯನ ವ್ಯಕ್ತಿತ್ವ ಚಿತ್ರಣ ಬಹುದೀರ್ಘವಾಗಿದೆ. ಅವನ ರಾಜ್ಯಾಡಳಿತ, ಪ್ರಜಾಪರಿಪಾಲನೆ, ದೈವಭಕ್ತಿ, ಅಳಹಿಯ ಸಿಂಗರಾರ್ಯನ ವರ್ಣನೆ, ಪುತ್ರಪ್ರಾಪ್ತಿಗಾಗಿ ಮಾಡಿದ ಮೇಲುಕೋಟೆಯ ಯಾತ್ರೆ ವರಪ್ರಸಾದ ಮುಂತಾದವು ಕವಿಗೆ ಪ್ರಿಯವಾದುದರಿಂದ ಉದ್ದೇಶ ಪೂರ್ವಕವಾಗಿ ದೀರ್ಘಿಸಲ್ಪಟ್ಟಿವೆ. ಈ ಎಲ್ಲ ಸಂದರ್ಭಗಳಲ್ಲಿ ತಿರುಮಲಾರ್ಯನ ಕಲ್ಪನಾಶಕ್ತಿಗೆ ಗರಿಮೂಡಿದಂತೆ ಭಾಸವಾಗುತ್ತವೆ. ಆಮೇಲೆ ಅಮೃತಾಂಬೆಯ ದೌಹ್ರದ, ಚಿಕ್ಕದೇವರಾಯನ ಜನನಗಳು ಬಂದಿವೆ. ಚಿಕ್ಕದೇವರಾಯನ ಲಿಪಿಗ್ರಹಣ ವಿದ್ಯಾಭ್ಯಾಸ, ವೀಣಾ ಪರಿಶ್ರಮ ಮತ್ತು ಗರಡೀ ಸಾಧನೆಗಳಲ್ಲಿ ಕೃತಕತೆ ಹಣಿಕಿಕ್ಕಿದೆ. ಚಿಕ್ಕದೇವರಾಯನು ಕೃಷ್ಣನ ಅಪರಾವತಾರವೆಂದು ಕವಿ ಹೇಳಿದ್ದಾನೆ! ಕೊನೆಯಲ್ಲಿ ದೇರರಸನ ಚರಿತ್ರೆಯ ತರುವಾಯ ಬಂದಿರುವ ಚಿಕ್ಕದೇವರಾಯನ ದಿಗ್ವಿಜಯವು ಮತ್ತೆ ವಾಸ್ತವ ಚರಿತ್ರೆಯತ್ತ ತಿರುಗಿದೆ. ಕಾವ್ಯವು ಇಲ್ಲಿಗೆ ಮೊಟಕುಗೊಂಡಿರುವುದರಿಂದ ಅದರ ವಿವರಗಳು ಈ ಕೃತಿಯಲ್ಲಿ ಉಪಲಬ್ಧವಿಲ್ಲ. ಕೆಳದೀ ರಾಜರೊಡನೆ ನಡೆಯುವ ಭಾವೀ ಯುದ್ಧದ ಸೂಚನೆ ಮಾತ್ರ ಇಲ್ಲಿ ಬಂದಿದೆ.

ಒಂದು ಶತಮಾನದಷ್ಟು ವಿಸ್ತಾರವಾದ ಈ ಗಡುವಿನಲ್ಲಿ ಕೆಲವು ಮುಖ್ಯವಾದ ಐತಿಹಾಸಿಕ ಘಟನೆಗಳು ಪ್ರಸ್ತಾಪಗೊಂಡಿಲ್ಲ. ಉದಾಹರಣೆಗೆ ರಾಜರಸನ ಹಿರಿಯ ಸಹೋದರನಾದ ಬೆಟ್ಟದ ಚಾಮರಾಜನ ಆಡಳಿತ (ಕ್ರಿ. ಶ. ೧೫೭೬-೧೫೭೮) ಮತ್ತು ಪಟ್ಟಾವರೋಹಣ, ದಳವಾಯಿಯೊಬ್ಬನಿಂದ ರಾಜರಸನ ಮಗ ಇಮ್ಮಡಿ ರಾಜರಸ (ಕ್ರಿ. ಶ. ೧೬೩೭-೧೬೩೮)ನಿಗೆ ಆದ ವಿಷಪ್ರಾಶನ, ಅವನ ಬದಲು ಪಟ್ಟವೇರಿದ ಕಂಠೀರವ ನರಸರಾಜನಿಂದ ಆ ದಳವಾಯಿಯ ಕೊಲೆ, ದೊಡ್ಡದೇವರಾಜ ಮತ್ತು ಚಿಕ್ಕದೇವವಾಯರು ಹಂಗಳದಲ್ಲಿ ಬಂಧನದಲ್ಲಿದ್ದುದು, ಇವೇ ಮೊದಲಾದ ಸಂಗತಿಗಳು ಚಿಕ್ಕದೇವರಾಯ ವಂಶಾವಳಿಯಲ್ಲಿ ಸ್ಥಾನ ಪಡೆದಿಲ್ಲ. ರಾಜಾಶ್ರಯದಲ್ಲಿದ್ದ ಕವಿ ಮತ್ತು ಮಂತ್ರಿಯಾದುದರಿಂದ ರಾಜಮನೆತನಕ್ಕೆ ಸಂಬಂಧಿಸಿದ ಇಂಥ ಸೂಕ್ಷ್ಮ ವಿಷಯಗಳನ್ನು ತಿರುಮಲಾರ್ಯನಿಂದ ನಾವು ನಿರೀಕ್ಷಿಸುವುದು ತಪ್ಪೇ.

ಕೃತಿಗಳು :

ಅಪ್ರತಿಮವೀರಚರಿತ :

"ಈ ಗ್ರಂಥದಲ್ಲಿ ಕವಿಯು ಚಂದ್ರಾಲೋಕ, ವಾಮನ ವೃತ್ತಿ, ಕಾವ್ಯಪ್ರಕಾಶ ಮೊದಲಾದ ಸಂಸತ ಗ್ರಂಥಗಳಿಂದ ಲಕ್ಷಣಗಳನ್ನು ತೆಗೆದುಕೊಂಡು ಅವುಗಳಿಗೆ ಕನ್ನಡದಲ್ಲಿ ಗದ್ಯರೂಪವಾದ ವೃತ್ತಿಗಳನ್ನು ಬರೆದು, ಕನ್ನಡದಲ್ಲಿ ತನ್ನಿಂದ ರಚಿತವಾದ ಪದ್ಯಗಳನ್ನು ಅವಕ್ಕೆ ಉದಾಹರಣೆಯಾಗಿ ಕೊಟ್ಟು ಲಕ್ಷ್ಯ-ಲಕ್ಷಣ ಸಮನ್ವಯ ಮಾಡಿದ್ದಾನೆ. ಆ ಲಕ್ಷ್ಯ ಪದ್ಯಗಳಲ್ಲಿ ವಿವೃತವಾದ ವಿಷಯ ಗಳು 'ಅಪ್ರತಿಮವೀರ'ನೆಂಬ ಅಭಿಧಾನವುಳ್ಳ ಚಿಕ್ಕದೇವರಾಯನ ಚರಿತ್ರವನ್ನು ಹೇಳುವುದರಿಂದ ಈ ಅಲಂಕಾರ ಗ್ರಂಥಕ್ಕೆ ಅಪ್ರತಿಮವೀರ ಚರಿತವೆಂಬ ಹೆಸರು ಸಮಂಜಸವಾಗಿದೆ."

ಚಿಕ್ಕದೇವರಾಯ ವಿಜಯ :

ಇದರಲ್ಲಿ, ವಿಶೇಷವಾಗಿ ಮೊದಲ ನಾಲ್ಕು ಆಶ್ವಾಸಗಳಲ್ಲಿ, ಚಿಕ್ಕದೇವರಾಯ ವಂಶಾವಳಿಯ ಹಲವಾರು ಭಾಗಗಳನ್ನು ಇದ್ದಕ್ಕಿದ್ದಂತೆಯೇ ಎತ್ತಿ ಇಟ್ಟಿದ್ದಾನೆ. ಅನೇಕ ಪದ್ಯಗಳು ಅಲ್ಲಿಯ ಗದ್ಯವನ್ನೇ ಅಲ್ಪ ಸ್ವಲ್ಪ ಶಾಬ್ದಿಕ ಬದಲಾವಣೆಯಿಂದ ಛಂದಸ್ಸಿಗೆ ಅಳವಡಿಸಿದವು ಗಳಾಗಿವೆ. ಅಷ್ಟೇ ಅಲ್ಲ, ಇದರಲ್ಲಿಯ ಪ್ರಸಂಗ-ಸನ್ನಿವೇಶಗಳು, ವರ್ಣನೆಗಳು, ಸ್ತುತಿಗಳು, ನಿರೂಪಣಾ ವಿಧಾನ, ಘಟನೆಗಳ ಆನುಪೂರ್ವಿ, ಎಲ್ಲವೂ ತದ್ವತ್ತಾಗಿ ಚಿಕ್ಕದೇವರಾಯ ವಂಶಾವಳಿಯಲ್ಲಿ ಬಂದಂತೆಯೇ ಬಂದಿವೆ. ಚಿಕ್ಕದೇವರಾಯ ವಂಶಾವಳಿಗಿಂತ ಹೆಚ್ಚಾಗಿರುವ ಭಾಗವೆಂದರೆ ದೇವರಾಜನ ದಿಗ್ವಿಜಯ ಮತ್ತು ಯುವರಾಜ ಚಿಕ್ಕದೇವರಾಯನ ರಾತ್ರಿ ವಿಹಾರಾದಿ ವರ್ಣನೆಗಳು ಮಾತ್ರ. ಸಾಹಿತ್ಯಸತ್ವ ಮತ್ತು ಶೈಲಿಗಳ ದೃಷ್ಟಿಯಿಂದ ಇದಕ್ಕಿಂತ ಚಿಕ್ಕದೇವರಾಯ ವಂಶಾವಳಿಯೇ ಶ್ರೇಷ್ಠಕೃತಿಯಾಗಿದೆ.

ಚಿಕ್ಕದೇವರಾಯ ವಂಶಾವಳಿ :

ಈ ಕಾವ್ಯದಲ್ಲಿ ಪೀಠಿಕಾ ಪ್ರಕರಣವಿಲ್ಲ. ಕಾವ್ಯ ಪ್ರಾರಂಭದಲ್ಲಿ ಇಷ್ಟದೇವತಾ ಸ್ತುತಿ, ಕುಕವಿ ನಿಂದೆ, ಸುಕವಿ ಪ್ರಶಂಸೆ, ಕಾವ್ಯರಚನೆಯ ಉದ್ದೇಶ, ಕಥೆಯ ಮೂಲಸೂಚನೆ ಮುಂತಾದ ಸಂಗತಿಗಳು ಇರಬೇಕಾದುದು ಕನ್ನಡಕವಿಗಳಲ್ಲಿ ಗತಾನುಗತಿಕವಾಗಿ ನಡೆದು ಬಂದಿರುವ ಸಂಪ್ರದಾಯ. ಚಿಕ್ಕದೇವರಾಯ ವಂಶಾವಳಿಯಲ್ಲಿ ಇವಾವವೂ ಇಲ್ಲ. ವ್ಯವಸ್ಥಿತ ವಾದ ಆಶ್ವಾಸಾದಿ ವಿಭಾಗವಿಲ್ಲದೆ ಆಳ್ವಿಕೆಯ ಕ್ರಮದಂತೆ ಆಯಾ ರಾಜರ ಚರಿತ್ರೆಗಳನ್ನು ಹೇಳಿದ್ದಾನೆ. ಅಂತೆಯೇ ಆಶ್ವಾಸಾಂತ್ಯ ಗದ್ಯವೂ ಇಲ್ಲ. 'ಚಿಕ್ಕದೇವರಾಯ ವಿಜಯ', 'ಅಪ್ರತಿಮವೀರ ಚರಿತ'ಗಳಲ್ಲಿ ಇವುಗಳನ್ನು ವರ್ಜಿಸಿ ಬಿಟ್ಟಿದ್ದಾನೆ. ಇದರಿಂದ ಓದುಗರಿಗೆ ಒಂದು ರೀತಿಯ ಹೊಸತನದ ಅನುಭವವುಂಟಾಗುತ್ತದೆ.

ಇದರಲ್ಲಿರುವ ಪದ್ಯಗಳ ಸಂಖ್ಯೆ ಆಯ್ದು ಮಾತ್ರ. ರಾಜರಸನು ಶ್ರೀರಂಗಪಟ್ಟಣದ ಶ್ರೀರಂಗನಾಥನನ್ನು ಕುರಿತು ಮಾಡಿದ ಸ್ತುತಿ ಅವಾಗಿದ್ದು ಅವನ ಗದ್ಯದ ಮುಂದೆ

ಸಪ್ಪೆಯೆನಿಸುತ್ತವೆ. ಮಿಕ್ಕಂತೆ ಕಾವ್ಯವೆಲ್ಲವೂ ಗದ್ಯಮಯವಾಗಿದ್ದು ಒಂದೆರಡು ಸ್ಥಳಗಳಲ್ಲಿ ಮಾತ್ರ ಸಂಸತ ಪದಗಳ ಬಾಹುಳ್ಯ ತೋರಿ ಬಂದಿದೆ. ಆದರೆ ಒಟ್ಟು ಕಾವ್ಯದಲ್ಲಿ ಸಂಸತದ ಆಡಂಬರ ಅಷ್ಟಾಗಿ ತೋರಿಬರುವುದಿಲ್ಲ. ಗೀತಾ ತಾತ್ಪರ್ಯದಂಥ ವಿವರಣೆಯಲ್ಲಿ ಕೂಡ ಯಾವ ಕ್ಲಿಷ್ಟತೆಗೂ ಅವಕಾಶವಾಗದಂತೆ ತೂಗಿಸಿಕೊಂಡು ಹೋಗಿರುವುದು ಮೆಚ್ಚತಕ್ಕ ಸಂಗತಿ. ಕವಿಯ ಒಲವು ಮುಖ್ಯವಾಗಿ ದೇಸಿ ಪ್ರಧಾನವಾದ ಗದ್ಯದ ಕಡೆಗಿದೆ. "ಅಲ್ಲಿ ಮುಂ ಪಾಲ್ಗಡಲಿಂ ಪೊಱಮಡುವೆಡೆಯೊಳಡಿದೊಡರ್ದ ಪವಳ ಗುಡಿಗಳ ಪಾಂಗನಂಗೀಕರಿಸಿದ ಕೆಂಬರಲ್ಗಳುಂ, ಅವಱ ಕವಡುಗೊನೆಯೊಳ್ಸಿಲ್ಕಿದ ಮುತ್ತುಗಳ ಬಿಡಯಮಂ ಬಿತ್ತರಿಪ ಬಟ್ಟುಗುರ್ಗಳುಂ, ಕೆಂದಾವರೆವನೆಯೊಳ್ ಬಂಡುಗೆಸರೊಳ್ಸತ್ತಿದ ಪೊಸ ಎಸಳೆಂಬ ಸಂದೆಯ ಮಂ ಸಮನಿಸಿರ್ಪ ಕೆಂದಳಮುಂ ಸಿರಿಯಡಿಯಲರ್ದಾವರೆಯಂ ಸುತ್ತಿಮುತ್ತಿದ ಬಂಡುಣಿವಿಂಡನಂಡಲೆವ ನೀಲದ ಪೆಂಡೆಯಮುಂ" - ಚೇತೋಹಾರಿಯಾದ ಇಂಥ ವರ್ಣನೆಗಳು ಕಾವ್ಯದ ತುಂಬ ಹರಡಿವೆ. ಅಚ್ಚಗನ್ನಡದ ಜೊತೆಗೆ ತದ್ಭವಗಳ ಹದವಾದ ಮಿಶ್ರಣದಿಂದುಂಟಾದ ವಿಶಿಷ್ಟ ಗದ್ಯಶೈಲಿ ಕಾವ್ಯದುದ್ದಕ್ಕೂ ಕಂಡುಬರುತ್ತದೆ. ಈ ಅಂಶದಲ್ಲಿ ಆಂಡಯ್ಯ, ತಿರುಮಲಾರ್ಯ ಮತ್ತು ಮುದ್ದಣರು ಕನ್ನಡಕವಿಗಳಲ್ಲಿ ಒಂದು ಪ್ರತ್ಯೇಕ ವರ್ಗವಾಗುತ್ತಾರೆ. ಹೇಳುವುದನ್ನು ಸುಲಲಿತವಾಗಿ, ನೇರವಾಗಿ ಹೇಳುವುದು ತಿರುಮಲಾರ್ಯನಲ್ಲಿ ಸಾಮಾನ್ಯ. ಆದರೆ ಕವಿಗೆ ಇಷ್ಟವಾದ ಕೆಲವೆಡೆಗಳಲ್ಲಿ ನಿಧಾನವು ತೋರಿಬರುತ್ತದೆ. ಇದಕ್ಕೆ ದೊಡ್ಡ ದೇವರಾಯನ ಚರಿತ್ರೆಯನ್ನು ನೋಡಬಹುದು. ಅವನ ವ್ಯಕ್ತಿತ್ವ, ಆಡಳಿತ, ಅವನ ಪೂಜೆ, ಕವಿಯ ತಂದೆ ಅಳಹಿಯ ಸಿಂಗರಾರ್ಯರ ವರ್ಣನೆ, ಪುನರಾವರ್ತನೆಗೊಳ್ಳುವ ವಿಷ್ಣುವಿನ ವರ್ಣನೆ ಮೊದಲಾದವುಗಳಿಗೆ ಅತಿಶಯವೆನಿಸುವ ಅವಕಾಶ ಕಲ್ಪಿಸಿಕೊಂಡಿದ್ದಾನೆ. ಚಿಕ್ಕದೇವರಾಯನನ್ನಂತೂ ಕೃಷ್ಣನ ಅಪರಾವತಾರವೆಂದು ಹೇಳಿದ್ದಾನೆ. ಪ್ರಾರಂಭದಲ್ಲಿ ಬರುವ ವಿಜಯನಗರದ ದೊರೆ ತಿರುಮಲರಾಯ, ಅವನ ಪರಿವಾರದವರು, ಅವರ ಆಡಳಿತ ವೈಖರಿ, ಅವರ ನಡತೆ ಮೊದಲಾದವು ರಂಜನೀಯವಾಗಿವೆ :

"ಕಾಯಸ್ಥಪ್ರಾಡ್ವಿವಾರಾದಿ ವಿವಿಧಾಧಿಕಾರಿಗಳುತ್ಕೋಚವಂಚನಾದಿಗಳಿಂದೆಡೆಗೆಡೆಗಿರ್ಮಡಿಸುವ ತೆಱೆಗೆ ಬೇಡಿಗೆ ಭಿರಾಡ ಬಿಟ್ಟಿಗಳಟ್ಟುಳಿಯಿಂ ಪ್ರಜೆಗಳಂ ಕಿಡಿಪರ್. .... ಮತ್ತಮೇಂ ? ಊರ್ವಂದಿಯಂ ತಂದವಗೂರುಂಬಳಿಯನೀವರ್ ; ಕುಱಿಯಂ ತಂದವಂಗೆ ತಳೆಗೆಯಂ ಮನ್ನಿಪರ್ ; ಗೆಂಡೆಮೀನಂ ತಂದವಂಗೆ ದಂಡಿಗೆಯನಿಕ್ಕುವರ್ ; ಉಡುವಂ ತಂದವಂಗೆ ಕೊಡಿಗೆಯಂ ಕುಡುವರ್."

ರಣದುಲ್ಲಾಖಾನನು ಸೋತು ಹಿಮ್ಮೆಟ್ಟುವುದನ್ನು ಕವಿ ಉತ್ಸಾಹದಿಂದ ವರ್ಣಿಸುತ್ತಾನೆ : "ಬಟಿಕ್ಕಾ ತುರುಕಪಡೆವಳಂ ಕಪ್ಪಿನಿಂದೆಟ್ದಿ ಕಾಡಾನೆಯಂತೆಯುಂ ಪುಲಿವಾಯ್ದುಳಿದ ಪುಲ್ಲೆಯಂತೆಯುಂ ತಡೆಯೊಡೆದ ಪಾವಿನಂತೆಯುಂ ಅಂಟುಗಳೆದ ಪಕ್ಕಿಗಳಂತೆಯುಂ ಬಲೆಯಿಂ ತಪ್ಪಿದ ಮೊಲದಂತೆಯುಂ ಬಾಲಂ ಪಱಿದ ಪಿಳ್ಳೆಯಂತೆಯುಂ ಕಟ್ಟು ಸಡಿಲ್ದ ಕಳ್ಳನಂತೆಯುಂ ನಿಂದಲ್ಲಿ ನಿಲ್ಲದೆ ಪಿಂದಿರುಗಿ ನೋಡದೆ ಓಡಿ ತನ್ನ ಬೀಡಂ ಸಾರ್ದಂ".

ಚಿಕ್ಕದೇವರಾಯ ವಂಶಾವಳಿಯ ಮುಖ್ಯ ಉದ್ದೇಶ ಆಶ್ರಯದಾತ ದೊರೆಯ ವಂಶಚರಿತ್ರೆಯಾದರೂ ಕವಿ ತನ್ನ ಮತ ಪ್ರಸಕ್ತಿಗೆ ತಕ್ಕಷ್ಟು ಅವಕಾಶ ಕಲ್ಪಿಸಿಕೊಂಡಿದ್ದಾನೆ. ದೊಡ್ಡದೇವರಾಜ-ಅಮೃತಾಂಬೆಯರು ಪುತ್ರಾರ್ಥಿಯಾಗಿ ಕೈಕೊಂಡ ಮೇಲುಕೋಟೆಯ ಯಾತ್ರೆಯ ನೆಪದಲ್ಲಿ ಮತ ವಿಷಯಗಳನ್ನು ವರ್ಣಿಸಿದ್ದಾನೆ. ಮೇಲುಕೋಟೆಯ ವೈಷ್ಣವರು, ಶ್ರೀವೈಷ್ಣವ ಸಂಪ್ರದಾಯ, ಹನ್ನೆರಡು ಜನ ಆಳ್ವಾರರು ಮತ್ತು ಅವರ ಜೀವನದ ಪ್ರಮುಖ ಸಂಗತಿಗಳು, ರಾಮಾನುಜರು ಮತ್ತು ಅವರ ಜೀವನ ಕಾರ್ಯಗಳು ಈ ಮೊದಲಾದ ವಿವರಗಳು ಅಲ್ಲಿ ಸ್ಥಾನ ಪಡೆದಿವೆ. ದೊಡ್ಡದೇವರಾಜನಿಗೆ ಕೊಡುವ 'ನಾಮತೀರ್ಥ'ದ ನೆಪದಲ್ಲಿ ಶ್ರೀವೈಷ್ಣವ ಪರವಾದ ಗೀತಾ ತಾತ್ಪರ್ಯ ನಿರೂಪಿಸಲ್ಪಟ್ಟಿದೆ.

ಇದರಿಂದ ಚಿಕ್ಕದೇವರಾಯ ವಂಶಾವಳಿಯು "ಚರಿತ್ರ, ಮತತತ್ವ, ಕಾವ್ಯ ಇವುಗಳ ಮುಪ್ಪುರಿ" ಎಂದು ವಿಮರ್ಶಕರು ಅಭಿಪ್ರಾಯಪಟ್ಟುದು ವಾಸ್ತವವೆನಿಸಿದೆ.

ಮೇಲೆ ಚರ್ಚಿಸಿದ ಮೂರು ಕೃತಿಗಳಲ್ಲದೆ 'ಚಿಕ್ಕದೇವರಾಯ ಶತಕ' ಎಂಬ ಶತಕ ಗ್ರಂಥವನ್ನು ತಿರುಮಲಾರ್ಯ ರಚಿಸಿರುವುದಾಗಿ ತಿಳಿದುಬರುತ್ತದೆ. ಅದು ಉಪಲಬ್ಧವಿಲ್ಲ. ಚಿಕ್ಕದೇವರಾಯನ ಹೆಸರಿನಲ್ಲಿರುವ 'ಗೀತ ಗೋಪಾಲ', 'ಚಿಕ್ಕದೇವರಾಯ ಬಿನ್ನಪ'ಗಳೂ ತಿರುಮಲಾರ್ಯ ಕೃತವೇ ಎಂದು ಹೇಳುತ್ತಾರೆ.

ಕವಿಯು ಸಂಸತದಲ್ಲೂ ಬಲ್ಲಿದನಾಗಿದ್ದನು. ೧) ಯದುಗಿರಿ ನಾರಾಯಣಸ್ತವ ೨) ಯದುಗಿರಿ ನಾಯಕಿ ಸ್ತವ ೩) ಶ್ರೀಲಕ್ಷ್ಮೀಸ್ತವ ೪) ಗೀತಗೋಪಾಲ ಸ್ತವ ೫) ರಾಜಗೋಪಾಲ ಸ್ತವ ೬) ಪರವಾಸುದೇವ ಸ್ತವ ೭) ಮಂಜುಳ ಕೇಶವ ಸ್ತವ ೮) ಪಶ್ಚಿಮರಂಗರಾಜ ಸ್ತವ ೯) ಏಕಾದಶೀ ನಿರ್ಣಯ ಎಂಬ ಕೃತಿಗಳನ್ನು ಸಂಸತದಲ್ಲಿ ರಚಿಸಿದ್ದಾನೆ. ಚಿಕ್ಕದೇವರಾಯನ ಹೆಸರಿನಲ್ಲಿರುವ 'ಸಚ್ಛೂದ್ರಾಧಿಕಾರ ನಿರ್ಣಯ'ವನ್ನೂ ತಿರುಮಲಾರ್ಯನೇ ರಚಿಸಿರಬೇಕೆಂದು ಹೇಳುತ್ತಾರೆ.

ಇದರಿಂದ ತಿರುಮಲಾರ್ಯನು ಸಂಸತ, ಕನ್ನಡಗಳಲ್ಲಿ ವಿದ್ವಾಂಸರೂ, ರಾಜಕಾರಣ ಧುರಂಧರನೂ ಎನಿಸಿ ಬಹುಶ್ರುತನಾದ ವ್ಯಕ್ತಿಯಾಗಿದ್ದನೆಂದು ಕಂಡುಬರುವುದು.

ಸಕ್ಕದಗನ್ನಡವೆರಡಱೊ
ಳಕ್ಕಸರಂಗೊಳ್ವುದೋಜೆಗಬ್ಬಂ ರಸದಿಂ ॥

ಎಂದು ಕವಿ ಹೇಳಿದ ಈ ಮಾತು ಸಾರ್ಥಕವೆನಿಸಿದೆ.

ವಚನಂಗಳುಚಿತ ಚಾಟುವಿ
ರಚನಂಗಳ್ ಪ್ರಚುರ ರುಚಿರ ಸಾಹಿತ್ಯ ಸುಧಾ ॥
ವಚನಂಗಳಿನಿಯಳೊಲ್ಮೆಯ
ವಚನಂಗಳೆನಲ್ಕೆ ಮನಮನಿರ್ಕುಳಿಗೊಳ್ಗುಂ ॥

ಎಂದು ಚಿಕ್ಕದೇವರಾಯ ವಿಜಯದಲ್ಲಿ ಹೇಳಿದ ಮಾತು ಚಿಕ್ಕದೇವರಾಯ ವಂಶಾವಳಿಗೆ ಸರಿಯಾಗಿ ಅನ್ವಯಿಸುತ್ತದೆ.

"ಎನಿತಂದಮಾಗಿ ಮೆಲ್ಪುವಡೆದ ಸಬುದಂಗಳ ಸೇರುವೆಯಿಂ ಸರಳಮುಂ, ಶರಮೆಸೆವ ಪುರುಳ ಪವಣಿಗೆಯಿಂ ಸರಸಮುಮೆನಿಸಿ ತನಿಸೊದೆಯ ಸೋನೆಯಂತೆ ಇನಿದಂ ಕಿವಿಗಳ್ಗಿ ಕಱಿಗುಮೀ ತಿರುಮಲಾರ್ಯರ ಬಾಯ್ದೆಱಿಯ ಸರಸತಿಯ ಸೈಪುವಡೆದ ಸಾಹಿತ್ಯ ಸೌಂದರ್ಯಂ" ಎಂದು ಕವಿ ಸಿಂಗರಾರ್ಯನು ಹೇಳಿದ್ದು ಕೇವಲ ಸ್ತುತಿಯಾಗಿರದೆ ವಾಸ್ತವ ವಿಮರ್ಶೆಯಾಗಿದೆ.

ಈ ಎಲ್ಲ ಸಂಗತಿಗಳಿಂದ ಮೈಸೂರು ದೊರೆಗಳ ಕಾಲದಲ್ಲಿ ಪುನರುಜ್ಜೀವನಗೊಳ್ಳುತ್ತಿದ್ದ ಕನ್ನಡ ಸಾಹಿತ್ಯಕ್ಕೆ ತಿರುಮಲಾರ್ಯನಿಂದ ದೊಡ್ಡ ಕಾಣಿಕೆ ಸಂದಿರುವುದು ಸ್ಪಷ್ಟಪಡುತ್ತದೆ. ಎಳಂದೂರ ಷಡಕ್ಷರದೇವನನ್ನು ಹೊರತುಪಡಿಸಿದರೆ ಈ ಕಾಲದ ಅತಿ ಶ್ರೇಷ್ಠಕವಿ ತಿರುಮಲಾರ್ಯನೆಂದು ಧಾರಾಳವಾಗಿ ಹೇಳಬಹುದು. ಆದರೆ ಈ ಕಾವ್ಯ ಸಂಪಾದಕರಾದ ಶ್ರೀ. ಎಂ. ಎ. ರಾಮಾನುಜಯ್ಯಂಗಾರ್ಯರು "ಸಂಸತದಲ್ಲಿ ಕಾದಂಬರಿಯು ಹೇಗೋ ಹಾಗೆಯೇ ಇದು ಕನ್ನಡದಲ್ಲಿ ಉತ್ತಮ ಗದ್ಯಗ್ರಂಥವೆನ್ನಿಸಿಕೊಂಡಿದೆ" ಎಂದು ಅಭಿಪ್ರಾಯಪಟ್ಟುದು ಉತ್ಪ್ರೇಕ್ಷೆಯಾಗಿದೆ ಹಾಗೂ ಬಾಣ ಕಾದಂಬರಿಯ ಪರಿಚಯವಿಲ್ಲದವರಿಗೆ ಅದರ ಬಗೆಗೆ ತಪ್ಪು ಕಲ್ಪನೆ ಮೂಡಿಸುವಂತಿದೆ. 'ಇವನಷ್ಟು ಶಕ್ತನಾದ ಕವಿ ಬೇರೊಬ್ಬನಿಲ್ಲ' ವೆಂಬದು ಬರೀ ಅಭಿಪ್ರಾಯ ಮಾತ್ರ.

ಗದ್ಯರೂಪದಲ್ಲಿ ಚಾರಿತ್ರಿಕ ಕಾವ್ಯವನ್ನು ರಚಿಸುವಲ್ಲಿ ತಿರುಮಲಾರ್ಯನು ಅನುಸರಿಸಿದ ತಂತ್ರ-ಸಂವಿಧಾನಗಳು ಮೆಚ್ಚಬೇಕಾದವುಗಳು. ಮುಖ್ಯವಾಗಿ ಅವನು ಆಯ್ದುಕೊಂಡ ವಸ್ತು ಮತ್ತು ಲಾಲಿತ್ಯದಿಂದೊಡಗೂಡಿದ ದೇಶಿಪ್ರಧಾನವಾದ ಗದ್ಯಗಳು ತಿರುಮಲಾರ್ಯನ ವೈಶಿಷ್ಟ್ಯಗಳೆಂದು ಹೇಳಬಹುದು.

ಕೊನೆಯದಾಗಿ ಈ ಅನುವಾದ ಕಾರ್ಯವನ್ನು ಕುರಿತಂತೆ, ಒಂದೆರಡು ಮಾತುಗಳನ್ನು ಇಲ್ಲಿ ಹೇಳಬೇಕಾಗಿದೆ. ಗ್ರಂಥವು ಮೊದಲಿನಿಂದ ಕೊನೆಯವರೆಗೆ ಗದ್ಯದಲ್ಲಿರುವುದರಿಂದ ಪದ್ಯದಲ್ಲಿರುವಂತೆ ಅನ್ವಯವನ್ನು ಹಿಂದೆ ಮುಂದೆ ಎಳೆದಾಡುವ ಪ್ರಮೇಯ ಸಾಮಾನ್ಯವಾಗಿ ಉದ್ಭವಿಸಲಿಲ್ಲ. ಮೂಲದ ಅನ್ವಯ ಕ್ರಮವೇ ಅನುವಾದದಲ್ಲಿ ಇಳಿದುಬಂದಿದೆ. ಹೀಗಾಗಿ ಇದರಲ್ಲಿಯ ಎಲ್ಲ ಕಠಿಣ ಪದಗಳನ್ನು ಕೋಶ ರೂಪದಲ್ಲಿ ಕೊನೆಗೆ ಕೊಡುವ ಅವಶ್ಯಕತೆ ಕಾಣಲಿಲ್ಲ. ಮುಖ್ಯವಾದ ಹಾಗೂ ಸಾಮಾನ್ಯ ಶಬ್ದಕೋಶಗಳಲ್ಲಿ ದೊರೆಯದಿರುವ ಪದಗಳನ್ನು ಆಯ್ದು ಅದರಲ್ಲಿ ಕೊಡಲಾಗಿದೆ. ಕೊನೆಯಲ್ಲಿ ಓದುಗರ ಅನುಕೂಲಕ್ಕಾಗಿ ಸಾಂದರ್ಭಿಕ ಟಿಪ್ಪಣಿಗಳನ್ನು ಕೊಡಲಾಗಿದೆ.

ಶ್ರೀವೈಷ್ಣವ ಮತಕ್ಕೆ ಸಂಬಂಧಿಸಿದ ಕೆಲವು ಸಂಪ್ರದಾಯಗಳನ್ನು ಅರ್ಥವಿಸುವಲ್ಲಿ ಚಿಕ್ಕುಪಾಧ್ಯಾಯನ 'ದಿವ್ಯಸೂರಿ ಚರಿತೆ' ಮತ್ತು ತಿರುಮಲಾರ್ಯನ ಇತರ ಕೃತಿಗಳಾದ

'ಚಿಕ್ಕದೇವರಾಯ ವಿಜಯ' ಹಾಗೂ 'ಅಪ್ರತಿಮವೀರ ಚರಿತ' ಗಳಿಂದ ಅನುಕೂಲವಾಗಿದೆ. ಈ ದಿಶೆಯಲ್ಲಿ ಇನ್ನು ಕೆಲವು ಸಂಗತಿಗಳನ್ನು ಪ್ರೊ. ಕೆ. ಎಸ್. ನಾರಾಯಣಾಚಾರ್, ಧಾರವಾಡ ಅವರು ತಿಳಿಸಿಕೊಟ್ಟಿದ್ದಾರೆ. ಸಂಸತ ಶ್ಲೋಕಗಳ ಅರ್ಥ ವಿವರಣೆಗೆ ಪ್ರೊ. ಶ್ರೀನಿವಾಸ ತೋಫಖಾನೆ ಅವರ ನೆರವು ಪಡೆದಿದ್ದೇನೆ. ಈ ಇಬ್ಬರು ಮಹನೀಯರಿಗೆ ನಾನು ಕೃತಜ್ಞ.

ಡಾ. ಮಾ. ಬಾ. ಭೋಯಿ
ಅನುವಾದಕ

ಚಿಕ್ಕದೇವರಾಯ ವಂಶಾವಳಿ

೧

ರಾಜನೃಪ ಚರಿತೆ

ಸ್ವಸ್ತಿ, ಸಮಸ್ತಭೂಮಂಡಲವೆಂಬ ಕಮಲಕ್ಕೆ ಕರ್ಣಿಕೆಯಂತಿರುವ ಮೇರು ಪರ್ವತದವರೆಗೆ ಕೌಶಲದಿಂದಲಂಕರಿಸಿದಂತೆ ಒಪ್ಪಿರುವ ಭಾರತ ದೇಶವಿದೆ. ಅದಕ್ಕೆ ಮಂಡನದಂತಿದ್ದು ಅದರ ಅತಿಶಯವಾದ ವೈಭವಕ್ಕೆ ಹೆಚ್ಚಳವುಂಟು ಮಾಡುವ ಕರ್ನಾಟಕ ದೇಶದಲ್ಲಿ, ಕಾವೇರಿಯ ದಕ್ಷಿಣತೀರದ ಸಮೀಪದಲ್ಲೆಸೆವ, ಮೈಸೂರು ಪಟ್ಟಣವಿದೆ. ಅಲ್ಲಿ ಸಕಲ ಸಾಮಂತ ಕಿರೀಟಕೋಟಿ ರತ್ನಕಾಂತಿಯಲ್ಲಿ ಚಿತ್ರಿತವಾದ ಪಾದಕಮಲವುಳ್ಳವ ನೆನಿಸಿ ಶೋಭಿಸುವ ಚಾಮರಾಜನಿಗೆ, ಚತುರತೆಗೊಲಿದು ದೇಹ ಧರಿಸಿ ಬಳಿಸಲ್ಲುವ ಸಾಮ ದಾನ ಬೇಧದಂಡಗಳೆಂಬ ನಾಲ್ಕು ಉಪಾಯಗಳಂತೆ, ತಮ್ಮಿಂದ ತಾವೆ ಬಯಸಿ ಬಂದ ಹಸ್ತ್ಯಶ್ವರಥಪದಾತಿಗಳೆಂಬ ಚತುರ್ವರ್ಗದಂತೆ, ಈತನ ಸತ್ಯಾದಿ ಗುಣಗಳಿಂದಾಗಿ ದಶರಥನೆಂದು ಭಾವಿಸಿ ಮತ್ತೆ ಜನಿಸಿದ ನಾರಾಯಣನ ನಾಲ್ಕು ದೇಹಗಳಂತೆ, ಈತನ ಸೇನಾಧೂಳಿಗೆ ಅಳುಕಿ ನಮಸ್ಕರಿಸಲೋಸುಗ ಶರೀರಧಾರಣೆಮಾಡಿ ಎದ್ದುಬಂದ ನಾಲ್ಕು ಕಡಲುಗಳಂತೆ ಪ್ರಸಿದ್ಧರಾದ ನಾಲ್ವರು ಮಕ್ಕಳಲ್ಲಿ ಹಿರಿಯನು, ಎಲ್ಲಾ ರಾಜರಿಗೂ ಹಿರಿಯನೂ ಎನಿಸಿರುವ ರಾಜನೃಪನು ತಮ್ಮ ಕುಲಕ್ರಮದಿಂದ ಬಂದ ರಾಜ್ಯವನ್ನು ತಮ್ಮಂದಿರೊಂದಿಗೆ ಆಳುತ್ತಿರಲು -

ಅತ್ತ ಉತ್ತರದೇಶದ ತುಂಗಭದ್ರಾ ತೀರದ ಪಂಪೆಯಲ್ಲಿ ಹರಿಹರ ಬುಕ್ಕ ಮೊದಲಾದ ಕುರುಬರಾಜರ ತರುವಾಯ ರಾಜ್ಯವಾಳಿದ ತುಳುವಕುಲದ ಈಶ್ವರ ನರಸಿಂಹ ವೀರನರಸಿಂಹ ಕೃಷ್ಣದೇವರಾಯ ಅಚ್ಯುತರಾಯರೆಂಬ ಐವರು ರಾಜರಾದ ಮೇಲೆ ಮುದದಿಂದ ಇಳೆಯನ್ನು ಕಾಪಾಡಿದ ಸದಾಶಿವರಾಯನಿಗೆ ಸೇನಾಪತಿಯಾದ ಆಂಧ್ರಕುಲದ ರಾಮರಾಯನು ತನ್ನ ರಾಜನಿಗೆ ದ್ರಾವಿಡ ಆಂಧ್ರ ಕರ್ನಾಟಕಗಳ ಸಾಮ್ರಾಜ್ಯವನ್ನು ಸಾಧಿಸಿಕೊಟ್ಟು ಸ್ವಾಮಿಕಾರ್ಯಕ್ಕೆ ಪ್ರಾಣಾರ್ಪಣೆ ಮಾಡಿ, ಒಮ್ಮೆ ಉತ್ತರ ದಿಗ್ವಿಜಯದಲ್ಲಿ ಸೊಕ್ಕೇರಿದ ಯವನ ಸೈನ್ಯವನ್ನು ಒಕ್ಕಲಿಕ್ಕಿ ಕೀರ್ತಿಶೇಷನಾದನು. ಅವನ ತಮ್ಮ ಎರೆದಿಮ್ಮರಾಜನು ಅಂದಿನ ಯುದ್ಧದಲ್ಲಿ ಅಳಿದುಳಿದವರನ್ನು ಕೂಡಿಕೊಂಡು ಪಟ್ಟಣಕ್ಕೆ ನಡೆತಂದು ತನ್ನ ಒಡೆಯನ ಸಂಪದಕ್ಕೆ ಆಶೆಪಟ್ಟು ಅವನನ್ನು ಅವಮಾನಪಡಿಸಿ ತಾನೇ ರಾಜನಾದ ಹೀನ ಕಾರ್ಯದಿಂದಾಗಿ ವಿದ್ಯಾನಗರವು ಕೆಲವೇ ದಿನಗಳಲ್ಲಿ ನಾಶವಾಯಿತು. ಅಲ್ಲಿಂದ (ಎರೆದಿಮ್ಮರಾಜನು) ಪೆನುಗೊಂಡೆಗೆ ಬಂದು ಒಂದೆರಡು ವರುಷಗಳಿದ್ದು ಮರಣಹೊಂದುವ ಸಮಯದಲ್ಲಿ ತನ್ನ ಮೂವರು ಮಕ್ಕಳೊಳಗೆ ಮೊದಲನೆಯವನಾದ ಶ್ರೀರಂಗರಾಜನನ್ನು ಪೆನುಗೊಂಡೆಯಲ್ಲಿಟ್ಟು ಆತನಿಗೆ ತೆಲುಗನಾಡೊಡೆತನವನ್ನೂ ಎರಡನೆಯವನಾದ ರಾಮರಾಯನನ್ನು

ಶ್ರೀರಂಗಪಟ್ಟಣದಲ್ಲಿಟ್ಟು ಆತನಿಗೆ ಕರ್ನಾಟಕದೇಶದೊಡೆತನವನ್ನೂ ಮೂರನೆಯ ವೆಂಕಟಪತಿರಾಯನನ್ನು ಚಂದ್ರಗಿರಿಯಲ್ಲಿಟ್ಟು ತುಂಡೀರ ಚೋಳ ಪಾಂಡ್ಯ ಮಂಡಲಗಳ ಒಡೆತನವನ್ನೂ ಕೊಟ್ಟನು. ಇವರಲ್ಲಿ ಶ್ರೀರಂಗರಾಜನು ಅಪುತ್ರಕನಾಗಿ ಸ್ವರ್ಗವಾಸಿಯಾಗಲು ಆ ವೆಂಕಟಪತಿರಾಯನು ಪೆನುಗೊಂಡೆಯಲ್ಲಿದ್ದು ರಾಜ್ಯಪಾಲಿಸತೊಡಗಿದನು.

ಇತ್ತ ಈ ರಾಮರಾಜನು ಕೆಲವು ಕಾಲಕ್ಕೆ ಗತಿಸಿದ ಬಳಿಕ ತಿರುಮಲೆರಾಜ ಮೊದಲಾದ ಅವನ ಮಕ್ಕಳು ಶ್ರೀರಂಗಪಟ್ಟಣದಲ್ಲಿ ರೇಮಟಿವೆಂಕಯ್ಯನೆಂಬ ತಮ್ಮ ದಳವಾಯಿಯನ್ನಿರಿಸಿ ತಾವು ಚಿಕ್ಕವರಾದುದರಿಂದ ಪೆನುಗೊಂಡೆಗೆ ಬಂದು ಚಿಕ್ಕಪ್ಪನಲ್ಲಿದ್ದು ಬೆಳೆದರು.

ಬಳಿಕ ಆ ವೆಂಕಟಪತಿರಾಯನು ಮಧುರೆಯ ವೀರಪ್ಪನಾಯಕನ ಮೇಲೆ ಕೋಪಗೊಂಡು ದಂಡೆತ್ತಿ ಹೋಗಿ ಪಾಂಡ್ಯಮಂಡಲದ ಮಧುರಾ ಪಟ್ಟಣವನ್ನು ಸುತ್ತಿ ಮುತ್ತಿದನು. ಆ ವೀರಪ್ಪನಾಯಕನು ಭೇದೋಪಾಯವನ್ನವಲಂಬಿಸಿ, ರಾಯನ ಸೇನಾ ನಾಯಕರಿಗೆ ದ್ರವ್ಯಭೂಷಣಗಳನ್ನು ಕಳುಹಿಸಿದನು. ಈ ತಿರುಮಲೆರಾಜನು ಆ ಲಂಚವನ್ನು ಕೊಂಡು ಅದಕ್ಕೆ ವಿವೇಕದೊಡನೆ ತನ್ನನ್ನೂ ಕೀರ್ತಿಯನ್ನೂ ಪುಣ್ಯವನ್ನೂ ಮಾರಿ ತಂದೆಯೂ ಒಡೆಯನೂ ಆದ ಚಿಕ್ಕಪ್ಪನಿಂದ ದೂರಾಗಿ ತನ್ನ ಆನೆ ಕುದುರೆ ಕಾಲಾಳುಗಳೊಡನೆ ಅತ್ತಿಂದ (ಮಧುರೆಯಿಂದ) ಶ್ರೀರಂಗಪಟ್ಟಣಕ್ಕೆ ಬಂದನೆಂಬ ವಾರ್ತೆ ಬರಲು ಅದನ್ನು ಕೇಳಿ ರಾಜನೃಪನು ತನ್ನ ತಮ್ಮಂದಿರು ಸೇನಾಪತಿ ಮಹಾಮಾತ್ಯ ಮಿತ್ರರೊಡನೆ ಆಲೋಚನೆಗೈದು ನಿಶ್ಚಯಿಸಿ- "ಈ ಪಿತೃದ್ರೋಹಿಯನ್ನು ಈ ಪಟ್ಟಣದಿಂದ ಹೊರಗಟ್ಟಬೇಕು. ಅದಕ್ಕೆ ಇವನ (ಸ್ವಾಮಿ, ಅಮಾತ್ಯ, ಜನಪದ, ದುರ್ಗ, ಕೋಶ, ಸೈನ್ಯ ಮತ್ತು ಮಿತ್ರ ಎಂಬ) ಸಪ್ತಾಂಗದ ರೀತಿಯನ್ನು ವಿಚಾರಿಸುವೆನೆಂದು" ಗೂಢಾಚಾರರನ್ನೂ ಬೇಹಿನವರನ್ನೂ ಕಳುಹಿಸಿದನು. ಅವರು ಅಲ್ಲಿ ಕೆಲವು ದಿನವಿದ್ದು ಪುನಃ ಅರಸನಲ್ಲಿಗೆ ಬಂದು ಒಳಓಲಗದಲ್ಲಿ ಕೈಮುಗಿದು ಬಿನ್ನವಿಸಿದರು. ಅದು ಹೇಗೆಂದರೆ—

ದೇವ ಚಿತ್ತೈಸು ! ಆ ಪಟ್ಟಣವನ್ನು ಸುತ್ತುವರಿದ ದೊಡ್ಡ ಗಡಿಯು ಕಲ್ಲೋದಧಿ ಯಂತೆ ಎರಡೂ ದಡಗಳನ್ನು ಮೀರಿ ಹೊರಹೊಮ್ಮಿ ಬರುವ ತೆರೆಗಳಿಂದ, ಕಡುರಭಸದಿಂದ ಹರಿಯುವ ಜಲಪ್ರವಾಹದ ಒಳಹೊಯ್ಲಿನ ಕೋಲಾಹಲದಿಂದ, ಎಡೆವಡೆಯಲ್ಲಿ, ಮೂಡಿ ಸುರ್ರನೆ ಸುತ್ತಿ ಗರ್ತದಂತೆ ಇಳಿಯುವ ದೊಡ್ಡ ಸುಳಿಗಳಿಂದ, ತಿಮಿತಿಮಿಂಗಲುಗಳ ಜೊತೆಯೆನಿಸುವ ಹೆಮ್ಮೀನುಗಳ ಬಾಲ ಚಾಲನೆಯಿಂದ ಅಂಚುಮುಟ್ಟುವ ಕರ್ಮಡುಗಳಲ್ಲಿ ದಡದಡನೆ ನಾವೆಯಲ್ಲಿ ತುಂಬಿರುವ ಜನರ ಚೀರಾಟ-ಕೋಲಾಹಲದಿಂದಾಗಿ ಇತ್ತಿಂದತ್ತ ಹಾರಲಾರದೆ ರೆಕ್ಕೆಯುಳುಕಿ ಶಕ್ತಿಗುಂದಿ ಬದಿಯಲ್ಲಿ ಬೀಳುವ ಹಕ್ಕಿಗಳ ಸಮೂಹವನ್ನು ನುಂಗಲು ಸಿಡಿಯುವ ನೇರ್ಮೀನುಗಳಿಂದ, ನೀರು ಕುಡಿಯಲು ಇಳಿಯುವ ಮದ್ದಾನೆಗಳ ಸೊಕ್ಕಿನ ಸವಿಯುಂಡು ಕಾದುವ ನೀರಾನೆಗಳಿಂದ, ದೊಡ್ಡಮಡುಗಳನ್ನು ಕಡಲೆಂದು ಬಗೆದು ನೀರನೀಂಟುವ ಕಾರ್ಮುಗಿಲುಗಳನ್ನು ಆನೆಯೆಂದು ಭಾವಿಸಿ ನುಂಗ ಬಯಸುವ ಮೊಸಳೆಗಳಿಂದ, ಅತಿ ಭೀಕರವಾಗಿ (ಆ ನದಿಯು) ದಾಟಲಸಾಧ್ಯವಾಗಿದೆ. ಅದರ

ಒಳವಲಯದ ಕೋಟೆಯು ಅಮರಾವತಿಯ ಸೌಧಗಳೆತ್ತರವನ್ನು ಕೀಳ್ಗೈಯ್ಯಲು ಬೆಳೆದಿರುವುದು. ಅಲ್ಲಿ ಮುಗಿಲಟ್ಟಣೆಯಲ್ಲಿರುವ ಕಾವಲುಗಾರರಿಗೆ, ಸೂರ್ಯಮಂಡಲವು ಶಿರದ ಮೇಲೆಯೇ ಇದ್ದರೂ ಕೋಟೆಯಡಿಯನ್ನು ಹೊಡೆಹೊಡೆದು ಸಿಡಿಯುವ ಹೊಳೆಯ ತೆರೆಗಳ ತುಂತುರು ಹನಿಗಳಿಂದ ನೆನೆದು ಆ ಶೀತೋಷ್ಣಗಳನ್ನು ಸರಿಗೊಳಿಸಿ ಸುಖವಾಗಿದ್ದಾರೆ. ಆಳ್ವೇರಿ ನೆಲಗಟ್ಟು ಅಗಳುಗಳು ನಾಗಲೋಕದಿಂದ ದೇವಲೋಕದವರೆಗೆ ಮೀರಿ ಬೆಳೆದ ಕೋಟೆಯನ್ನಳೆಯುವಾಗ ಬರೆದ ಸ್ವರ್ಗ, ಮರ್ತ್ಯ, ಪಾತಾಳಗಳ ಅಳತೆಗೆರೆಗಳಂತಿರುವವು. ಸುತ್ತಲಿನ ಕೊತ್ತಳಗಳು, ಇಂದ್ರನ ವಜ್ರಾಯುಧದ ಪೆಟ್ಟಿಗೆ ಹೆದರಿಬಂದು ರಂಗನಾಥನನ್ನು ಮೊರೆಹೊಕ್ಕು ತೋಪಿನ ನೆವದಿಂದ ಕೌಮೋದಕೀ ಮುದ್ರೆ ಧರಿಸಿ ನಿರ್ಭಯಗೊಂಡ ಕುಲಾಚಲಗಳಂತಿವೆ. (ಟಿ. ಕೌಮೋದಕಿ ಎಂಬುದು ವಿಷ್ಣುವಿನ ಗದೆಯ ಹೆಸರು. ಕೊತ್ತಳದ ಮೇಲಿಟ್ಟ ತೋಪುಗಳು ಆ ಗದೆಯ ಆಕಾರವಿರುವುದರಿಂದ ಕೊತ್ತಳಗಳು ಕೌಮೋದಕಿಯ ಮುದ್ರೆ ಧರಿಸಿರುವಂತೆ ತೋರುತ್ತಿವೆ) ಅಲ್ಲಿಯ ದಾರಿಕೂಟಗಳಲ್ಲಿ ಒಪ್ಪುವ ಪೊನ್ನರನ್ನದ ನೆಲಮಾಡಗಳು ರಂಗೇಶನನ್ನು ಸೇವಿಸುವುದಕ್ಕಿಳಿತಂದ ವೈಮಾನಿಕ ದೇವತೆಗಳ ದಿವ್ಯವಿಮಾನಗಳಂತಿರುವವು. ದಿವ್ಯ ವಿಮಾನ ಮಂಟಪ ಪ್ರಕಾರ ಗೋಪುರಗಳಿಂದೆಸೆಯುವ ದೇವಾಲಯವು ವೈಕುಂಠದಂತಿದೆ. ಅಲ್ಲಿ ಶೇಷಶಯ್ಯೆಯಲ್ಲಿ ಪವಡಿಸಿದ ಶ್ರೀರಂಗನಾಥನು ವೈಕುಂಠಪತಿಯಂತಿರುವನು. ಅಂತಿರುವ ಶ್ರೇಷ್ಠ ಪಟ್ಟಣವನ್ನು ರಕ್ಷಿಸುವ ಅರಸನ ಇರುವಿಕೆಯೂ ಅವನ ಸೇವಕರ ಪರಿಯೂ ಅವನ ಸೇನಾನಿಯ ನಯವೂ ಅವನ ಮಿತ್ರರ ಚರಿತ್ರೆಯೂ ಅವನಮಾತ್ಯರ ಕಾರ್ಯಗಳೂ ಅತ್ಯಂತ ವಿಚಿತ್ರವಾಗಿರುವವು. ಅದನ್ನು ದೇವರಡಿಯಲ್ಲಿ ಬಿನ್ನವಿಸಲು ನಮಗೆ ಅಳುಕು ತೋರುತ್ತಿದೆ" ಎಂದು ಅವರು ಹಿಂಜರಿಯಲು-

ಆ ರಾಜನೃಪನು ಅವರ ಮೇಲೆ ದಯಾದೃಷ್ಟಿ ಬೀರಿ-ಅಪ್ರಿಯವಾಗಲಿ ಗ್ರಾಮ್ಯವಾಗಲಿ ನಿಂದೆಯಾಗಲಿ ಹಾಸ್ಯವಾಗಲಿ ಕಟಕಿಯಾಗಲಿ ಜಿಗುಪ್ಸೆಯಾಗಲಿ ಇದ್ದುದ್ದನ್ನು ಇದ್ದಂತೆ-ಒಳಓಲಗದಲ್ಲಿ ತಿಳಿಸುವುದೇ ದೂತರಿಗೆ ನೀತಿ. ಆದ್ದರಿಂದ ನೀವು ಹೆದರದೆ ವಿವರಿಸಬೇಕೆಂದು ಆಣತಿಯಿತ್ತನು. ಅವರು ಬಿನ್ನವಿಸಿದರು. ಹೇಗೆಂದರೆ-

'ಆ ರಾಯನು ಚೆಲುವು ಪಡೆದ ಮತ್ತಿನಿಂದ ಮಡದಿಯರ ಮೈಕೂಟದಲ್ಲಿ ಎಡಬಿಡದೆ ತೊಡಗಿ ದುಷ್ಟಶಿಕ್ಷಣ ಪ್ರಜಾಪಾಲನ ದಂಡಯಾತ್ರಾದಿ ಕ್ಷತ್ರಿಯರಿಗೆ ಸ್ವಾಭಾವಿಕವಾದ ಕಾರ್ಯಗಳನ್ನು ಆಯಾ ಅಧಿಕಾರಿಗಳಿಗೆ ಒಪ್ಪಿಸಿರುವನು. ಅನುಚರರೂ ಸ್ತ್ರೀಲಂಪಟತ್ವಕ್ಕೆ ನೆರವೆನಿಸುವ ಕಾಮೋದ್ದೀಪಕ ಔಷಧ ಮಂತ್ರ ತಂತ್ರ ಮಾತ್ರಿಕೆ ಮೂಲಿಕೆ ರಕ್ತಚಂದನ ಮುಂತಾದ ವಸ್ತುಗಳನ್ನು ಸಂಪಾದಿಸುವುದರಲ್ಲಿ ನಿಪುಣರೆನಿಸಿ ವಿಟ-ವಿದೂಷಕರಂತಿದ್ದಾರೆ. ಸೇನಾಪತಿಯು ಆನೆಕುದುರೆ ಕಾಲಾಳುಗಳನ್ನು ಒಗ್ಗೂಡಿಸಿ ದಂಡಯಾತ್ರೆಗೈಯುವ ಯತ್ನಬಿಟ್ಟು, ತನ್ನೊಡೆಯನನ್ನು ಬೇಟೆಯಿಂದ ಮೆಚ್ಚಿಸಿ ವಶಪಡಿಸಿಕೊಳ್ಳುವೆನೆಂದು, ದಡಿಬಲೆಗಳನ್ನು ಬಡಿಕೋಲುಗಳನ್ನು ಅಂಟುಗಳೆಗಳನ್ನು ಕಾಲ್ಗಣ್ಣಿಗಳನ್ನು ಗಿಡುಗ ಡೇಗೆ ನಾಯಿಗಳನ್ನು ಬೇಟೆಯ ಮೃಗಪಕ್ಕಿಗಳನ್ನು ತರಿತರಿಸಿ ಪರೀಕ್ಷಿಸುವ ಕಾರ್ಯದಲ್ಲಿ ಬೇಡಪಡೆಯ ಜೊತೆಗೂಡಿದ್ದಾನೆ.

ಮಿತ್ರರಲ್ಲಿ ಉತ್ತಮರಾದವರು ಈ ರೀತಿ ತಕ್ಕುದಲ್ಲೆಂದು ಹಲವುಬಾರಿ ತಿಳಿಸಿ ತಮ್ಮ ಮಾತು ವ್ಯರ್ಥವಾದುದರಿಂದ ಮನದೆಗೆದಿದ್ದಾರೆ. ದುರ್ಮಿತ್ರರು ಈ ವ್ಯಸನಾಸಕ್ತಿಯನ್ನು ಮೆಚ್ಚಿಮೆಚ್ಚಿ ಮನವಾರೆ ಕೊಂಡಾಡಿ ತಾವೂ ಇದರಲ್ಲಿ ಮುಳುಗಿದ್ದಾರೆ. ಮಂತ್ರಿಗಳು ಈ ರಾಜ ಸೇನಾನಿ ಪರಿವಾರದವರ ಸ್ಥಿತಿಯನ್ನು ಕಂಡು ತಾವೂ ಅಂದು ಜೀವದಿಂದುಳಿದುದೇ ಪರಮಲಾಭವೆಂದು ತಮ್ಮಿಷ್ಟದೇವತೆಗಳಿಗೆ ವಂದಿಸಿ ಅವರ ಹೀನಕಾರ್ಯವನ್ನು ಅನುಮೋದಿಸುತ್ತ ಒಳಿತು-ಕೆಡುಕುಗಳ ಚಿಂತೆಯನ್ನು ಬಿಟ್ಟುಕೊಟ್ಟಿದ್ದಾರೆ. ಕರಣಿಕ ನ್ಯಾಯಾಧೀಶ ಮುಂತಾದ ವಿವಿಧಾಧಿಕಾರಿಗಳು ಲಂಚ-ವಂಚನೆಗಳಿಂದ ಹೆಜ್ಜೆ ಹೆಜ್ಜೆಗೆ ಇಮ್ಮಡಿಸುವ ತೆರಿಗೆ, ಬೇಡಿಕೆ, ಬಿರಾಡ ಬಿಟ್ಟಿಗಳ ಬಾಧೆಯಿಂದ ಪ್ರಜೆಗಳನ್ನು ಹಿಂಸಿಸುತ್ತಿದ್ದಾರೆ' ಎಂದು ನುಡಿದು ಒಬ್ಬ ಬೇಹಿನವನು ಸುಮ್ಮನಿರಲು ಮತ್ತೊಬ್ಬ ಬೇಹಿನವನು ಹೀಗೆಂದನು-

ಜೀಯ, ಚಿತ್ತೈಸು. ಇವರ ಸ್ಥಿತಿಯನ್ನು ಕೇಳುವುದು ಅಸಾಧ್ಯ. ಆದರೂ ಸಹನೆಯಿಂದ ಕೇಳಬೇಕು. ಬೆಳಗಿನ ಊಟಕ್ಕೆಂದು ತೆಲುಗರು ಅಡಿಗೆಮನೆಯಲ್ಲಿ ತುಪ್ಪಳ ಕಿತ್ತು ಕತ್ತರಿಸಲ್ಪಡುವ ಹಲವು ಹಕ್ಕಿಗಳ ಕಿರಿಚುವಿಕೆಯನ್ನು ಕೇಳಿ ಎಚ್ಚರಗೊಳ್ಳುವರು. ಬಳಿಕ ಒಲೆಗೆಂಡದಲ್ಲಿ ಸುಡುವ ಹಳೆಯ ಖಂಡದ ಹೊಲಸುವಾಸನೆಗೆ ಹೇಸಿಕೊಂಡಂತೆ ಅಲ್ಲಲ್ಲಿ ಮೂಗು ಹಿಡಿದು ಸಂಧ್ಯಾಜಪಗೈಯುವರು. ಉಣ್ಣುವಾಗ ಭತ್ತದ ಅನ್ನ ಕಾಯ್ಕಿಚಡಿ ಕಜ್ಜಾಯಗಳನ್ನು ತ್ಯಜಿಸಿ, ಹಾಲು-ಮೊಸರುಗಳನ್ನು ಹಳಿದು ಕರುಳು ಮಾಂಸ ಮಿದುಳುಗಳನ್ನು ತಿಂದು ಬಿಸಿನೆತ್ತರನ್ನು ಹೀರಿ, ಬೆರೆತು ಬೀಗಿ ತೇಗಿ ಉಬ್ಬಿ ಸೊಕ್ಕಿ ಡೇಗುವರು. ಬಳಿಕ ಉಳಿದ ಸಮಯವನ್ನು ಕೋಳಿ ತಗರುಗಳ ಪಂದ್ಯಗಳಲ್ಲಿ ಕಳೆದು ಅಲ್ಲಿ ಸೋತದ್ದನ್ನು ತಮ್ಮತಮ್ಮ ಅಡಿಗೆ ಮನೆಗಳಿಗೂ ತಮ್ಮ ಗೆಳೆಯರ ಮನೆಗಳಿಗೂ ತಾವೇ ಕೊಯ್ದು ಹಂಚಿಕೊಡುವರು. ಸಂಜೆಯಲ್ಲಿ ಮೃಗಬೇಟೆಗಾರರು ಹಂದಿ, ಮೊಲ, ಹುಲ್ಲೆ, ಮರೆ, ಸಾರಂಗ ಮೊದಲಾದ ಮೃಗಗಳನ್ನು, ಹಕ್ಕಿಬೇಟೆಗಾರರು ನವಿಲು, ಲಾವುಗೆ ಗವುಜುಗ, ಗೀಜಗ, ಗೊರವ, ಪಾರಿವಾಳ, ಗುಬ್ಬಿ ಕಬ್ಬಕ್ಕಿ, ಬೆಳ್ಳಕ್ಕಿ ಮೊದಲಾದ ಹಕ್ಕಿಗಳನ್ನು ನೀರ ಬೇಟೆಗಾರರು ಮೀನು ಏಡಿ ಆಮೆ ಮೊದಲಾದವನ್ನೂ, ಕಿರುಬೇಟೆಗಾರರು ಇಲಿ, ಬೆಳ್ಳಿಲಿ ಮೊದಲಾದ ಚಲಚರ ಪ್ರಾಣಿಗಳನ್ನು ತಂದು ಮುಂದಿರಿಸುವರು. ಅವನ್ನು ನಿಟ್ಟಿಸಿ ನೋಡಿ ಕೈಮುಟ್ಟಿ ಪರೀಕ್ಷಿಸಿ ಅವುಗಳಲ್ಲಿಯ ಸಾರವನ್ನರಿತು ಸಂತಸಬಟ್ಟು ಅವನ್ನು ತಂದವರಿಗೆ ಇಷ್ಟಾರ್ಥವನ್ನಿತ್ತು ಮನ್ನಿಸುವರು. ಇನ್ನೇನು! ಈ ಊರಹಂದಿಯನ್ನು ತಂದವನಿಗೆ ಊರನ್ನು ಉಂಬಳಿಯಾಗಿ ಕೊಡುವರು. ಕುರಿಯನ್ನು ತಂದವನಿಗೆ ತೆರಿಗೆಯನ್ನು ಬಿಡುವರು. ಗೆಂಡೆಮೀನು ತಂದವನಿಗೆ ದಂಡಿಗೆ ಹಾಕುವರು. ಉಡ ತಂದವನಿಗೆ ಕೊಡುಗೆಗೊಡುವರು. ಇಷ್ಟರಿಂದ ತೃಪ್ತಿಪಡೆಯದೆ ಒಂದೊಂದು ದಿವಸ ತಾವೇ ವಿಲಾಸದಿಂದ ತಮ್ಮ ಸ್ನೇಹಿತರ ಜೊತೆಗೂಡಿ ಬೇಟೆಕೋವಿಗಳನ್ನು ತೆಗೆದುಕೊಂಡು ಹೊರಟು ದೇವಾಲಯದ ಗೋಪುರ, ಪ್ರಾಕಾರ, ಮಂಟಪ, ವಿಮಾನಗಳಲ್ಲಿ ವಾಸಿಸುವ ಕಿರುಹಕ್ಕಿಗಳನ್ನು ಹಾರಿಸಿ ಗುಂಡಿಟ್ಟು ಕೆಡಹುವರು. ಅವುಗಳಲ್ಲೊಂದೊಂದು ಗರ್ಭಗೃಹ ಹೊಕ್ಕರೂ ಬಿಡದೆ ಸಿಡಿದಲೆಯಿಕ್ಕಿ ತಂದು ಅವು ಸಾರ್ಜಿತಗಳಾದುದರಿಂದ ಅತಿಪ್ರೀತಿಯಿಂದ

ತಮ್ಮತಮ್ಮ ಸತಿ ಸುತ ಹಿತವರೊಡಗೂಡಿ ತಿನ್ನುವರು. ಇಂತು ಹೇಗೋ ಒಮ್ಮೆ ಸಿಕ್ಕದೇ ಹೋಗುವುದೆಂಬ ಚಿಂತೆಯಿಂದ ತಮ್ಮ ತಮ್ಮ ಮನೆಗಳಲ್ಲಿ ಸಾಕುವ ಕೋಳಿ, ಹುಂಜ, ಮರಿ, ಮೊಟ್ಟೆಗಳನ್ನೂ ಹಂದಿಯ ಸಲಗ, ಮರಿ, ಎಳೆಮರಿ, ಕಿರುಮರಿಗಳನ್ನೂ ಕೂಡಿಸಿಟ್ಟು ಸುಖವಾಗಿದ್ದಾರೆ. ಊರೂರಿಂದ ತರುವ ಉಲುಪೆಗಳನ್ನು ಹಣ್ಣು ಕಾಯಿ ಕಬ್ಬು ಎಳನೀರುಗಳನ್ನು ಕಸವೆಂದು ತ್ಯಜಿಸಿ ಮೃಗಹಕ್ಕಿಗಳನ್ನು ತರಬೇಕೆಂದು ನಿರೂಪಿಸುವರು. ಅಷ್ಟಲ್ಲದೆ ಅವರ ಅಂಗಳಗಳು ಯಾವತ್ತೂ ಕೊಯ್ದು ಸುಲಿದು ತೆಗೆದ ಹಸಿ ತೊಗಲುಗಳಿಂದ, ಹಳೆಯ ಎಲವುಗಳಿಂದ, ಗಿಳಿಯ ತುಪ್ಪುಳುಗಳಿಂದ, ಹಂದಿಯ ಮೈರೋಮದಿಂದ, ಮಾಂಸವನ್ನು ಸಂಸ್ಕರಿಸಲು ಎಲ್ಲೆಡೆ ತುಂಬಿಸೂಸಿರುವ ಅರಿಸಿನ ಹುಡಿಗಳಿಂದ, ಒಪ್ಪುವ ಪಂಚವರ್ಣದ ರಂಗವಲ್ಲಿಗಳಿಂದ ಇಬ್ಬದಿಗಳಲ್ಲಿ ಕಟ್ಟಿದ ಹಗ್ಗಗಳಲ್ಲಿ ಇಳಿಬಿದ್ದು ಒಣಗುತ್ತಿರುವ ಕೆಂಗಂಡದ ಚಿಗುರುತೋರಣಗಳಿಂದ, ಕಿರುಗರದಲ್ಲಿ ಪೋಣಿಸಿ ಬಿಗಿದು ಜೋತುಬಿದ್ದಿರುವ ಮೀನುಸರದ ಮುತ್ತಿನಹಾರಗಳಿಂದ, ಉದ್ದವಾದ ಕರುಳುಹವಳದ ಸರಗಳಿಂದ ಬೇಟೆಯ ಹಕ್ಕಿಗಳ ಇಂಚರದ ಕೊಳಲು ಮುಖವೀಣೆಗಳಿಂದ, ಅರೆಕೊಯ್ದ ಊರಹಂದಿಗಳು ಚೀರುವ ದನಿಯ ಬುರುಗುಗಳಿಂದ, ಹುಂಜಗಳ ಉಗ್ಗಡಣೆಯ ಕಹಳೆಗಳಿಂದ ಅರೆಗೊರಳನ್ನು ಕತ್ತರಿಸುವಲ್ಲಿ ನೆಲವನ್ನು ಒದೆಯುವ ಆಡುಕುರಿಗಳ ಖುರಪುಟ ನಿನಾದದ ಮೃದಂಗಗಳಿಂದ, ಹುರಿದಿಟ್ಟ ಈಚಲುಹುಳು ಕೆಂಜಿಗಗಳ ಲಾಜಾಕ್ಷತೆ (ಅರಳು-ಅಕ್ಕೀಕಾಳು)ಗಳಿಂದ ಹರಿದು ಕಿತ್ತ ದೊಡ್ಡಗಿಳಿಗಳ ಉದ್ದಗರಿಗಳ ದರ್ಭೆಗಳಿಂದ ಆಮೆಡುಬ್ಬದ ಕಮಂಡಲುವಿನಲ್ಲಿ ತುಂಬಿದ ನೆಣದ ಹೋಮದ್ರವ್ಯದಿಂದ ಹೊಸನೆತ್ತರ ಔಕುಳಿಯಿಂದ-ಪಾಪಕನ್ಯೆಯ ಮದುವೆಯ ಮನೆಯಂತೆ-ಇರುವವು ಮತ್ತು ಅವರ ಹಸುಳೆಗಳು ಹಕ್ಕಿಯ ಸಿಡಿದೆಲೆಯಲ್ಲಿ ತಿರಿಕಲ್ಲಾಟವನ್ನೂ ಕೈಕಾಲುಗಳ ಎಲುವು ಮುರಿವಲ್ಲಿ ಕೋಲಾಟವನ್ನು ಚೀರಿ ಹಾರಿ ಕಷ್ಟಪಡುವ ಹಕ್ಕಿಗಳನ್ನು ಅಟ್ಟಿ ತರುಬಿ ಹಿಡಿಯುವಲ್ಲಿ ಪರಿವರಿ ಆಟವನ್ನೂ ತುಪ್ಪುಳ ಕೀಳುವಾಗ ಸಿಡಿಯುವ ಪಾರಿವಾಳಗಳನ್ನು ಹೊಡೆದು ನೆಲಕ್ಕೆ ಕೆಡಹುವಲ್ಲಿ ಹೊಡೆಚೆಂಡಾಟವನ್ನು ಮೇಲೆರಗಿ ಹಿಡಿಯುವಾಗ ಜಾಡಿಸುವ ರೆಕ್ಕೆಗಳ ಹೊಡೆತದಿಂದೆದ್ದ ಧೂಳು ಕಣ್ಣಲ್ಲಿ ಬೀಳಲು ಕಣ್ಣುಮುಚ್ಚುವುದರಿಂದ ಕಣ್ಣುಮುಚ್ಚಾಲೆಯನ್ನು ಕಲಿಯುವರು. ಅಷ್ಟಲ್ಲದೆ ಪ್ರಾಣಸಹಿತ ಚುಚ್ಚಲ್ಪಡುವ ಸಲಗವು ಅರಚದಂತೆ ಬಾಯ್ಮುಚ್ಚಿ ಹಿಡಿಯುವುದರಲ್ಲಿ ಮುಷ್ಟಿಶಕ್ತಿಯೂ ಮಂಗಳಮರದಲ್ಲಿರುವ ಮರಿಗುಬ್ಬಿಯನ್ನು ಕೋವಿಯ ಗುಂಡಿನಿಂದಿಟ್ಟು ಕೆಡಹಲು ಗುರಿ ನೋಡುವಲ್ಲಿ ದೃಷ್ಟಿಶಕ್ತಿಯೂ, ಹಬ್ಬ ಮದುವೆ ಔತಣದೂಟಗಳಲ್ಲಿ ಹಲವಾರು ಆಡುಕುರಿಗಳನ್ನು ತರಿಯುವಲ್ಲಿ ತೋಳಶಕ್ತಿಯೂ ಹರಿದೋಡುವ ಹಂದಿಯನ್ನು ತವಕದಿಂದ ಬೆನ್ನಟ್ಟಿ ಹಿಡಿಯುವಲ್ಲಿ ಕಾಲವೇಗವೂ ಕೊಯ್ಯುವ ಕೊರೆಯುವ ಕೊಚ್ಚುವ ಬಗಿಯುವ ಸೀಳುವ ಕಡಿಯುವ ಕತ್ತರಿಸುವ ನಾದುವ ಸದೆಯುವ ತುಂಡುಗೊಳಿಸುವ ತಿಕ್ಕುವ ಸುಡುವ ಅಡುವ ಗುಂಡಿಗೆಬಿಚ್ಚುವ ನೆತ್ತರು ಬಸಿಯುವ ನೆಣ ತೆಗೆಯುವ ಕರುಳುಚ್ಚುವ ಕಾರ್ಯದಲ್ಲಿ ಕರ್ತವ್ಯಗಳು ಸಫಲಗೊಳ್ಳುವವು. ಇವುಗಳ ನೋಟದಲ್ಲಿಯೇ ಕಣ್ಣುಗಳನ್ನು ಇವುಗಳ ದನಿಗಳಲ್ಲಿಯೇ ಕಿವಿಗಳನ್ನು ಇವುಗಳ ಕಂಪಿನಲ್ಲಿಯೆ ಮೂಗನ್ನು ಇವುಗಳನ್ನು

ಮುಚ್ಚುವಿಕೆಯಲ್ಲಿಯೆ ಚರ್ಮವನ್ನು ಇವುಗಳ ಸವಿಯಲ್ಲಿಯೇ ನಾಲಗೆಯನ್ನು ಸವಿಗಾಣಿಸಿ ಬೇರೆ ವಸ್ತುಗಳಲ್ಲಿ ಆಸೆಬಿಡಿಸಿ ಕಡುಸಂತಸದಲ್ಲಿರುವರು. ಇನ್ನೇನು? ಕೆಲವೇ ದಿನಗಳಲ್ಲಿ ಹೊಳೆಯ ಮೀನುಗಳೂ ತೀರುವವು. ಆ ಬಳಿಕ ಹೇಗಿರುವರೋ? ತಂದೆಯ ತಿಥಿಯೆಂದು ಒಂದು ದಿನ ಬಿಟ್ಟುದಕ್ಕೆ ಮೈಗುಂದುವರು. ಏಕಾದಶಿಯಲ್ಲಿ ಇವು ಇಲ್ಲಮುದರಿಂದ ಬಾಯ ನೀರೊಣಗಿ ಬಣ್ಣಗುಂದವರು. ಕಡುಬೇನೆಯಲ್ಲಿ ಬಿಟ್ಟಿರಲಾರದೆ ಸುಟ್ಟ ಹಕ್ಕಿಗಳನ್ನು ಎಡಗೈಯಲ್ಲಿಟ್ಟುಕೊಂಡು ಆ ವಾಸನೆಯನ್ನು ಆಘ್ರಾಣಿಸುತ್ತ ಪಥ್ಯ ಮಾಡುವರು" ಎಂದು ಬಿನ್ನವಿಸುತ್ತಿರಲು-

ಅರಸನು ಅದಕ್ಕೆ ಹೇಸಿ ಬೇರೊಂದನ್ನು ಕೇಳುವೆನೆಂದು ಅದನ್ನು ತಡೆದು ಅವರ ಸಂಧಿ-ವಿಗ್ರಹ ಮುಂತಾದ ಷಾಡ್ಗುಣ್ಯದ ರೀತಿಯನ್ನು ಕೇಳಲಾಗಿ (ಆ ದೂತನು) ಹೇಳಿದನು-

ದೇವ ಚಿತ್ತೈಸು, ನಾನು ಬಿನ್ನವಿಸುವುದರಲ್ಲಿ ಏನಾದರೂ ಮರೆಮೋಸದಿಂದಾಗಿ ಹೆಚ್ಚು-ಕಡಿಮೆಯಿದ್ದಲ್ಲಿ ಅದನ್ನು ಸೈರಿಸಬೇಕು. ಆ ತೆಲುಗ ರಾಜಕುಮಾರನು ಮಧುರೆಯ ಕಡೆಯಿಂದ ಸೈನ್ಯ ಸಮೇತ ಬರುವುದನ್ನು ಕೇಳಿ ಈ ಪ್ರಾಂತದ ನಾಡು-ಬೀಡುಗಳನ್ನಾಳುವ ಬ್ರಾಹ್ಮಣ ದೊರೆಗಳೂ ಅರಸುಮಕ್ಕಳೂ ಒಕ್ಕಲಿಗರೂ ಬಣಜಿಗರೂ ಬೇಡರೂ ಮೊದಲಾದ ಹಲವು ಜನ ದೊರೆಗಳು ತಮ್ಮಲ್ಲಿದ್ದ ಧನಕನಕ ವಸ್ತು ವಾಹನಗಳನ್ನು ಕೊಂಡು (ಹೋಗಿ) (ಅವನ) ಕಾಲಿಗೆರಗಿ ಕಪ್ಪ ಕಾಣಿಕೆಗಳನ್ನು ಒಪ್ಪಿಸಿ ಅವನ ಅಧಿಕಾರಮುದ್ರೆ ಪಡೆದು ಹೆಸರು ಹೊತ್ತು ಸೇವಿಸಿ ಅವನ ಒಲವು ಪಡೆದು ತಮ್ಮ ತಮ್ಮ ನೆಲದ ಒಡೆತನವನ್ನು ಭದ್ರಪಡಿಸಿಕೊಂಡು ತಾವೆಲ್ಲರೂ ಒಂದಾಗಿ-ಬಾಲರವಿಯಲ್ಲಿ ಹೋರಾಟಕ್ಕೆಳಸುವ ಕತ್ತಲೆಯ ವಿಸ್ತಾರದಂತೆಯೂ ಬಿರುಗಾಳಿಯನ್ನು ಅಡ್ಡಗಟ್ಟಿ ಬಯಸುವ ಮೋಡಗಳ ಹಿಂಡಿನಂತೆಯೂ ದೊಡ್ಡಕಿಚ್ಚನ್ನು ಎದುರಿಸಿ ನಿಲ್ಲಬಯಸುವ ಅರಳೆಯ ಮೊತ್ತದಂತೆಯೂ ತುಂಬಿಹರಿಯುವ ನದಿಯ ಹೆಚ್ಚವನ್ನೆದುರಿಸ ಬಯಸುವ ಮಳಲುಗಟ್ಟೆಯಂತೆಯೂ ಗರುಡನ ಜೊತೆಗೆ ಹೋರಾಡಲು ಹೊಂಚುವ ನೀರ್-ಹಾವುಗಳ ಹಿಂಡಿನಂತೆಯೂ ಗಂಡುಗಿಡುಗವನ್ನು ಪ್ರತಿಭಟಿಸಲುರ ವಣಿಸುವ ಗೂಗೆಗಳ ಗುಂಪಿನಂತೆಯೂ-ಮತ್ತೇನು! ಸಿಂಹದೊಂದಿಗೆ ಕಾದಲು ಹವಣಿಸುವ ನಾಯಿಗಳ ಸಮೂಹದಂತೆಯೂ ಅವರು ಮುಂದುಗಾಣದೆ ದೇವರಡಿಗಳಲ್ಲಿ ಮಾತ್ಸರ್ಯವನ್ನೆಣಿಸುತ್ತಿದ್ದಾರೆ-ಎಂದನು.

ಅರಸನು ಆ ದೂತನ ಮುಖ ನೋಡಿ ನಿನ್ನೀ ನುಡಿಗಳು ನಮಗೆ ಕಿವಿದುಂಬಬೇಕು. (ಟಿ.ಮನನವಾಗಬೇಕು) ಎಂದು 'ಕಂಡುದರಲ್ಲಿ ಕೆಲವನ್ನು ಕೂಡಿಸಿ ಕೆಲವನ್ನು ಕಳೆದು ಕಾವ್ಯಕಟ್ಟದೆ ಇದ್ದುದನ್ನು ಇದ್ದಂತೆ ಹೇಳು. ಅವರು ನನ್ನಲ್ಲಿ ಎಣಿಸಬಾರದುದನ್ನು ಎಣಿಸಿದರೂ ಆಡಬಾರದುದನ್ನು ಆಡಿದರೂ ಮಾಡಬಾರದುದನ್ನು ಮಾಡಿದರೂ ಅದಕ್ಕೆ ಅಂಜಬೇಡೆಂದು ನಿರೂಪಿಸಿದನು. ಅವನು ಕೈಮುಗಿದು ಹೀಗೆಂದನು-

ದೇವ! ನೀನೆನ್ನ ಬಿನ್ನಹವನ್ನು ದಯೆಯಿಂದ ಆಲಿಸಬೇಕು. ಒಮ್ಮೆ ಆ ತಿರುಮಲೆ

ರಾಜನು ಒಡ್ಡೋಲಗದೊಳಗೆ ತನ್ನೆಡಬಲಗಳಲ್ಲಿ ನಿಂತಿದ್ದ ಎಲ್ಲ ದೊರೆಗಳ ಮೇಲೆ ಕಟಾಕ್ಷಾಮೃತವನ್ನು ಸುರಿಸಿ-'ನಿಮ್ಮ ನಿಮ್ಮ ನಾಡು-ಬೀಡುಗಳ ಕ್ಷೇಮದ ಪರಿ ಏನು?' ಎನ್ನಲು ಒಡನೆ ಅವರೆಲ್ಲರೂ ಒಂದಾಗಿ ವಂದಿಸಿ ಒಂದೇ ಬಾರಿಗೆ 'ಮೈಸೂರ ರಾಜೊಡೆಯರ ಕಾಟ ಹೆಚ್ಚಿನ'ದೆಂದು ಗಳಹಿದರು. ಆ ರಾಜನು ಪ್ರತಿಹಾರಿಗಳ ಮುಖ ನೋಡಿ ಅವರ ಗುಜುಗುಜು ಶಬ್ದವನ್ನು ನಿವಾರಿಸಿ 'ಅನುಕ್ರಮವಾಗಿ ಒಬ್ಬೊಬ್ಬರೇ ಬಿನ್ನವಿಸಿರಿ' ಎಂದನು.

ಕಾರುಗಳ್ಳಿಯವನು ದಂಡಪ್ರಣಾಮಗೈದು ಹೀಗೆಂದನು-ಜೀಯ ಕೇಳು, ನಮ್ಮ ಪಟ್ಟಕ್ಕೆ ಆರು ಕೇರಿಗಳು, ದೊರೆಗಳೂ ಆರುಜನ, ಒಡಹುಟ್ಟಿದವರು ಆ ಕೇರಿಗಳನ್ನು ಹಂಚಿಕೊಂಡು ಒಬ್ಬೊಬ್ಬರು ಒಂದೊಂದು ಕೇರಿಯಲ್ಲಿ ಆಳುತ್ತಿದ್ದೆವು. ಹೀಗಿದ್ದ ನಮಗೆ ಗಡಿಯ ಹೊಲದ ದೆಸೆಯಿಂದ ರಾಜನೃಪನಲ್ಲಿ ಹಗೆತನ ಬೆಳೆದು ಹೋರಾಡುವಲ್ಲಿ ಅಂದಂದಿಗೆ ನನ್ನ ಒಡಹುಟ್ಟಿದ ಐವರೂ ಕಡಿಯಲ್ಪಟ್ಟು ಮಡಿದರು. ಆ ಬಳಿಕ ನಾನೂ ಅವನಿಂದ ಸಾಂಬುವೆನೆಂದೇ ನಿಶ್ಚಯಗೈದು ನಿರ್ಭಯವಾಗಿ ಅವನಲ್ಲಿಗೆ ದೂತರನ್ನಟ್ಟಿ 'ಇಂದಿನ ಕಾಳಗದಲ್ಲಿ ಎರಡು ಪಡೆಯೂ ಹೋರಾಡದೆ ನೋಡುತ್ತಿರಲಿ. ನಾವಿಬ್ಬರೇ ಕಾದೋಣ. ಆಗ ನಾನೀ ಕತ್ತಿಯಿಂದ ನಿನ್ನ ನೆತ್ತಿಯನ್ನೊತ್ತಿ ಕತ್ತರಿಸುವೆ. ಅದು ತಪ್ಪಿದರೆ ನನ್ನ ನಾಡು ಬೀಡುಗಳನ್ನು (ನಿನಗೆ) ಒಪ್ಪಿಸಿ ಕೌಪೀನ ಧರಿಸಿ ಭಿಕ್ಷಾಪಾತ್ರೆ ಹಿಡಿದು ಸನ್ಯಾಸಿಯಾಗಿ ಹೋಗುವೆ' ಎಂದು ಹೇಳಿ ಕಳುಹಿಸಿದುದನ್ನು ಕೇಳಿ ಪ್ರತಿಯಾಗಿ ಅವನೂ ನೀನೆಂದುದು ನಮಗೆ ಸಮ್ಮತ. ನಾನೂ ಇಂದು ಎಡಗೈಯ ಚಮ್ಮಟಿಗೆಯಿಂದಲೇ ನಿನ್ನ ಮೂಗನ್ನು ಕತ್ತರಿಸುವೆನು' ಎಂದು ಹೇಳಿಕಳುಹಿಸಿ ಆಗಲೇ ಸೈನ್ಯ ಸಮೇತ ಬಂದನು. ನಾನೂ ನನ್ನೆಲ್ಲ ಸೈನ್ಯದೊಡನೆ ಇದಿರೇರಿ ಹೋದೆನು. ಆಗ ಎರಡು ದಳಗಳೂ ಬೆರಗಾಗಿ ನೋಡುತ್ತಿರಲು ನಾವಿಬ್ಬರೂ ಕುದುರೆಗಳನ್ನೇರಿ ರಾವುತನದ ಬಿನ್ನಾಣವನ್ನು ಮೆರೆಯಲು, ನಡೆಯಿಸುವುದು ಕುಣಿಯಿಸುವುದು ಹಾಯಿಸುವುದು ಸುತ್ತಿಸುವುದು ತೊಲಗಿಸುವುದು ಮುನ್ನುಗ್ಗುವುದು ತರುಬುವುದು ಎಂಬೀ ಮೊದಲಾದ ಗತಿಭೇದಗಳಿಂದ ಒಂದಿಷ್ಟು ಸಮಯ ಕಳೆಯುವಷ್ಟರಲ್ಲಿ ನಾನು ಒತ್ತರಿಸಿ ಕತ್ತಿಯಿಂದ ನೆತ್ತಿಯನ್ನೊತ್ತಲು ಅವನು ತನ್ನ ಬಲಗೈಯ ಅಲಗಿನಿಂದ ಇರಿದು ಒಡನೆ ಎಡಗೈಯ ಚಮ್ಮಟಿಗೆಯಿಂದ ನನ್ನ ಮುಖಕ್ಕೆ ಹೊಡೆಯಲು ಮೂಗು ಕತ್ತರಿಸಿ ಭಂಗಿತನಾಗಿ ಊರಿಗೆ ಬಂದು ಆಲೋಚಿಸಿದನು-ಅರಟಾ ಈ ಘಾತುಕನು ಅತಿವೈರದಿಂದ, ಲೋಕದಲ್ಲಿ ಪ್ರಸಿದ್ಧಿ ಪಡೆದ ಮೂವತ್ತೆರಡು ಆಯುಧಗಳಲ್ಲಿ ಗಣನೆಗೆ ಬಾರದ ಈ ಚಮ್ಮಟಿಗೆಯಿಂದ ಬಡಿದನು. ಅದರಿಂದ ನಾನು ಮುನ್ನಾಡಿದ ಮಾತಿಗೆ ತಟ್ಟಿದ ಪಾಪವನ್ನಾದರೂ ಒಪ್ಪಿಕೊಂಡು ಹೇಗಾದರೂ ಈ ಹೀನ ಪಂತವನ್ನು ತಿರುಗಿಸಬೇಕು. ಎಂದಿರುವಷ್ಟರಲ್ಲಿಯೇ ನನ್ನೂರಿಗೆ ಲಗ್ಗೆಯಿಟ್ಟು ಕಗ್ಗೊಲೆಗೆಯ್ದು ನನ್ನ ಸರ್ವಸ್ವವನ್ನು ಸೂರೆಗೊಂಡು ನನ್ನನ್ನೂ ಸುಲಿದುಕೊಂಡನು. (ಮತ್ತು ನನ್ನನ್ನು) ಜರಿದು ಹೊರನೂಕಿ ಆ ಕ್ಷಣದಲ್ಲಿಯೇ ಕೋಟೆಯನ್ನು ಕೆಡುಹಿಸಿ ಔಡಲನ್ನು ಬಿತ್ತಿಸಿದನು. ಆ ವಸ್ತು ವಾಹನಗಳನ್ನು ದೇವಾಲಯಗಳಿಗೂ ಬ್ರಾಹ್ಮಣರಿಗೂ (ದಾನ) ಕೊಟ್ಟು ನನ್ನ ನಾಡಿನಲ್ಲಿಯ ದೊಡ್ಡಹಳ್ಳಿಗಳನ್ನು ಅಗ್ರಹಾರಗಳನ್ನಾಗಿ ಮಾಡಿದನು. ಆ ಬಳಿಕ ನಾನು ಹೋಗಲು

ಎಡೆಯನ್ನೂ ರಕ್ಷಿಸುವ ಅರಸರನ್ನೂ ಕಾಣದೇ ಇದ್ದೆ. ಈಗ ನನ್ನ ಭಾಗ್ಯೋದಯದಿಂದ ನಿಮ್ಮಡಿಗಳನ್ನು ಸೇರಿದೆ. ನನ್ನನ್ನು ಕಾಯಬೇಕು' ಎಂದು ಬಿನ್ನವಿಸಿ ಕಿವಿಯಿಂದ ಕಿವಿಯವರೆಗೆ ಗೆರೆಗೊಂಡು ಗಂಟುಗಟ್ಟಿ ಮೆರೆಯುವ ಗಾಯದ ಕಲೆಯನ್ನು ತೋರಿಸಿ ಹಿಂದೆ ಸರಿಯಲಾಗಿ-

ಕನ್ನಂಬಾಡಿಯವನು ಹೀಗೆಂದನು-ಜೀಯ! ರಾಯ ವಜೀರರಲ್ಲಿ ರಾಣೌಜಗದೇವ ರಾಯರಸನು ಶ್ರೇಷ್ಠನೆಂಬುದು ಚಿತ್ತಕ್ಕೆ ವೇದ್ಯವಷ್ಟೆ, ಅವನ ಮುಖ್ಯ ಕೋಟೆಗಳು ನಮ್ಮ ನೆರೆಯಲ್ಲಿವೆ. ಅವುಗಳಲ್ಲಿ ಹೊಸ ಪಟ್ಟಣವನ್ನು ಮೋಸದಿಂದ ಕೊಳ್ಳಬೇಕೆಂದು ರಾಜನೃಪನು ನಮ್ಮೊಂದಿಗೆ ಸ್ನೇಹದಿಂದಿದ್ದು ನಮ್ಮ ಜೊತೆ ನಡೆದು ಆ ಕೋಟೆಯನ್ನು ವಶಪಡಿಸಿಕೊಂಡನು. ಅದಕ್ಕೆ ನನ್ನ ಕುಮಾರರು, ಆತನ ಪ್ರಭು ಮಾತ್ರ ಉತ್ಸಾಹ ಶಕ್ತಿಗಳನ್ನೂ ಅವನ ಸೇವಕರ ಒಗ್ಗಟ್ಟು ಭಯ ಭಕ್ತಿಗಳನ್ನೂ ಆತನ ತಮ್ಮಂದಿರ ಸೋದರಿಕೆ ಸೌಜನ್ಯ ಸೌಶೀಲ್ಯಗಳನ್ನು ಅವನ ಮಕ್ಕಳ ಪ್ರೇಮ ಹಿರಿಮೆ ಪರಾಕ್ರಮಗಳನ್ನು ಅವನ ಸೈನಿಕರ ಶಕ್ತಿ ಸಾಹಸ ಶೌರ್ಯಗಳನ್ನೂ ಆತನಲ್ಲಿ ನೆಲೆಸಿದ ದೈವದ ಬಲವನ್ನೂ ಬ್ರಾಹ್ಮಣರ ಹರಕೆಗಳನ್ನೂ ಅರಿಯದೆ (ತಮ್ಮ) ದುರದುಂಬಿತನದಿಂದ ಕೆಣಕಿ ಜಗಳ ತೆಗೆದರು. ಅವನು ನಮ್ಮ ನಾಡಿನಲ್ಲಿ ದಾಳಿಯಿಟ್ಟು ತುಱು ಸೆರೆಯೊಡನೆ ನನ್ನ ಮಕ್ಕಳನ್ನೂ ಹಿಡಿದು ಬಂಡು ಉಂಟು ಮಾಡಿ ಬ್ರಾಹ್ಮಣವಧೆಗೆ ಹೇಸಿ ಬಿಟ್ಟು ನನ್ನ ನಾಡಲ್ಲಿ ತಲೆಯೂರೆನಿಸಿದ ಬೂಕನಕೆರೆಯನ್ನು ತೆಗೆದುಕೊಂಡು ಅದಕ್ಕೆ ಸಲ್ಲುವ ಎಲ್ಲಾ ಹಳ್ಳಿಗಳನ್ನು ಮೇಲ್ಕೋಟೆಯ ತಿರುಕನಾದ ಹಾರುವನಿಗೆ ಕೊಟ್ಟನು. ಅವರೂ ಈಗ ನನ್ನ ದಾಯಾದಿ ದೊರೆಗಳಾದರು. ಅಷ್ಟಲ್ಲದೆ ಇಂದು ನಾಳೆ ನಾನಿರುವ ಊರನ್ನೂ ಕೊಳ್ಳದೆ ಬಿಡನು. ಇದಕ್ಕೆ ನನಗೆ ನೀನೇ ಗತಿ' ಎಂದು ಬಿನ್ನವಿಸಿ ಸರಿಯಲು-

ತಲಕಾಡಿನವನು ಇಂತೆಂದನು-

ದೇವ! ಬಿನ್ನಹ, ಆ ಜಗದೇವರಾಯನ ದಂಡನಾಯಕರಲ್ಲಿ ಮೊದಲಿಗನೂ ಲೋಕದಲ್ಲಿ ಬಲಗೈಯಲಿರುವವನೂ ಎಂದು ಹೆಸರಾದ ಆದಟರಾಯನ ಅರೆಕೆರೆಯನ್ನು ಆತನು (ರಾಜನೃಪನು) ಹಗಲು ಕಗ್ಗೊಲೆಯಿಂದ ಕೊಂಡು ಸಿಕ್ಕಂಥ ಒಳ್ಳೆಯ ಆಭರಣಗಳನ್ನು ಈ ಪಶ್ಚಿಮ ರಂಗನಾಥನಿಗೆ ಅರ್ಪಿಸಿದ್ದೂ ಹಣದಿಂದ ಹೊರವಲಯದ ಕಲ್ಲು ಪ್ರಾಕಾರವನ್ನು ಕಟ್ಟಿಸಿದ್ದೂ ಒಡೆಯನ ಚಿತ್ತಕ್ಕೆ ವೇದ್ಯವಷ್ಟೆ! ಬಳಿಕ ನಾನು ನನ್ನ ಸ್ಥಿತಿಯನ್ನರಿಯದೆ ಅದಟರಾಯನ ದುರ್ಬೋಧನೆಗೊಳಗಾಗಿ ಅರೆಕೆರೆಯ ನಾಡಿನಲ್ಲಿ ಮುಚ್ಚುಮರೆಯ ಯುದ್ಧ ಮಾಡುತ್ತಿರಲಾಗಿ ಆ ರಾಜನೃಪನು ನಮ್ಮ ಬನ್ನೂರನ್ನು ಕೊಂಡನು. ಆ ರೋಷದಿಂದ ನಾನು ದೊಡ್ಡ ಸೈನ್ಯದೊಡನೆ ಎದುರಾಗಲು, ಅವನು ಚಿಕ್ಕ ಸೈನ್ಯದೊಡನಿದ್ದರೂ ನಮ್ಮ ಬಲವನ್ನು ಲೆಕ್ಕಿಸದೆ, ಹೆಬ್ಬೆ ಮದ್ದಾನೆಗಳ ಹಿಂಡನ್ನು ಹೊಕ್ಕು ಹಾಯ್ದು ಕೊಲ್ಲುವ ಅಯ್ದು ಮುಖದ ಸಿಂಹದಂತೆಯೂ ಹೆಬ್ಬೆಟ್ಟದ ತುದಿಯಲ್ಲಿ ನಟ್ಟು ಶಿಖರವುರುಳಿಸಲೆರಗುವ ಬರಸಿಡಿಲಂತೆಯೂ ಅತ್ಯಾವೇಗದಿಂದ ಉರವಣಿಸಿ ಅಡ್ಡಗಟ್ಟಲಾಗಿ ಬಾಣದಿಂದ ಕೊಂದು ಕೈಯೀಟಿಯಿಂದ ಕೊರೆದು ಚಕ್ರದಿಂದ ತುಂಡರಿಸಿ ಭಿಂಡಿವಾಳದಿಂದ ನಾಟಿ ಸಬಳದಿಂದ ಇರಿದು ಭಲ್ಲೆಯಿಂದ ಚುಚ್ಚಿ ಕತ್ತಿಯಿಂದ ಕಡಿದು ಸೊಂಟಗತ್ತಿಯಿಂದ ಕತ್ತರಿಸಿ ಚೂರಿಯಿಂದ ತಿವಿದು ಕೈಗತ್ತಿಗಳಿಂದ ಕೊಯ್ದು

ಗಾಳಿಗೊಳಿಸಿ ಪೊಕ್ಕಲ್ಲಿ ಹೊಕ್ಕು ದಿಕ್ಕುದೋರದಂತೆ ಮಾಡಿ ಕೆಲವರನ್ನು ಕೈಸೆರೆಹಿಡಿದು ಆಯುಧಗಳನ್ನು ಕಸಿದು ಅವಮಾನಿಸಿ (ದಾರಿಯ ಮಗ್ಗುಲಲ್ಲಿ) ನಿಂತ ನೀರು ಕುಡಿಸಿ ಕೋಟಲೆಗೊಳಿಸಿದನು. ಅದನ್ನು ನೆನೆದರೆ ಈಗಲೂ ಎದೆಯಲ್ಲಿ ಸಂತಾಪವೂ ಮೈಯಲ್ಲಿ ನಡುಕವೂ ನುಡಿಯಲ್ಲಿ ತಡವರಿಕೆಯೂ ಉಂಟಾಗುತ್ತವೆ. ನನ್ನ ಯುದ್ಧಭಯವು ಇಂತಹದೆಂದು ಎಣಿಸಲಾಗದ್ದು (ಅದನ್ನು) ಇಲ್ಲಿ ನೆರೆದಿರುವ ಅರಸು ಮಕ್ಕಳೆಲ್ಲರೂ ಅರಿತಿರುವರು. ಆನೆಕುದುರೆ ಕಾಲಾಳುಗಳು ಎಷ್ಟಿದ್ದರೂ ಪ್ರತಿಭಟಿಸುವುದು ಅಸಾಧ್ಯ. ಅವನಲ್ಲಿ ಮನುಷ್ಯರಿಗಿಲ್ಲದೊಂದು ಮಹಿಮೆಯುಂಟು. ಅದೇನು ಮಂತ್ರದಿಂದಲೋ ಮಾಯೆಯಿಂದಲೋ ಮಾಟದಿಂದಲೋ ರಭಸದಿಂದಲೋ ವೀರದಿಂದಲೋ ಚತುರತೆಯಿಂದಲೋ ಸತ್ವದಿಂದಲೋ ಸಾಹಸದಿಂದಲೋ ! ಅಥವಾ ಅವನು ಮುತ್ತಿಗೆಯ ಕಾಲದಲ್ಲಿ ತಪ್ಪದೆ ಕೊಡುವ ಕೈಯುಂಬಳಿಯಿಂದಲೂ ಕಿರುಮೆಟ್ಟಿನಲ್ಲಿ ಕೊಡುವ ಉಡುಗೊರೆ, ಕೊಡುಗೆ ಜೀವನಾಂಶಗಳಿಂದಲೂ ಮದುವೆ ಉತ್ಸವಗಳಿಗೆಂದು ಪ್ರಸಾದಿಸುವ ಹೊನ್ನುಗಳಿಂದಲೂ ಕರೆದು ಮುದ್ದುಮಾಡಿ ನಂಬಿಸಿ ತಾಂಬೂಲಗೊಡುವ ಮನ್ನಣೆಗಳಿಂದಲೂ ಮನವಾರೆ ಮಾರು ಹೋದ ಪರಾಕ್ರಮಿಗಳ ಶೌರ್ಯದಿಂದಲೊ ಇನ್ನೇನು ! ಅಡಿಗಡಿಗೆ ನಡೆದು ಮನಕರಗಿ ರೋಮಾಂಚನಗೊಂಡು ಕೈಮುಗಿದು ಅರೆಗಣ್ಣು ಮುಚ್ಚಿ ಕೊಂಡಾಡಿ ಕೊನರಿ ಆನಂದಾಶ್ರು ಸುರಿಸಿ ಸೇವೆಗೈಯುವ ಭಕ್ತಿಯಿಂದಲೂ ನಮ್ಮೆಲ್ಲರನ್ನು ಸದೆಬಡಿದು ಸೆಳೆದುಕೊಂಡ ರತ್ನಾಭರಣಗಳಿಂದಲೂ ಒಪ್ಪಾದ ದಿವ್ಯರತ್ನಗಳನ್ನು ಜೋಡಿಸಿದ ಕಿರೀಟ ಕರ್ಣಕುಂಡಲ ಕಂಠಾಭರಣ ಮಾಲೆ, ಕಡಕು, ಡಾಬು, ಒಡ್ಯಾಣ, ಅಂದುಗೆ ಮುಂತಾದ ದಿವ್ಯಾಭರಣಗಳ ದಾನದಿಂದಲೂ ನಮ್ಮ ಭಂಡಾರಗಳಿಂದ ಸೂರೆಗೊಂಡ ಹೊನ್ನುಗಳಿಂದ ನಿರ್ಮಿಸಿದ ಸೋಪಾನ, ಗೋಪುರ ಪ್ರಾಕಾರ, ವಿಮಾನ, ಮಂಟಪ, ವಾಹನ ಉದ್ಯಾನ ಬಾವಿಹೊಂಡ ಕೆರೆ ಮುಂತಾದವುಗಳ ನಿರ್ಮಾಣದಿಂದಲೂ ಅಂದಂದಿಗೆ ದೊರಕೊಳ್ಳುವ ವರ್ಷ, ಮಾಸ, ಪಕ್ಷ, ನಿತ್ಯನೈಮಿತ್ತಿಕಾದಿ ಉತ್ಸವಗಳಿಂದಲೂ ತಣ್ಣನೆ ತಣಿದೊಲಿದ ಯದುಗಿರಿ ನಾರಾಯಣನ ಕಡೆಗಣ್ಣನೋಟದ ಅಮೃತಸೇಚನದಿಂದಲೋ (ಅಥವಾ) ಅತಿಭಕ್ತಿಯಿಂದ ಕರೆಯಿಸಿ ಅರಮನೆಯ ಮಣಿಪೀಠದಲ್ಲಿ ಕುಳ್ಳಿರಿಸಿ ನಮಸ್ಕರಿಸಿ ಅಡಿದೊಳೆದು ಚಂದನ ತೊಡೆದು ಹೂ ಮುಡಿಸಿ ಉತ್ತಮವಾದ ಉಡಿಗೆ ಹೊದಿಸಿ ಆಭರಣ ತೊಡಿಸಿ ಇಷ್ಟದೇವತೆಯೆಂಬ ಭಾವನೆಯಿಂದ ಉಪಚರಿಸಿ ಬೆಳೆಯ ಹೊಲಗಳನ್ನು ಗದ್ದೆಗಳನ್ನು ಹಳ್ಳಿಗಳನ್ನು ಬೇಡುವ ವಸ್ತುವನ್ನು ಇತ್ತು ಹರಕೆಗೊಳ್ಳುವುದರಿಂದ ಪ್ರೀತರಾದ ಹಲವು ಜನ ಬ್ರಾಹ್ಮಣರ ಆಶೀರ್ವಾದದಿಂದಲೋ ? ತಿಳಿಯದು. ಅವನು ಇನ್ನು ಈ ಮಿತಿಯೊಳಗೆ ಇರುವವನಲ್ಲ. ಗಳಿಗೆಯರಗಳಿಗೆ ಲೆಕ್ಕದಲ್ಲಿ ಹೆಚ್ಚಿ ಬರುವನು. ಅವನನ್ನು ಸದೆಬಡಿಯುವುದಕ್ಕೆ ಇದೇ (ತಕ್ಕ) ವೇಳೆ. ಇಲ್ಲಿ ನೆರೆದ ಅರಸುಗಳನ್ನೆಲ್ಲ ಕೂಡಿಕೊಂಡು ದೇವರು ಏರಿಬರಬೇಕು. ಈ ರಾಜಕಾರ್ಯದಲ್ಲಿ ನಾನು ಸೇನಾಪತಿಯಾಗುತ್ತೇನೆ. ನನಗೆ ಅಪ್ಪಣೆಯ ವೀಳೆಯನ್ನು ದಯಪಾಲಿಸಬೇಕು. ಎಂದು ನಮಿಸಿ ಬಿನ್ನೈಸಿ ಸುಮ್ಮನಾದನು.

ಅಮ್ಮಚವಾಡಿಯವನೆದ್ದು ಕೈಮುಗಿದು ಇಂತೆಂದನು-ಸ್ವಾಮಿ ! ಈ ತಲಕಾಡು

ನಂಜರಾಜನು ಪಾದಕ್ಕೆ ಬಿನ್ನವಿಸಿದಷ್ಟೂ ನಿಜವೇ. ಆ ಮೈಸೂರವನಲ್ಲಿ ಅತಿಮಾನುಷ ಶಕ್ತಿಯುಂಟು. ಅದಕ್ಕೆ ಕುರುಹೇನೆಂದರೆ-ಈ ಯುಗದಲ್ಲಿ ಬೇಡುವವರಿಗೆ ಬೇಡಿದನ್ನೀಯುವ ಶ್ರೀ ವೆಂಕಟೇಶ್ವರನು ಈತನ ಮಹಿಮೆಯನ್ನು ಪ್ರಕಟಿಸಲೆಂದು ಒಮ್ಮೆ, ತನಗೆ ಹರಕೆಹೊತ್ತು ತಿರುಪತಿಗೆ ಬಂದ ಬ್ರಾಹ್ಮಣಕುಲದ ಕಣ್ಣಿಲ್ಲದ ಹೆಣ್ಣಿಗೆ ತಾನೊಂದು ಕಣ್ಣನ್ನು ಕೊಟ್ಟು ಬೇರೊಂದನ್ನು ಮೈಸೂರ ರಾಜನೃಪನು ಕೊಡುವನೆಂದು (ಹೇಳಿ) ಕಳುಹಿಸಿದನು. ಈ ಕೌತುಕವನ್ನು ನೋಡಲೆಂದು ಆ ತಿರುಪತಿಯಲ್ಲಿ ನಡೆವ ಆ ಜಾತ್ರೆಯ ಜನರೆಲ್ಲರೂ ಅವಳನ್ನೂ ಹಿಂಬಾಲಿಸಿ ಊರ ಮುಂಗಡೆಗೆ ಬಂದರು. ಆ ವಾರ್ತೆ ಕೇಳಿ ರಾಜನೃಪನು ಮಿಂದು ಮಡಿಯುಟ್ಟು, ತನ್ನ ಮನೆಯಲ್ಲಿ ನೆಲೆಸಿ ತನ್ನ ಮನೆ ದೇವರೆನಿಸಿದ ಲಕ್ಷ್ಮೀಕಾಂತನಿಗೂ ಯದುಗಿರಿಯಲ್ಲಿ ನೆಲೆಸಿ ಯಾದವರಿಂದ ಪೂಜೆಗೊಂಡು ತನ್ನ ಕುಲದೇವರೆನಿಸಿದ ನಾರಾಯಣನಿಗೂ ನಿಮಿತ್ತವಿಲ್ಲದೆ ತನಗೊಲಿದು ದಯೆಗೈದ ಶ್ರೀ ವೆಂಕಟೇಶನಿಗೂ ವಂದಿಸಿ ಆ ನೆರವಿಯನ್ನು ಎದುರುಗೊಂಡು ಪ್ರದಕ್ಷಿಣೆಸಿ ಕೈ ಮುಗಿದು ಹೃದಯದಲ್ಲಿ ಶ್ರೀ ವೆಂಕಟೇಶ್ವರನ ಭಾವನೆಯನ್ನು ನೆಲೆಗೊಳಿಸಿ ಆ ಬ್ರಾಹ್ಮಣಿಯನ್ನು ಕರೆದು- 'ಎಲೆ ತಾಯೆ! ಮುನ್ನ ತಿರುಪತಿಯಲ್ಲಿ ನೆಲೆಸಿದ್ದು ಒಂದು ಕಣ್ಣು ಕೊಟ್ಟ ಶ್ರೀ ವೆಂಕಟೇಶ್ವರನು ಈಗ ನನ್ನ ಹೃದಯಮಂದಿರದಲ್ಲಿ ನಿಂತು ಮತ್ತೊಂದು ಕಣ್ಣಿತ್ತನು. ನನ್ನನ್ನು ಕಣ್ದೆರೆದು ನೋಡು' ಎಂದನು. ಮುಸುಕಿದ ಮೋಡವನ್ನೊಡೆದು ಮೈದೋರುವ ಚಂದಿರನಂತೆಯೂ ಮಂಜನ್ನು ಕಳೆದು ತೊಳಗುವ ಸೂರ್ಯನಂತೆಯೂ ತಮೋಗುಣವನ್ನು ತಗ್ಗಿಸಿ ಹೊಮ್ಮುವ ಸತ್ವಗುಣದಂತೆಯೂ ಮಾಯೆಯನ್ನು ತಿರಸ್ಕರಿಸಿ ಪ್ರಕಟಗೊಳ್ಳುವ ತತ್ವಜ್ಞಾನದಂತೆಯೂ ಎವೆತೆರೆದು ಮಿರುಗುವ ಕಣ್ಣನ್ನು ಕಂಡು ಆ ನೆರೆದ ನೆರವಿಯೆಲ್ಲವೂ 'ಈತನು (ವೆಂಕಟೇಶ್ವರನ) ಅಪರಾವತಾರವೇ! ತಪ್ಪದು' ಎಂದು ವಂದಿಸಿ ಚದುರಿ ಹೋಯಿತು. ಇದನ್ನು ಎಲ್ಲರೂ ಬಲ್ಲರು. ಅಂದು ಮೊದಲು ಇವನ ಮಹಿಮೆಗೆ ಅಳುಕಿ ನನ್ನೊಬ್ಬನ ಹೊರತು ಕಳಲೆ, ಬಿಳುಗಲಿ, ಬಿಳಿಕೆರೆ, ಹುರಪಲ್ಲನಹಳ್ಳಿ, ಮಣಗೂರು ಮೊದಲಾದ ದೊರೆಗಳು ಅವನಿಗೆ ಹೆಣ್ಣುಕೊಟ್ಟು ಕಪ್ಪ ತೆತ್ತು ಗೆಳೆತನ ಮಾಡಿಕೊಂಡಿದ್ದಾರೆ. ಅವರೇನು ಮಾಡುವರು ? ಅವರೆಷ್ಟವರು ? ಅವರ ಪಾಡೇನು ? ಅವರ ಹವಣಾವುದು ? ನನ್ನಂಥವನಿಗೂ ಅಸಾಧ್ಯವಾಗಿದೆ. ಇನ್ನು ಏನಾದರೂ ಉಪೇಕ್ಷಿಸತಕ್ಕುದಲ್ಲ. ಈಗಲೇ ಸೇನಾಧಿಪತ್ಯವನ್ನು ಈ ನಂಜರಾಜನಿಗಿತ್ತು ನಮ್ಮೆಲ್ಲರಿಗೂ 'ನಿಮ್ಮಲ್ಲಿರುವ ಬಲಸನ್ನಾಹದಿಂದೊಡಗೂಡಿ ಜೊತೆಗೆ ಬರಬೇಕೆಂದು ಆಜ್ಞೆಯಿತ್ತು ಮತ್ತು ಸುತ್ತಣ ಅರಸುಗಳಿಗೆ ರಾಯಸವನ್ನಟ್ಟಿ ಕರೆಯಿಸಬೇಕು. ಇಂತು ನನ್ನ ಬುದ್ಧಿಗೆ ತೋಚಿದುದನ್ನು ಬಿನ್ನವಿಸಿದೆನು. ಆಮೇಲಿನ ಕಾರ್ಯ ದೇವರ ಚಿತ್ತವೊಪ್ಪಿದಂತೆ' ಎಂದು ಬಿನ್ನವಿಸಿದನು. ಆ ರಾಯನು ಅಂತು ಅವರಿಗೆಲ್ಲ ಆಜ್ಞೆಯಿತ್ತು ತಾನೂ ಇತ್ತ ಏರಿಬರುವುದಕ್ಕೆ ಸಿದ್ಧನಾಗಿದ್ದಾನೆ. ಈ ವೇಳೆಗೆ ಏನು ಯೋಗ್ಯವೋ ದೇವರ ಚಿತ್ತವೇ ಬಲ್ಲದು" ಎಂದು ಕಂಡುದನ್ನು ಬಿನ್ನವಿಸಿ (ಆ ದೂತನು) ಕೈಯಲ್ಲಿದ್ದ ಬಿನ್ನವತ್ತಳೆಯನ್ನು ಪ್ರತಿಹಾರನ ಕೈಗೆ ಕೊಟ್ಟು ಕೈಮುಗಿದು ಬೀಳ್ಕೊಂಡು ಹೋದನು. ಅರಸನ ಕಣ್ಸನ್ನೆಯಂತೆ ರಾಯಸಿಗನು ಅದನ್ನು ತೆಗೆದುಕೊಂಡು ಅಪ್ಪಣೆಯಂತೆ ಮುದ್ರೆಯನ್ನು ಬಿಚ್ಚಿ ತೆಗೆದೋದಿದನು-

'ದೇವರಡಿಗೆ ಬಿನ್ನಹ. ನಾನು ದೇವರ ಪಾದದಿಂದ ಬೀಳ್ಕೊಂಡು ನಡೆತಂದು

ಪಟ್ಟಣದ ಹೊರವಲಯದ ಉಪವನದಲ್ಲಿರುವಾಗ ಅವರು ನನ್ನನ್ನು ಎದುರುಗೊಂಡು ಕರೆದೊಯ್ಯಲು ಯೋಗ್ಯನಾದ ಮುಖ್ಯಸ್ಥನೊಬ್ಬನನ್ನು ಕಳುಹಿಸಿ ಕರೆಯಿಸಲು ನಾನು ಅರಮನೆಯನ್ನು ಪ್ರವೇಶಿಸಿ ರಾಯನನ್ನು ಕಂಡು ಕೈಕಾಣಿಕೆ ಕೊಟ್ಟು ಕುಳ್ಳಿರುವಷ್ಟರಲ್ಲಿ ಆ ರಾಯನು ದೇವರಡಿಯ ಕ್ಷೇಮವನ್ನು ಬೆಸಗೊಳಿಸಲು- 'ದೇವ ಕೇಳು, ನಮ್ಮೊಡೆಯನು ಯದುಗಿರಿ ನಾರಾಯಣನ ಕರುಣಾಕಟಾಕ್ಷದಿಂದ ದಾನ ಮತ್ತು ಕ್ಷತ್ರಿಯ ಯೋಗ್ಯ ಕಾರ್ಯಗಳಲ್ಲಿ ನಿರತನಾಗಿ ಕ್ಷೇಮದಿಂದಿರುವನು. (ಟಿ. ಮೈಸೂರ ದೊರೆಯು ಚತುರೋಪಾಯಗಳಲ್ಲಿ ಸಾಮ ಮತ್ತು ಭೇದಗಳನ್ನವಲಂಬಿಸುವವನಲ್ಲವೆಂಬುದು ಇಲ್ಲಿಯ ಧ್ವನಿ) ದೇವರು ಇಲ್ಲಿಗೆ ಬಂದುದಕ್ಕೆ ಹಿಗ್ಗಿ ದೇವರ ಕುಶಲವನ್ನರಿಯಲು ಕಾಣಿಕೆ ಕೊಟ್ಟು ನನ್ನನ್ನು ಕಳುಹಿಸಿದರು' ಎಂದು (ಕಾಣಿಕೆಗಳನ್ನು) ಮುಂದಿಟ್ಟೆನು. ಅದನ್ನು ಸ್ವೀಕರಿಸಿ ಸಂತೋಷಪಟ್ಟು ತಮ್ಮ-ನಮ್ಮ ಸ್ನೇಹ ಬೆಳೆಯುವುದಕ್ಕೆ ಇದು ನಾಂದಿ' ಎಂದು ನನಗೆ ಉಡುಗೊರೆ-ವೀಳೆಯಂಗಳನ್ನಿತ್ತು ಬೀಡಾರಕ್ಕೆ ಕಳುಹಿಸಿ ಉಚಿತವಾದ ಉಲುಪೆಗಳಿಂದ ಸತ್ಕರಿಸಿ ಮತ್ತೊಂದು ದಿನ ಒಳ ಓಲಗಕ್ಕೆ ಕರೆಯಿಸಿ ಕೆಲ ಹೊತ್ತಿನವರೆಗೆ ಇಷ್ಟಾಲಾಪದಲ್ಲಿದ್ದು ಬಳಿಕ ನನ್ನ ಮುಖ ನೋಡಿ-'ನಿಮ್ಮ ಒಡೆಯನು ಹುಟ್ಟಿದುದರಿಂದ ಏಳಿಗೆಗೊಂಡು ಪ್ರಸಿದ್ಧವಾದ ವಂಶ ಯಾವುದು ? ವಯಸ್ಸೆಷ್ಟು? ಮೈಸಿರಿ ಎಂಥದು ? ಸೋದರರೂ ಮಕ್ಕಳೂ ಎಷ್ಟು ಜನ ? ಆಳುವ ನಾಡೆಷ್ಟು ? ಆನೆ, ಕುದುರೆ, ಕಾಲಾಳುಗಳು ಎಷ್ಟು ? ಆಯವ್ಯಯದ ನೆಲೆ ಯಾವುದು ? ಎಂದು ಕೇಳಲು ನಾನು ಬಿನ್ನವಿಸಿದೆನು.- 'ದೇವ ! ಚಂದ್ರವಂಶದಲ್ಲಿ ಹುಟ್ಟಿದ ಯದುರಾಜನ ಕುಲಭೂಷಣರೆನಿಸಿದ ಬಲರಾಮ-ಕೃಷ್ಣರಿಬ್ಬರೂ ಕುಲದೇವರನ್ನು ವಂದಿಸಲೆಂದು ಯದುಗಿರಿಗೆ ಬಂದು ಅಲ್ಲಿ ನಾರಾಯಣರಿಗೆ ಮಹೋತ್ಸವವನ್ನು ನೆರವೇರಿಸಿ ವೈರಮುಡಿಯೆಂಬ ದಿವ್ಯ ಕಿರೀಟವನ್ನರ್ಪಿಸಿ ತಿರುಗಿ ನಾವು ದ್ವಾರಕೆಗೆ ಹೋಗುವಾಗ ಈ ಕ್ಷೇತ್ರವನ್ನು ರಕ್ಷಿಸಿ ಸಕಲವಿಧದ ಸೇವೆಗಳನ್ನು ನಡೆಯಿಸುವುದಕ್ಕೆ ತಮ್ಮ ಕುಮಾರರಲ್ಲಿ ಒಬ್ಬನನ್ನು ಇಟ್ಟು ಹೋದರು. ಆ ಯದುಭೂಷಣನು ತನ್ನ ಆನೆ ಕುದುರೆ ಕಾಲಾಳುಗಳಿಂದೊಡಗೂಡಿ ತಾನು ಅಲ್ಲಿದ್ದರೆ ಶ್ರೀಮನ್ನಾರಾಯಣನ ನಿತ್ಯಸೇವೆಯಲ್ಲಿರುವ ವೈಷ್ಣವ ಜನಕ್ಕೂ (ಅಲ್ಲಿ) ಗಿಡಮರಬಳ್ಳಿಗಳ ರೂಪದಲ್ಲಿರುವ ನಿತ್ಯಮುಕ್ತರಿಗೂ ತೊಂದರೆಯುಂಟಾಗುವುದೆಂಬುದರಿಂದ-

ಶ್ಲೋಕ :

"ವೈಕುಂಠವರ್ಧನವೆಂಬ ಹೆಸರಿನ ಕ್ಷೇತ್ರವು ಸತ್ಯವೆನಿಸಿದೆ. ಅದರ ಪ್ರಮಾಣವು ಎರಡು ಯೋಜನ ಸುತ್ತಳತೆಯದೆಂದು ತಿಳಿಯತಕ್ಕದ್ದು."

ಇಂತಿರುವ ನಾರದ ವಚನದಿಂದ ಈ ಕ್ಷೇತ್ರವನ್ನು ಬಳಸಿದ ಎರಡು ಗಾವುದ ನೆಲವೂ ವಿಷ್ಣುಕ್ಷೇತ್ರವಾದುದರಿಂದ ಈ ಮೈಸೂರಲ್ಲಿ ಅರಸುಗೈಯುತ್ತಿದ್ದನು. ಅವನ ಸಂತತಿಯಲ್ಲಿ ಹುಟ್ಟಿ ಪ್ರಸಿದ್ಧನಾದ ಬೆಟ್ಟದ ಚಾಮರಾಜನಿಗೆ ತಿಮ್ಮರಾಜ ಕೃಷ್ಣರಾಜ ಚಾಮರಾಜರೆಂಬ ಮೂವರು ಮಕ್ಕಳಾದರು. ಆ ಚಾಮರಾಜ ತಪದ ಫಲವೆನ್ನುವಂತೆ ಪ್ರಸಿದ್ಧನಾಗಿ ಎಸೆಯುವ ಈ ರಾಜ ಭೂಪಾಲನು ಹುಟ್ಟಿದಂದಿನಿಂದಲೂ ಹುಸಿಮಾತು, ಹೆರವರ ಒಡವೆ-ಹೆಂಡಂದಿರ

ನೆನಕೆಯಿಲ್ಲದೆ, ಎಳವೆಯಲ್ಲಿ ಶಾಸ್ತ್ರ-ಶಸ್ತ್ರಾಭ್ಯಾಸದಲ್ಲಿ, ತಾರುಣ್ಯದಲ್ಲಿ ದಿಗ್ವಿಜಯ ವ್ಯಾಪಾರ ದಲ್ಲಿರುವುದರಿಂದ ವ್ಯಸನಗಳಿಗೆ ಅವಕಾಶ ಕೊಡದೆ ನಿತ್ಯವೂ ಸ್ನಾನ, ಸಂಧ್ಯಾಜಪ, ಧ್ಯಾನ, ದೇವಪೂಜೆ ಪುರಾಣ ಪುಣ್ಯ ಕಥಾಶ್ರವಣ ಮುಂತಾದ ಪಾರತಾಕ ಕಾರ್ಯಗಳನ್ನೂ, (ಸಂಧಿ, ವಿಗ್ರಹ= (ಯುದ್ಧ), ಯಾನ= ಎರಿಹೋಗುವುದು ಆಸನ=ವೈರಿಯ ವಿರುದ್ಧ ಸ್ಥಾನವಿಶೇಷವನ್ನು ಬಿಟ್ಟು ಕೊಡದೆ ಹಿಡಿದುಕೊಂಡಿರುವುದು, ಸಂಶ್ರಯ=ಆಶ್ರಯ ಪಡೆಯುವುದು, ದ್ವೈಧ=ಇಬ್ಬಗೆಯ ಅಥವಾ ತದ್ವಿರುದ್ಧವಾದ ಪ್ರಾಸಂಗಿಕ ಕಾರ್ಯ ಮಾಡುವುದು ಎಂಬ) ಷಾಡ್ಗುಣ್ಯ ಚಿಂತನ, ಪ್ರಜಾರಕ್ಷಣ, ದುಷ್ಟಶಿಕ್ಷಣ ಮುಂತಾದ ರಾಜಕಾರ್ಯಗಳನ್ನೂ- ಒಂದರಿಂದೊಂದನ್ನು ಸಡಿಲಿಸದೆ ಸಂತಸದಿಂದಿದ್ದಾನೆ. ಮನದಲ್ಲಿ ನೆಲಸಿದ ಸತ್ವಗುಣವು ಹೊರಹೊಮ್ಮಿದಂತೆಯೂ ಅರುವತ್ತುವರ್ಷವೂ ಬೆಳ್ಗೊಡೆಯ ನೆರಳಿನಲ್ಲಿದ್ದುದರಿಂದ ಅದರ ಬಿಳಿಯ ಕಿರಣವು ಅವತರಿಸಿದಂತೆಯೂ ಮೂರು ಲೋಕದಲ್ಲಿ ಹಬ್ಬಿದ (ಅವನ) ಸತ್ಕೀರ್ತಿಯೆಂಬ ಬಳ್ಳಿ ಹೊಸಬೇರು ಬಿಟ್ಟಂತೆಯೂ ಮುಖಚಂದ್ರನಿಂದ ಪಸರಿಸುವ ಬೆಳ್ದಿಂಗಳ ಮಂಜರಿಯಂತೆಯೂ ಒಪ್ಪಿರುವ ನರೆಯು ಮೂಡಿದ್ದರೂ ಹೊಸಚಿನ್ನದಲ್ಲಿ ಎರಕ ಹೊಯ್ದಂತೆಯೂ ಕಂಡರಿಸಿದಂತೆಯೂ ದೊಡ್ಡವಾದ ತೋಳು, ನಡು ತೊಡೆಗಳಿಂದ ವೃಷಭನಂತೆಯೂ ಹರವಾದ ಎದೆಯಿಂದ ಹುಲಿಯಂತೆಯೂ ಭವ್ಯದೇಹದಿಂದ ಸಿಂಹದಂತೆಯೂ ಮೈಸಿರಿ ಹೊಂದಿರುವನು. ಬೆಟ್ಟದ ಚಾಮರಾಜ ದೇವರಾಜ ಚೆನ್ನರಾಜರೆಂಬ ಮೂವರು ಸೋದರರು ಮೂರುವೇದಗಳಂತೆ ಧರ್ಮಸಾಧಕರೂ ಧರ್ಮಾರ್ಥಕಾಮಗಳೆಂಬ ಮೂರು ವರ್ಗಗಳಂತೆ ಸುಖಸಾಧಕರಣ ಪ್ರಭು ಮಂತ್ರೋತ್ಸಾಹಗಳೆಂಬ ಮೂರುಶಕ್ತಿಗಳಂತೆ ವಿಜಯಸಾಧಕರೂ ಶರೀರ ಮನಸ್ಸು ಮಾತುಗಳೆಂಬ ಮೂರುಕರಣಗಳಂತೆ ಕಾರ್ಯ ಸಾಧಕರೂ ಎನಿಸಿ ಮೂವರೊಂದಾಗಿ ಮುಪ್ಪುರಿಗೊಂಡಂತೆ ಆತನ ಆಜ್ಞೆಯಲ್ಲಿರುವುದೇ ಶೀಲವೆಂದು ಆತನ ಸೇವೆ ಮಾಡುವುದೇ ಸತ್ಕಾರ್ಯವೆಂದು ಆತನ ಕೃಪೆಹೊಂದುವುದೇ ಪರಮಲಾಭವೆಂದು ಇರುವರು. ನರಸರಾಜ ಇಮ್ಮಡಿರಾಜರೆಂಬ ಮಕ್ಕಳು ಪಡಿನೆಳಲಂತೆ ಆ ಗುಣಗಳನ್ನು ಪಡೆದು ಆತನ ಬಳಿಯಲ್ಲಿರುವರು. ಈ ಸೋದರರೂ ಸುತರೂ ಕೂಡಿ ತಮ್ಮ ಕುಲಕ್ರಮದಿಂದ ಬಂದ ಮೈಸೂರಿಗೆ ಸಲ್ಲುವ ಇಪ್ಪತ್ಮೂರು ಮರೆವಳ್ಳಿಗಳಲ್ಲಿ ಎತ್ತಿ ಬರುವ ಮೂರು ಸಾವಿರ ಹೊನ್ನನ್ನು ಮುನ್ನೂರಾಳಿಗೆ ಹಂಚಿಕೊಟ್ಟು ಎಡಬಲದ ಮನ್ನೆಯರಿಂದ ಬರುವ ಕಪ್ಪದಿಂದಲೂ ಅವರು ಮಿಸರದಂತೆ ಅವರವರ ನಾಡಿನಲ್ಲಿ ವಶಪಡಿಸಿಕೊಂಡ ತಲೆವಳ್ಳಿಗಳಿಂದ ಬರುವ ಕಂದಾಯದಿಂದಲೂ ಮನೆ ಕಾರ್ಯಕಲಾಪಗಳನ್ನೂ ನಿತ್ಯ ದಾನ ಧರ್ಮಗಳನ್ನೂ ಮದುವೆ-ಉತ್ಸವಗಳನ್ನೂ ಉಡುಗೊರೆ-ಉಚಿತಗಳನ್ನೂ ನೆರವೇರಿಸುತ್ತಿದ್ದಾರೆ. ಇದಲ್ಲದೆ ಪ್ರತಿಭಟಿಸಿದವರನ್ನು ಒಕ್ಕಲಿಕ್ಕಿ ಸೆಳೆದುತಂದ ವಸ್ತು ವಾಹನಗಳನ್ನು ದೇವ-ಬ್ರಾಹ್ಮಣರಿಗಿತ್ತು ಅವರ ಒಲುಮೆಯನ್ನೇ ಧನವೆಂದು ಸಂಗ್ರಹಿಸುವರು ಎಂದನು. ಅದಕ್ಕೆ ಸಂತಸಗೊಂಡು ಕೊಂಡಾಡಿ 'ಅಂತಹ ಪುಣ್ಯಪುರುಷನನ್ನು ಕಂಡು ನುಡಿಸಿ ಗೆಳೆತನ ಬೆಳೆಸಿ ನಂಬಿ ಸ್ನೇಹವೆರಸಿ ಇಬ್ಬರೂ ಒಂದೆನಿಸಿ ಬೆರೆಯುವ ಕಾರ್ಯವೆಷ್ಟೋ ಉಂಟು. ಅದರಿಂದ ತಾವಿಲ್ಲಿಗೆ ಬರುವುದಕ್ಕೂ ನಾವೇ (ಅಲ್ಲಿಗೆ) ಹೊರಟುಬರಬೇಕೆಂಬುದಕ್ಕೂ ಬರೆದು

ಕಳುಹಿಸಿ ನಿಶ್ಚಯಗೊಂಡು ಬೇಗದಲ್ಲಿ ನಮಗೆ ತಿಳಿಸಬೇಕು' ಎಂದು ನನಗೆ ಉಡುಗೊರೆ-ವೀಳೆಯಗಳನ್ನಿತ್ತು ಕಳುಹಿಸಿದರು. ಆ ಬಳಿಕ ಮತ್ತೊಂದು ದಿನದಲ್ಲಿ ತಮ್ಮ ಸಾಮಾಜಿಕರನ್ನೂ ತಮ್ಮನ್ನು ಕಂಡು ಓಲೈಸುವವರನ್ನೂ ಕರೆಯಿಸಿ-'ಮೈಸೂರವನಲ್ಲಿ ನಾವು ಯಾವ ರೀತಿಯಿಂದ ವರ್ತಿಸಬೇಕು ?' ಎಂದು ಕೇಳಲು ಅವರೆಲ್ಲರೂ ದೇವರು ಕೊಡುವ ಉಪಟಳದಿಂದ ನೊಂದು ಬೆಂದುದರಿಂದ ಈ ವೇಳೆಯಲ್ಲಿ ಅವನ ಬೆಂಬಲ ಹೊಂದಿ ಅವರೆಲ್ಲರೂ ಒಗ್ಗೂಡಿ ಇನ್ನೊಮ್ಮೆ ಸರ್ವಶಕ್ತಿಯಿಂದ ಹೋರಾಡಲು ಆತನನ್ನು ಟೊಂಕಕಟ್ಟಿಸಲೆಂದು ದೇವರು (ಮೈಸೂರ ರಾಜರಸನು) ತಮ್ಮಲ್ಲಿ ಎಸಗಿದ ಅವಮಾನವನ್ನೂ ಅವನಲ್ಲಿ ತೋರುವ ಔದಾಸೀನ್ಯವನ್ನೂ ಬಿನ್ನವಿಸಿ ಕಿವಿಮುಂಬಿ-ದೇಹದಲ್ಲಿ ಬೇನೆಯನ್ನು ಹಾಸಿಗೆಯಲ್ಲಿ ಚೇಳನ್ನ ಮಗ್ಗುಲಲ್ಲಿ ಹಾವನ್ನು ಮನೆಯಲ್ಲಿ ಮಾರಿಯನ್ನು ಊರಲ್ಲಿ ಹುಲಿಯನ್ನು ಹೊಗಿಸಿ ಬಾಳುವಂತೆ ಈ ಮೈಸೂರವನ ನೆರೆಯಜೀವನ'ವೆಂದು ಬೋಧಿಸಿದರು. ಅವನೂ ಅದನ್ನು ಸತ್ಯವೆಂದು ಬಗೆದು 'ಹೇಗಾದರೂ ಮಾಡಿ ಈ ಕಾರ್ಯವನ್ನು ಸಾಧಿಸೋಣ. ಒಳ್ಳೆಯ ಮಾತಿಗೆ ಅವನು ಇಲ್ಲಿಗೆ ಬಂದರೆ ಅವನನ್ನು ಹಿಡಿದು ಬಂಧಿಸೋಣ. ಹಾಗಿಲ್ಲದಿದ್ದರೆ ದಂಡೆತ್ತಿ ಹೋಗಿ ಊರನ್ನು ಮುತ್ತಿ ಲಗ್ಗೆಯೇರಿ ಕೈಸೆರೆ ಹಿಡಿದು ತರೋಣ. ಇದಕ್ಕೆ ಉಪಾಯವೆಂದು ಮಾಸೌಮಿಯ ಉತ್ಸವದ ನೆವದಿಂದ ನೀವೆಲ್ಲರೂ ಸೈನ್ಯಸಮೇತ ಹೊರಟು ಬರಬೇಕೆಂದು ಕಳುಹಿಸಿದರು. ಅಬ್ಬಾ ! ಆ ಬಳಿಕ ಕೆಲವೇ ದಿನಗಳಲ್ಲಿ, ಮುಂಗಾರು ಸಮಯದಲ್ಲಿ ಏರಿಬರುವ ಮೋಡದ ಹಿಂಡಿನಂತೆಯೂ ಮಳೆಯಲ್ಲಿ ತುಂಬಿ ಬರುವ ಮಹಾನದಿಗಳಂತೆಯೂ ಪ್ರಳಯ ಕಾಲದಲ್ಲಿ ದಡಮೀರಿ ಕವಿದುಬರುವ ಕಡಲಸಮೂಹದಂತೆಯೂ ದಿಕ್ಕು ದಿಕ್ಕಿನಿಂದ ನಡೆತಂದು ನೆರೆದ ದೊಡ್ಡಸೇನೆಯು ಊರಮುಂದಿನ ವೈಹಾಳಿಯ ಬಯಲಲ್ಲಿಯೂ ಹೊಳೆದಂಡೆಯ ತೋಪುಗಳಲ್ಲಿಯೂ ಇಳಿಯಿತು. ಅದನ್ನು ಒಟ್ಟಾಗಿ ನೋಡಲೆಂದು ರಾಯನು ಬಂದು ಹಗಲಿನಲ್ಲಿ ಊರಬಾಗಿಲಿನ ಉಪ್ಪರಿಗೆಯೇರಿ ಬಲವನ್ನು ನೋಡುವಲ್ಲಿ-ಬಳ್ಳಾಪುರ ಕೋಳಲ ಪುಂಗನೂರು ಮಾಗಡಿ ಬೆಂಗಳೂರು ಮೊದಲಾದ ಮೊರಸುನಾಡ ಸೈನ್ಯದಲ್ಲಿ, ಇಪ್ಪತ್ತಾನೆ, ಎರಡುಸಾವಿರ ಕುದುರೆ, ಇಪ್ಪತ್ತು ಸಾವಿರ ಕಾಲಾಳುಗಳೂ, ತಳಕಾಡು ಎಳವಂದೂರು ಅಮ್ಮಚವಾಡಿ ತೆರಕಣಾಂಬಿ ಕೋಟೆ ಮೊದಲಾದ ಒಳನಾಡ ದಳದಲ್ಲಿ ಹತ್ತು ಆನೆ ಐನೂರು ಕುದುರೆ ಹತ್ತುಸಾವಿರ ಕಾಲಾಳುಗಳೂ ಕಳಲೆ, ಬೇಲೂರು, ಕೆಳದಿ ಮೊದಲಾದ ಮಲೆನಾಡ ಬಲದಲ್ಲಿ ಇಪ್ಪತ್ತು ಆನೆ ಎರಡುಸಾವಿರ ಕುದುರೆ ಇಪ್ಪತ್ತು ಸಾವಿರ ಕಾಲಾಳುಗಳೂ, ಬೆಂತನಕಲ್ಲು, ಚಿಕ್ಕನಾಯಕನಹಳ್ಳಿ, ಬಾಣಾವರ, ಬಸವಪಟ್ಟಣ, ಸೀರೆ (ಸಿರಾ) ಮೊದಲಾದ ಬೇಡಪಡೆಯಲ್ಲಿ ಐದಾನೆ, ಐನೂರು ಕುದುರೆ, ಎರಡು ಸಾವಿರ ಕಾಲಾಳುಗಳೂ ರಾಣಾಜಗದೇವ, ಕೆರೆಯೂರ ತಿಮ್ಮನಾಯಕ ಮೊದಲಾದ ರಾವುತ ಕಾಲ್ಬಲದವರಲ್ಲಿ ಹದಿನೈದು ಆನೆ, ನಾಲ್ಕು ಸಾವಿರ ಕುದುರೆ, ಇಪ್ಪತ್ನಾಲ್ಕು ಸಾವಿರ ಕಾಲಾಳುಗಳೂ ಮೂಲಬಲದಲ್ಲಿ ಮೂವತ್ತಾನೆ, ಮೂರು ಸಾವಿರ ಕುದುರೆ, ಮುವತ್ತು ಸಾವಿರ ಕಾಲಾಳುಗಳೂ, ಅಷ್ಟೂ ಸೇರಿ ನೂರು ಆನೆ, ಹನ್ನೆರಡು ಸಾವಿರ ಕುದುರೆ ಲಕ್ಷ (?) ಕಾಲ್ಬಲವಾಯ್ತೆಂದು ಲೆಕ್ಕಿಗನು ಬಿನ್ನವಿಸಲು-ಕೇಳಿದವರಿಗೆಲ್ಲರಿಗೂ ವೀಳೆಯವನ್ನಿತ್ತು ಅವರವರ ಪಾಳೆಯಕ್ಕೆ ಕಳುಹಿಸಿ

ತಾವೂ ಅರಮನೆಗೆ ಬಂದು ತಮ್ಮ ದಂಡಾಧಿಪತಿಯನ್ನು ಕರೆದು ಪಯಣದ ವ್ಯವಸ್ಥೆಯನ್ನೆಲ್ಲ ಮಾಡೆಂದು ನಿರೂಪಿಸಿ ಕಳುಹಿಸಿದನು. ಅಂದು ಮೊದಲಾಗಿ ಗುಡಿ, ಗೂಡಾರ, ಹೇರೆತ್ತು, ಚೂರಿ, ಬಾಣ ಬತ್ತಿ ಮೊದಲಾದವನ್ನು ಕೂಡಿಸುವುದನ್ನೂ ಆನೆ, ಕುದುರೆ, ಕಾಲಾಳುಗಳನ್ನು ಸಂಗ್ರಹಿಸುವುದನ್ನೂ ಮಾಡುತ್ತಿದ್ದಾರೆ. ಇದು ಈಗ ನಡೆದಿರುವ ರೀತಿ ಮುಂದೆ ನಡೆಯುವುದನ್ನು ಅಂದಂದಿಗೆ ಬರೆದು ಬಿನ್ನವಿಸಿ ಕಳುಹಿಸುವೆನು. ಇವನ್ನು ದೇವರು ಚಿತ್ತಕ್ಕೆ ತಂದು, ನಾನು ಇವರೊಡನೆ ವ್ಯವಹರಿಸುವುದಕ್ಕೆ ನನಗೆ ತಿಳಿಯುವಂತೆ, ನಿರೂಪಿಸಿ ರಾಯಸವನ್ನು ದಯಪಾಲಿಸಬೇಕು. ಇದರಲ್ಲೇನಾದರೂ ಕೈತಪ್ಪು ಬಾಯ್ತಪ್ಪುಗಳಿದ್ದಲ್ಲಿ ಒಲುಮೆಯಿಂದ ಸೈರಿಸಬೇಕು'' ಎಂದು ಓದಿಯಾಯಿತು.

ಆ ರಾಜನೃಪನು 'ಈ ವಿಷಯದಲ್ಲಿ ನಾವು ಹೇಗೆ ವರ್ತಿಸಬೇಕು' ಎಂದು ತಮ್ಮಂದಿರ ಮುಖ ನೋಡಿ ನುಡಿಸಿದನು.

ಬೆಟ್ಟದ ಚಾಮರಾಜನು, 'ಎಲೆ ಜೀಯಾ ಕೇಳು. ಈಗ ನಮಗೆ ಕಾರ್ಯವಾವುದು? ಇದಕ್ಕೆ ಯೋಚಿಸತಕ್ಕುದೇನು ? ಸಂತೆಯ ಸಂದಣಿಯೂ ಜಾತ್ರೆಯ ಜಂಗುಳಿಯಂತೆಯೂ ಅಗ್ರಹಾರದ ಹಾರುವರ ಸಮೂಹದಂತೆಯೂ ವ್ಯಾಪಾರಿಗಳ ಹಾಳೆಯದಂತೆಯೂ ಒಕ್ಕಲಿಗರ ಹಿಂಡಿನಂತೆಯೂ ಮೃಗಗಳ ಮಂದೆಯಂತೆಯೂ ಕಾಗೆಯ ಬಳಗದಂತೆಯೂ ಕಪ್ಪೆಗಳ ಗುಂಪಿನಂತೆಯೂ ಕೈಚಪ್ಪಾಳೆಗೆ ಹೆದರಿ ಹರಿದೋಡುವ ತೆಲುಗ ಪಡೆಯನ್ನು ಕಡಿದು ಅಟ್ಟುವುದಕ್ಕೆ ದೇವರ ಅಡಿಗಳವರೆಗೂ ಬರುವುದಕ್ಕೆ ಏನುಂಟು ? ಯೋಗ್ಯತೆಯಲ್ಲಿ ಅಧಿಕರೆನಿಸಿದ ನಮ್ಮಂಥವರಿಗೆ ಆಜ್ಞೆಯಿತ್ತು ಕಳುಹಿಸಬೇಕು'-ಎನಲು

ವಿನಯದೊಡನೆ ಕೈಮುಗಿದು ದೇವರಾಜನು ಜೀಯ ಬಿನ್ನಹ, ಕಿರಿಯರಸರು ಬಿನ್ನವಿಸಿರುವುದೇ ನಿಜ. ಹಾಗಿದ್ದರೂ ಅರಸುಗಳು ಗೆಲವು ಹೊಂದುವಲ್ಲಿ ಮೊತ್ತ ಮೊದಲು (ಮಾತಿನಿಂದ) ಒಡಂಬಡಿಸುವುದು, (ಲಂಚ) ಕೊಡುವುದು, ಹಗೆಗಳಲ್ಲಿ ಒಬ್ಬೊಬ್ಬರನ್ನು ಬೇರ್ಪಡಿಸುವುದು ಎಂಬೀ ಮೂರು ಉಪಾಯಗಳನ್ನು ಅನುಸರಿಸಿಯೂ ಇವುಗಳಲ್ಲಿ ಸಾಧ್ಯವೆನಿಸದಿರಲು ಯುದ್ಧವನ್ನು ಒಪ್ಪುವರು. ಅಂತೆಯೆ ಮನದಲ್ಲಿ ಅತಿಮತ್ಸರಗೊಂಡಿರುವುದರಿಂದ ಒಳ್ಳೆಯ ಮಾತಿನಲ್ಲೂ ಅತಿಸಂಪತ್ತಿನಲ್ಲಿರುವುದರಿಂದ ಬೆದರಿಕೆಯಲ್ಲೂ ಒಂದಾಗಿರುವುದರಿಂದ ಬೇರ್ಪಡಿಸುವುದರಲ್ಲೂ ವಶರಾಗರೆಂದು ತಿಳಿದಿದ್ದರೂ ನಾವು ಇತರ ಜನರನ್ನು ಮೆಚ್ಚಿಸಬೇಕು. ನಾನು ತಿಳಿದಿದ್ದರೂ ತಿಳಿಯದಿದ್ದರೂ ಭಕ್ತಿಯಿಂದ ಬಿನ್ನವಿಸಿದೆನು. ನನ್ನ ಮಾತನ್ನು ಕೇಳಿ ಚಿತ್ತಬಂದಂತೆ ನಡೆಯಬೇಕು. ನಮ್ಮಲ್ಲಿ ಮತ್ಸರವಿರುವುದು ಆ ಪ್ರಭುಗಳಿಗೇ ಹೊರತು ಆ ರಾಯನಿಗಿಲ್ಲ. ನಾವು ಅವನನ್ನು ಗಣನೆಗೆ ತಾರದಿರುವುದರಿಂದ ಅವರಿಂದ ವಶವಾಗಿದ್ದಾನೆ. ನಾವು ಒಳಿತನ್ನು ತೋರಿಸಿದರೆ ನಮ್ಮೊಂದಿಗೆ ಬೆರೆಯುವನು. ನಮ್ಮ ಸ್ನೇಹವೇ ಪರಮಲಾಭವೆಂದು ಬಗೆದು ನಮ್ಮನ್ನಾಧರಿಸಿ ಮನ್ನಿಸಿ ಮರ್ಯಾದೆ ಸಲ್ಲಿಸುವನು. ಆಗ ಈ ನೆರೆದ ನೆರವಿ ಮುರಿದು ಹರಿದುಹೋಗುವುದು. ಆ ಬಳಿಕ ನಾವು ಅಂದಂದಿನ ಔಚಿತ್ಯವರಿತು ನಡೆಯಲು ಬರುವುದು. ಅದರಿಂದ ಈಗ (ಶ್ರೀರಂಗ) ಪಟ್ಟಣಕ್ಕೆ ಬರೆಯಿಸಿ ಕಳುಹಿಸುವಲ್ಲಿ

"ತಮ್ಮ-ನಮ್ಮ ಸ್ನೇಹವು ಹಿರಿಯರ ಕಾಲದಿಂದ ಬಂದುದಲ್ಲದೆ, ಹೊಸದಲ್ಲವಷ್ಟೆ ! ತಾವಿಲ್ಲಿಗೆ ಬರುವುದಕ್ಕೂ ನಾವಲ್ಲಿಗೆ ಬರುವುದಕ್ಕೂ ಅಡ್ಡಿ ಯಾವುದು ? ತಾವೂ ದೂರದೇಶದಿಂದ ಬಂದು ಬಳಲಿರುವುದರಿಂದ ನಾವೇ ನಡೆತರುವೆವು" ಎಂದು ಬರೆಯಿಸಿ ಕಳುಹಿಸುವ. ಇಲ್ಲಿ ಮೈಸೂರ ಕೆಸರೆಯ ಕೋಟೆ ಅಗಳು ಅಳ್ವೇರಿಗಳನ್ನು ಪರೀಕ್ಷಿಸಿ ಹೊರವಲಯದ ಮರೆತೆರೆಗಳನ್ನು ತೆಗೆಯಿಸಿ ಸಕಲಸಿದ್ಧತೆಗಳನ್ನು ಸಜ್ಜುಗೊಳಿಸಿಕೊಳ್ಳುವುದಕ್ಕೆ ಕಿರಿಯರಸರನ್ನೂ, ಹೊಸಕಾಲಾಳನ್ನು ಒಟ್ಟುಗೂಡಿಸುವುದಕ್ಕೆ ಚಿನ್ನರಾಜನನ್ನೂ ಇರಿಸಿ ದೇವರು ಮತ್ತು ನನಗೆ ಸೇರಿದ ಶೂರಸೈನಿಕರನ್ನು ಜೊತೆಗೂಡಿಸಿಕೊಂಡು ಹೊಳೆಯವರೆಗೆ ಹೋಗಿ ನಿಂತಲ್ಲಿಗೆ ಅವನು ಎದುರು ಬಂದನಾದರೆ, ಆ ರೀತಿಗೆ ಸೈರಿಸಲಾರದೆ (ಅವನಲ್ಲಿ) ನೆರೆದ ಕಿರುದೊರೆಗಳೆಲ್ಲ ಆಗಲೇ ತೊಲಗಿಹೋಗುವರು. ನಾವು ಪಟ್ಟಣಕ್ಕೆ ಹೋಗಿ ದೇವರು ಕಟ್ಟಿಸಿದ ಪಶ್ಚಿಮ ರಂಗನಾಥನ ದಿವ್ಯಮಂಟಪ ಪ್ರಾಕಾರಗಳನ್ನು ನೋಡಿ, ರಂಗೇಶನಿಗೆರಗಿ ತೀರ್ಥಪ್ರಸಾದಗಳನ್ನು ಸ್ವೀಕರಿಸಿ ಧನ್ಯರಾಗಿ ಬರೋಣ ಅಥವಾ ಅವನು ಇದಿರುಗೊಳ್ಳದಿದ್ದರೆ ಅವನ ಮೇಲೆ ತಪ್ಪು ಹೊರಿಸಿ ಬರೋಣ' ಎಂದು ಬಿನ್ನವಿಸಿದನು.

ರಾಜನೃಪನು ಅದನ್ನು ಮನಸ್ಸಿಗೆ ತಂದುಕೊಂಡು ಕಿರಿಯರಸನ ಮುಖ ನೋಡಿ ಬೆಟ್ಟದಯ್ಯ ಕೇಳು. ಈ ದೇವರಾಜನು ನುಡಿದಂತೆ ನಡೆದು ನೋಡೋಣ. ಇದರಲ್ಲಿ ತಪ್ಪಿಲ್ಲ! ಎಂದನು ಜೀ, ಹಸಾದವೆಂದು ಒಡಂಬಡಲು ಶ್ರೀರಂಗಪಟ್ಟಣಕ್ಕೆ ರಾಯಸವನ್ನು ಕಳುಹಿಸಿದನು.

ಇಲ್ಲಿ ಆ ತಿರುಮಲೆ ರಾಜನು ಮರುದಿನ ಮೈಸೂರಿನ ರಾಯಸದವನು ತಂದು ಓದಿಸಿದ ಓಲೆಯ ಅಭಿಪ್ರಾಯವನ್ನು ತಿಳಿದು ತಮ್ಮವರನ್ನು ನೋಡಿ-ಕಡಲಲ್ಲಿ ಸುಧೆಯ ಪೆಂಪು. ಚಂದಿರನಲ್ಲಿ ಕಿರಣಗಳ ತಂಪು, ವಸಂತದಲ್ಲಿ ಹೂವಿನ ಸೊಂಪು, ತಂಗಾಳಿಯಲ್ಲಿ ಚಂದನದ ಕಂಪು, ಕುಲೀನನಲ್ಲಿ ಸದ್ಗುಣದ ಗುಂಪು ಇರುವುದು ಅಚ್ಚರಿಯಲ್ಲ. ಅದರೂ ಇವನಲ್ಲಿ ವೀರವೂ ವಿನಯವೂ ತಮ್ಮಲ್ಲಿ ತಾವು ಮಾತ್ಸರ್ಯವನ್ನುಳಿದು ಸ್ನೇಹಗೊಂಡಿವೆ. ಇವನ ಗೆಳೆತನದಲ್ಲಾಗುವ ಕಾರ್ಯ ಇವನ ವೈರದಲ್ಲಾಗದು. ಈ ನೆರೆಯವರೆಲ್ಲರೂ ಇವನಲ್ಲಿ ಪ್ರವೇಶಿಸಲೂ ಎದುರಿಸಲೂ ಸಾಧ್ಯವಾಗದೆ ಬರಿ ವೈರದಿಂದ ಕಳ್ಳರು ಎಚ್ಚರಿಕೆಯುಳ್ಳವರನ್ನೂ ಕಣ್ಣು ಬೇನೆಯವರು ಬೆಳಕನ್ನೂ ಗೂಗೆಗಳು ಹಗಲನ್ನೂ ನಾಸ್ತಿಕರು ವೇದವನ್ನೂ ಮೂರ್ಖರು ಸತ್ಕಾವ್ಯವನ್ನೂ ದಡ್ಡರು ವಿದ್ವಾಂಸರನ್ನೂ ದ್ವೇಷಿಸಿ ಹಂಬಲಿಸಿ ಬಸವಳಿಯುವಂತೆ ಹಲವು ತರದಿಂದ ಕಷ್ಟಪಡುವರು. ಇವರಿಗೂ ಆ ರಾಜನೃಪನಿಗೂ ಇರುವ ವ್ಯತ್ಯಾಸ ಆಡುಗಳಿಗೂ ಆನೆಗೂ, ನೀರಹಾವುಗಳಿಗೂ ನಾಗೇಂದ್ರನಿಗೂ, ಕಾಗೆಗಳಿಗೂ ಗರುಡನಿಗೂ, ಕಿರುಬಗಳಿಗೂ ಸಿಂಹಕ್ಕೂ, ಮಿಂಚು ಹುಳುಗಳಿಗೂ ಸೂರ್ಯನಿಗೂ, (ಚಿಕ್ಕ) ಕುಳಿಗಳಿಗೂ ಕಡಲಿಗೂ, ಅಣುಗಳಿಗೂ ಮೇರು ಪರ್ವತಕ್ಕೂ, ಇನ್ನಿತರ ಓದುಗಳಿಗೂ ವೇದಕ್ಕೂ ಇತರ ದೇವರಿಗೂ ವಿಷ್ಣುವಿಗೂ ಇರುವಂತೆ ಇದೆ. ಆದುದರಿಂದ ನಾವು ಇವರ ಸ್ನೇಹವನ್ನು ಕಡೆಗಣಿಸಿ ಅವನನ್ನು ಎದುರುಗೊಂಡು ಉಪಚರಿಸಿ ಭೇದವಿಲ್ಲದೆ ಬೆರೆಸಿ ಬೇಕಾದ ಕಾರ್ಯವನ್ನು ಸಾಧಿಸಿ

ಕೊಳ್ಳುವುದೇ ಜಾಣ್ಮೆಎಂದು ನಿಶ್ಚಯಿಸಿ ಪಟ್ಟಣದಿಂದ ಹೊರಟು ದಕ್ಷಿಣದ ಹೊಳೆ ದಾಟಿ, ಪಶ್ಚಿಮಕ್ಕೆ ಹರಿಯುವ ಚಿಕ್ಕ ಹೊಳೆಯ ದಂಡೆಯವರೆಗೆ ಹೋಗಿ ಅಲ್ಲಿ ಇಬ್ಬರೂ ದಂಡಿಗೆಗಳಿಂದ ಇಳಿದು, ಬಳಿಕ ಕ್ಷೇಮಾಲಿಂಗನಗೈದು, ಉಡುಗೊರೆಗಳನ್ನು ಕೊಟ್ಟು, ಕೊಂಡು, ಸಮದಂಡಿಗೆ ಗಳಲ್ಲಿ ಕುಳಿತು ಮಾತನಾಡುತ್ತ ಬರುತ್ತಿರುವಲ್ಲಿ-

ರಾಜನೃಪನು ತಿರುಮಲೆ ರಾಜನನ್ನು ನೋಡಿ "ರಾಯ ನೀವು ಹಲವು ದಿನ ಈ ದೇಶಕ್ಕೆ ಬಾರದ್ದರಿಂದ ಹಲವು ಜನ ಪ್ರಭುಗಳು ಹಲವಂದದಲ್ಲಿ ಹರಿದಾಡುತ್ತ ಸುಖವಾಗಿದ್ದರು. ದೇವರು ಹೊರಟು ಬಂದ ಬಳಿಕ ಈ ಮಿತಿ-ಮೀರಿದವರ ಸೊಕ್ಕಡಗಿ ಪೃಥ್ವಿಯು ಕೆಲವೇ ದಿನಗಳಲ್ಲಿ ಏಕ ರಾಜ್ಯವಾಗುವುದು" ಎಂದನು. ಅವನು 'ರಾಜರಸ ಕೇಳಬೇಕು, ನಾವು ಎಲ್ಲಿದ್ದೇನು ? ನಮ್ಮಿಂದಾಗುವ ಕಾರ್ಯವಾವುದು ? ಈ ನಾಡು ಬೀಡುಗಳೆಲ್ಲ ನಿಮ್ಮವು. ನಾವು ನೀವಿತ್ತ ಕಾಣಿಕೆಗಳಲ್ಲಿ (ನಿಶ್ಚಿಂತರಾಗಿ) ಇರುತ್ತೇವೆ. ನಮ್ಮನ್ನು ಕೇಳಬೇಕೆಂದೂ ಮನದಿಚ್ಛೆಯನ್ನು ತಿಳಿದುಕೊಳ್ಳಬೇಕೆಂದೂ ಸನ್ನಿಧಿಗೆ ಬರಬೇಕೆಂದೂ ಆಲೋಚಿಸಿದೆ. ಈ ದೊರತನವೇ ತಮ್ಮದೆಂದು ಬಗೆದು ನಡೆಯಿಸಬೇಕು" ಎನ್ನಲು ಆ ರಾಜನೃಪನು ದೇವರಾಜರಸನನ್ನು ಸನ್ನೆ ಮಾಡಿ ಆ ರಾಯರಾಯನೊಡನೆ "ನಿಮ್ಮ- ನಮ್ಮಲ್ಲಿ ಹೇಗೆ ಭಾವಿಸುವಿರೋ ಹಾಗೆ ನಡೆಯವುದಕ್ಕೆ ಸಂದೇಹವಿಲ್ಲ. ಶ್ರೀ ರಂಗೇಶನೇ ನೆರವಾಗುವನು" ಎಂದು ಈ ರೀತಿ ಇಷ್ಟಾಲಾಪಗಳಿಂದ ಕಳೆದ ಹೊತ್ತನ್ನು ನಡೆದ ದಾರಿಯನ್ನೂ ತಿಳಿಯದೆ ಪಟ್ಟಣದಲ್ಲಿ ಮುನ್ನವೇ ರಾಜನೃಪನಿಗೆಂದು ಸಜ್ಜು ಗೊಳಿಸಿದ ಬೀಡಾರದ ಸಮೀಪಕ್ಕೆ ಬಂದರು. ಪ್ರತಿಹಾರನು "ಜೀಯ ಪರಾಕು" ಎಂದು ಎಚ್ಚರಿಸಿದನು.

ಅಲ್ಲಿ ಆಗ ದಂಡಿಗೆಯನ್ನು ನಿಲ್ಲಿಸಿ ತಿರುಮಲೆ ರಾಜನು ತನ್ನ ದಂಡನಾಯಕನನ್ನು ಏಕಾಂತದಲ್ಲಿ ಕರೆದು "ಈ ರಾಜನೃಪನು ನಮ್ಮ ಪುಣ್ಯೋದಯದಿಂದ ನಮ್ಮವನಾದನು. ಈತನ ಗೆಳೆತನವು ನಮಗೆ ಮಂತ್ರಸಿದ್ಧಿಯಂತೆಯೂ ಅಸ್ತ್ರಶಕ್ತಿಯಂತೆಯೂ ಯೋಗಸಿದ್ಧಿಯಂತೆಯೂ ದೇವತಾ ಕೃಪೆಯಂತೆಯೂ ಅತ್ಯಂತ ಅತಿಶಯಕರವಾಗಿದೆ. ಆದುದರಿಂದ ಈತನಿಗೆ ಸಂತಸವಾಗುವಂತೆ ಉಲುಪೆಯುಪಚಾರಗಳಿಂದ ಮನಸ್ಸು ತೃಪ್ತಿಪಡಿಸಬೇಕು" ಎಂದು ಆಜ್ಞೆಯಿತ್ತು. ರಾಜನೃಪನ ಮುಖವನ್ನು ನೋಡಿ ವಿನಯದಿಂದ "ಬಿಡಾರದಲ್ಲಿ ವಿಶ್ರಮಿಸಬೇಕು" ಎಂದು ಬೀಳ್ಕೊಟ್ಟು ತಾನೂ ತನ್ನರಮನೆಯತ್ತ ಮುಖಮಾಡಿದನು.

ರಾಜನೃಪನ ಭಟ್ಟಂಗಿಗಳು ಕೈಯೆತ್ತಿ-ಸ್ವಸ್ತಿ ಸಮಸ್ತ ಸಾಮಂತ ಮಹೀಪಾಲಮೌಳಿ ಮಾಲಾಲಾಲಿತ ಪದರಾಜೀವ ! ರಾಜೀವಸಖ ಗರ್ವ ಸರ್ವಸ್ವ ನಿರ್ವಾಪಣಚಣ ಪ್ರತಾಪೋದಯ ! ದಯಾರಸ ತರಂಗಾಯಿತಾಪಾಂಗಾವಲೋಕನಾಪ್ಯಾಯಿತ ಕರ್ಣಾಟ ಮಂಡಲ ! ಮಂಡಲಾಗ್ರ ಖಂಡಿತಾರಾಲೆ-ನೃಪಕಂಠ ಕಾಂಡೋಚ್ಚಲದ್ರಕ್ತಧಾರಾ ಪರಿಮೃಷ್ಟ ತದೀಯ ಬಿರುದ ! ಬಿರುದೇತೆಂಬರ ಗಂಡ ! ರಾಜನೃಪ ! ವಿಜಯೀಭವ ದಿಗ್ವಜಯೀಭವ ಎಂದು ಹೊಗಳಿದರು. (ಟಿ. ಎಲ್ಲ ಸಾಮಂತರಾಜರ ಶಿರಸಮೂಹಗಳ ನಮಸ್ಕರಿಸುವಿಕೆಯಿಂದ

ಒಪ್ಪಿರುವ ಪಾದಕಮಲಗಳುಳ್ಳ, ಸೂರ್ಯನ ಗರ್ವವೆಲ್ಲವನ್ನೂ ಅಪಹರಿಸುವಂಥ ಚಾತುರ್ಯದ ಪ್ರತಾಪವುಂಟಾದ ಎಂದರೆ ಸೂರ್ಯನಿಗಿಂತಲೂ ತೇಜಸ್ವಿಯಾದ, ದಯಾ ರಸವು ತೆರೆಮಸಗುವ ಕರುಣಾಕಟಾಕ್ಷದಿಂದ ಕರ್ನಾಟಕ ದೇಶವನ್ನು ನೋಡುವ ಅರ್ಥಾತ್ ರಕ್ಷಿಸುವ, ಖಡ್ಗಾಗ್ರದಿಂದ ಕತ್ತರಿಸಲ್ಪಟ್ಟ ವೈರಿನೃಪರ ಕಂಠನಾಳದಿಂದ ಚಿಮ್ಮುವ ರಕ್ತಧಾರೆಯಲ್ಲಿ ತೊಳೆದು ಪುನೀತವಾದ ಬಿರುದುಳ್ಳ, 'ನಿನ್ನ ಬಿರುದು ಎಂತಹುದು?' ಎಂದು ಪ್ರಶ್ನಿಸುವವರಿಗೇ ಗಂಡನಂತಿರುವ-ಎಂದರೆ ಅತ್ಯಂತ ನಿರಂಕುಶನಾದವನು ಎಂದು ಭಾವ).

ಅದನ್ನು ಕೇಳಿ ಮುಂಗಾರಿನ ಗುಡುಗು ಕೇಳಿದ ಸಿಂಹದಂತೆ ಕೋಪಗೊಂಡು, ಸಮಯೋಚಿತವಲ್ಲೆಂದು ಕೋಪವನ್ನು ತಡೆದುಕೊಂಡು, ತನ್ನ ಜೊತೆಯಲ್ಲಿ ಬರುತ್ತಿದ್ದ ಮಂತ್ರಿಯೊಬ್ಬನನ್ನು ಕರೆದು "ನೀನು ರಾಜನೃಪನ ಬಳಿಗೆ ಹೋಗಿ ಆತನ ಮನ ಕದಡದಂತೆ ಮೃದುರಾಗಿ ಹೇಳಿ 'ಅಂತೆಂಬರ ಗಂಡ'ನೆಂಬುದೊಂದು ಬಿರುದನ್ನು ನಮ್ಮಿದಿರು ಹೊಗಳದಂತೆ ಮಾಡಬೇಕು" ಎಂದು (ಹೇಳಿ) ಕಳುಹಿಸುವಲ್ಲಿ-

ಅವನಲ್ಲಿಗೆ (ಆತನು) ಹೋಗಿ ಕೈ ಮುಗಿದು "ದೇವರಲ್ಲಿ ನಮ್ಮೊಡೆಯರ ಸ್ನೇಹವು ಕುಂದಿಲ್ಲದಿರುವುದು. ಇದನ್ನು ಸಹಿಸಲಾರದೆ ಇದರಲ್ಲಿ ಕುಂದನ್ನೂಹಿಸಿ ಕಿಂಚಿತ್ತಾದರೂ ಇದ್ದುದಾದರೆ ಅದನ್ನು ಹೆಚ್ಚಿಸಿ ಚಂದ್ರನಲ್ಲಿ ಕಪ್ಪುಗಂಡಂತೆ ಕೊಂಡುಕೊನರಿಸಲೆಂದು ಕಾದಿರುವರು. ಅದಕ್ಕಾಗಿ 'ಅಂತೆಂಬರ ಗಂಡ' ನೆಂಬ ಬಿರುದು ದೇವರ ವಂಶಪರಂಪರೆಯಲ್ಲೂ ನಮ್ಮೊಡನೆಯರ ಪರಂಪರೆಯಲ್ಲೂ ಉಂಟು. ಅದನ್ನು ಇಬ್ಬರೂ ಇರುವೆಡೆಯಲ್ಲಿ ಉಗ್ಗಡಿಸದಂತೆ ಭಟ್ಟಂಗಿಗಳಿಗೆ ಕಟ್ಟಳೆಯಾಗಿದೆ. ದೇವರ ಚಿತ್ತವನ್ನು ಅವರಿಗೆ (ನಿಮ್ಮ ಭಟ್ಟಂಗಿಗಳಿಗೆ) ಹಾಗೆ ನಿರೂಪಿಸಬೇಕು" ಎಂದು ಬಿನ್ನವಿಸಿದರು. ರಾಜನೃಪನು (ತಮ್ಮನ) ಮುಖವನ್ನು ನಿಟ್ಟಿಸಲಾಗಿ ಆ ದೇವರಾಜನು ಒಂದಿಷ್ಟು ಕೋಪದಿಂದ (ಆ) ನಿಯೋಗಿಯ ಮುಖವನ್ನು ಬಿಗುಮಾನದಿಂದ ನೋಡಿ "ನೀನು ಬಿನ್ನವಿಸಿದುದು ಸಹಜ. ಹಾಗಿದ್ದರೂ ಈ ಬಿರುದು ನಿಮ್ಮರಸರಿಗೆ ಭಟ್ಟಂಗಿಗಳಿಂದ ಬಂದುದು. ಆದುದರಿಂದ ಹೊಗಳಬಾರದೆಂದು ನಿರೂಪಿಸಲು ಅವರು ಅದರಂತೆ (ಆ ಬಿರುದನ್ನು) ತೊರೆದಿರುವರು. ನಮಗೆ ಈ ಬಿರುದು ನಮ್ಮ ಹಿರಿಯರ ಪರಾಕ್ರಮದಿಂದ ದೊರೆತು ಸೈನಿಕರ ಶೌರ್ಯದಿಂದ ಪ್ರಸಿದ್ಧವಾಯಿತು. ಆದುದರಿಂದ ಭಟ್ಟಂಗಿಗಳನ್ನು ತಡೆಯಲು ಕಾರಣವಿಲ್ಲ. ಮುನ್ನ ನಮ್ಮ ಮುತ್ತಜ್ಜನಾಗಿದ್ದ ಬೆಟ್ಟದ ಚಾಮರಾಜ ಭೂಪಾಲನ ಮನ್ನಣೆಯ ಬಂಟ, ಕಳಲೆಯ ನಂಜಶೆಟ್ಟಿಯು ನಂಜನಗೂಡು ಜಾತ್ರೆಯಲ್ಲಿ ನೆರೆದ ಹಲವರು ಪ್ರಭುಗಳ ಮುಂದೆ ಉಗ್ಗಡಿಸುವ ಹಲವು ಬಿರುದುಗಳನ್ನು ಕೇಳಿ, ಸಹಿಸದೆ, ಹಲವು ಹೆಜ್ಜೆಗಳನ್ನು (ತನ್ನೊಂದರಲ್ಲಿಯೆ) ಅಡಕಗೊಳಿಸುವ ಆನೆಯ ಹೆಜ್ಜೆಯಂತೆಯೂ ಹಲವು ನದಿಗಳನ್ನು ಒಳಗೊಳ್ಳುವ ಸಾಗರದಂತೆಯೂ ಹಲವು ಮಹಾಭೂತಗಳನ್ನು ಆವರಿಸುವ ಆಕಾಶದಂತೆಯೂ ಹಲವು ಬಿರುದುಗಳನ್ನು ಮೀರಿ ಮೆರೆಯುವ 'ಅಂತೆಂಬರ ಗಂಡ' ನೆಂಬ ಬಿರುದನ್ನು ತಾನು ಬಲಗೈಯಲ್ಲಿ (ಹಿಡಿದ) ಕಠಾರಿಯನ್ನೂ ಎಡಗೈಯಲ್ಲಿ ಅಂಗಡಿಯ ಮಾನವನ್ನು ಹಿಡಿದು ಓದಿ ಉಗ್ಗಡಿಸಿದನು. ಅಲ್ಲಿ ನೆರೆದ ಸಮಸ್ತ ಪ್ರಭುಗಳೂ ಒಂದಾಗಿ ತಮ್ಮತಮ್ಮ ದಳಗಳೊಡನೆ ಅವನನ್ನು

ಹಣೆಯಲೆಂದು ಸುತ್ತಿ ಮುತ್ತುವಷ್ಟರಲ್ಲಿ, ಅವನು ಗಿಡುಗವು ಗಿಳಿಗಳನ್ನು, ಶಿರುಬ ಕುರಿಗಳನ್ನು, ಹುಲಿಯು ಮೊಲಗಳನ್ನು, ಕೋಣವು ಹೊಂಡವನ್ನು, ಮದ್ದಾನೆಯು ಬಾಳೆಯ ತೋಟವನ್ನು ಹೊಗುವಂತೆ ಹೊಕ್ಕು ಮೀರಿ ಒಕ್ಕಲಿಕ್ಕಿ ಗೆದ್ದು ಬಿರುದನ್ನು ಗಡ್ಡಿಸಿದನು. ಅದರಿಂದ ಈ ಬಿರುದು ನಮ್ಮ ಬಂಟರ ಪಾಲಿಗೆ ಬಂದುದು. ಆ ಕಾರಣ ಈ ವಿಷಯದಲ್ಲಿ ಯಾರನ್ನೂ ಲೆಕ್ಕಿಸರು. ನಾವೇ ನಿರೂಪಿಸಿದರೂ ಸಲಿಗೆಯಲ್ಲಿ ಆಳು-ಒಡೆತನಗಳ ಮೇರೆ ಮೀರುವರು. ಇವಕ್ಕೇ ಈ ತೊಡಕು. ನಿಮಿಷ್ಟೆ" ಎಂದು ನುಡಿದು ವೀಳೆಯವಿತ್ತು ಕಳುಹಿಸಿದರು.

ಅವನು ತನ್ನೊಡೆಯನಲ್ಲಿಗೆ ಹೋಗಿ ತಾನು ಕೇಳಿದುದೆಲ್ಲವನ್ನೂ ಬಿನ್ನವಿಸಲು ಆ ರಾಯನು ಮನದಲ್ಲಿ 'ಬಿರುದಿಗೆ ಹಾನಿಯುಂಟಾಗುವಲ್ಲಿ ಸಹಿಸಿಕೊಂಡಿರುವುದು ವೀರರಿಗೆ ದೊಡ್ಡಕುಂದು' ಎಂದು ಬಗೆದು 'ಅಕಟಾ ನಾವು ಇವರೊಡನೆ ಬೆರಸಿದ್ದು ಕೂಗಿ ಮಾರಿಯನ್ನು ಕರೆತಂದಂತಾಯಿತು. ಆದಾಗ್ಯೂ ಇವರಲ್ಲಿ ಭಾಷೆ ನಂಬುಗೆಗಳನ್ನಿತ್ತೆವು ಎಂದುಕೊಂಡು ಹಿಂದೆಗೆಯದೆ ಕೈಸೆರೆ ಹಿಡಿದು ಕೊನೆಗಾಣಿಸುವುದೇ (ಯೋಗ್ಯ) ಕಾರ್ಯವೆಂದಾಲೋಚಿಸಿ ಮರುದಿನ ಮುಂಜಾನೆ "ನಾವು ವೈಹಾಳಿಯ ಬಯಲಲ್ಲಿ ಒಂದಿಷ್ಟು ಹೊತ್ತು ವಿನೋದದಲ್ಲಿದ್ದು ಬರುವೆವು. ಇಲ್ಲಿ ನೀವು ರಂಗನಾಥನ ಸನ್ನಿಧಿಗೆ ಹೋಗಿ ಸಂದರ್ಶಿಸಿ ವಂದಿಸಿರಿ" ಎಂದು ರಾಜನೃಪನಿಗೆ ಹೇಳಿ ಕಳುಹಿಸಿ ಪಟ್ಟಣದ ಹೊರವಲಯದ ಸಮೀಪದಲ್ಲಿರುವ ಮಂಟಪದಲ್ಲಿ ಕುಳಿತಿದ್ದು ಮೊದಲದಿನದಂದು ಸಿಟ್ಟಾಗಿ ಬಿಗುಮಾನದಲ್ಲಿದ್ದ ಎಲ್ಲ ಪ್ರಭುಗಳನ್ನು ಕರೆಯಿಸಿ ಅವರು ಬರುವವರೆಗೆ ತನ್ನ ಸೈನಿಕರು ಆಡುತ್ತಿದ್ದ ಲಗ್ಗೆ-ಚೆಂಡಾಟವನ್ನು ನೋಡುವ ನೆವದಿಂದಿರಲು ಅವರೆಲ್ಲರೂ ಬಂದರು. ಅವರನ್ನು ಏಕಾಂತದಲ್ಲಿ ಕರೆದು "ನಿನ್ನೆ ನಿಮ್ಮೆಲ್ಲರಿಗೆ ಹೇಳಿದರೆ ಗುಟ್ಟು ರಟ್ಟಾಗುವುದೆಂದು ಮೈಸೂರವನಲ್ಲಿ ಹುಸಿಗೆಳೆತನವನ್ನು ಹೊಸೆದು ಅವನನ್ನು ಪಟ್ಟಣದೊಳಗೆ ಹೊಗಿಸಿದೆವು. ಅವನನ್ನು ಕೈಸೆರೆ ಹಿಡಿಯಲು ಇದೇ (ತಕ್ಕ) ಸಮಯ ಕೂಡಲೇ ಹೊರಡಬೇಕು ಎಂದನು. ಅವರವರು ಅತಿ ತ್ವರಿತವಾಗಿ ತಮ್ಮತಮ್ಮ ದಳಗಳನ್ನು ಕೂಡಿಸುತ್ತಿರಲು-

ಇತ್ತ ರಾಜನೃಪನು ಅರುಣೋದಯದಲ್ಲಿ ಏಳುತ್ತ ಶ್ರೀಮನ್ನಾರಾಯಣನ ಪರವಿಭವ ವ್ಯೂಹಾದಿ ಮೂರ್ತಿಗಳನ್ನೂ ಗಜೇಂದ್ರಮೋಕ್ಷಣಾದಿ ದಿವ್ಯಕಥೆಗಳನ್ನೂ ನೆನೆದು ನಾಮಸಂಕೀರ್ತನೆ ಮಾಡಿ ಕಾವೇರಿಗೆ ಹೋಗಿ ಮಿಂದು ಮಡಿಯುಟ್ಟು ಹಣೆ ಮುಂತಾದ ಆಯಾ ಯೋಗ್ಯಸ್ಥಾನಗಳಲ್ಲಿ ಹನ್ನೆರಡು ಊರ್ಧ್ವ ಪುಂಡ್ರಗಳನ್ನಿಟ್ಟುಕೊಂಡು ತುಳಸಿ, ತಾವರೆ, ಮಣಿಗಳ ಜೋಡಿಸರಗಳನ್ನು ಧರಿಸಿ ಅರಮನೆಗೆ ಬಂದು ಅಲ್ಲಿ ಮನೆಯೊ ಪೂಜಾರೂಪದಲ್ಲೊಪ್ಪಿರುವ ಅಚ್ಯುತನನ್ನು ಷೋಡಶೋಪಚಾರಗಳಿಂದ ಪೂಜಿಸಿ ತೀರ್ಥ ಪ್ರಸಾದಗಳನ್ನು ಸ್ವೀಕರಿಸಿ ನಿತ್ಯದಾನಗೈದನು. ಬಳಿಕ ಉತ್ತಮಾಭರಣಗಳಿಂದ ದೇಹವನ್ನು ಸಿಂಗರಿಸಿಕೊಂಡು ಮಿತಪರಿವಾರದಿಂದೊಡಗೂಡಿ ರಂಗನಾಥನ ದೇವಾಲಯವನ್ನು ಸಮೀಪಿಸಿ ಗೋಪುರದ ಬಾಗಿಲಿನೊಳ ಹೊಕ್ಕು ಪ್ರದಕ್ಷಿಣೆ ಬರುವಾಗ-

ಅಲ್ಲಿದ್ದ ಶ್ರೀ ವೈಷ್ಣವರು ಹರ್ಷದಿಂದ ಎದುರುಗೊಂಡು ಆಶೀರ್ವದಿಸಿ "ಎಲೆ

ಮಹಾರಾಯ ! ನೀವು ನಮ್ಮೀ ಸ್ವಾಮಿಗೆ ಈ ದಿವ್ಯ ಪ್ರಾಕಾರವನ್ನು ಕಟ್ಟಿಸಿದ್ದಕ್ಕೆ ಸಂತಸಪಟ್ಟು ನಿಮಗೆ ಈ ಪರಿಯ ಹಲವು ಕೋಟೆಗಳನ್ನು ಇತ್ತು ದಯೆಗೈಯುತ್ತಾರೆ ಎಂದರು. ಅವರಿಗೆ ವಂದಿಸಿ ಅಖಿಲ ಜಗತ್ಕಾರಣನೂ ಅಮಿತನೂ ಅಪಾರನೂ ಅಸಂಖ್ಯಾತ ಕಲ್ಯಾಣ ಗುಣಗಳುಳ್ಳವನೂ ಆದ ನಾರಾಯಣನಿಗೆ ಸೇವೆಸಲ್ಲಿಸಿ ಒಲಿಸುವುದಕ್ಕೆ ನಾನೆಷ್ಟರವನು? ನಿಮ್ಮ ಒಲವೂ ಹರಕೆಗಳೂ ನಮಗೆ ಪರಮ ಸಂಗ್ರಾಹ್ಯವಾದವುಗಳು" ಎಂದು ನುಡಿಯುತ್ತ ಅವರೊಟ್ಟಿಗೆ ಅಲ್ಲಿಂದ ಒಳಹೊಕ್ಕು ಬಲಿಪೀಠ, ಧ್ವಜಸ್ತಂಭಗಳ ಬಳಿ ಸ್ವಾಮಿಗೆ ಸಾಷ್ಟಾಂಗವೆರಗಿ ಆ ದ್ವಿತೀಯ ಆವರಣದಲ್ಲಿ ಪ್ರದಕ್ಷಿಣೆ ಬರುತ್ತ ದಕ್ಷಿಣಭಾಗದಲ್ಲೊಪ್ಪಿರುವ ಪರಕಾಲ ಮುಂತಾದ ದಿವ್ಯಸೂರಿಗಳನ್ನು ಪರಾಂಕುಶರನ್ನು ವಿಷ್ಣುಚಿತ್ತರನ್ನು ಶೂಡಿಕ್ಕುಡುತ್ತ ನಾಚ್ಚಿಯಾರರನ್ನು ಪಾರ್ಥಸಾರಥಿಯನ್ನು ನರಸಿಂಹಸ್ವಾಮಿಯನ್ನು ಅನುಕ್ರಮವಾಗಿ ಬಲಗೊಂಡು ಪಶ್ಚಿಮೋತ್ತರ ಭಾಗಕ್ಕೆ ಬಂದು ಅಲ್ಲಿ ಸಕಲ ಜಗಜ್ಜನನಿಯೆನಿಸಿದ ಶ್ರೀರಂಗನಾಯಕಿಯಮ್ಮನವರ ದಿವ್ಯಶ್ರೀಪಾದಕಮಲಗಳ ಧೂಳಿಯನ್ನು ಶಿರದಲ್ಲಿ ಧರಿಸಿ (ಅವಳ) ಕಟಾಕ್ಷಾಮೃತ ಸೇಚನೆಯಿಂದ ತಣಿದು ಮುಂದುಗಡೆ ನಡೆದು ವೇಣುಗೋಪಾಲ ವರದರಾಜ ರಾಮಾನುಜ ಶ್ರೀವತ್ಸಾಂಕುರರನ್ನು ಸೇವಿಸಿ ಜಯ-ವಿಜಯರಿಗೆ ಕೈಮುಗಿದು ಒಳಹೊಕ್ಕು ವಿಷ್ವಕ್ಸೇನರನ್ನು ವಂದಿಸಿ ಮುಂದೆ ನಡೆದು ಗರ್ಭಗೃಹದ ಬಾಗಿಲಲ್ಲಿ ಕೈಮುಗಿದು ನಿಂತು ನಿಟ್ಟಿಸುವಲ್ಲಿ-

ಶ್ರೀರಂಗನಾಥಸ್ವಾಮಿಯ ವರ್ಣನೆ :

ಕ್ಷೀರಸಾಗರದ ನಟ್ಟನಡುವೆ ಮೇಲೆದ್ದು ತೋರುವ ನೀಲರತ್ನದ ದೀಪದಂತೆಯೂ ಹಿಮಾಲಯದಪ್ಪಲಲ್ಲಿ ಬೆಳೆದ ಕಪ್ಪುತಾಳೆವನದಂತೆಯೂ ಆಕಾಶಗಂಗೆಯ ಮಡುವಿನೆಡೆಯಲ್ಲಿ ಅರಳಿ ಹೊದರೆದ್ದ ಕಪ್ಪುನೈದಿಲೆಗಳ ಸಮೂಹದಂತೆಯೂ ಮೈಕಾಂತಿಯಿಂದೊಡಗೂಡಿ ಆದಿಶೇಷನ ಶಯ್ಯೆಯಲ್ಲಿ ಪವಡಿಸಿ ಎಳಬಿಸಿಲ ಸೋಂಕಿನಿಂದ ಶೋಭಿಸುವ ಆಕಾಶದಂತೆಯೂ ಅರಿದಾಳದ ಹಾಸುಗಲ್ಲುಗಳಿಂದೊಪ್ಪುವ ಕಾಡಿಗೆ ಬೆಟ್ಟದಂತೆಯೂ ಮಿಂಚಿನ ಮಿರುಗಿನಿಂದ ಮೆರೆಯುವ ಕಾರ್ಮೋಡದಂತೆಯೂ ಹಾವುಗಳ ವೈರದಿಂದ ಪಾತಾಳವನ್ನು ಪ್ರವೇಶಿಸಲೆರಗುವ ಗರುಡನ ರೆಕ್ಕೆಗಳ ಕಳೆಯಿಂದ ಹೊಳೆಯುವ ಸಮುದ್ರದಂತೆಯೂ ಉಟ್ಟ ಹೊಂಬಣ್ಣದ ಬಟ್ಟೆಗಳ ಕಾಂತಿಯಿಂದ ಮನಮನಾಕರ್ಷಕವೆನಿಸುವ ಸಿರಿಮೈಯ ಕಪ್ಪು ಬೆಳಗು, ಎಡಬಿಡದೆ ನೋಡುವ ಲಕ್ಷ್ಮಿಯ ಆಲೆ ಕಿರಣಗಳಿಂದ ಬೆಳೆದು, ಸುಳಿಹೊಕ್ಕುಳಿನ ಕಮಲದ ತುಂಬಿಹಿಂಡಿನಿಂದ ಹೆಚ್ಚಿ ಶ್ರೀತುಳಸಿಯ ದುಂಡುಮಾಲೆಯ ಅಂದುಗೆಯಿಂದ ಹೆಚ್ಚಳ ಪಡೆದು ಅಡಿಯ ಉಂಗುಟ ಸೋಂಕಿನಿಂದ ಹೊಮ್ಮುವ ದೇವಗಂಗೆಯ ಮೇಲಿನ ಮತ್ಸರದಿಂದ ಮೈಯೆಲ್ಲವನ್ನು ಸುತ್ತಿಸುಳಿಯುವ ಯಮುನೆಯ ತೆರೆಗಳ ಸಮೂಹದಂತೆ ಕವಿದು ಬರಲು, ಅದನ್ನೆದುರಿಸುತ್ತ ಸಮೀಪಿಸಿ, ಮುನ್ನ ಆಕಾಶವನ್ನಳೆಯುವಾಗ ಬ್ರಹ್ಮನು ತೊಳೆದಿಟ್ಟ ಕುಂಕುಮಲೇಪದಿಂದಲೋ ಅಥವಾ ಎಡಬಿಡದೆ ನಮಸ್ಕರಿಸುವ ಈಶ್ವರ ಇಂದ್ರಾದಿಗಳ ತಲೆಯ (ಕಿರೀಟದ ಮಾಣಿಕಗಳ ಕಿರಣಜಾಲದಿಂದಲೋ ಅಥವಾ ಮೆಲ್ಲನೆ ಒತ್ತುತ್ತಿರುವ ಲಕ್ಷ್ಮೀ-ಭೂದೇವಿಯರ ಕೆಂಪಾದ ಅಂಗೈಗಳ ಕಳೆಯಿಂದಲೋ ಯೋಗಿಗಳ

ಮನೋನು ರಾಗದಿಂದಲೋ ಎಂಬಂತೆ ಕೆಂಪಿನ ಅತಿಶಯತೆಯಿಂದೊಡಗೂಡಿದ ಮೃದು ಪಾದಗಳಿಂದಲೂ ; ಸಹಜವಾದ ಕಪ್ಪು, ನೂಪುರದ ಪಚ್ಚೆಯ ಹಸಿರು ಉಟ್ಟ ಪೀತಾಂಬರದ ಸ್ವರ್ಣಕಾಂತಿ ಇವುಗಳಿಂದ ಮೂರುಬಣ್ಣ ಹೊಂದಿ ಗಂಡು ನವಿಲಿನ ದುಂಡುಗೊರಳಿ ನಂತೊಪ್ಪುವ ಕಿರುದೊಡೆಗಳಿಂದ, ಕಾಮದೇವನ ಉದ್ಯಾನದ ಕಪ್ಪುಬಾಳೆಗಳಂತೆಯೂ ವಿನೋದಗಳಲ್ಲಿ ಜೊತೆಗೂಡುವ ಶ್ರೀದೇವಿ ಭೂದೇವಿಯರ ಕರಿಬಟ್ಟೆಯ ಕಪ್ಪು ವೇಷದಂತೆ ಹೆಚ್ಚಳಪಡೆದ ದೊಡ್ಡ ತೊಡೆಗಳಿಂದ, ಹೊಡೆಗಟ್ಟಿದ ಮುತ್ತಿನ ಸರಗಳ ಬಿಳಿ ಬೆಳಗೆಂಬ ತಿಳಿನೀರಿನಿಂದ ತುಂಬಿ ತನ್ನಲ್ಲಿ ಬೆಳೆದ ತಾವರೆ ಹೂವಿನ ಹುಡಿಯಿಂದ ಬ್ರಹ್ಮನನ್ನು ಹಡೆದ ಸುಳಿಹೊಕ್ಕುಳ ಕೊಳದಿಂದ ; ಎಡೆಬಿಡದೆ ತೊಡೆದ ಚಂದನ ಲೇಪನದ ಮೆತ್ತನ ಹಾಸಿಗೆಯೂ ಕೌಸ್ತುಭರತ್ನದ ದೀಪವೂ ತುಳಸೀಮಾಲೆಯ ಉಯ್ಯಾಲೆಯೂ ಹೊದ್ದ ಹೊನ್ನಬಟ್ಟೆಯ ಮೇಲ್ಕಟ್ಟೂ ಕಂಠಿಕೆ ಮುತ್ತಿನ ಮಾಲೆಗಳ ಜೋಲುಸರಗಳೂ ಒಪ್ಪಿರಲೂ ಸಿರಿಯರಸಿಯ ಶಯ್ಯಾಗ್ರಹದಂತೆ ಶೋಭಿಸುವ ಹರವಾದ ಎದೆ, ಹಾಸಿಗೆಯಾಗಿರಲು ಬಿಳಿ ಹಾವಿನ (ಶೇಷನ) ಬಿಂಕವನ್ನು ಬಿಡಿಸಲೆಂದು ಎಡಬಲದಲ್ಲಿ ತಲೆಬಾಲಗಳು ಉದ್ದ ಜೋಡು ಕಪ್ಪು ಹಾವುಗಳಂತೆ ಮಣಿದು ಮಂಡೆಯೆಡೆಗೆ ಚಾಚಿ ಮೊಳಕಾಲದೆಡೆಗೆ ಸಾಗಿರುವ ಎಡ-ಬಲದ ನಿಡುದೋಳುಗಳಿಂದ ; ಮಕರಕುಂಡಲಗಳ ರತ್ನಗಳಿಂದುಂಟಾಗಿ ಸುತ್ತುವರಿದಿರುವ ಪ್ರಭಾಮಂಡಲವನ್ನು ಮುಗುಳ್ನಗೆಯೆಂಬ ಬೆಳ್ದಿಂಗಳಿಂದ ಮುಚ್ಚುವ ಮುಖಚಂದ್ರನಿಂದ ; ನುಣುಪಾದ ಹಣೆಯೆಂಬ ಕನ್ನಡಿಯಲ್ಲಿ ಪ್ರತಿಬಿಂಬಿಸಿದ ಉದ್ದನೆಯ ನಾಭಿಕಮಲ ಮತ್ತು ಅದರ ಕರ್ಣಿಕೆಯಂತೆ ಕಂಗೊಳಿಸುವ ಊರ್ಧ್ವಪುಂಡ್ರ. ಶ್ರೀಚೂರ್ಣಗಳಿಂದ ; ಮೇಲ್ಗಡೆ ಕವಿದ ನಾಗರಾಜನ ಹೆಡೆಯ ರತ್ನಕಾಂತಿ ಸಮೂಹವೋ ಅಥವಾ ತಲೆದಿಂಬಿಗಿಟ್ಟ ಬಲಗೈ ಸೆಳ್ಳುಗುರುಗಳ ಬೆಳಕಿನ ಮೊತ್ತವೋ ಮುಖಕಮಲದ ಸೊಗಸಿಗೆ ಮೋಹಿಸಿ ಮುತ್ತಿಡಲು ಬಂದ ಆ ರವಿಬಿಂಬವೋ ಎಂಬ ಸಂದೇಹವನ್ನುಂಟು ಮಾಡುವ ದಿವ್ಯಕಿರೀಟದಿಂದ ; ಮನದುಂಬುವ ದಿವ್ಯಮಂಗಳ ವಿಗ್ರಹದ ಒಟ್ಟಂದವನ್ನು ಕಣ್ಣಬೊಗಸೆಗಳಿಂದ ತೆಗೆದು ಹೀರಿ ಸವಿಸವಿದು ಉಬ್ಬಿ ಸೊಕ್ಕು ತಲೆಗೇರಲು ಮೈಮರೆತು ಮರವಟ್ಟು ದೇಹದೊಳಗಿರಲಾರದೆ ಕ್ಷಣಕ್ಷಣಕ್ಕೆ ಹೊರಹೊಮ್ಮುವ ರೋಮಾಂಚನಗಳೂ ಹೊನಲಿಟ್ಟು ಸೂಸಿ ಬಿಡುವಿಲ್ಲದೆ ಹರಿಯುವ ಆನಂದಾಶ್ರುಗಳೂ (ಕೊರಳ) ಸೆರೆಬಿಗಿದು ಬೇಗ ಹೊರಹೊಮ್ಮಲಾರದೆ ತಡವರಿಸುವ ಗದ್ಗದವೂ ಉಂಟಾಗಿ ಬಹಳಹೊತ್ತು ಆನಂದ ಸಾಗರದಲ್ಲಿ ಮುಳುಗಿ ತೇಲುತ್ತ ಮೆಲ್ಲನೆ ಆ ಸುಖವು ದೇಹದಿಂದ ಹೊರಹೊಮ್ಮಿ ಕಣ್ದೆರೆದು ಎಚ್ಚತ್ತು ಕ್ರಮದಿಂದ ಒಂದೊಂದವಯವದ ಸೌಂದರ್ಯವನ್ನು ಬೇರೆಬೇರೆಯಾಗಿ ಭಾವಿಸಿ ಮನದಲ್ಲಿ ಬಂಧಿಸಿಟ್ಟುಕೊಳ್ಳುವೆನೆಂದು ಶಂಖದ ಚಕ್ರದ ಕಲ್ಪವೃಕ್ಷದ ಪತಾಕೆಯ ತಾವರೆಯ ಅಂಕುಶದ ವಜ್ರದ ಮೈಸಿರಿಯುಳ್ಳ ನುಣುಪಾದಗೆರೆಗಳಿಂದೊಪ್ಪುವ ಚಿಗುರೆಲೆಯಂಥ ಅಂಗ್ಕೈಯನ್ನು ; ನಂಬಿ ಬಂದವರು ಬಯಸುವ ಫಲಂಗಳನೀಯಲೆಂದು ಅಯ್ದು ಕೊನೆಗಳಲ್ಲಿ ಹೂದುಂಬಿ ಒಪ್ಪುವ ಕಲ್ಪವೃಕ್ಷವನ್ನು ಸರಿಗಟ್ಟುವ ಕೋಮಲ ಪಾದಗಳನ್ನು ; ಅಂದು ಪಾಂಡವರ ಪಾಳೆಯದಿಂದ ಹಸ್ತಿನಾಪುರಕ್ಕೆ ದೌತ್ಯಕ್ಕಾಗಿ ನಡೆದ ಬಳಲಿಕೆಯನ್ನು ನೀಗಿಸಲೆಂದು ಮೆಲ್ಲನೆ

ಒತ್ತುವ ಶ್ರೀ ಭೂದೇವಿಯರ ಮೆದುವಾದ ಕೈಸೋಂಕಿಗೆ ರೋಮಾಂಚಗೊಳ್ಳುವ ಕಿಱುದೊಡೆಗಳನ್ನು ;

ಒಂದೇ ಅಡಿಯ ಉಂಗುಟ ತುದಿಯ ಸೋಂಕಿನಿಂದ ಸೊಕ್ಕಿದ ಗಂಗೆಯ ಗರ್ವವನ್ನು ಕಡೆಗಣಿಸಲೆಂದು ಎರಡು ದೇಹ ಧರಿಸಿ ಎರಡೂ ಪಾದಗಳೆಡೆಗೆ ಕವಿದು ಹರಿಯುವ ಯಮುನೆಯ ಪ್ರವಾಹಗಳಂತೆ ಒಪ್ಪುವ ದುಂಡುದೊಡೆಗಳನ್ನು ಹೊಟ್ಟೆಯ ಮೇಲಿನ ಹೂವಿನ (ಕಮಲದ) ದೇಟಿನ ಮುಖಾಂತರ ಕುಡಿವರಿದು ಪಲ್ಲವಿಸಿ ಹಬ್ಬುವ ಜಗತ್ತೆಂಬ ಬಳ್ಳಿಯ ಚಿಗುರಿನ ತಾಯ್ಗುಳಿ ಎನಿಸುವ ಸುಳಿಹೊಕ್ಕಳನ್ನು ; ಎಡೆಬಿಡದೆ ನಡೆದಾಡುವ ಲಕ್ಷ್ಮಿಯ ಪಾದಗಳ ಅಲತಿಗೆ ರಸದ ಲೇಪದಿಂದ ಸುವರ್ಣದುಡಿಗೆಯ ಹೊಂದಾಣಿಕೆಯಿಂದ ಮೇಳಗೊಂಡು ಸಿರಿಮೈಕಾಂತಿಯ ಸೇರುವೆಯಿಂದ ಸಿಂಗರಗೊಂಡು ಹಲವು ಬಣ್ಣದ ತುಳಸೀಮಾಲೆಯು ಬಳಸಿನ ನಟ್ಟನಡುವೆ ಶೋಭಿಸುವ ಕೌಸ್ತುಭರತ್ನವೆಂಬ ಸೂರ್ಯಮಂಡಲದಿಂದ ಆಕರ್ಷಕವಾಗಿ ತೋರುವ ಆಕಾಶವನ್ನು ಹೋಲುವ ಹರವಾದ ಎದೆಯನ್ನು ; ಜಗತ್ತೆಲ್ಲವನ್ನು ಧರಿಸಿ ಕಾಪಾಡುವ ಲಕ್ಷ್ಮೀಪತಿಯ ಸಿರಿಮುಡಿಗೆ ಈ ದಿವ್ಯ ಕಿರೀಟವೂ ಶ್ರೇಷ್ಠರಾದ ಬ್ರಹ್ಮಾದಿಗಳ ಮುಡಿಗಳಿಗೆ ಈ ಕೆಂಪು ಅಡಿದಾವರೆಗಳು (ಟಿ. ಅವರೆಲ್ಲ ನಮಸ್ಕರಿಸಿರುವುದರಿಂದ) ಹೊಂದಿಕೊಂಡಿರುವವೆಂದು ಮುಟ್ಟಿ ತೋರಿಸುವಂತೆ ಮುಡಿಯೆಡೆಗೆ ಒಂದು, ಅಡಿಯೆಡೆಗೆ ಮತ್ತೊಂದು, ಚಾಚಿದ ಬಲ- ಎಡದೋಳು ಗಳನ್ನು ; ಮನದಲ್ಲಿ ಮೂಡಿದ ಚಂದ್ರನ ಬೆಳ್ದಿಂಗಳು ಹೊರಸೂಸುವಂತೆ ಬಾಯ್ದುದಿಯಲ್ಲಿ ಮಿರುಗುವ ಮುಗುಳ್ನಗೆಯನ್ನು ; ತಮ್ಮಷ್ಟಕ್ಕೆ ತಾವು ಸರಿದೊರೆಯಾಗಿ ಮಾತ್ಸರ್ಯವನ್ನುಳಿದು ಯಾವಾಗಲೂ ತೇಜಸ್ಸು ಪಡೆದು ಉಗ್ರಜಾಡ್ಯಗಳನ್ನು ಧಿಕ್ಕರಿಸಿ (ಟಿ. ಕಪ್ಪುಕಲೆಯುಳ್ಳವನೂ, ತಾರೆಯನ್ನಪಹರಿಸಿ ಶಪಿತನಾಗಿ ತಿಂಗಳಿಡೀ ವರ್ಧಿಸುತ್ತ-ಕುಂದುತ್ತ ಕ್ಷಯಗ್ರಸ್ತನಾದವನೂ ಗ್ರಹಣಕಾಲದಲ್ಲಿ ಪೀಡಿತನಾಗುವವನೂ ಆದ ನಿಜಚಂದ್ರ ಮತ್ತು ಅವನಂತೆಯೆ ಗ್ರಹಣ ಕಾಲದಲ್ಲಿ ರಾಹುಗ್ರಸ್ತನಾಗುವ ನಿಜ ಸೂರ್ಯರಂತೆ ಜಾಡ್ಯಗಳಿಲ್ಲದೆ ಮತ್ತು ಪ್ರಕಾಶ ಹೀನರಾಗದೆ) ಒಳಹೊರಗಿನ ಕತ್ತಲೆಯನ್ನು ಪರಿಹರಿಸುತ್ತ ದೀರ್ಘಿಸಿ ಹೊಸರೀತಿ ಪಡೆದಿರುವ ಚಂದ್ರ-ಸೂರ್ಯ ಕಣ್ಣುಗಳನ್ನು ; ನುಣುಪಾದ ಹಣೆಯೆಂಬ ಹಲಗೆಯಲ್ಲಿ ತೊಳಗುವ ಪವಿತ್ರವಾದ ಊರ್ಧ್ವಪುಂಡ್ರದ ಬಿಳಿಕಿರಣಗಳ್ನು ಎದುರುಹಾಯಲಾರದೆ ಕೊಂಕಿ ಕವಿದ ಹಣೆ ಪಟ್ಟದ ನೀಲಮಣಿ ಬೆಳಗಿನ ಮೊಳಕೆಗಳಂತೆಸೆಯುವ ಸುಳಿಗೂದುಲುಗಳನ್ನು ; ಹದಿನಾಲ್ಕು ಲೋಕಗಳ ಒಡೆತನದ (ಗುರುತಾಗಿರುವ) ಬೆಳ್ಗೊಡೆಯನ್ನು ಹೋಲುವ ನಾಗೇಂದ್ರನ ಹೆಡೆಯ ನೆರಳಲ್ಲಿ ಶೋಭಿಸಿರುವ ರತ್ನಕಿರೀಟವನ್ನು ; ಪ್ರೇಮದಿಂದ ನೋಡುತ್ತಿರುವಲ್ಲಿ ನವನಿಧಿಗಳನ್ನು ಒಂದೇ ಬಾರಿಗೆ ಕಂಡ ಕಡುಬಡವನಂತೆಯೂ ವಸಂತ ಕಾಲದಲ್ಲಿ ಹೂದೋಟವನ್ನು ಹೊಕ್ಕ ಮರಿದುಂಬಿಗಳಂತೆಯೂ ಔತಣದಲ್ಲಿಕ್ಕಿದ ಪಂಚಭಕ್ಷ್ಯ ಪರಮಾನ್ನಗಳಿಗೆ ಎರಗುವ ಹಾರುವರ ಮನದಂತೆಯೂ ಬಿಡದೆ ಸುರಿಯುವ ಜಡಿಮಳೆಯನ್ನು ಸಮೀಪಿಸುವ ಚಾತಕಪಕ್ಷಿಗಳಂತೆಯೂ ಯಾವುದನ್ನು ಹಿಡಿಯಲಿ ಯಾವುದನ್ನು ಬಿಡಲಿ ಎಂಬ ತವಕದಿಂದ ಅವನ ಕಣ್ಣುಗಳು ಅಡಿಯ ಮೆಲ್ಪನ್ನು ತೊಡೆಯ ಬಲ್ಪನ್ನು ಉಡಿಯ

ಒಳ್ಪನ್ನು ಹೊಟ್ಟೆಯ ತೆಳುವನ್ನು ಎದೆಯ ಹರಹನ್ನು ದೇಹದ ಸೊಂಪನ್ನು ನಿರೀಕ್ಷಿಸುತ್ತ ಅಡಿಯಿಂದ ತೊಟ್ಟು ಮುಡಿಯವರೆಗೆ ಸಾಗಿ ಮತ್ತೆ ಆಯಾ ಅಂಗಗಳ ವೈಶಿಷ್ಟ್ಯ ಮನನದಿಂದ ಕಿರೀಟದಲ್ಲಿ ವಿಸ್ತರಿಸಿ ಹಣೆಪಟ್ಟದಲ್ಲಿ ಕವಿದು ಗುಂಗುರುಗಳಲ್ಲಿ ಸುಳಿದು ನೊಸಲಲ್ಲಿ ಮಿಸುಗಿ ಹುಬ್ಬುಗಳಲ್ಲಿ ಕೊಂಕಿ ಕಡೆಗಣ್ಣುಗಳಲ್ಲಿ ಹದಗೊಂಡು ಕಣ್ಣಲ್ಲಿ ತಂಪುಗೊಂಡು ಮೂಗಿನಲ್ಲಿ ಅರೆಮುಗಿದು ಗಲ್ಲದಲ್ಲಿ ತೊಳಗಿ ಕುಂಡಲದಲ್ಲಿ ಬೆಳಗಿ ಬಾಯ್ದೆರೆಯಲ್ಲಿ ಕೆಂಪಡರಿ ನಗೆಯಲ್ಲಿ ಮೊಳೆತು ಕೊರಳಲ್ಲಿ ಗೆರೆಗೊಂಡು ಹೆಗಲಲ್ಲಿ ಬೆಳೆದು ತೋಳಲ್ಲಿ ಕುಡಿವರಿದು ಎದೆಯಲ್ಲಿ ಪಸರಿಸಿ ಶ್ರೀಕಾರ (ಟಿ. ವಿಷ್ಣುವಿನ ಎದೆಯ ಮೇಲಿರುವ 'ಶ್ರೀ' ಆಕಾರದ ಗುರುತು) ದಲ್ಲಿ ಸಾಗರಗೊಂಡು ಹೊಟ್ಟೆಯ ಕಮಲದಲ್ಲಿ ಅರಳಿ ಹೊಕ್ಕುಳಲ್ಲಿ ಸುಳಿದು ಹೊಟ್ಟೆಯಲ್ಲಿ ತೆಳುಗೊಂಡು ನಡುವಿನಲ್ಲಿ ಸಣ್ಣನೆ ತೊಡೆಯಲ್ಲಿ ದೊಡ್ಡದಾಗಿ ಉಡೆಯಲ್ಲಿ ಒಳ್ಪುಹೊಂದಿ ಕಿರುದೊಡೆಯಲ್ಲಿ ದುಂಡಾಗಿ ಅಡಿಯಲ್ಲಿ ಮೆದುಗೊಂಡು ಆಯಾ ಅಂಗಗಳಂತೆಯೇ ಆಗಲು, ಬಗೆಯಲ್ಲುಂಟಾದ ಭಕ್ತಿರಸ ಪರಿಪಾಕದ ಅತಿರೇಕದಿಂದ ಅಮೃತವುಂಡಂತೆಯೂ ಸೊಕ್ಕೇರಿದಂತೆಯೂ ಮರವಟ್ಟಂತೆಯೂ ಮೂರ್ಛೆಹೋದಂತೆಯೂ ಬೆರಗುಗೊಂಡಂತೆಯೂ ಚಕಿತನಾದಂತೆಯೂ ಬಹಳ ಹೊತ್ತು ದಿವ್ಯಮಂಗಳವಾದ ವಿಗ್ರಹದ ಗುಣಗಳನ್ನು ಗಣನೆಗೆ ತಂದು ಮತ್ತೆ ದಿವ್ಯವೆನಿಸುವ ಗುಣಗಳನ್ನು ಅಂತರಂಗದಲ್ಲಿ ಎಣಿಸುತ್ತಿರುವಲ್ಲಿ ಅವು ಒಳಗೆ ಅಡಗಲಾರದೆ ಹೊರಹೊಮ್ಮಿ ಕೋಡಿವರಿಯುವಂತೆ ಸ್ತುತಿಗೆಯ್ದನು. ಅದು ಹೇಗೆಂದರೆ- (ಕಂದ) ಲಕ್ಷ್ಮೀಪತಿಯೆ, ಸಕಲ ಜಗತ್ತುಗಳ ಜನನ ಪಾಲನ ಪ್ರಳಯ ಲೀಲೆಯುಳ್ಳವನೆ ಮಂಗಳರಂಗಧಾಮನೆ, ಪಾವನ ಗುಣಗಳ ನಿಧಿಯೆ, ನೀನು ಭಕ್ತನ ಭಾವನೆಯಲ್ಲಿ ಬಂದು ನೆಲಸಿ ಸಂತಸಗೊಂಡು ನಲಿ. (೧) ಓದುಗಳಲ್ಲಿ ವೇದವೇ ಹಿಂದಾದರೂ (?) ರಂಗಧಾಮ ! ನಾನು ಸಕಲ ಜಗತ್ತುಗಳ ಸೃಷ್ಟಿ ಸ್ಥಿತಿ ಲಯಗಳಿಗೆ ಕಾರಣನಾದ ಅಭಿನ್ನ ಮೂಲವಸ್ತು. ನಿನ್ನ ಗುಣ ವಿಭವಗಳು ಸತ್ಯವಾದವುಗಳು (೨). (ವೇದಾಭ್ಯಾಸ ವೈದಿಕ ಕರ್ಮಗಳಿಗಿಂತ ಆತನ ಗುಣ-ವಿಭವಗಳ ಪೂಜೆಯೇ ಶ್ರೇಷ್ಠವೆಂದು ಭಾವ) ಅತಿ ಪ್ರೇಮದಿಂದ ತ್ರಿಲೋಕವನ್ನು ಉದರಸ್ಥಾನದಲ್ಲಿ ಹೊತ್ತು ಕಾಪಾಡುವ ಹೊಸ ಬಗೆಯ ಸ್ವಾಮಿಯೆ ! ನಮ್ಮನ್ನು ಕಾಪಾಡದೆ ಉಪೇಕ್ಷಿಸುವೆಯೇಕೆ ? ಪ್ರಿಯರ ಪ್ರಿಯನೆ ! ನಿನ್ನ ಚೆನ್ನಡಿಯ ಒಲುಮೆಯನ್ನು ಕೊಡು. (೩) ನೀನು ದಯೆಯಿಂದ ನೋಡದೆ ಹೋದರೆ ಹುಟ್ಟಿದ ಈ ಜಗತ್ತು ಹೇಗೆ ಏಳಿಗೆ ಹೊಂದೀತು ? ಅದರಿಂದ ಅತಿಪ್ರೇಮಪೂರ್ವಕ ನೋಡಿ ನಮ್ಮ ಕಾಪಿಟ್ಟು (ನಿನ್ನ) ಒಡೆತನದ ಹೆಗ್ಗಳಿಕೆಯನ್ನು ಮೆರೆಯಬೇಕು. (೪) ಪಶ್ಚಿಮ ರಂಗಧಾಮ ! ಜ್ಞಾನಿಗಳಿಂದ ಸ್ತುತ್ಯನಾದ ಪವಿತ್ರ ವಿಷ್ಣು ಪರಮಾತ್ಮ ! ಎಲ್ಲ ಅಚ್ಚರಿಗಳಿಗೆ ನೆಲೆಯಾಗಿರುವವನೇ ! ಶ್ರುತಿಯ ನಿಶ್ಚಯವನ್ನರಿಯಲು ನಿನ್ನ ಚರಣಗಳೇ ಶರಣು ! (೫). (ಟಿ. ನಿಗಮದ ನಿಶ್ಚಯ ವೇದಾರ್ಥಗಳ ನಿಶ್ಚಿತವಾದ ಅರ್ಥ)

ಎಂದು ಸ್ತುತಿಸಿ ಆಗ ಅರ್ಚಕರು ತಂದಿತ್ತ ಗಂಧಮಾಲೆಗಳನ್ನು ಧರಿಸಿ, ತಲೆಯಲ್ಲಿಟ್ಟ ಶಠಗೋಪವೆಂಬ ರತ್ನದ ಪಾದುಕೆಗಳನ್ನು ಭಕ್ತಿಯಿಂದ ಇಟ್ಟು, ತೀರ್ಥಪ್ರಸಾದಗಳನ್ನು ಸ್ವೀಕರಿಸಿ ಕೃತಾರ್ಥತೆ ಹೊಂದಿ ಪ್ರಣಾಮಗೈದು ಅಲ್ಲಿಂದ ಹೊರಬರುವಷ್ಟರಲ್ಲಿ-ಹರಿಕಾರನೊಬ್ಬನು

ಬಂದು(ರಾಜನೃಪನನ್ನು) ಸಮೀಪಿಸಿ ಕಿವಿಯಲ್ಲಿ ಹೀಗೆಂದು ಆ ತೆಲುಗರಾಯನ ದುರಾಲೋಚನೆಯನ್ನು ಸೂಚಿಸಿದನು. ಅದನ್ನು ಕೇಳಿ ತಮ್ಮನನ್ನು ಕರೆದು 'ನೀನೂ ಸೈನಿಕರನ್ನು ಒಗ್ಗೂಡಿಸಿ ಎಚ್ಚರಿಕೆಯಿಂದ ನಡೆಯಬೇಕೆಂದು' ಆಜ್ಞಾಪಿಸಿ ಕೊಂಬುಕಹಳೆಗಳ ಕೋಲಾಹಲಗಳಿಂದೊಡಗೂಡಿ ಪಟ್ಟಣ ಬಿಟ್ಟು ಹೊರಕ್ಕೆ ಹೋಗುತ್ತಿರುವಾಗ ಹೊರವಲಯದ ಬಯಲಲ್ಲಿ (ತಿರುಮಲೆರಾಜ ಮತ್ತು ಅವನ ಮಿತ್ರಕೂಟದವರು) ಸೈನ್ಯ ಸಮೇತ ಎಡಬಲಗಳಲ್ಲಿದ್ದೂ ಅವರನ್ನು ಲೆಕ್ಕಿಸದೆ ಹೊಳೆಯನ್ನು ದಾಟಿ ದಾರಿಹಿಡಿದು ಮೈಸೂರು ತಲುಪಿದನು.

ಅತ್ತ ತಿರುಮಲೆರಾಜನು ರಾಜನೃಪನು ಮೀರಿಹೋದುದನ್ನು ಕೇಳಿ - 'ಕಾರ್ಯ ಕೈಮಿರಿತು. ಬಲಶಾಲಿಯಲ್ಲಿ ವೈರ ಬೆಳೆಯಿತು. ಇನ್ನು ಉಪೇಕ್ಷಿಸತಕ್ಕುದಲ್ಲ. ಹೇಗಾದರೂ ಸಾಹಸಗೈದು ಹಣ-ಪ್ರಾಣಗಳನ್ನು ವೆಚ್ಚಗೊಳಿಸಿ ಅವನನ್ನು ದಾರಿಗಾಣಿಸುತ್ತೇನೆ ಎಂದು ನೆರೆದ ಎಲ್ಲ ಪ್ರಭುಗಳನ್ನು ಕರೆಯಿಸಿ 'ಮೈಸೂರಿಗೆ ಮುತ್ತಿಗೆಯಿಡಲು ಹೋಗೋಣ' ಎಂದನು. ಅವರು ವಿನಯದಿಂದ ಕೈಮುಗಿದು 'ದೇವರಾಜ್ಞೆಯನ್ನು ನಾವು ಶಿರಸಾವಹಿಸಿ ನಡೆಯುವವರಲ್ಲದೆ ಪ್ರತಿಹೇಳತಕ್ಕವರಲ್ಲ. ಮುಂಚೆ ಒಮ್ಮೆ ಹಿರಿಯರಸನಾದ ರಾಮರಾಯನು ನಮ್ಮನ್ನೆಲ್ಲ ಕೂಡಿಕೊಂಡು ಆ ಮೈಸೂರನ್ನು ಮುತ್ತಿ ಮೂರು ತಿಂಗಳುಗಳಾದಾಗ, ಅಂದಂದಿಗೆ ಮೈಸೂರ ಚಾಮರಾಜನು ನಡೆಯಿಸುವ ಮರೆಯುದ್ಧ-ಉಪಟಳಗಳಿಂದಾಗಿ ಪಾಳೆಯಕ್ಕೆ ಬರುವ ಯಾವ ವಸ್ತುಗಳೂ ದೊರೆಯದೆ ಒಂದೆರಡು ದಿನ ಉಪವಾಸವಿದ್ದು ಹಿಂದೆಗೆದು ಹೋಗುವುದಕ್ಕೂ ದಾರಿಯಿಲ್ಲದೆ ಒಂದು ದಿನ ನವರಾತ್ರಿಯ ಕತ್ತಲಲ್ಲಿ ಓಡಿಬರುವಾಗ-ಊರಜನಕ್ಕೆ ಗುಟ್ಟುತಿಳಿದು ದಾರಿಗೆ ಅಡ್ಡಗಟ್ಟಿ ಕೆಲವು ಆನೆಕುದುರೆಗಳನ್ನು ಕಸಿದುಕೊಂಡು, ಕೆಲಕೆಲವರ ಆಯುಧಗಳನ್ನು ಕಿತ್ತುಕೊಂಡು ಪ್ರತಿಭಟಿಸಿದವರ ಮೂಗು ಕತ್ತರಿಸಿ ಕಳುಹಿಸಿದರು. ಅದಲ್ಲದೆ ಅವರ ಕಾಟದಿಂದ ಪಟ್ಟಣದಲ್ಲಿಯೂ ಕ್ಷೇಮವಿಲ್ಲದೆ ಬನ್ನಬಟ್ಟು ಪುನಃ ಮೈಸೂರಿನವರೊಡನೆ ಗೆಳೆತನ ಬೆಳೆಯಿಸುವುದಕ್ಕೆ ಕಾಲುವೆಯ ಕೊತ್ತಾಗಾಲವನ್ನು ಕೊಟ್ಟರು. ಆದುದರಿಂದ ಈಗಲೂ ಮೈಸೂರನ್ನು ಮುತ್ತುವುದು ಮೋಸವೇ. ಮೊದಲು ಕೆಸರೆಯನ್ನು ಮುತ್ತಿ ನೋಡೋಣ' ಎಂದರು. ಅದಕ್ಕೊಪ್ಪಿ ಆಗಳೆ ನಿಸ್ಸಾಳಗಳನ್ನು ಹೊಯ್ಯಿಸಿ ಸಂದಣಿನೆ ಮುಂದುವರಿಯುವ ಕುದುರೆಗಳ ಪದಧೂಳಿ ಅಮರಾವತಿಗೂ ದೇವಲೋಕಕ್ಕೂ? ಶಂಖ, ಚಿಕ್ಕ-ದೊಡ್ಡ ನಗಾರಿ, ಗೋಮುಖ ಮೊದಲಾದ ವಾದ್ಯಗಳ ಘೋಷವು ಎಂಟೂ ದಿಕ್ಪಾಲಕರ ಪಟ್ಟಣಗಳಿಗೂ ಮುಟ್ಟುತ್ತಿರಲು ಕೆಸರೆಗೆ ನಡೆದು ಸುತ್ತುವರಿದು ಬೀಡುಬಿಟ್ಟು ಅಡ್ಡಬೇಲಿ ಮರೆಯ ನೆಲೆಗಳನ್ನು ರಚಿಸುತ್ತಿದ್ದರು.

ಕೆಸರೆಯ ಕಾಳಗ

ಆ ಊರಲ್ಲಿದ್ದ ಬೆಟ್ಟಚಾಮರಾಜ ಚೆನ್ನರಾಜರು. ಕೋಟೆ ಚಿಕ್ಕದೂ ಅಗಳು-ಗೋಡೆಗಳು ಕಿರಿಯವೂ ಆಗಿದ್ದರೂ ಆಳವಾದ (ತಮ್ಮ) ಸಾಮರ್ಥ್ಯವನ್ನೇ ಪ್ರತಿ-ಅಗಳನ್ನಾಗಿ ದೀರ್ಘವಾಗಿ ವಿಸ್ತರಿಸಿ ಶೌರ್ಯವನ್ನೇ ಪ್ರತಿ-ಕೋಟೆಯನ್ನಾಗಿ ಬಿತ್ತರವಾದ

ಉಪಾಯಗಾರಿಕೆಯನ್ನೇ ಪ್ರತಿ-ಗೋಡೆಯನ್ನಾಗಿ ಉತುಂಗ ಶಕ್ತಿಯನ್ನೇ ಕೊತ್ತಳವನ್ನಾಗಿ ಸಾಹಸವನ್ನೇ ತೋಪುಗಳನ್ನಾಗಿ ಮುಂಚೂಣಿಯ ಹೋರಾಟವನ್ನೆ ಮುಗಿಲಟ್ಟಣೆಗಳನ್ನಾಗಿ ಮಾಡಿ ಕಾದುತ್ತ ಕತ್ತಲಲ್ಲಿ ಹೊರಬಿದ್ದು (ತಿರುಮಲೆರಾಜನ) ಪಾಳೆಯವನ್ನು ತೊತ್ತಳದುಳಿದು ಹೊಯ್ದು ಆನೆಕುದುರೆಗಳನ್ನು ಕೊಂಡೊಯ್ದು ಕೋಟೆಯ ಒಳಸೇರಲು,

ಮರುದಿನ ಮುಂಜಾನೆ ಅವರೆಲ್ಲರೂ ಕಗ್ಗೊಲೆಗೆಯ್ಯಲೆಂದು ಕವಿದು ಒತ್ತರಿಸಿ ಮೇಲೆ ಸುರಿಯುವ ಗುಂಡಿನ ಮಳೆಗೆ ಹಲಗೆಯನ್ನು ಮರೆಮಾಡಿಕೊಂಡು ಕೋಟೆಗೆ ಏಣಿಗಳನ್ನಿಟ್ಟು, ಸ್ವರ್ಗವನ್ನೇರುವ ಅಲ್ಪಪುಣ್ಯರಂತೆ ಏರುತ್ತಿರಲು-

ಊರವರು ಕವೆಗೋಲುಗಳಿಂದ ನೂಕಿಯೂ ಕೈಯಿಟಿಯಿಂದ ತಿವಿದೂ ಕಾಯ್ದ ಎಣ್ಣೆಗಳನ್ನು ಉಗ್ಗಿಯೂ ಹುರಿದ ಮಳಲನ್ನು ಸುರಿದೂ ಮದ್ದಿನ ಉರಿಯಿಂದ ಚುಚ್ಚಿಯೂ ಕವಣೆಗಲ್ಲುಗಳನ್ನು ಬೀರಿಯೂ ಬಾಣಗಳನ್ನು ಎಸೆದೂ, ಮತ್ತೂ ಮೀರಿ ಏರಿಬರುವವರನ್ನು ಕತ್ತಿಗಳಿಂದ ಕಡಿಕಡಿದು ಕೆಡುಹುತ್ತ ಬಿಡದೆ ಪುನಃಪುನಃ ದೀಪದ ಕುಡಿಗೆ ಎರಗುವ ಪತಂಗಹುಳುಗಳಂತೆ ಬೀಳುವವರನ್ನು ಕಂಡು ಹಿಂದೆಗೆಯದೆ ಚೆಲ್ಲುವರಿದ ಹೆಣಗಳನ್ನೇ ಮೆಟ್ಟಲು ಮಾಡಿ ಏರುತ್ತ ಮಿತಿ ಮೀರುತ್ತಿದ್ದಾರೆಂಬ ವೃತ್ತಾಂತವನ್ನು ದೂತರಿಂದ ಕೇಳಿ ತಮ್ಮ ಮೂಲಬಲವನ್ನೊಡಗೊಂಡು ರಾಜನೃಪನೂ ದೇವರಾಜನೂ ಕಿಚ್ಚು-ಗಾಳಿಗಳು ಒಂದಾಗಿ ಒಣಗಿದ ಕಾಡನ್ನು ಪ್ರವೇಶಿಸುವಂತೆ, ಅವರ ದಕ್ಷಿಣ ಪಶ್ಚಿಮ ಪಾಳೆಯ ಹೊಕ್ಕು ದಾರಿಯಲ್ಲಿ ಎದುರಿಸಿದವರನ್ನು ಹೊಯ್ದು, ಕಾಲಿಗೆರಗಿದವರನ್ನೂ ಕಾಯಬೇಕೆಂದವರನ್ನು ಹುಲ್ಲುಕಟ್ಟಿದವರನ್ನೂ ಹುತ್ತೇರಿನಿಂತವರನ್ನೂ ನೀರು ಹೊಕ್ಕವರನ್ನೂ ನಿನ್ನವರೆಂದವರನ್ನೂ ಮರವೇರಿದವರನ್ನೂ ಮೊರೆಹೊಕ್ಕವರನ್ನೂ (ಟಿ. ಹುಲ್ಲು ಕಚ್ಚುವುದು ಹುತ್ತೇರುವುದು, ನೀರಲ್ಲಿ ನಿಲ್ಲುವುದು, ಮರವೇರುವುದು ಇವು ಪ್ರಾಚೀನ ಕಾಲದಲ್ಲಿ ಯುದ್ಧಮಾಡಲಾರದೆ ಪ್ರಾಣ ಉಳಿಸಿಕೊಳ್ಳುವವರು ಅನುಸರಿಸಬೇಕಾದ ತುಚ್ಛವಿಧಾನಗಳಾಗಿದ್ದವು) ಕೊಲ್ಲದೆ ಮನ್ನಿಸಿ ಮಿಕ್ಕವರನ್ನು ಒಕ್ಕಲಿಕ್ಕಿ ಅವರ ಸರ್ವಸ್ವವನ್ನು ಸೂರೆಗೊಂಡು ಬರುವಷ್ಟರಲ್ಲಿ-

ಬೆಟ್ಟದ ಚಾಮರಾಜ, ಚೆನ್ನರಾಜರೂ ಲಗ್ಗೆಯೇರಿದ ಎಲ್ಲರನ್ನೂ ಸ್ವರ್ಗಕ್ಕೇರಿಸಿ ಚಿಕ್ಕದಳವೊಂದನ್ನು ಊರಲ್ಲಿಟ್ಟು ಉಳಿದ ಸೈನ್ಯದೊಡನೆ ಹೊರಬಿದ್ದು ತಮ್ಮತಮ್ಮ ಪಾಳಯದಲ್ಲಿ ಕೋಲಾಹಲ ಉಂಟುಮಾಡಿದುದನ್ನು ಕೇಳಿ ಕೆಟ್ಟೋಡುತ್ತಿರುವ ದಕ್ಷಿಣ-ಪಶ್ಚಿಮದವರನ್ನು ಬಿಟ್ಟು ಪೂರ್ವಕ್ಕೆ ನಡೆದು ಅಡ್ಡಗಟ್ಟಿ ತರಿದು ಇರಿದು ತಲ್ಲಣಗೊಳಿಸಿ ಧೃತಿಗೆಡಿಸಿ (ಶರಣುಬಂದವರಿಗೆ) ದಯದೋರಿ, ತಿರುಗಿ ಉತ್ತರಕ್ಕೆ ಬರುತ್ತ ಅಣ್ಣನನ್ನು ಕಂಡು ಕಾಲಿಗೆರಗಿ, ಬೇಗನೆ ನಾಲ್ವರೂ ಒಡಹುಟ್ಟಿದವರು ಶ್ರೀರಂಗಪಟ್ಟಣಕ್ಕೆ ಓಡಿ ಹೋಗುತ್ತಿರುವ ತಿರುಮಲೆ ರಾಜನನ್ನು ಬೆನ್ನಟ್ಟಿ ಬರಲು, ಅವನೂ ಸಾವಿಗೆ ಹೆದರಿ, ಬೆಳ್ಗೊಡೆಯನ್ನು ಬಿಟ್ಟು, ಸೀಗುರಿಗಳನ್ನು ನೀಗಿ ಚಾಮರವನ್ನು ಕಳೆದುಕೊಂಡು ಧ್ವಜವನ್ನು ಹಳಿದು ವಾದ್ಯಗಳನ್ನು ತ್ಯಜಿಸಿ ಕುದುರೆಯಿಂದಿಳಿದು ಆಭರಣಗಳನ್ನು ತೊರೆದು ಒಳ್ಳೆಯ ಬಟ್ಟೆಗಳನ್ನು ಬಿಟ್ಟು ವೇಷವನ್ನು ಮರೆಮಾಚಿ ಅಂಜಿ (ಓಡಿ) ಹೋದನು. (ಟಿ. ಬೆಳ್ಗೊಡೆ ಮುಂತಾದುವೆಲ್ಲ ಚಕ್ರವರ್ತಿತ್ವ

ಸೂಚಕವಾದವುಗಳು) ಅವನ ಅರಸುತನದ ಕುರುಹುಗಳನ್ನೆಲ್ಲ ತೆಗೆದುಕೊಂಡು ಪೌರುಷ ಹೆಚ್ಚಿದವರಾಗಿ ಮೈಸೂರು ಸೇರಿದರು.

ಅತ್ತ ಆ ತಿರುಮಲೆ ರಾಜನೊಬ್ಬನೇ ಶ್ರೀರಂಗಪಟ್ಟಣಕ್ಕೆ ಬಂದು ಒಂದೆರಡು ದಿನಗಳಲ್ಲಿ ಬಂದು ಸೇರಿದ ಅಳಿದುಳಿದವರನ್ನು ಕರೆಯಿಸಿ-ಕಾಳಗದಲ್ಲಿ ನಮ್ಮ ದಳದಲ್ಲುಳಿದವರಾರು ? ಗಾಯಗೊಂಡವರಾರು ? ಸೆರೆಸಿಕ್ಕವರಾರು ? ಎಂದು ವಿಚಾರಿಸಿದನು ಅವರು ಬಿನ್ನವಿಸಿದರು:-

ಜೀಯ ! ಬಿನ್ನಹ. ಈ ಒಳನಾಡ ಪ್ರಭುಗಳೆಲ್ಲರೂ ಹಲವು ಬಾರಿ ಮೈಸೂರವರಿಂದ ನೊಂದು ಅವರು ಮಾಡುವ ಯುದ್ಧಚಾತುರ್ಯವನ್ನೂ ಅವರು ಬರುವ ದಾರಿಗಳನ್ನೂ ತಿಳಿದಿರುವುದರಿಂದ, ಅವರ ಮೂವಂಕದ ಕೊಂಬು ಕಹಳೆಯ ದನಿ ಕೇಳುವುದೇ ತಡ, ಸಿಂಹದ ಗರ್ಜನೆ ಕೇಳಿದ ಆನೆ ಹಿಂಡಿನಂತೆಯೂ ತಳವಾರರ ಎದುರುಗೋಲಿನ ಸಪ್ಪಳ ಕೇಳಿದ ಮರೆಗಳ್ಳರಂತೆಯೂ ಮಾಂತ್ರಿಕರ ಮಂತ್ರಾಕ್ಷರಗಳನ್ನು ಕೇಳಿದ ಹೇಡಿ ಪಿಶಾಚರಂತೆಯೂ (ವಿಷ್ಣುವಿನ) ಪಾಂಚಜನ್ಯ ಮೊಳಗು ಕೇಳಿದ ರಾಕ್ಷಸರಂತೆಯೂ ನಾರಾಯಣನ ನಾಮೋಚ್ಚಾರ ಕೇಳಿದ ಪಾಪಗಳಂತೆಯೂ ಬೆಚ್ಚಿ ಬೆದರಿ ಸೊಕ್ಕಿಳಿದು ಉಮ್ಮಳಗೊಂಡು ಹೆದರಿ ದಾರಿ ದುಂಬಿ ಹಿಂಜರಿಯುತ್ತ, ಇಬ್ಬದಿಗಳಲ್ಲಿ ನಿಂತು ನಿಂದಿಸಿ ತುಚ್ಛೀಕರಿಸುವವರನ್ನು (ಕೂಡ) ನೋಡದೆ ಒಂದೇ ಓಟದಲ್ಲಿ, ನಿಂತಲ್ಲಿ ನಿಲ್ಲದೆ ತಮ್ಮ ಮನೆ ಸೇರಿ ಕೀರ್ತಿಯನ್ನು ದೂರೀಕರಿಸಿ ಪ್ರಾಣವೇ ಹೆಚ್ಚೆಂದು ಬಗೆದು ಹೊಸದೊಂದು ಬಸಿರಿನಲ್ಲಿ ಹುಟ್ಟಿಬಂದಂತೆ ಸಂತಸದಿಂದ ಕೂದಲು ಕೊಂಕದೆ ಇದ್ದಾರೆ. ಮೊರಸು ಸೈನ್ಯವು ಹೋರಾಟದ ಕೆಲಸದಲ್ಲಿ ಮುಂದುಗಾಣದೆ ಇರಲು ಅವರು (ಮೈಸೂರವರು) ಮೋಸಗೊಳಿಸಿ ಮುತ್ತಿ ಮುಖಭಂಗಗೊಳಿಸಿ ಹೊಯ್ದು ಮೂದಲಿಸಿ ಮೂಗು ಕೊಯ್ದು ಮೊರೆಯಿಡುವಂತೆ ಮಾಡಿ ಬೆನ್ನಟ್ಟಲು, ಕೆಟ್ಟು ದಳಮುರಿದು ಓಡಿದರು. ಮಲೆನಾಡಿನವರು ಎದುರಿಸಿ ನಿಲ್ಲುವಷ್ಟರಲ್ಲಿಯೇ ಅವರು ಸುತ್ತಿ ಮುತ್ತಿ ಬಿಗಿಗೊಳಿಸಿ ಅತ್ತಿತ್ತ ಇಷ್ಟೂ ಮಿಸುಕಗೊಡದೆ ಕೈಯ ಆಯುಧಗಳನ್ನು ಕಸಿದು ಆನೆಕುದುರೆಗಳನ್ನು ವಶಪಡಿಸಿಕೊಂಡು ಅವರಲ್ಲಿ ಸಮರ್ಥರಾಜರನ್ನು ಕೈಸೆರೆಗೊಳ್ಳಲು ಉಳಿದ ಕಿರುದೊರೆಗಳು ಕುಣಿಗೆ ಬಿದ್ದ ದೊಡ್ಡ ಆನೆಗಳ ಬಳಿಯ ಮರಿಗಳಂತೆ ಚೀರುತ್ತ ಅತಿಬೇಗ ಮಲೆನಾಡನ್ನು ಸೇರಿ, ಅತ್ತಕಡೆಗೆ ಮೋಸದಲ್ಲಾದರೂ ಇನ್ನೊಮ್ಮೆಯೂ ಬರಲಾರೆವೆಂದು ಪ್ರತಿಜ್ಞೆ ಮಾಡಿ ಓಡಿ ಹೋದರು. ಬೇಡಪಡೆಯು ಮುಂಚೆ ಅಡವಿಗಳಲ್ಲಿ ಗಿಡಮರಗಳ ಮರೆಯಲ್ಲಿ ಹೊಂಚಿ ದಾರಿಹೋಕರನ್ನು ಗುಂಡಿಟ್ಟು, ಬಾಣದಿಂದ ಹೊಡೆದು ಕೆಡಹಿ ಬಟ್ಟೆಗಳನ್ನು ಸುಲಿದ ಪಾಪದಿಂದ ಕೆಸರೆಯ ಕೆರೆಯ ಕೋಡೀಹಳ್ಳದಲ್ಲಿ ಓಡಿಬರುತ್ತ ಎಡವಿ ಕಾಲುಳುಕಿ ಮೊಳಕಾಲ್ಮುರಿದು ತೊಡೆಯುಡಿದು ನಡು ನೆಗ್ಗಿ ಎದೆ ಬಿರಿದು ತೋಳು ಹೋಗಿ ಕೊರಳು ಕುಗ್ಗಿ ತಲೆಯೊಡೆದು ಹರಹಿಹಾಸಿದರು ಹಳ್ಳದ ತಗ್ಗುಗಳು ಸಮತಲವಾಗಲು, ಹಿಂದೆ ಬರುವ ಆನೆಕುದುರೆಗಳು ತುಳಿದುದರಿಂದ ಗಿಜಿಗಿಜಿಯಾದವರ ತಲೆಮಿದುಳು, ಹೊಟ್ಟೆಯ ಕರುಳ ಕೆಸರಲ್ಲಿ ಸಿಲುಕಿ, ಮೊನಚಾದ ಎಲುವಿನ ಮುಳ್ಳು ಪದತಲದಲ್ಲಿ ನಟ್ಟು ಆರು ಪಾರಾಗಿ ತಡವರಿಸುತ್ತಿರಲು ಹಿಡಿಹಿಡಿದು ತುಟಿಸಹಿತ ಮೂಗು ಕೊಯ್ದು ಹಲ್ಲುದೋರುವಂತೆ ಮಾಡಿ ಕಳುಹಿಸಲು,

ಮೂಗು ಹೋಗಿ ಪ್ರಾಣವುಳಿದುದಕ್ಕೆ ಹಿಗ್ಗಿ ತಲೆಗೆ ಬಂದು ಎವೆ (ಕೂದಲು)ಯಲ್ಲಿ (ಕಳೆದು) ಹೋದಂತೆ ಸಂತಸದಿಂದ ಬೆಂತನಕಲ್ಲು ಮುಂತಾದ ತಮ್ಮ ತಮ್ಮ ನಾಡು ಸೇರಿದರು. ಮತ್ತಿನ ರಾವುತ ಕಾಲಾಳುಗಳು ಚದುರದೆ ಹೊರಗೆ ನಿಂತು ಕಾಳಗದಲ್ಲಿ ಹೊಲಬುಗೆಟ್ಟುದನ್ನು ಕಂಡು 'ಓಡಿಹೋದವರ ಹೆಂಡಂದಿರ ಓಲೆಯುಳಿದವು' ಎಂಬ ನಾಣ್ಣುಡಿಗೆ ಪಕ್ಕಾಗಿ, ಕುದುರೆಗಳನ್ನೋಡಿಸುವುದರಿಂದೆದ್ದ ಧೂಳನ್ನು ಬಾರಕೋಲಿನ ಹೊಡೆತದಿಂದೊಡೆದ ಕುದುರೆಯ ತೊಡೆಯ ನೆತ್ತರು ಪ್ರವಾಹದಿಂದಡಗಿಸುತ್ತ, ಬೆನ್ನಟ್ಟಿ ಬರುವವರನ್ನು ತಿರುತಿರುಗಿ ನೋಡುತ್ತ ಮತ್ತೆ ಹೆಜ್ಜೆಹೆಜ್ಜೆಗೆ ಹಿಮ್ಮಡದಿಂದ ಪಕ್ಕಕ್ಕೆ ಒತ್ತುತ್ತ ಕತ್ತಿಯ ಹಿಡಿಯಿಂದ ನೆತ್ತಿಯನ್ನು ತಿವಿಯುತ್ತ ಮುಂದಿರುವ ಹಳ್ಳಕೊಳ್ಳಗಳನ್ನು ತಗ್ಗುದಿನ್ನೆಗಳನ್ನು ಕಲ್ಲು ಮುಳ್ಳುಗಳನ್ನು ಬೇಲಿಬೆಳ್ಳಾರಗಳನ್ನು ಅರಿಯದೆ, ಬೆಂಬತ್ತಿ ಹೊಲಬುಗೆಟ್ಟ ಸ್ಥಿತಿಯಲ್ಲಿ, ನೆಲ ಬಾಯ್ದೆರೆಯಬಾರದೆ ? ಅದೃಶ್ಯಾಂಜನವು ಅನುಕೂಲಿಸದೆ? ರೆಕ್ಕೆಗಳು ಮೂಡವೆ ? ನಮ್ಮೂರು ಇದಿರುಬಾರದೆ ? ದೇವತೆಗಳೂ ನೆರವಾಗರೆ ? ಇವರಿಗಾದರೂ (ಮೈಸೂರವರಿಗಾದರೂ) ದಯೆಬಾರದೆ ? ಎಂದು ಚಿಂತಿಸುತ್ತ, ತಂದೆಯಾಗಲಿ ಮಗನಾಗಲಿ ಒಡಹುಟ್ಟಿದವನಾಗಲಿ ಒಡನಾಡಿಯಾಗಲಿ ಮತ್ತೆ ತನ್ನೊಡೆಯನಾಗಲಿ ! ಬಿದ್ದವನನ್ನು ಎತ್ತದೆ ಹಿಂತಿರುಗಿ ನೋಡದೆ ಓಡಿಸಲು ಬಸವಳಿದು ಮುಗ್ಗಿ ಮೊಳಕಾಲೂರಿ ಮುಗ್ಗರಿಸುವ ಕುದುರೆಗಳನ್ನು ಕಡಿವಾಣ ಹಿಡಿದೆಳೆದು ಎತ್ತುತ್ತ. 'ಇತ್ತಿಂದ ಬಂದೆವು, ಇತ್ತ ಹೋಗುವೆವು, ಇಲ್ಲಿಗಿದು ದಾರಿ' ಎಂಬ ಪರಿವೆಯಿಲ್ಲದೆ ಕುದುರೆಯ ಪ್ರಾಣಹೋಗುವವರೆಗೆ ದಿಕ್ಕೆಟ್ಟು ಓಡಿದರು. ಮೂಲಬಲವು ಮುರಿದ ರೀತಿ ದೇವರ ಚಿತ್ತಕ್ಕೆ ತಿಳಿದಿರುವುದಲ್ಲವೇ ? ನಾವು ಬಿನ್ನವಿಸುವುದರಲ್ಲೇನಿದೆ ? ಎನ್ನಲು-

(ತಿರುಮಲೆ ರಾಜನು) ಕೇಳಿ ಮನದಲ್ಲಿ-ಅಕಟಕಟಾ ಈ ಕೂಟದ ದಳಗಳು ಎಷ್ಟಿದ್ದರೂ ಉಳಿಗಾಲವಿಲ್ಲ. ಈ ದಳವಾಯಿ ಚೆನ್ನಮನಾಯಕನೂ ಈ ಪ್ರಧಾನಿ ರಾಮಾನಂಜಯ್ಯನೂ ನನ್ನ ಎಡ-ಬಲಗಳಲ್ಲಿದ್ದೂ ನನ್ನ ಮೇಲೆರಗಿದ ಯುದ್ಧಭರಕ್ಕೆ ಹೋರಾಡುವವರಂತೆ ಮುಂದಕ್ಕೆ ನಡೆದು ಮುಖ ತಪ್ಪಿಸಿದರು. ನನ್ನನ್ನೊಪ್ಪಿಸಿ ತಪ್ಪುದಾರಿ ಹಿಡಿದು(ತಾವು ಮಾತ್ರ) ಒಪ್ಪವಾಗಿ ನಡೆದರು. ನಾನು ಈವರೆಗೆ ಇವರನ್ನು ಮನ್ನಣೆಯಿಂದ ಪೋಷಿಸಿದ್ದು ಅರಣ್ಯರೋಧನ ದಂತೆಯೂ ಕಲ್ಲುಹಾಸಿನ ಮೇಲೆ ಕಡಲೆ ಬಿತ್ತಿದಂತೆಯೂ ಕುರುಡನ ಜತೆಗೆ ಆಟವಾಡಿ ದಂತೆಯೂ ಕಿವುಡನ ಮುಂದೆ ಹಾಡಿದಂತೆಯೂ ಮಳಲನ್ನು ಹಿಂಡಿದಂತೆಯೂ ಹೊಟ್ಟನ್ನು ಜಗಿದಂತೆಯೂ ಹತ್ತಿಯನ್ನು ನುಂಗಿದಂತೆಯೂ ಕೊಡವನ್ನು ಮಗುಚಿ ನೀರೆರೆದಂತೆಯೂ ಆಯಿತು. ಇವರನ್ನು ನೆಚ್ಚಿ ಮೈಸೂರವರೊಡನೆ ಸೆಣಸಿದೆನು. ಅರಿತರಿತೂ ಅರಿಯದವ ನಾದೆನು, ಕೊಡೆಯನ್ನು ಮರೆಗೊಂಡು ಸಿಡಿಲಿಗೆದುರಾದೆನು. ನಾಯಬಾಲ ಹಿಡಿದು ಗಂಗೆಯನ್ನು ದಾಟಲೆಳಸಿದೆನು. ಹಳೆಯ ಮೊರಗಳ ರೆಕ್ಕೆಯಿಂದ ಹಾರಬಯಸಿದನು. ಕಲಶದ (ಗಿಂಡಿಯ) ನೀರಿನಿಂದ ಕಾಡ್ಗಿಚ್ಚನ್ನು ಆರಿಸಹೋದೆನು. ಮುಚ್ಚು ಮರೆ ಏನು ? ಮೋಸ ಹೋದೆನು ! ಮುಂದೆನಗೆ ಗತಿ ಯಾವುದು ? ಹಸಿದ ಹಾವನ್ನು ಗಾಯಗೊಂಡ ಮಿಕವನ್ನು ಸೊಕ್ಕಿದ ಆನೆಯನ್ನು ಕಣ್ಮರೆಗಳೆದ ಗಿಡುಗವನ್ನು ಸಿಟ್ಟೆದ್ದ ಸಿಂಹವನ್ನು ಕೆಣಕಿ ಕೆಟ್ಟೆನು. ಇನ್ನು

ಈ ಪಟ್ಟಣದ ಆಸೆಬಿಟ್ಟು ಹೊರಡುವುದೇ ಕ್ಷೇಮ. ಅದರಿಂದ ಮರೆಹುಯಿಲೆಬ್ಬಿಸಿ ಮುಳುಗಿಸದ ಮುನ್ನವೇ ದಾರಿಗಟ್ಟಿ ಬಾಧಿಸದ ಮುನ್ನವೇ ಹಾಹಾಕಾರವುಂಟು ಮಾಡಿ ಹದಗೆಡಿಸಿ ಕಗ್ಗೊಲೆಗೆಯ್ದು ಕೈಸೆರೆ ಹಿಡಿಯದ ಮುನ್ನವೇ ಮೋಸದಿಂದ ಮೂಗು ಕೊಯ್ಯದ ಮುನ್ನವೇ ಸಾಗುವೆನೆಂದು ಪಯಣ ಸಿದ್ಧತೆ ಮಾಡುತ್ತಿದ್ದನು.

ಅತ್ತ ಆ ಯುದ್ಧದಲ್ಲಿ ನೊಂದು ಪಟ್ಟಣಗಳನ್ನು ಸೇರಿದ ತಳಕಾಡು ಎಳವಂದೂರು ಅಮ್ಮಚವಾಡಿ ತಗಡೂರು ಮೊದಲಾದ ಮೈಸೂರಿನ ನೆರೆಯ ದೊರೆಗಳು 'ನಮಗೆ ಇನ್ನು ಉಳಿಗಾಲವಿಲ್ಲ. ಹೇಗಾದರೂ ತೆಲುಗು ರಾಜನಿಗೆ ಧೈರ್ಯತುಂಬಿ ಅವನ ರಕ್ಷಣೆಯಲ್ಲಿ ಉಳಿದ ಕಾಲು ಕಳೆಯುವೆವು. ಅವನ ಅಳಿವಿನಲ್ಲಿ ಅಳಿಯುವೆವು' ಎಂದು ಅವರೆಲ್ಲರೂ ಒಂದಾಗಿ ನಿಯೋಗಿಯೊಬ್ಬನನ್ನು ಕಳುಹಿಸಲು ಅವನು ರಾಯನನ್ನು ಸಂಧಿಸಿ-ಅಂದು ಮೊರಸು, ಬೇಡ, ಮಲೆನಾಡವರು ಬಂದು ಬೆರಸಿದುದರಿಂದ ಅವರೊಡನೆ ಎಲ್ಲರೂ ಹೇಡಿಗಳಾಗಿ ಯುದ್ಧದಲ್ಲಿ ಹೊಲಬುದಪ್ಪಿತು. ಆದುದರಿಂದ ಮನದಲ್ಲಿ ಆಕುಲಗೊಳ್ಳಲು ಕಾರಣವಿಲ್ಲ. ಇನ್ನೂ ಅವರು (ಮೈಸೂರುವರು) ಮುನ್ನಿನಂತೆ ಬಗೆದು ಮೈಮರೆತು ನಮ್ಮನ್ನು ಲೆಕ್ಕಿಸದೆ ಅತಿಬಲದಿಂದ ಪಟ್ಟಣವನ್ನು ಮುತ್ತುವರು. ಆಗ ನಾವು ಅವರ ಪಾಳೆಯದಲ್ಲಿ ಕೋಲಾಹಲಗೈದು ಕೊಳ್ಳೆ-ಸುಲಿಗೆಯನ್ನು ಹಿಂದಿರುಗಿಸುವೆವು. ಇದು ನಿಶ್ಚಿತ. ಅಲ್ಲಿಯವರೆಗೆ ಅವರ ಉಪಟಳಕ್ಕೆ ಬೆಚ್ಚದೆ ನಮ್ಮನ್ನು ನಂಬಿ ಇರಬೇಕು ಎಂದು ಅವರೆಲ್ಲರೂ ಕಳುಹಿಸಿದ ಶಪಥದ ಓಲೆಗಳನ್ನು ಕೊಟ್ಟು ಬಿನ್ನವಿಸಿದನು.

ಆ ತಿರುಮಲೆ ರಾಜನು-ಅಕಟಕಟಾ ಇರುಳು ಕಂಡ ಹಳ್ಳಕ್ಕೆ ಹಗಲು ಬೀಳುವರೆ ? ಬೆನ್ನಟ್ಟಿ ಹಿಡಿಯುವವನ ಮನೆಯಲ್ಲಿ ಅವಿತುಕೊಳ್ಳುವರೆ ? ಹೋಗುವ ಮಾರಿಯನ್ನು ಕೂಗಿ ಕರೆಯುವರೆ ? ತಳವನ್ನಗಿದು (ಮರವನ್ನು ಕಡಿದು) ಮೇಲೆ ಕೆಡಹಿಕೊಳ್ಳುವರೆ ? ತಲೆಗೆ ತಾಗಿದ ಮೇಲೂ ಸೆಟೆದು ನಿಲ್ಲುವರೆ ? ಮುಗ್ಗರಿಸಿ ಬಿದ್ದು ಮೂಗು ಮೇಲೆನ್ನುವರೆ ? ಹೇಳುವ ಮಾತೇನು ? ಇನ್ನು ಅರಮನೆಯ ಸೀಮೆಗೆ ದಾಳಿಯಿಟ್ಟು ತುರುಸೆರೆಗೊಂಡುದರಿಂದ ಅಂದಂದಿಗೆ ಬರುವ ಧನಧಾನ್ಯಗಳು ನಿಂತುಹೋಗಿ ಸಂಗ್ರಹಗಳೂ ಸವೆದು, ಆನೆಕುದುರೆಗಳ ಮೇವುಗಳಿಗೂ ಯೋಧ-ರಾವುತ-ಕಾಲುದಳಗಳ ಜೀವಿತಕ್ಕೂ ಅರಮನೆಯ ಒಡವೆಯಲ್ಲಿ ಅಗ್ರಹಾರದ ತೆರಿಗೆಯಲ್ಲಿ ದೇವಾಲಯದ ಉಪಕರಣಗಳು ಬಣಜಿಗರ ವ್ಯಾಪಾರದಲ್ಲಿ, ಮತ್ತೇನು ! ದಂಡದಿಂದಲೂ ಸುಲಿಗೆಯಿಂದಲೂ ಪರಿಹಾರವಾಗದೆ ತೊಂದರೆಗೊಳ್ಳುವುದು ಎಷ್ಟೋ ಉಂಟು, ಅಲ್ಲದೆ ಹಾಡುಹಗಲೇ ಪಟ್ಟಣದ ಮಧ್ಯದಲ್ಲಿ ತಳವಾರನ ತಲೆಗೊಯ್ದು ಕಾವಲುಗಾರರನ್ನು ಕಡಿದೊಟ್ಟಿದರು. ಅಧಿಕಾರಿಗಳನ್ನು ಬೆನ್ನಟ್ಟಿದರು. ಅರಮನೆಗೆ ಬರುತ್ತಿರುವವರನ್ನು ಅಡ್ಡಗಟ್ಟಿ ಹೊಡೆದರು. ಕತ್ತಿಯೂಳಿಗದವನನ್ನು ಕತ್ತರಿಸಿ ಕತ್ತಿಯನ್ನು ಕಿತ್ತುಕೊಂಡರು. ಸಂಚಿಯವನನ್ನು ಹೊಂಚು ಹಾಕಿ ಸದೆದು ಮೆರೆದರು. ಅವರು ಮತ್ಸರಗೊಂಡು ಮನಮುಟ್ಟಿ ಸಾಗಿ ಬಂದರೆ ಹೊಳೆ ಸುತ್ತುವರಿದುದೇ ಸುಳ್ಳೆನಿಸುವರು. ಕೋಟೆ-ಅಗಳುಗಳನ್ನು ದಿನ್ನೆ-ತಗ್ಗುಗಳನ್ನು ಅರೆಗಳಿಗೆಯಲ್ಲಿ ಸಮತಲಗೊಳಿಸುವರು. ಮೂಡುವ ಸೂರ್ಯನನ್ನು ಮುಚ್ಚಿ ಮರೆಗೊಳಿಸುವರು. ಬೀಸುವ ಗಾಳಿಯನ್ನು ಹಿಡಿದು ನಿಲ್ಲಿಸುವರು. ಕಗ್ಗಲ್ಲನ್ನು

ಮೃದುಗೊಳಿಸುವರು. ಹಾಗಿದ್ದರೂ ನನ್ನಲ್ಲಿ, ಮುಂಚಿನ ಗೆಳೆಯನೆಂದೂ ಮುದುಕನೆಂದೂ ಬಲಶಾಲಿಗಳನ್ನು ಮೆಚ್ಚುವವನೆಂದೂ ದುರ್ಬಲನೆಂದೂ (ಹೊಡೆತ) ಸಹಿಸಿಕೊಳ್ಳಲಾರದವನೆಂದೂ ತಾನೇ ಹೊರಟು ಹೋಗುವನೆಂದೂ ದಯೆಗೈದು ನನ್ನನ್ನೂ ನನ್ನ ಅಂತಃಪುರವನ್ನೂ ಮನ್ನಿಸಿದ್ದಾರೆ. ಆದರೂ ಅರಮನೆಯ ವೆಚ್ಚಕ್ಕೆ ಗತಿಯಿಲ್ಲದೆ, ಬ್ರಹ್ಮಪುರಿಯವರು ಅಧ್ಯಯನ ನಿರತರಾದ ಬ್ರಾಹ್ಮಣರೆಂದು ಒಲಿದು ಮೈಸೂರವರು ಅವರ ಊರನ್ನು ಸೂರೆಗೊಳ್ಳದೆ ಗೋಗ್ರಹಣಗೈಯ್ಯದೆ ಕಾಯ್ದುದರಿಂದ ಆ ಊರಲ್ಲಿ ಬೆಳೆದ ಭತ್ತದಲ್ಲಿ ಇಷ್ಟಿಷ್ಟನ್ನು ಕದ್ದು ತರಿಸಿ ಈವರೆಗೆ ಕಾಲು ಕಳೆದೆನು. ಇನ್ನು ಇಲ್ಲಿರುವುದಿಲ್ಲ. ನೀವಿದ್ದಲ್ಲಿಗೆ ಬರುತ್ತೇನೆ-ಎಂದು ಹೇಳಿ ಕಳುಹಿಸಿದನು.

ಬಳಿಕ ಅವರು ಆ ವೃತ್ತಾಂತವನ್ನು ಕೇಳಿ ಒಡೆಯನ ಆಪತ್ತನ್ನು ದೂರಗೊಳಿಸುವೆವೆಂದು ತಮ್ಮಲ್ಲಿದ್ದ ಧನ-ಧಾನ್ಯಗಳನ್ನು ಮದ್ದುಗುಂಡುಗಳನ್ನೂ ಬಾಣ-ಬತ್ತಿ ಮೊದಲಾದ ವಸ್ತುಗಳನ್ನೂ ತೆಗೆದುಕೊಂಡು ಬಂದು ಪಟ್ಟಣ ಪ್ರವೇಶಿಸಲೆಂದು ಉತ್ತರದ ನದಿಯ ಹೊರಗಡೆಯಲ್ಲಿ ಬೀಡುಬಿಟ್ಟರು.

ಇತ್ತ ಆ ರಾಜನೃಪನು ಈ ಕಾರ್ಯವನ್ನರಿತು ಕೆಸರೆಯ ಕಾಳಗದಲ್ಲಿ ವಶಪಡಿಸಿಕೊಂಡ ಆನೆ-ಕುದುರೆಗಳ ಸಮೂಹದಿಂದ ಹೆಚ್ಚಿದ (ತಮ್ಮ) ದಳವನ್ನು ನರಸರಾಜನೆಂದು ಹೆಸರಾದ ತನ್ನ ಹಿರಿಯ ಮಗನ ಜೊತೆಗೆ ಕಳುಹಿಸಿದನು. ಅವನು ಕಣ್ಣೆವೆ ಮಿಸುಕದಂತೆ (ಯಾವ ಕಷ್ಟ ಅಥವಾ ಭಯವಿಲ್ಲದೆ) ಅವರ ಪಾಳೆಯದ ಮುಂದುಗಡೆ ಬಂದು ನಿಂತು ಭಟನೊಬ್ಬನನ್ನು ಕರೆದು-"ನೀನು ಅವರ ಬಳಿಸಾರಿ-" ವೈರಿರಾಜರೆಂಬ ವೇಶ್ಯೆಯರಿಗೆ ವಿಟನೆನಿಸುವ, ರಾಜನೃಪನ ಮಗನೂ ಬಂಟರ ಗಂಡನೂ ಆದ ನರಸನು ಅರಿಕೆಗಾಳಗವೆಸಗಲು ಬಂದನು. ನೀವು, ಮೈಮರೆತಿದ್ದೆವು, ಮತ್ತೇರಿದ್ದೆವು, ಮರವಟ್ಟಿದ್ದೆವು, ಮರುಳಾಗಿದ್ದೆವು, ಹಸಿದಿದ್ದೆವು. ಬಳಲಿದ್ದೆವು, ಉಣ್ಣುತ್ತಿದ್ದೆವು. ಮಲಗಿದ್ದೆವು ಎಂದು ಹಿಂದಿನಿಂದ ಗಳುಹದೆ, ಎಚ್ಚತ್ತು ಸನ್ನದ್ಧರಾಗಿ ಮನಬಂದಾಗ (ಯುದ್ಧಕ್ಕೆ) ಬರಬೇಕೆಂದು ಮೂದಲಿಸಿ ಹೇಳಿಕಳುಹಿಸಲು ಅವನು ಸಂಯಮಿಸದೆ ಬಂದು ಹಾಗೇ ಹೇಳಲಾಗಿ ಅವರು ಗರ್ಜಿಸುತ್ತ ಎದ್ದು ಅವನು ಮರಳಿ ಬರುವುದಕ್ಕೆ ಮುನ್ನವೇ ಮೇಲೇರಿ ಬಂದರು. ನರಸರಾಜನು, ಮುನ್ನ ರಾಕ್ಷಸರನ್ನು ಒಕ್ಕಲಿಕ್ಕಿದ ಷಣ್ಮುಖನಂತೆ ಕ್ರೌಂಚಪರ್ವತವನ್ನು ತುಂಡುಗಡಿದ ಇಂದ್ರನಂತೆ (ಅವರನ್ನು) ಚಲ್ಲಾಪಿಲ್ಲಿಗೊಳಿಸಿ ಮೇಲೆ ಬಿದ್ದನು. ಅವರು ಕೆಟ್ಟು ಮುರಿದೋಡಿ, ದಕ್ಷಿಣಕ್ಕೆ ಗಾವುದ ದೂರದಲ್ಲಿದ್ದ ಕೋಡಾಲವನ್ನು ಸೇರಲು ಈತನೂ ಬೆಂಬತ್ತಿ ಸುತ್ತುವರಿದನು. ಒಳಗಿದ್ದ ದೊರೆಗಳೆಲ್ಲರೂ ಕಡುಬಿಸಿಲಲ್ಲಿ ಓಡಿಬಂದು ಹಸಿದಿದ್ದುದರಿಂದ (ಅತಿಯಾಗಿ) ನೀರಡಿಸಿ ಬಾವಿಯನ್ನರಸಿ ಬನ್ನಬಟ್ಟು ಬಾಯೊಣಗಿ ಬಲಗುಂದಿ ಅಲ್ಲಿದ್ದ ತಿಪ್ಪೆಯ ತಗ್ಗಿನಲ್ಲಿ ಹಾವಸೆಗಟ್ಟಿ ಬಣ್ಣಗೆಟ್ಟು ಕೊಳೆತು ಹುಳುಬಿದ್ದು ಹೊಲಸು ನಾರುವ ನೀರನ್ನೇ ಕುಡಿದು ಸಂಜೆಯವರೆಗೆ ಉಸಿರು ಬಿಗಿಹಿಡಿದಿದ್ದು ಕತ್ತಲಲ್ಲಿ ಹೊರಬಿದ್ದು ಗುಂಪುಗೂಡದೆ ಒಬ್ಬೊಬ್ಬರೆ ಹರಿದೋಡಿದರು.

ಮರುದಿನ ತಿರುಮಲೆ ರಾಜನು ನರಸರಾಜನ ವಿಜಯವಾರ್ತೆ ಕೇಳಿ ಹೇಗೂ

ಆತನು ಆ ಪಡೆಯೊಡನೆ ಬಂದು ಪಟ್ಟಣವನ್ನು ಮುತ್ತುವನೆಂದು ಹೆದರಿ ದೇಹವನ್ನು ತ್ಯಜಿಸುವ ಜೀವನಂತೆ ಹಲವಂದದಿಂದ ಹಲುಬಿ ಕೊರಗಿ ಕೋಟಲೆಗೊಂಡು ಹೆಂಡಂದಿರನ್ನುಳಿದು ಶ್ರೀರಂಗಪಟ್ಟಣದಿಂದ ಹೊರಬಿದ್ದು ಪುಣ್ಯತೀರಿದವರು ಸ್ವರ್ಗದಿಂದ ದುರ್ಗತಿಗಿಳಿಯುವಂತೆ ತಳಕಾಡ ಬಳಿಯ ಮಾಲಂಗಿ (ಎಂಬ ಮಡು)ಗೆ ಬಂದು ಪ್ರಾಣಬಿಟ್ಟನು.

ಬಳಿಕ ನರಸರಾಜನು ರಾಜನೃಪನಿಗೆ ಈ ವಾರ್ತೆಯನ್ನು ಬಿನ್ನವಿಸಿ ಕಳುಹಿಸಿದನು. (ರಾಜನೃಪನು) ತಮ್ಮನೊಡನೆ ಶ್ರೀರಂಗಪಟ್ಟಣಕ್ಕೆ ಬಂದು ಊರಮುಂದಿನ ಬಯಲಲ್ಲಿ ಬೀಡುಬಿಟ್ಟಿದ್ದ ಕುಮಾರನನ್ನು ಪ್ರೀತಿಯಿಂದ ಅಪ್ಪಿ ಸಂತಸಗೊಂಡು ಹೊಗಳಿ, ಪಟ್ಟಣ ಪ್ರವೇಶಿಸ ಬಯಸಿದರೂ, ಹರಿಯುವ ಹಾವನ್ನು ಉರಿಯುವ ಕಿಚ್ಚನ್ನು ಆಕೃತಿಗೊಂಡ ಪಿಶಾಚವನ್ನು ಅನ್ಯರ ಹೆಂಡಂದಿರನ್ನು ಸಮೀಪಿಸುವುದು ಸರಿಯಲ್ಲವೆಂದು ಅಲ್ಲಿಯೆ ನಿಂತು, ತಿರುಮಲೆರಾಜನ ರಾಣಿಯಾದ ರಂಗಮ್ಮನೆಡೆಗೆ ಮುದುಕನೊಬ್ಬನನ್ನು ಆಜ್ಞಾಪಿಸಿ ಕಳುಹಿಸಲು ಅವನು ಗರತಿಯರಿಗೆ ಗಂಡನನ್ನು ಅನುಸರಿಸುವುದೇ ಹೆಚ್ಚಿನದು, ನೀವು ನಿಮ್ಮ ಉಡಿಗೆ-ತೊಡಿಗೆಗಳನ್ನೂ ಊಳಿಗದ ಸ್ತ್ರೀಯರನ್ನು ಕರೆದುಕೊಂಡು ಹೋಗುವುದಕ್ಕೆ ತಕ್ಕ ದಂಡಿಗೆಗಳನ್ನು ಬಂಡಿ-ಕುದುರೆಗಳನ್ನು ತೆಗೆದುಕೊಂಡು ಬಂದಿದ್ದೇನೆ ಹೊರಡಬೇಕು' ಎಂದನು.

ಆ ಮಾತು ಕೇಳಿ 'ಮುಂಚೆ ನನ್ನ ಮನದಲ್ಲಿ, ಈ ರಾಯನು ಬಿಟ್ಟುಹೋದನು. ಇನ್ನೇನಾಗುವುದೋ' ಎಂಬ ಚಿಂತಾಸಾಗರದಲ್ಲಿ ಮುಳುಗಿದ ಆತಂಕ ತೊಲಗಿ 'ಎಲೆ ಅಣ್ಣ ನೀನೂ ಮಡದಿ ಮಕ್ಕಳುಗೂಡಿ ಕಟ್ಟೈಸಿರಿಯಿಂದ ನೂರುವರ್ಷ ಬಾಳು' ಎಂದು ಹರಸಿ ಸಂತೋಷಭರದಲ್ಲಿ ಸಖಿಯರನ್ನು ಕರೆದು 'ರಾಜನೃಪನು ಅಕಾರಣ ಪ್ರೀತಿಯಿಂದ ನನ್ನನ್ನು ನಮ್ಮೊಡೆಯನ ಬಳಿಗೆ ಕಳುಹಿಸುವನು ಹೋಗೋಣ' ಎಂದಳು. ಅವರವರು ತಮ್ಮತಮ್ಮ ಕಟ್ಟಳೆ-ಊಳಿಗಗಳನ್ನು ನೆರವೇರಿಸುತ್ತ ಜೊತೆಗೂಡಿ ಬರಲು ರಾಣಿಯು ಹೊರಹೊರಟು ರಂಗೇಶ-ರಂಗನಾಯಕಿಯರಿಗೆ ವಂದಿಸಿ ದಂಡಿಗೆ ಏರಿ ಊರ ಹೊರಗೆ ಬಂದು ರಾಜರಸನ ಸೈನ್ಯವನ್ನು ಅನತಿದೂರದಲ್ಲಿ ಕಂಡು ಮುದಿದಾಸಿಯೊಬ್ಬಳನ್ನು ಕರೆದು 'ನೀನು ರಾಜನೃಪನ ಸಮ್ಮುಖದಲ್ಲಿ ನಿಂತು ನನ್ನ ನುಡಿಯಿಂದ 'ಎಲೆ ತಂದೆ ಕೇಳು. ನನ್ನರಸನೂ ಊರೊಳಗಿಲ್ಲದೆ ಮೈಗಾವಲಿನವರೂ ಹೋಗಿ ಒಬ್ಬಳೇ ಆಗಿದ್ದೇನೆ. ನನಗೂ ನನ್ನ ಊಳಿಗದ ದಾಸಿಯರಿಗೂ ನನ್ನ ಮನಸ್ಸನ್ನೂ ಮಾತುಗಳನ್ನೂ ಕಾವಲಿಟ್ಟು, ಕಡಲಲ್ಲಿ ಮುಳುಗಿ ಕೈಸೋತಂತಿರುವವಳನ್ನು ಎತ್ತಿ ಸಲಹಿ ನನ್ನೊಡೆಯನೆಡೆಗೆ ಕಳುಹಿಸಿದೆ. ಪ್ರಾಣ-ಮಾನಗಳ ಜೊತೆಗೆ ನಮ್ಮ ಕುಲಧರ್ಮವನ್ನು ಕಾಯ್ದು ಮನ್ನಿಸಿದೆ. ಇಂದು ನಾನು ನಿನ್ನ ಬೆನ್ನಲ್ಲೂ ಬಸಿರಲ್ಲೂ ಬಂದವಳು. ನೀನು ನನ್ನ ಹರಕೆಯಿಂದ ನಳ, ನಹುಷ, ನಾಭಾಗರಂತೆ ರಾಜ್ಯವಾಳಿ ಹಗೆಗಳನ್ನು ಗೆದ್ದು ಆಶ್ರಯಿಸಿದವರನ್ನು ಕಾಪಾಡಿ ಬ್ರಾಹ್ಮಣರಿಗೆ ದಾನವಿತ್ತು ಮಿತ್ರ, ಪತ್ನಿ, ಪುತ್ರ, ಪೌತ್ರರೊಡಗೂಡಿ ಸುಖದಿಂದ ಬಾಳು' ಎಂದು ಬಿನ್ನವಿಸಿ ಬರಬೇಕೆಂದು ಕಳುಹಿಸಲು ಅವಳು ಹಾಗೇ ಮಾಡಿ ಮರಳಿದಳು.

ಬಳಿಕ ರಾಜನೃಪನು ವಿಶ್ವಾಸಪೂರ್ವಕ ಪೂರ್ಣಕುಂಭಗಳನ್ನೊಳಗೊಂಡು ಹರಸುತ್ತ ಎದುರುಗೊಳ್ಳುವ ಅಗ್ರಹಾರದ ಬ್ರಾಹ್ಮಣರನ್ನು ವಂದಿಸಿ ಇಬ್ಬದಿಯಲ್ಲಿ ಕೈಯೆತ್ತಿ ಹೊಗಳುವ ಭಟ್ಟಂಗಿಗಳ ಘೋಷಣೆಗೆ ಕೊಬ್ಬುತ್ತ ತಮ್ಮತಮ್ಮ ಕೇರಿ, ಬಾಗಿಲುಗಳ ಸನಿಹದಲ್ಲಿ ನಿಂತು ಆರತಿಯೆತ್ತಿ ಮಂಗಲಾಕ್ಷತೆ ಸೂಸುವ ಬ್ರಾಹ್ಮಣಿಯರ ಹರಕೆಯನ್ನು ಸ್ವೀಕರಿಸಿ ಅವರಿಗೆ ಬಣ್ಣಬಂಗಾರಗಳನ್ನಿತ್ತು ರಂಗನಾಥನ ಸನ್ನಿಧಿಗೆ ಹೋಗಿ ಪ್ರದಕ್ಷಿಣೆಗೆಯ್ದು ವಂದಿಸಿ ಪ್ರಸಾದಗೊಂಡು ಕಾಣಿಕೆಯಿತ್ತು. ಅರಮನೆ ಪ್ರವೇಶಿಸಿ ಜೋಯಿಸನು ಹೇಳಿದ ಸುಮುಹೂರ್ತದಲ್ಲಿ ಓಲಗಗೊಟ್ಟು ದೇವದಾನವಿತ್ತು ಧರ್ಮವೆಸಗಿ ನಂಬಿ ಬಂದವರನ್ನು ಉಂಬಳಿ-ಉಚಿತಗಳಿಂದ ಮನ್ನಿಸಿ ಆಳುತ್ತಿರಲು-

ವೆಂಕಟಪತಿರಾಯ (ತಿರುಮಲೆರಾಜನ ಚಿಕ್ಕಪ್ಪ)ನು ತನ್ನನ್ನು ಮಧುರೆಯ ಯುದ್ಧದಲ್ಲಿ ವೈರಿಗೊಪ್ಪಿಸಿ ಎರಡು ಬಗೆದು ಬಿಟ್ಟುಹೋಗಿ ಹಿಂದಿನದನ್ನು ನೆನೆಯದೆ ಹಗೆಗೊಂಡು ಬಿಂಕದಿಂದ ತನಗೂ ತನ್ನ ಸಾಮಂತ ದೊರೆಗಳಿಗೂ ಬಗ್ಗದೆ ಪ್ರತಿರೋಧಿಸಿ ಸೊಕ್ಕಿನಲ್ಲಿದ್ದ ತಿರುಮಲೆ ರಾಜನ ದೇಶಕೋಶಗಳನ್ನು ವಶಪಡಿಸಿಕೊಂಡು ಅವನನ್ನು ಓಡಿಸಿದುದಕ್ಕೆ ಹಿಗ್ಗಿ ಮಧ್ದಾನೆಗಳನ್ನು ಬಲವಾದ ಕುದುರೆಗಳನ್ನೂ ಒಳ್ಳೆಯ ಉಡುಗೆ ತೊಡುಗೆಗಳನ್ನೂ ಕಾಣಿಕೆಗಳನ್ನೂ ಕೊಟ್ಟು ಮಂತ್ರಿಗಳಲ್ಲಿ ವೀರನೆನಿಸಿದ ಗಂಭೀರರಾಯ ವಿರುಪಣ್ಣನನ್ನು ಕಳುಹಿಸಲು ಅವನು ಹೊರಟು ಬಂದು ತಂದು ವಸ್ತುಗಳನ್ನೊಪ್ಪಿಸಲು ಅವನ್ನು ಸ್ವೀಕರಿಸಿ ಅವನನ್ನು ಸತ್ಕರಿಸಿ ರಾಯನಿಗೆ ಮರು ಕಾಣಿಕೆಗಳನ್ನು ಕಟ್ಟಿ ಕಳಿಸಿ ಸಂತಸದಲ್ಲಿದ್ದನು.

ಇತ್ತ ಈ ಹದಿನಾಡ ನಂಜರಾಜನು ತನ್ನನ್ನು ಕಂಡು ಓಲೈಸುವ ಆಲಂಬಾಡಿ ಕೋಳಿಯ ಮೊದಲಾದ ಕೂಟದ ಸೈನ್ಯ ಸಮೂಹವೂ ಎಳವಂದೂರು ಸತ್ಯಗಾಲದ ಅರಸರಾದ ತನ್ನೊಡಹುಟ್ಟಿದವರ ಪಡೆಯೂ (ತನ್ನ) ನೆರೆದೊರೆಗಳ ಪ್ರತಿಸೈನ್ಯವೂ ತನ್ನ ಮೂಲ ಬಲವೂ ತನಗೆ ಮಧುರೆಯವರು ಕೊಡುವ ಕಪ್ಪದ ಹಣದಲ್ಲಿ ಕಾಲಾಳುಗಳ ಪಡೆಯೂ ಉಂಟೆಂಬ ಕೊಬ್ಬಿನಿಂದ ರಾಜನೃಪನೊಡನೆ ಸೆಣಸಬೇಕೆಂದು ಎಡದೊರೆಯೆಂಬ ಗಡಿ ಕೋಟೆಯಲ್ಲಿ ಕಟ್ಟಿದ್ದ ಮೇಘಪುಷ್ಪವೆಂಬ (ರಾಜನೃಪನ) ಕುದುರೆಯನ್ನು ಕಳವಿನಿಂದ ಕೊಂಡೊಯ್ದನು.

ಅದನ್ನು ಸೈರಿಸದೆ ರಾಜನೃಪನು ಆ ಕುದುರೆಗೆ ಅವನ ತಲೆಯನ್ನೆ ಬೆಲೆಗೊಳ್ಳುವೆನೆಂದು ಸೈನ್ಯಸಮೇತ ನಡೆದು ತಾಯೂರೆಂಬ ಅವನ ಗಡಿಕೋಟೆಯನ್ನು ಸುತ್ತಿ ಮುತ್ತಿದನು.

ಅವನು ಸಜ್ಜುಗೊಂಡು ಬರಲು ದಾರಿಯಲ್ಲಿ ಅವನ ದಳವನ್ನಡ್ಡಗಟ್ಟಿ ಬೇಡರನ್ನು ಬೆನ್ನಟ್ಟಿ ಶೌರ್ಯದಿಂದ ಎದುರಿಸಿದ ಹರಿಗೆಯ ನಂಜುಂಡ, ಕೋರನಹಳ್ಳಿಯ ಕೊಂಡ ಮೊದಲಾದ ಗಂಡುಗಲಿಗಳ ತಲೆಗಳನ್ನು ಚೆಂಡಾಡಿ ಆ ನಂಜರಾಜನನ್ನು ಕೈಸೆರೆ ಹಿಡಿದು ಕೊಲ್ಲದೆ ಕಳುಹುವೆನೆಂದಿರಲು ಮುಂಚೂಣಿಯಲ್ಲಿ ಒಬ್ಬನು ಮುನ್ನುಗ್ಗಿ ಯುದ್ಧದಲ್ಲಿ ಗುರುತು ತಿಳಿಯದೆ (ನಂಜರಾಜನನ್ನು) ಇರಿದು ಶಿರ ಕೊಯ್ದು ತಂದನು. ಅರಸನು ಅದನ್ನು ಕಂಡು ಮರುಗಿ ಅವನನ್ನು ಕೊಂಡಾಡಿ ಆ ಹಸಿದಲೆಯನ್ನು ಹೊನ್ನತಟ್ಟೆಯಲ್ಲಿಟ್ಟು ಹೊಂಬಟ್ಟೆ ಹೊದಿಸಿ ದಂಡಿಗೆಯಲ್ಲಿರಿಸಿ ಅವನ ಊರಿಗೆ ಕಳುಹಿಸಿದನು (ಮತ್ತು) ಅವನ ಧನಕನಕ

ವಸ್ತುವಾಹನಾದಿಗಳನ್ನು ಸೂರೆಗೈದು ಆ ನಾಡೆಲ್ಲವನ್ನು ನಾಶಪಡಿಸಿಕೊಂಡು ಅವನನ್ನು ಕಂಡು ಸೇವೆ ಸಲ್ಲಿಸುತ್ತಿದ್ದವರನ್ನು ತನಗೆ ಆಳುಗಳನ್ನಾಗಿಸಿಕೊಂಡು ವೀರರಲ್ಲಿ ವೀರನೆನಿಸಿ ಎಂಬತ್ತುವರ್ಷ ಧರ್ಮದಿಂದ ರಾಜ್ಯಪಾಲನೆಗೈದು ಬಳಲಿ ಯದುಗಿರಿನಾರಾಯಣನ ಅಡಿದಾವರೆಯ ನೆರಳಲ್ಲಿ ಆ ಬಳಲಿಕೆಯನ್ನು ಕಳೆಯಲೆಂದು ತಮ್ಮಂದಿರನ್ನು ಕರೆದು-''ಎಲೈ ಬೆಟ್ಟದಯ್ಯ, ದೇವರಾಜರಿರಾ! ನೀವಿಬ್ಬರೂ ನನ್ನನ್ನು ತಂದೆಯೆಂದು ಭಾವಿಸಿದುದರಿಂದ ನಾನೂ ನನ್ನ ಮಕ್ಕಳೆಂದು ಭಾವಿಸಿ ಕಿರಿಯ ತಮ್ಮ ಚೆನ್ನರಾಜ, ನರಸರಾಜ ಮೊದಲಾದ ಮೂವರು ಮಕ್ಕಳೂ ನಾರಾಯಣನ ಚರಣಾರವಿಂದಗಳಲ್ಲಡಗಿ ನನ್ನನ್ನು ತೊರೆದುದಕ್ಕೆ ಮರುಗದೆ ಮನಸ್ಸು ಕುಂದದೆ ಇದ್ದೆನು. ಈವರೆಗೆ ಹೊತ್ತುಕೊಂಡಿದ್ದ ಅರಸುತನದ ದೊಡ್ಡಹೊರೆಯನ್ನು ಇಳಿಸುವೆನು. ನೀವಿದನ್ನು ಹೊತ್ತು ನನ್ನನ್ನು ಮನ್ನಿಸಿ ತಪಕ್ಕೆ ಕಳುಹಿಸಬೇಕು ಎಂದು ಆಜ್ಞಾಪಿಸಿದನು. ಅವರಿಬ್ಬರೂ ಕಡುಮರುಕದಿಂದ ಕಂಬನಿಗರೆಯುತ್ತ ''ಜೀಯಾ ! ರವಿಯನ್ನುಳಿದು ಕಿರಣಗಳಿರುವವೆ ? ವಿದ್ಯೆಯನ್ನುಳಿದು ಚಾತುರ್ಯಗಳು ಬೆಳೆಯುವವೆ ? ಬಿಂಬವಿಲ್ಲದೆ ಪ್ರತಿಬಿಂಬ ತೋರುವುದೆ ? ದೇವರನ್ನು ಬಿಟ್ಟು ನಾವಿರುವೆವೆ ? ಈ ಮಾತಂತಿರಲಿ, ದೇವರ ಕಿರಿಮಕ್ಕಳು ಇಮ್ಮಡಿ ರಾಜರಸನಿಗಾಗಲೀ ನರಸರಾಜನ ಬಸಿರಲ್ಲಿ ಬಂದ ಮೊಮ್ಮಗ ಚಾಮರಾಜರಸನಿಗಾಗಲೀ ಪಟ್ಟಗಟ್ಟಿ ನಾವು ಮೂವರೂ ಪುರುಷೋತ್ತಮನ ಚರಣಯುಗ ಧ್ಯಾನ ಪೂಜೆ ಪ್ರಣಾಮಾದಿ (ಕಾರ್ಯಗಳಲ್ಲಿ) ತತ್ಪರರಾಗಿ ಮುಕ್ತಿ ಪಡೆಯುವೆವು'' ಎಂದರು. ಅದಕ್ಕೆ ಸಮ್ಮತಿಸಿ-''ಹಾಗಾದರೆ ಈ ನರಸರಾಜನ ಕುಮಾರ ಚಾಮರಾಜನಿಗೆ ಪಟ್ಟಗಟ್ಟಿ ನನ್ನ ಮಕ್ಕಳಿಗೂ ನಿಮ್ಮ ಮಕ್ಕಳಿಗೂ ಬೇರೆಬೇರೆ ಉಂಬಳಿಗನ್ನಿತ್ತು ನಾವು ಮುಕ್ತಿ ಸಾಮ್ರಾಜ್ಯವನ್ನು ಸಾರುವೆವು-ಎಂದು ಚಾಮರಾಜನಿಗೆ ರಾಜ್ಯಾಭಿಷೇಕಗೈದು ತನ್ನ ಕುಮಾರನಿಗೆ ಪಡುವಣ ದಣಾಯಕನ ಕೋಟೆಯನ್ನು, ಬೆಟ್ಟದ ಚಾಮರಾಜನ ಕುಮಾರರಿಗೆ ರಂಗಸಮುದ್ರ, ನಳ್ಳೂರು ವಿಜಯಾಪುರಗಳನ್ನು, ದೇವರಾಜರಸನ ಕುವರರಿಗೆ ಅರಕೆರೆ ಎಲೆಯೂರು ಮಂಗಳಗಳನ್ನು ಕೊಟ್ಟು, 'ಅವರೆಲ್ಲರನ್ನೂ ನನ್ನನ್ನು ಕಂಡಂತೆ ಕಾಣಬೇಕೆಂದು ಮೊಮ್ಮಗನಿಗೆ ಆಜ್ಞೆಯಿತ್ತು ಕಾಳಗಗೈಯುವಲ್ಲಿಯೂ ರಾಜ್ಯವಾಳುವಲ್ಲಿಯೂ ಧನಪಡೆಯುವಲ್ಲಿಯೂ ಸುಳ್ಳು ನುಸುಳದಂತೆ ಧರ್ಮವನ್ನರಿತು ನಡೆಯತಕ್ಕುದು ಎಂದು ಬುದ್ಧಿ ಹೇಳಿ ಮೂವರೂ ಅಂಬರೀಷ ರುಕ್ಮಾಂಗದ ಮುಂತಾದ ಪರಮವೈಷ್ಣವರ ಸಮನಾಗಿ ಪರಮಾನಂದದಿಂದಿರುವಲ್ಲಿ-

ಒಂದು ದಿವಸ ರಾಜನೃಪನ ಮೈಗೆ ಒಂದಿಷ್ಟು ಆಯಾಸ ತೋರಿ ಕಡು ಮುಪ್ಪಾದುದರಿಂದ ಕಳಿತ ಹೂವಿನ ತುಂಬು ಕಳಚುವಂತೆ-ಉಗ್ಗಡಿಸುವ ನಾರಾಯಣನ ನಾಮೋಚ್ಚಾರದೊಡನೆ ಪ್ರಾಣವು ಹೊರಟು ಹೋಯಿತು. ಆ ದಿವಸ ಆ ಜಾವದಲ್ಲಿ ಆ ಗಳಿಗೆಯಲ್ಲಿ ಆ ಕ್ಷಣದಲ್ಲಿ ಮುನ್ನ (ದೇವದರ್ಶನಕ್ಕೆ) ಬರುವ ರೀತಿಯಲ್ಲಿ ಈ ಯದುಗಿರಿ ನಾರಾಯಣನ ಚರಣಕಮಲದ್ವಯದ ಸನ್ನಿಧಿಗೆ ಬಂದನು. ಅಲ್ಲಿ ದಿವ್ಯಪ್ರಬಂಧಗಳ ಪಠನಗೈಯುತ್ತಿದ್ದ ಶ್ರೀ ವೈಷ್ಣವರೆಲ್ಲರೂ ಎದ್ದು ಆಶೀರ್ವದಿಸಲು ಅವರಿಗೆ ನಮಸ್ಕರಿಸಿ ಗರ್ಭಗೃಹ ಪ್ರವೇಶಿಸಿ ಶ್ರೀ ನಾರಾಯಣನ ಅಡಿದಾವರೆಗಳಲ್ಲಿ ಹಣೆಯಿಟ್ಟು ಮೈಮರೆಯಾದನು. ಅದನ್ನು

ಕಂಡು ಅಂದು ಮೊದಲಾಗಿ ಅಲ್ಲಿರುವವರೆಲ್ಲ ಪರಾಂಕುಶ ಪರಕಾಲಾದಿ ದಿವ್ಯಯೋಗಿಗಳ ಗಣನೆಯಿಂದ ಈತನನ್ನು (ಅವರ) ಜೊತೆಗೂಡಿಸಿ ನೆನೆಯುವರು.

ಇತ್ತ ಶ್ರೀರಂಗಪಟ್ಟಣದಲ್ಲಿ ಬೆಟ್ಟದ ಚಾಮರಾಜ ದೇವರಾಜರಸರಿಬ್ಬರೂ ಮೊಮ್ಮಗನ ಅನುಮತಿಯಿಂದ ಅಣ್ಣನಿಗೆ ಉತ್ತರಕ್ರಿಯೆಗಳನ್ನು ನೆರವೇರಿಸಿ ತಮ್ಮ ತಮ್ಮ ಮಕ್ಕಳನ್ನು ಆ ಚಾಮರಾಜನ ಕೈಗಿತ್ತು ಯದುಗಿರಿ, ವೆಂಕಟಾಚಲ, ಕಂಚಿ, ಕುಂಭಕೋಣ, ಶ್ರೀರಂಗ, ರಾಮಸೇತುವೆ ಮೊದಲಾದ ಪುಣ್ಯಕ್ಷೇತ್ರಗಳ ಯಾತ್ರೆಗೆ ಹೋದರು.

ಚಾಮರಾಜ ಚರಿತ

ಆ ಚಾಮರಾಜನು ಎಳಹರೆಯದವನಾದರೂ ಮರಿಸಿಂಹದಂತೆ-ವೀರವನ್ನೂ ಬಾಲರವಿಯಂತೆ-ತೇಜವನ್ನೂ ನರಸಿಂಹನಂತೆ-ಶೌರ್ಯವನ್ನು ತ್ರಿವಿಕ್ರಮನಂತೆ-ಪರಾಕ್ರಮವನ್ನೂ ಮೈಗೂಡಿಸಿಕೊಂಡು ವೀರ ಹೆಚ್ಚಿ ದಿಗ್ವಿಜಯಗೈಯಲುದ್ಯೋಗಿಸಿ ದಳವನ್ನು ತನ್ನ ದಳವಾಯಿಯೊಡನೆ ಕಳುಹಿಸಿ ಮೂಡಲು-ತಳಕಾಡವರ ಮಳವಳ್ಳಿಯನ್ನು ಸುತ್ತಿ ಮುತ್ತಿ ಬೇಲಿಯನ್ನು ರಚಿಸಿ ಅಡ್ಡಗೋಡೆಯನ್ನು ದಾಟಿ ಪ್ರತಿದಳವಾಗಿ ಬಂದ ಜಗದೇವರಾಯನ ಪಡೆಯನ್ನೊಡ್ಡಿಸಿ ಊರವರಿಗೆ ಬೇರೆ ಆಸರೆಯಿತ್ತು, ಹೊರಹೊರಡಿಸಿ ಅದನ್ನು ವಶಪಡಿಸಿಕೊಂಡು ಒಡನೆ ತಲಕಾಡನ್ನು ತನ್ನದಾಗಿಸಿಕೊಂಡನು. ಅತ್ತಿಂದ ಆಗ್ನೇಯದಲ್ಲಿ ಕಣಿವೆಯ ಬೆಟ್ಟವಿಳಿದು ಘಟ್ಟಮದನಾರಿಯನ್ನು ಕುಟ್ಟಿ ಹುಡಿಗೊಳಿಸಿ ಅವನು ಕಾಣಿಕೆಕೊಟ್ಟ ಒಡವೆ ಹೊನ್ನುಗಳೊಡನೆ ಚೆಂಗೊಡೆಯೆಂಬ ಆನೆಯನ್ನು ಸ್ವೀಕರಿಸಿದನು. ಪಡುವಲು-ಕೆಳಲೆಯನಾಡ ಪಿರಿಯಾಪಟ್ಟಣದ ದೊರೆಯ ಸೈನ್ಯವನ್ನು ಬೆನ್ನಟ್ಟಿ, ಅವನಿಗೆ ನೇರವಾಗಿ ಬಂದ ಸಿಂಗಳರಾಯನ ಮೂಗು ಕೊಯ್ದು ಅವಮಾನಿಸಿ ಬೋಳಮಲ್ಲವೆಂಬ ಆನೆಯೊಡನೆ ತೊಡುಗೆ ಕಾಣಿಕೆಗಳನ್ನು ಕೊಂಡು ಅವನನ್ನು ಮನ್ನಿಸಿದನು. ಅತ್ತಿಂದ ಬಡಗಲು-ನರಸಿಂಹಪುರದ ಅರಸನನ್ನು ಯುದ್ಧದಲ್ಲಿ ಸೋಲಿಸಿ ಅವನು ತಂದಿತ್ತ ಹೊನ್ನು ಒಡವೆಗಳೊಡನೆ ಕನಕವಸಂತವೆಂಬ ಆನೆಯನ್ನು ಸ್ವೀಕರಿಸಿದನು. ಬಳಿಕ ಬೇಲೂರವನಲ್ಲಿ ಮೇರೆಯ ಹೊಲದಿಂದಾಗಿ ವೈರ ಬೆಳೆದು ಅವನು ಬೆಳೆಯಿಸಿದ ದಳವನ್ನೆಲ್ಲ, ಚೋಳೆಯನ ಹಳ್ಳಿಯ ಬಳಿಯಲ್ಲೊಮ್ಮೆ ಆನೆಯ ಕೆರೆಯ ಸಮೀಪದಲ್ಲೊಮ್ಮೆ, ಕಾಳಗದಲ್ಲಿ ಒಕ್ಕಲಿಕ್ಕಿ ಸೊಕ್ಕುಮುರಿದು ಮಿಕ್ಕವರ ಮೂಗುಕೊಯ್ದು ವಿಕಾರಗೊಳಿಸಿ ಕೊಳತೂರನ್ನು ಮುತ್ತಿ ಲಗ್ಗೆಯೇರಿ ಕಗ್ಗೊಲೆಗೆಯ್ದು ಕಡಿದೊಟ್ಟಿದ ಕಡಿದಾದ ಬೆಟ್ಟದಿಂದ ಹಸಿದಲೆಯ ಕಲ್ಲುಗಳನ್ನು ತಂದು ಅವುಗಳಿಂದ ಮೂರು ನೆಲೆಯ ಜಗುಲಿಯನ್ನು, ಕಡಿದು ಕೆಡುಹಿದ ಆನೆಗಳ ಉದ್ದಕೋಡಿನಿಂದ ಕಂಬಗಳನ್ನು, ಗಂಡುಗಲಿಗಳ ಗುಂಡುಗೋವಿ, ಸರಗೋವಿಗಳಿಂದ ಬೋದಿಗೆ ತೊಲೆಗಳನ್ನು ಕೈಸೆರೆ ಸಿಕ್ಕ ಹದಿನಾರು ಸಾವಿರಾಳುಗಳ ಕೈಯಿಂದ ಕಿತ್ತುಕೊಂಡ ಭರ್ಜಿಗಳಿಂದ ಜಂತೆಗಳನ್ನು ಪ್ರಾಸಪಟ್ಟಸಗಳಿಂದ ಹಾಸುಹಲಗೆಗಳನ್ನು, ವಂಕಿಗಳಿಂದ ಲೋವೆಗಳನ್ನು, ಬಾಣಗಳಿಂದ ಪಂಜರಗಳನ್ನು ಬಿಲ್ಲುದಾರಗಳಿಂದ ಬಿಗಿಹಗ್ಗಗಳನ್ನು, ಹಲವು ರೀತಿಯ ಅಲಗುಗಳಿಂದ ಮೇಲುಹೊದಿಕೆಗಳನ್ನು ಅಳವಡಿಸಿ. ವೀರಕ್ಕೆ ಬೀಡಾರವನ್ನು ರೌದ್ರಕ್ಕೆ ಭದ್ರಶಾಲೆಯನ್ನು

ಸಾಹಸಕ್ಕೆ ವಾಸಗ್ರಹವನ್ನು ಅಭಿಮಾನಕ್ಕೆ ಅರಮನೆಯನ್ನು ಗರ್ವಕ್ಕೆ ಗರುಡಿಯನ್ನು ರಚಿಸುವಂತೆ ಅಲುಗುಗಳ (=ಆಯುಧಗಳ) ಒಂದು ಮನೆಯನ್ನು ಅನುಗೊಳಿಸಿ ಅದನ್ನು ಗೆಲುವೆಂಬ ಹೆಣ್ಣಿನ ಮದುವೆಯ ಹಸೆಮಣೆಯನ್ನೇರುವಂತೆ ಸಂತಸದಿಂದೇರಿ ಒಡ್ಡೋಲಗಗೊಟ್ಟು ಅವರಲ್ಲಿ ಬೆಳೆದ ಹಗೆಯನ್ನು ತೀರಿಸಿದನು.

ಬಳಿಕ ಹೊಸಕೋಟೆಯನ್ನು ಮುತ್ತಿ ಅತಿಉಬ್ಬಸವನ್ನುಂಟುಮಾಡುವಷ್ಟರಲ್ಲಿ ಅಲ್ಲಿಯ ದೊರೆಯ ಪರವಾಗಿ ಬಂದ, ಜಗದೇವರಾಯನ ಒಡಹುಟ್ಟಿದವನಾದ ಅಂಕುಶರಾಯನನ್ನು ಬೆನ್ನಟ್ಟಿ ಆತನ ಪಡೆಯಲ್ಲಿಯ ಭೋಜರಾಜ, ಚೊಕ್ಕಳಿಕ ಎಂಬ ಹೆಸರಿನ ಎರಡು ಆನೆಗಳನ್ನೂ ಹಲವು ಬಿರುದು, ಚಿಹ್ನೆಗಳನ್ನೂ ಕಸಿದುಕೊಂಡು ಕಳುಹಿಸಿ ಆ ಕೋಟೆಯನ್ನು ವಶಪಡಿಸಿಕೊಂಡನು. ಕೆಲವು ದಿನಗಳ ಮೇಲೆ, ಮುನ್ನ ಜಗದೇವರಾಯನು ಹೊಸಕೋಟೆಯನ್ನು ವಶಪಡಿಸಿಕೊಳ್ಳುವಾಗ ಅಡ್ಡಬಂದುದನ್ನು ನೆನೆದು ಅವನ ಚನ್ನಪಟ್ಟಣ ನಾಗಮಂಗಲಗಳೆಂಬ ಮೂಲಕೋಟೆಗಳನ್ನು ಕಗ್ಗೊಲೆಯಿಂದ ಕೊಂಡು (ಅವನನ್ನು) ಹೊರದಬ್ಬಿ ಅದಕ್ಕೆ ಸಂಬಂಧಪಟ್ಟ ಬೆಳ್ಳೂರನ್ನು ಮುತ್ತಿದನು. ಮುನ್ನ ನೆರೆಯ ಕಿರುದೊರೆಗಳನ್ನು ಗೆದ್ದು ಉಬ್ಬಿ-ಕೊಬ್ಬಿನಿಂದ ಮೈಮೆರೆದು ಮೇರೆದಪ್ಪಿ ಜಂಭಕೊಚ್ಚುವ ಚಿಕ್ಕನಾಯಕನ ಹಳ್ಳಿಯ ದಳವಾಯಿಯಾದ ಪರಮರಾವುತನನ್ನು ಇರಿದು ಕೆಡುಹಿ ಕುತ್ತಿಗೆ ಕೊಯ್ದು ಮೂಗು ಕತ್ತರಿಸಿ ಅವನ ಬಲವನ್ನು ಬರಿದು ಮಾಡಿದನು. ಅದಕ್ಕಂಜಿ ಅವನ ದೊರೆಯಿತ್ತ ವಸ್ತ್ರಭೂಷಣಗಳೊಡನೆ ರಾಮಲಿಂಗವೆಂಬ ಆನೆಯನ್ನು ಕೊಂಡನು. ಇಂತು ಎಂಟೂ ದಿಕ್ಕುಗಳನ್ನು ಗೆದ್ದು ಕೀರ್ತಿ ಪಸರಿಸಿ ಮತ್ತೆ ಮಿತ್ರಭಾವದಿಂದಿದ್ದ ಇಕ್ಕೇರಿ, ಬಾಣಾವರ, ಬಸವಾಪಟ್ಟಣ ಮೊದಲಾದ ಪಟ್ಟಣಗಳ ಒಡೆಯರಿಗೆ ನಲ್ಮೆಯುಂಟು ಮಾಡಿ ಒಲುಮೆಯಿಂದ ಕನ್ನಡ ನಾಡೆಲ್ಲವನ್ನೂ (?) ವಶಪಡಿಸಿಕೊಂಡು (ಆ ಬಳಿಕ) ಅಗ್ರಹಾರದ ದೇವಾಲಯಗಳನ್ನು ಪೋಷಿಸುತ್ತ, ಹೊಸದಾಗಿ ನಿರ್ಮಿಸುತ್ತ, ಸಂತಸದಿಂದಿದ್ದು ಆನೆ ಕುದುರೆಗಳನ್ನೇರಿ ವೈಹಾಳಿಯ ವಿಳಾಸದಲ್ಲೊಮ್ಮೆ ಆಯುಧ ಹಿಡಿಯುವ ಗರುಡಿಗೆಲಸಗಳ ಸಾಮರ್ಥ್ಯಗಳಲ್ಲೊಮ್ಮೆ ಬಿಲ್ಲು-ಬಾಣಕೊಂಡು ಗುರಿಯಿಡುವ ಕೌಶಲದಲ್ಲೊಮ್ಮೆ, ವೀಣೆ ಹಿಡಿದು ಬಣ್ಣನೆಯ ಹಾಡುಗಳನ್ನು ನುಡಿಸುವ ಹೆಚ್ಚಳದಲ್ಲೊಮ್ಮೆ ಇಂಪಾದ ಸ್ವರವೆತ್ತಿ ಹಾಡುವ ಸ್ಪರ್ಧೆಯಲ್ಲೊಮ್ಮೆ ಅಂತಃಪುರದ ಕಾಂತೆಯರ ನರ್ತನಾವಲೋಕನದೊಳೊಮ್ಮೆ ಕಾವ್ಯನಾಟಕಾಲಂಕಾರಗಳ ಸಾರಸರ್ವಸ್ವ ರಸಾಸ್ವಾದನೆಯಲ್ಲೊಮ್ಮೆ ಪುರಾಣ-ಇತಿಹಾಸದಿ ಪುಣ್ಯ ಕಥಾಶ್ರವಣಾ ನುರಾಗದೊಳಮ್ಮೆ ದೇವಯಾತ್ರೆ, ಉತ್ಸವ ಸಂದರ್ಶನಗಳ ಆನಂದದಲ್ಲೊಮ್ಮೆ ಇಂತು ಉಳ್ಳ ಸಮಯವನ್ನೆಲ್ಲ ಸತ್ಕಾರ್ಯಗಳಲ್ಲಿ ಕಳೆದು ಅಳಿಯದ ವಿಮಲ ಕೀರ್ತಿಶರೀರವನ್ನು ಲೋಕದಲ್ಲಿ ನೆಲೆಗೊಳಿಸಿ ಸ್ವರ್ಗವಾಸಿಯಾದನು.

ಇಮ್ಮಡಿ ರಾಜರಸನ ಚರಿತೆ

ಬಳಿಕ ರಾಜರಸಕುಮಾರನಾದ ಇಮ್ಮಡಿ ರಾಜರಸನು ರಾಜ್ಯವಾಳುತ್ತ ಸಾಮರ್ಥ್ಯದಲ್ಲೂ ಪರಾಕ್ರಮದಲ್ಲೂ ಶಕ್ತಿಯಲ್ಲೂ ಸಾಹಸದಲ್ಲೂ ವೀರದಲ್ಲೂ ನಯದಲ್ಲೂ ಸತ್ಯದಲ್ಲೂ ನಲ್ಮೆಯಲ್ಲೂ ಯಶದಲ್ಲೂ ಜಾಣ್ಮೆಯಲ್ಲೂ ವಿದ್ಯೆಯಲ್ಲೂ ಚದುರಿನಲ್ಲೂ

ಆತ್ಮೀಯತೆಯಲ್ಲೂ ಏಳಿಗೆಯಲ್ಲೂ ಓಜೆಯಲ್ಲೂ ಉದ್ಯೋಗದಲ್ಲೂ ಧೈರ್ಯದಲ್ಲೂ ಧರ್ಮದಲ್ಲೂ ವಿನಯದಲ್ಲೂ ವಿವೇಕದಲ್ಲೂ ತಂದೆಗಿಂತಲೂ ಇಮ್ಮಡಿಯಾಗಿ (ಇಮ್ಮಡಿ ರಾಜರಸನೆಂಬ) ತನ್ನ ಹೆಸರನ್ನು ಅನ್ವರ್ಥಕಗೊಳಿಸಿದನು (ಮತ್ತು) ಅಷ್ಟದಿಕ್ಕುಗಳನ್ನು ಜಯಿಸಿ ಹಲವು ಜನ ದೊರೆಗಳಿಂದ ಹಲವು ಬಾರಿ ಧನ ಕನಕ ವಸ್ತುವಾಹನಗಳನ್ನು ಕಪ್ಪಗೊಂಡು ಆಶ್ರಯಿಸಿದವರನ್ನು ರಕ್ಷಿಸಿ ಬೇಡಿದವರಿಗಿತ್ತು ಪುರುಷೋತ್ತಮನ ಚರಣಕಮಲದ್ವಯದ ಸಂದರ್ಶನ, ಶ್ರವಣ, ಕೀರ್ತನಾದಿ ಪರಿಪಕ್ವವಾದ ಭಕ್ತಿರಸ ವಿಧಾನವನ್ನು ನಿಚ್ಚಣಿಗೆ ಮಾಡಿ ಮುಕ್ತನಾದನು.

ಕಂಠೀರವ ನರಸರಾಜ ಚರಿತೆ

ಬಳಿಕ ಬೆಟ್ಟದ ಚಾಮರಾಜರಸನ ಕುಮಾರನೂ ವೈರಿರಾಜರೆಂಬ ಗಜಗಳಿಗೆ ಸಿಂಹನಂತಿರುವವನೂ ಆದ ಕಂಠೀರವನರಸರಾಜನು ರಾಜ್ಯಾಭಿಷೇಕಗೊಂಡು ಹಗೆಗಳ ತಲೆಗಳ ಜೊತೆಗೆ ಪಾದಪೀಠವನ್ನು ಮೆಟ್ಟಿ ಅತಿ ಪರಾಕ್ರಮದಿಂದಿರುವಲ್ಲಿ-

ಬಸವಾಪಟ್ಟಣದ ಕೆಂಗೆ ಹನುಮಪ್ಪನಾಯಕನು ಇಕ್ಕೇರಿಯ ವೀರಭದ್ರ ನಾಯಕನ ಮೇಲಿನ ವೈರದಿಂದ ಯವನ ಕುಲದ ವಿಜಾಪುರಸುಲ್ತಾನ ಮಹಮ್ಮದ ಬಾದಶಹನಲ್ಲಿಗೆ ಹೋಗಿ ಅವನ ಕಾಲು ಹಿಡಿದು ರಣದುಲ್ಲಾಖಾನನೆಂಬ ಸೇನಪತಿಯೊಡನೆ ನಾಲ್ವತ್ತು ಸಾವಿರ ಕುದುರೆಗಳನ್ನೂ ನಾಲ್ವತ್ತಾನೆಗಳನ್ನೂ ಲಕ್ಷ ಕಾಲಾಳುಗಳನ್ನೂ ಒಡಗೊಂಡು ಬಂದು ಒಂದೇ ಬಾರಿಗೆ ಇಕ್ಕೇರಿಯನ್ನು ಒಕ್ಕಲಿಕ್ಕಿ ಜೀರ್ಣಿಸಿ ಕೊಳ್ಳಲು ಆ ತುರುಕ ಸೇನಾಪತಿಯು ಕೊಬ್ಬಿಯುಬ್ಬಿ ಕನ್ನಡನಾಡಿನಲ್ಲಿ ನನ್ನ ಹೆಬ್ಬಡೆಗೆ ಎದುರಾಗುವವರು ಒಬ್ಬರೂ ಇಲ್ಲೆಂದು ಮುಂದಕ್ಕೆ ಸಾಗಿ ಸೀರೆ (ಸಿರಾ)ಯದ ದೊರೆಯನ್ನು ಕೈಸೆರೆಗೊಂಡು ಹಾಯ್ದು ತುರುಗೆರೆಯವನನ್ನು ತೊತ್ತಳದುಳಿದು ಬೆಂಗಳೂರವನನ್ನು ಭಂಗಗೊಳಿಸಿ ಅವರವರ ದೇಶಕೋಶಗಳನ್ನು ವಶಪಡಿಸಿಕೊಂಡು ಬೀಗಿದನು. ತರುವಾಯ ಕೆಂಗೆ ಹನುಮನು ತಕ್ಕುದಲ್ಲೆಂದು ಹೇಳಿ ತಡೆದರೂ ಒಪ್ಪದೆ ಆವೇಶದಿಂದ ಮೀತಿಮೀರಿ ಶ್ರೀರಂಗಪಟ್ಟಣವನ್ನು ಬಳಸಿ ಸುತ್ತುವರಿದನು. ಅತಿಸಾಮರ್ಥ್ಯದಿಂದ ಮುಂದಿಟ್ಟ ಹೆಜ್ಜೆಯನ್ನು ಹಿಂದೆಗೆಯದೆ ಹಟತೊಟ್ಟು ನಡೆದು, ಹೊಡೆದುರುಳಿಸಿದ ಹೆಣದ ಬಟ್ಟಲಲ್ಲಿ ಅಗಳನ್ನು ಹೂಳಿ ಹಗಲಲ್ಲೆ ಕಗ್ಗೊಲೆಗೆ ಮನಸ್ಸು ಮಾಡಿ ಅತಿಭರದಿಂದ ಮುತ್ತಿ ಸುರಿಸಿದ ಆಯುಧಗಳ ಮಳೆಗೆ ಹೆದರದೆ ಕೋಟೆಯನ್ನು ಮುಟ್ಟಿದನು. (ಆಗ) ದೊಡ್ಡ ಏಣಿಗಳನ್ನೇರಿ, ತಲೆ ಕತ್ತರಿಸಿ ಉರುಳಿಬಿದ್ದರೂ ನಿಟ್ಟೋಟದಿಂದ ಅಟ್ಟಣೆಯವರೆಗೂ ಏರಿ, ದೇಹಗಳನ್ನು ಈಟಿಗಳಿಂದ ಇರಿದಿರಿದು, ಅವನ ತಲೆಗೇರಿದ ಸೊಕ್ಕಿನೊಡನೆಯೆ (ಲಗ್ಗೆಯೇರುವವರನ್ನು) ಇಳಿಯುವಂತೆ ಕೆಡುಹಲಾಗಿ ಅವನು ಕೆಟ್ಟು ಮುರಿದು ಬಾಯ್ಬಡಿದುಕೊಂಡು ಕೆಂಗೆ ಹನುಮನ ಮಡಿಲಲ್ಲಿ ತಲೆಯಿಟ್ಟು ನುಡಿದನು :- "ಎಲೆ ನಾಯಕ, ನೀನಂದ ಮಾತು ನಿಜವಾಯಿತು. ನಾನು ವಿಜಾಪುರವನ್ನು ಬಿಟ್ಟಾಗಿನಿಂದ ಇಂದಿನವರೆಗೂ, ಮತ್ತೇನು ! ಹುಟ್ಟಿದಂದು ಮೊದಲು ಇಂದುವರೆಗೂ ಈ ಪರಿಯ ವೀರನನ್ನು ಕಂಡಿರಲಿಲ್ಲ. ಅಕಟಕಟಾ ಈ ಮುಂಚೆ ಈ ತೆರದ ಬಲ್ಲಿದನೆಂದು ಬಗೆಯದೆ

ಸೇನೆಯನ್ನೆಲ್ಲ ಬಲಿಗೊಟ್ಟೆನು. ಪಡೆದ ಗೆಲುವನ್ನು ದೂರಗೊಳಿಸಿದೆನು. ಹೊಂದಿದ ಯಶವನ್ನು ಹುಸಿಗೊಳಿಸಿದೆನು. ಹತ್ತಿದ ಏಳಿಗೆಯನ್ನು ಬಯಲುಗೊಳಿಸಿದೆನು. ನಿನ್ನ ನುಡಿಯನ್ನು ಅಲ್ಲಗಳೆದೆನು. ಭಿನ್ನಗೊಂಡ ತಂತ್ರದಿಂದ ಬೀದಿಗಿಳಿದೆನು. ಮುನ್ನಿನ ಸ್ಥಿತಿಯಿಂದಾಗಿ ಮೋಸಹೋದೆನು. ಹಿಂದಿನ ಓಜೆಯನ್ನು ಬೀಳುಗೆಡಹಿದೆನು. ಈ ಸಮುದ್ರದಲ್ಲಿ ಸುತ್ತುವರಿದ ಭೂಮಂಡಲದಲ್ಲಿರುವ ವೀರದೊರೆಗಳಲ್ಲಿ, ಈವರೆಗೆ ನನ್ನ ಹೆಸರು ಕೇಳಿ ಬಸವಳಿಯದವರೂ ಪತಾಕೆಗಂಡು ಸಾಮರ್ಥ್ಯಗುಂದದವರೂ ಸೇನೆ ಕಂಡು ತೇಜಗುಂದದವರೂ ಆಯುಧಗಳ ಹೊಳಪಿಗೆ ಕಂಗೆಡದವರೂ ಇಲ್ಲ.

ಹಾಗಿದ್ದ ವೀರನು ಈ ಪಟ್ಟಣದಲ್ಲಿ ಹುರುಳುಗೆಟ್ಟೆನು. ನನ್ನ ಮನ್ನಣೆಯ ಬಂಟರು ಈ ಲಗ್ಗೆಯಲ್ಲಿ ಹನ್ನೆರಡು ಸಾವಿರವಳಿದರು. ಉಳಿದವರೂ, ಊರವರು ಇರುಳಲ್ಲಿ ಹೊರಬಿದ್ದು ಉಂಟುಮಾಡುವ ಕೋಟಲೆಯಿಂದ ಕಂಗೆಟ್ಟು ನಶಿಸಿ ಇಂದು ನಾಳಿನಲ್ಲಿ ನನ್ನನ್ನು ತೊರೆದು ಹೋಗುವರು. ಅವರೇನು ಮಾಡುವರು ? ಕಳವಾಗುವ ಕುದುರೆಗಳಿಗೂ ಸೆಳೆಯಲ್ಪಡುವ ಆಯುಧಗಳಿಗೂ ಕೊಯ್ಯುವ ತಲೆಗಳಿಗೂ ಕೊರೆಯುವ ಮೂಗುಗಳಿಗೂ ಲೆಕ್ಕವಿಲ್ಲ. ಲಗ್ಗೆಯಿಟ್ಟು ಅಲ್ಲಿಗೆ ಹೋದುದರಿಂದ ಬಹು ಕಷ್ಟವಾಯಿತು, ಬಿಟ್ಟು ಹೋಗಲೂ ಮಾರ್ಗವಿಲ್ಲ (ಈ) ಕಾರ್ಯಹಾನಿಯಲ್ಲಿ ಕೈ ಹಿಡಿದು ಕಾಯ್ದು ನಮ್ಮನ್ನು ಪಾರುಗಾಣಿಸಬೇಕು. ಅದಕ್ಕೆ ಈ ಪಟ್ಟಣದವನ ಕಡೆ ಗಡಿಯವರೆಗೆ, ನಮ್ಮ ನಾಡವರು ಕಾಣದ ಹಾಗೆ ಅವನ ರಾಯಸವನ್ನು ಹೊರಡಿಸಿ ಕೊಟ್ಟರೆ ಕ್ಷೇಮದಿಂದ ಹೋಗುತ್ತೇನೆ" ಎಂದು ಹೇಳಿದನು. ಅವನೂ ಹಾಗೆಯೇ ಮಾಡಿದನು. ಬಳಿಕ ಆ ತುರುಕ ಸೇನಾಪತಿಯು ಕುಳಿಯಿಂದೆದ್ದ ಕಾಡಾನೆಯಂತೆಯೂ ಹುಲಿಯೆರಗಿ ಬದುಕುಳಿದ ಹುಲ್ಲೆಯಂತೆಯೂ ಅಡ್ಡಿ ದೂರಾದ ಹಾವಿನಂತೆಯೂ ಅಂಟು ಕಳೆದ ಹಕ್ಕಿಗಳಂತೆಯೂ ಬಲೆಯಿಂದ ತಪ್ಪಿಸಿಕೊಂಡ ಮೊಲದಂತೆಯೂ ಬಾಲ ಹರಿದ ಪಿಳ್ಳೆಯಂತೆಯೂ ಕಟ್ಟು ಬಿಚ್ಚಿದ ಕಳ್ಳನಂತೆಯೂ ನಿಂತಲ್ಲಿ ನಿಲ್ಲದೆ ಹಿಂದಿರುಗಿ ನೋಡದೆ ಓಡಿ ಹೋಗಿ ತನ್ನ ಬೀಡು ಸೇರಿದನು. ಅಂದು ಮೊದಲು ತುರುಕರು ಈ ಕಂಠೀರವ ನೃಪನ ಹೆಸರೆತ್ತಲೂ ಈ ಕಡೆಗೆ ಮುಖಮಾಡಲೂ ಧೈರ್ಯಪಡದೆ ಸೊಕ್ಕಳಿದು ಹುದುಗಿಕೊಂಡರು.

ಈತನೂ ಆ ಯವನ ಪಡೆಯನ್ನು ಜಯಿಸಿ ಕನ್ನಡ ನಾಡಿನಲ್ಲಿ ಪ್ರಸಿದ್ಧನಾಗಿ ದಿಗ್ವಿಜಯ ಮಾಡಲುದ್ಯೋಗಿಸಿ ಮೂಡಲು ನಡೆದು ವಿಜಯಾಪುರದ ಸೇನಾನಿಯಾದ ಖಾನ್‌ಖಾನನ ಸೇನೆಯನ್ನು ಬೆನ್ನಟ್ಟಿ ರಾಯಕೋಟೆ, ರತ್ನಗಿರಿ, ರಾಮಗಿರಿ, ವೀರಭದ್ರದುರ್ಗ, ಕೆಂಗೇರಿ, ಪೆನ್ನಗರಗಳನ್ನು ವಶಪಡಿಸಿಕೊಂಡನು. ತೆಂಕಲು-ಮಧುರೆಯ ತಿರುಮಲನಾಯಕನ ಸೇನೆಯನ್ನು ಯುದ್ಧದಲ್ಲಿ ಗೆದ್ದು ಕೊಳೆಯ ಸಾಂಬಳ್ಳಿ ಸತ್ಯಮಂಗಲ ಡಣಾಯಕನ ಕೋಟೆಗಳನ್ನು ಕೊಂಡನು. ಪಡವಲು-ಕೆಳಲೆಯನಾಡ ಪಿರಿಯಪಟ್ಟಣವನ್ನು ಕಗ್ಗೊಲೆಗೈದು ಸರ್ವಸ್ವದೊಡನೆ ಆ ಮಲ್ಲರಾಜನನ್ನು ಕೈಸೆರೆಹಿಡಿದನು. ಬಡಗಲು-ಮಲ್ಲುಕನ ದಳವನ್ನು ಮಳ್ಮಳಗೊಳಿಸಿ ತುರುಗೆರೆ, ಕಡಬ, ಕಲ್ಲೂರು, ಹೆಬ್ಬೂರು ಮೊದಲಾದ ಹಲವು ಪಟ್ಟಣಗಳನ್ನು ಸೆಳೆದು ಹಿರಿಮೆ ಪಡೆದು ಧರ್ಮದಿಂದ ನೆಲವನ್ನಾಳಿದನು. (ಬಳಿಕ) ನಿತ್ಯಸುಖವನ್ನು ಬಯಸಿ ತತ್ವಾರ್ಥವನ್ನು ತಿಳಿದು ಪುರುಷೋತ್ತಮನ ಭಕ್ತಿಯಲ್ಲಲ್ಲದೆ ಮುಕ್ತಿ ದೊರಕೊಳ್ಳದೆಂದು

ನಿಶ್ಚಯಿಸಿದನು. (ಮತ್ತು) ಅವತರಿಸುತ್ತಲೆ ಆಪತ್ತಿನಲ್ಲಿರುವವನ ರಕ್ಷಣೆ ದುಷ್ಟನ ಶಿಕ್ಷೆಯನ್ನು ಕ್ಷಣ ವಿಳಂಬವಾಗದಂತೆ ನೆರವೇರಿಸಿದ ನರಸಿಂಹನ ದಿವ್ಯಮೂರ್ತಿಯನ್ನು ನೆನೆದು, ಧ್ಯಾನಿಸಿ ಒಲಿದು ಕೊಂಡಾಡಿ ಅಡಿಗೆರಗಿ ಸೇವಿಸಿ ತಣಿದು ಆನಂದರಸದಲ್ಲಿ ಮುಳುಗಿದ್ದರೂ ತನ್ನಂತೆ ಈ ಲೋಕದ ಜನರೆಲ್ಲ ಬದುಕಲೆಂದು ತಾನಿರುವ ಅರಮನೆಯ ಮುಂದೆ ಸುತ್ತಬಳಸಿದ ಎತ್ತರದ ಪ್ರಾಕಾರ ವಿಸ್ತಾರವಾದ ಕೈಸಾಲೆ, ಬಾನಿನವರೆಗೆ ಬೆಳೆದ ಏಳಂತಸ್ತಿನ ಗೋಪುರವೂ ಮಂಟಪಗಳೂ ಒಳವಳಯದಲ್ಲಿ ಪರಿವಾರದೇವತೆಗಳ ಮಂದಿರಗಳೂ ರಂಗುವಡೆದ ರಂಗಮಂಟಪವೂ ಕತ್ತಲೆಯೊಡಗೂಡಿದ ಗರ್ಭಗೃಹವೂ ಒಪ್ಪಿರುವ ದೇವಾಲಯವನ್ನು ಕಟ್ಟಿಸಿದನು. (ಹೀಗೆ) ಸಿದ್ಧಗೊಂಡ ಲಕ್ಷ್ಮೀನರಸಿಂಹನಿಗೆ ತನ್ನ ಬೊಕ್ಕಸದಲ್ಲಿ ಹೆಸರಾದ ಮುತ್ತಿನ ಏಕಾವಳಿಗಳೂ ವಜ್ರದ ಮುಕುಟಗಳೂ ಪಚ್ಚೆಯ ತೋಳುಬಂದಿಗಳೂ ಮಾಣಿಕದ ಕಡಗಗಳೂ ನೀಲದ ಉಡೆನೂಲುಗಳೂ ಮೊದಲಾದ ಹಲವು ಬಣ್ಣದ ಹೊನ್ನ-ರನ್ನದ ಉತ್ತಮಾಭರಣಗಳನ್ನು ಬಂಗಾರದ ತಟ್ಟೆ ತಳಿಗೆ ಬಟ್ಟಲು ಕಲಶ ಮೊದಲಾದ ಉಪಕರಣಗಳನ್ನು, ಹಲವು ತರದ ವಾಹನಗಳನ್ನು ಮಾಡಿಸಿ ವರ್ಷದ, ತಿಂಗಳ, ಪಕ್ಷದ ದಿನನಿತ್ಯದ ಜಾತ್ರೆ-ಉತ್ಸವಗಳನ್ನು ಮಾಡಿ ಮೆಚ್ಚಿಸಿ ಕೆರೆ-ಕಟ್ಟೆ ಕಾಲುವೆಗಳಿಂದೊಪ್ಪುವ ನಾಡುಗಳನ್ನು ದೇವಾಲಯದ ಸ್ವಾಧೀನಗೊಳಿಸಿದನು. (ತಾನು) ಯಾವತ್ತು ಆತನನ್ನು ಧ್ಯಾನಿಸುವ ಚಿತ್ತದಿಂದ ಅನೇಕ ಸೇವೆಗಳನ್ನೆಸಗುತ್ತ ಹಲವು ವರ್ಷವಿದ್ದು ತಣಿದು ಪರವಾಸುದೇವನ ಅಡಿಯನ್ನು ಸೇವಿಸಲೆಂದು ಪರಮಪದ ಹೊಂದಿದನು.

ದೊಡ್ಡ ದೇವರಾಜ ಚರಿತೆ

ಶ್ರೀಮತ್ ಸಕಲ ಸಾಮಂತ ರಾಜರ ಶಿರಗಳಿಗೆ ಅಲಂಕಾರದಂತಿರುವ ಪಾದಕಮಲವುಳ್ಳನೆನಿಸಿದ ದೇವರಾಜನಿಗೆ ನಾಲ್ವರು ಮಕ್ಕಳು, ಐರಾವತಕ್ಕೆ ನಾಲ್ಕು ಕೋರೆಗಳಂತೆಯೂ ಹಿರಣ್ಯಗರ್ಭನಾದ ಬ್ರಹ್ಮನಿಗೆ ನಾಲ್ಕು ಮುಖಗಳಂತೆಯೂ ವಿಷ್ಣುವಿಗೆ ನಾಲ್ಕು ತೋಳುಗಳಂತೆಯೂ ಅತಿಶಯತೆಯುಳ್ಳವರೆನಿಸಿ ಪ್ರಸಿದ್ಧರಾದರು. ಆ ದೇವರಾಜರಸನ ನಾಲ್ವರು ಕುಮಾರರಲ್ಲಿ ದೊಡ್ಡ ದೇವರಾಜನು (ಧರ್ಮ ಅರ್ಥ ಕಾಮ ಮೋಕ್ಷಗಳೆಂಬ) ನಾಲ್ಕು ವರ್ಗಗಳಲ್ಲಿ ಧರ್ಮದಂತೆಯೂ (ಸಾಮ ದಾನ ಭೇದ ದಂಡಗಳೆಂಬ) ನಾಲ್ಕು ಉಪಾಯಗಳಲ್ಲಿ ಸಾಮದಂತೆಯೂ (ಋಗ್ಯಜಸ್ಸಾಮಾಥರ್ವವೆಂಬ) ನಾಲ್ಕು ವೇದಗಳಲ್ಲಿ ಋಗ್ವೇದಂತೆಯೂ (ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ ಎಂಬ) ನಾಲ್ಕು ವ್ಯೂಹಗಳಲ್ಲಿ ವಾಸುದೇವನಂತೆಯೂ ಮೊದಲಿಗನಾಗಿ ಜಗತ್ತಿನಲ್ಲಿ ಪ್ರಸಿದ್ಧಿ ಪಡೆದನು. ಅವನ ಇರುವಿಕೆಯನ್ನು ಗಮನಿಸಿ ಅವನು ಶರೀರ ಧರಿಸಿದ ಚಂದ್ರಕುಲದ ಮಹಿಮೆಯೆಂದೂ ಗಂಡುರೂಪಾದ ಯದುಕುಲದ ಏಳಿಗೆಯೆಂದೂ ಹೊಸದೊಂದು ವೇಷದಿಂದೆಸೆವ ಭೂಲೋಕದ ಪುಣ್ಯವೆಂದೂ ಕೈಕಾಲು ಧರಿಸಿದ ಕನ್ನಡನಾಡಿನ ಕೋಪವೆಂದೂ ಬೇರೊಂದು ದೇಹ ಧರಿಸಿದ ಸಜ್ಜನರ ಭಾಗ್ಯೋದಯವೆಂದೂ (ವಿದ್ವಾಂಸರು) ಬಗೆದು ಬಣ್ಣಿಸುವರು ಮತ್ತು ಇವನ ಮೈಸಿರಿಗೆ ಅಳುಕಿ ಕಾಮನು ದೇಹ ಕುಂದಿದವನಾನೆಂದೂ ಮುಖದ

ಸೌಂದರ್ಯಕ್ಕೆ ನಾಚಿ ಚಂದಿರನು ಕುಂದಿದನೆಂದೂ ತೇಜಕ್ಕೆ ಸತ್ವಗುಂದಿ ಸೂರ್ಯನು ಭವಣೆಗೊಳ್ಳುವನೆಂದೂ ಭಾವಿಸುವರು. ಈತನು ಧರ್ಮದಲ್ಲಿ ಯುಧಿಷ್ಠಿರನನ್ನೂ ಸತ್ಯದಲ್ಲಿ ರಾಮಚಂದ್ರನನ್ನೂ ಸರಿಗಟ್ಟಿ ತನ್ನ ಬಳಿಯಿದ್ದು ಸೇವಿಸುವ ತಮ್ಮಂದಿರು ಸಹಿತ ಸಂತಸದಲ್ಲಿ, ತನ್ನ ವೀರವನ್ನು ಮಹಾಯುದ್ಧದಲ್ಲಿ, ತನ್ನ ಚಾತುರ್ಯವನ್ನು ಆಶ್ರಯಿಸಿದವರನ್ನು ರಕ್ಷಿಸುವುದರಲ್ಲಿ ತನ್ನ ಔದಾರ್ಯವನ್ನು ಅಧ್ಯಯನ ನಿರತರಾದ ಬ್ರಾಹ್ಮಣರಲ್ಲಿ ತನ್ನ ಪ್ರೀತಿಯನ್ನು ತನ್ನನ್ನು ನಂಬಿದವರಲ್ಲಿ ತನ್ನ ದಯೆಯನ್ನು ದುಃಖಿಗಳಲ್ಲಿ ತನ್ನ ಐಸಿರಿಯನ್ನು ಸೇವಕರ ಸಮೂಹದಲ್ಲಿ, ತನ್ನ ಸೊಬಗನ್ನು ಕೈ ಹಿಡಿದ ರಾಣಿಯರಲ್ಲಿ, ತನ್ನ ಸಿಟ್ಟನ್ನು ಕಳ್ಳರಲ್ಲಿ ತನ್ನ ಮತ್ಸರವನ್ನು ಸುಳ್ಳು ಹೇಳುವವರಲ್ಲಿ, ತನ್ನಾಸೆಯನ್ನು ಕೀರ್ತಿಯಲ್ಲಿ, ತನ್ನ ಭಕ್ತಿಯನ್ನು ಪುರುಷೋತ್ತಮನಲ್ಲಿ ನೆಲೆಗೊಳಿಸಿ ಕ್ಷೇಮದಿಂದಿರುವನು ಮತ್ತು ತನ್ನ ಒಡನಾಡಿ ಹಗೆಗಳೆನಿಸುವ (ತನ್ನ) ಏಕಾದಶ ಇಂದ್ರಿಯಗಳನ್ನು ಗೆದ್ದು ವಶಪಡಿಸಿಕೊಂಡ ಬಲದಿಂದ ಒಳಹಗೆಗಳಾದ ಕಾಮಾದಿ ಅರಿಷಡ್ವರ್ಗವನ್ನು ಸದೆಬಡಿದು ಯಾವಾಗಲೂ ವಿದ್ಯೆ ಕಲಿಯುವುದೂ ಚಾತುರ್ಯ ಸಂಪಾದಿಸುವುದೂ ವಿನಯವನ್ನು ತೋರ್ಪಡಿಸುವುದೂ ತ್ಯಾಗ ಮಾಡುವುದೂ ಕೀರ್ತಿಯನ್ನು ಪಸರಿಸುವುದೂ ಶಕ್ತಿಯನ್ನು ವಿಸ್ತರಿಸುವುದೂ ಶೌರ್ಯವನ್ನು ಬೇರುಬಿಡಿಸುವುದೂ ಸಾಹಸವನ್ನು ಸೂಸುವುದೂ ಸತ್ಯವನ್ನು ಕಾಪಾಡುವುದೂ ಜಯವನ್ನು ಸಂಪಾದಿಸುವುದೂ ಮೊದಲಾದ ಒಳ್ಳೆಯ ಕಾರ್ಯಗಳಲ್ಲಿಯೇ ಹೊತ್ತುಗಳೆಯುತ್ತ ಹುಸಿಗೂ ಹರಟೆಗೂ ಮಾಯೆಗೂ ಮರವೆಗೂ ಕಳವಿಗೂ ಕಪಟಕ್ಕೂ ಹಿಂಸೆಗೂ ಚಾಡಿಗೂ ಬಿರುನುಡಿಗೂ ಬೇಟೆಗೂ ಪಗಟೆಯಾಟಕ್ಕೂ ಹಗಲುನಿದ್ದೆಗೂ ಜೂಜಿಗೂ ವೇಶ್ಯಾಗಮನಕ್ಕೂ ಸೊಕ್ಕಿಗೂ ಜಂಭಕ್ಕೂ ಇಂಬುಗೊಡದೆ ಯಶದಲ್ಲೂ ತೇಜದಲ್ಲೂ ಚಂದ್ರ-ಸೂರ್ಯರು ಒಂದಾಗಿ ಬಂದು ದೇಹ ಧರಿಸಿದರೆಂಬ ಸಂದೇಹವನ್ನುಂಟು ಮಾಡುತ್ತ ಆಶ್ರಯಿಸಿದಲ್ಲೂ ಹಗೆಗಳಲ್ಲೂ ಕ್ರಮವಾಗಿ ತಂಪು ಬಿಸುವುಗಳನ್ನುಂಟು ಮಾಡುತ್ತ ತಾನು ನಿರ್ಮಲನಾಗಿಯೂ ವೈರಿ ರಾಣಿಯರ ಮುಖದಲ್ಲಿ ಮಾಲಿನ್ಯ (ದುಃಖ)ವನ್ನು ಪರಿಶುದ್ಧನಾಗಿಯೂ ಪ್ರಜೆಗಳಲ್ಲಿ ರಾಗವನ್ನೂ (ಟಿ. ೧ ಪ್ರೇಮ ೨ ಮನೋವಿಕಾರ, ಸಿಟ್ಟು) ಉಂಟುಮಾಡುತ್ತ ವೀರದ ಮೊಳಕೆ, ಚಾತುರ್ಯದ ಬೆಳೆ, ದಯೆಯ ಸೊಂಪು, ದಾಕ್ಷಿಣ್ಯದ ಪೆಂಪು, ನಯದ ಮೊನೆ, ಸತ್ಯದ ಸಾಮರ್ಥ್ಯ, ಚದುರದ ಬಲ್ಪು, ಜಾಣ್ಮೆಯ ಒಳ್ಪು, ಜಯದ ಮೋಡಿ, ಯಶದ ಸೊಬಗು, ದಾನದ ಪ್ರತಿಜ್ಞೆ, ಧರ್ಮದ ಕಾಣ್ಕೆ, ತಿಳಿವಿನ ಮೆಚ್ಚು, ಧೀರತೆಯ ಹೆಚ್ಚು, ಒಸಗೆಯ ಉಬ್ಬು ಓಜೆಯ ಕೊಬ್ಬು, ಸಿರಿಯ ಕೂಟ, ಸಿಂಗಾರದ ಆಟ, ಒಲವಿನ ನಂಟು, ಉತ್ಸವದ ನಣ್ಪು ಎಂದು ಬಲ್ಲವರು ಬಗೆಯಲು ಬೆಟ್ಟದಂತೆಯೂ ಹೆಗ್ಗಡಲಂತೆಯೂ ಅಷ್ಟಿಷ್ಟಕ್ಕೆ ಕಂಪಿಸದೆ ಕದಡದೆ ಇಂತು ಇರುವನು. ಸುಳಿಕರುಳನ್ನು ಚಂದ್ರನಂತಿರುವ ಹಣೆಯನ್ನು ಕೊಂಕಿದ ಹುಬ್ಬನ್ನು ಬೊಗಸೆಗಣ್ಣುಗಳನ್ನು ಮೊನೆಹಲ್ಲನ್ನು ಮುಗುಳುನಗೆಯನ್ನು ಕೆಂಪುಬಾಯ್ದೆರೆಯನ್ನು ಶಂಖದಂತಿರುವ ಕೊರಳನ್ನು ದೊಡ್ಡ ಹೆಗಲನ್ನು ಹರವಾದ ಎದೆಯನ್ನು ನಿಡುದೋಳನ್ನು ಬಡನಡುವನ್ನು ಹೊಳೆಯುವ ತೊಡೆಯನ್ನು ಮೃದುಪಾದವನ್ನು ಕಂಡು ಮರುಳಾಗಿ ಮೇರೆ ಮೀರಿ ಮೈಮರೆತು ಏಕಾಂತದಲ್ಲಿ ಮತ್ತೇರಿ ಮೇಲೆ ಬೀಳುವ ಸರಿದೊರೆಯ ವೇಶ್ಯೆಯರನ್ನು ಸದೆದು ಭಂಗಿಸುವ

ಸತ್ಯಸದಾಚಾರಗಳಿಂದಲೂ ಸತ್ಯಪ್ರೇಮಿ, ಶೌರ್ಯದ ಒಡೆಯ ಹುಸಿವರ ವಿಟ-(=ವೈರಿ) ಮುದ್ದುಗರ ಮೊದಲಿಗ, ಸಮರ್ಥರ ಅರಸ, ಪರಾಕ್ರಮಿಗಳ ಒಡೆಯ, ಗರ್ವಿತರ ಪ್ರಿಯಕರ, ಜಾಗ್ರತದೊರೆ, ಹೋರಾಟಗಾರರ ಒಡೆಯ, ಬಲ್ಲಿದರ ವಲ್ಲಭನೆಂಬಿವು ಮೊದಲಾದ ಹಲವು ಬಿರುದುಗಳನ್ನು ಕೇಳಿ ಕಿಡಿಗೆದರಿ ಸಿಟ್ಟು-ಮತ್ಸರವುಂಟಾಗಿ ದಂಡೆತ್ತಿ ಬರುವ ದೊಡ್ಡ ಹಗೆಗಳ ಸೈನ್ಯವನ್ನು ಸೋಲಿಸುವ ಶೌರ್ಯ ಪರಾಕ್ರಮಗಳಿಂದೊಡಗೂಡಿ ಕೀರ್ತಿಶಾಲಿಯಾಗಿ ಮೆರೆಯುವ ಈತನನ್ನು ಮುನ್ನ ಆಚರಿಸಿದ ಹಲವು ವ್ರತಗಳಿಂದ ದಮಯಂತಿ ನಳನನ್ನು, ಸುದಕ್ಷಿಣೆ ದಿಲೀಪನನ್ನು, ಸೀತೆ ರಾಮನನ್ನು, ರೋಹಿಣಿ ಚಂದ್ರನನ್ನು, ಸಚಿದೇವಿ ದೇವೇಂದ್ರನನ್ನು, ಗಿರಿಜೆ ಶಂಕರನನ್ನು, ಲಕ್ಷ್ಮಿ ನಾರಾಯಣನನ್ನು ಕೂಡಿದಂತೆ ಕೂಡಿದ ಅಮೃತಾಂಬೆಯೆಂಬರಸಿ ಎಡಬಿಡದೆ ಕಾಂತಿಯು ಸೂರ್ಯನಲ್ಲಿ, ಕಳೆಯು ಚಂದ್ರನಲ್ಲಿ, ತಂಪು ಶ್ರೀಗಂಧದಲ್ಲಿ, ಒಪ್ಪುವಂತೆ ಒಪ್ಪಿ ಹೊರಗೆ ಕಾಣಿಸದೆ ಮನು ಮುಂತಾದ (ಪ್ರಾಚೀನ ಋಷಿಗಳ) ಧರ್ಮಶಾಸ್ತ್ರಗಳು ವೇದಾರ್ಥವನ್ನು, ಕೀರ್ತಿಸ್ತ್ರೀಯು ಜಯವಂತನನ್ನು, ಬುದ್ಧಿಯು ಗಣೇಶನನ್ನು, ಧೈರ್ಯವು ದೃಢಸತ್ವವನ್ನು, ಶುದ್ಧಿಯು ಸಚ್ಚಾರಿತ್ರ್ಯವಂತನನ್ನು, ಕ್ಷಮೆಯು ಜಿತಾತ್ಮನನ್ನು, ದಯೆಯು ಧಾರ್ಮಿಕನನ್ನು, ನೀತಿಯು ನೇಮಗಾರನನ್ನು ಬಳಿಸೇರುವಂತೆ ಸೇರಿದಳು.

ಇಂತು ಇಬ್ಬರೂ ಹಲವು ವರ್ಷಗಳ ಕಾಲ ಹೊಸಹೊಸತೆನಿಸಿ ಪಸರಿಸುವ ಸ್ನೇಹದಿಂದ ಸಂತಸದಿಂದಿರುತ್ತಿರಲು-ಅರಸಿಯು ಒಂದು ದಿನ ಚಿಂತೆಯಿಂದ ಕಣ್ಣೆವೆ ಮಿಡುಕಿಸದೆ ಮೌನದಿಂದಿರಲು ಅವಳ ದಾಸಿಯರೂ ಮನವರಿತು ಒಳ್ಳೆಯ ಮಾತುಗಳಿಂದ ಒಪ್ಪಿಸುವ ವೃದ್ಧೆಯರೂ ಸುತ್ತುವರಿದಿರಲಾಗಿ ಎಡ ಅಂಗೈಯಲ್ಲಿ ಮುಖಕಮಲವನ್ನಿಟ್ಟು ನಿಟ್ಟುಸಿರು ಬಿಡುತ್ತ ನಡುನಡುವೆ ಎವೆಯಲ್ಲಾಟದಿಂದ ಉದುರುವ ಕಂಬನಿಯಿಂದ ಉಟ್ಟ ರೇಶಿಮೆಯ ಬಟ್ಟೆಯನ್ನು ನೆನೆಯಿಸುತ್ತ ಚಿಂತೆಯಲ್ಲಿದ್ದಳು.

(ಆಗ) ಅರಸರನು ಹತ್ತಿರ ಬಂದು (ರಾಣಿಯು) ಎದುರುಗೊಳ್ಳುವುದನ್ನು ತಡೆದು, ತಾನು (ಅವಳ) ಮೃದುಹಾಸಿಗೆಯ ಮೇಲೆ ಕುಳಿತುಕೊಂಡು "ಎಲೆ ಅರಸಿ ! ನೀನು ಉಟ್ಟು ತೊಟ್ಟು ಗಂಧಪೂಸಿ ಹೂಮುಡಿದು ಆನಂದಿಸದೆ ಬರಿದೆ ಏಕೆ ಹಗಲು ಕಂಡ ಚಂದ್ರನಂತೆ ಮಂಜು ಮುಸುಕಿದ ತಾವರೆಯಂತೆ, ಹೊಗೆಸುತ್ತಿದ ಪುತ್ಥಳಿಯಂತೆ, ಬಿಸಿಲು ಹೊಡೆದ ನೈದಿಲೆಯಂತೆ ಬಾಡಿ ಬಣ್ಣಗುಂದಿ ಬಸವಳಿದು ಚಿಂತಿಸುತ್ತಿರುವೆ ? ಎಷ್ಟು ಪರಿಯಾಗಿ ವಿಚಾರಿಸಿದರೂ ನನ್ನಲ್ಲಿಯೂ ನನ್ನ ಅಂತಃಪುರದವರಲ್ಲಿಯೂ ತಪ್ಪು ಎಳ್ಳಷ್ಟು ಇಲ್ಲ. ಅದೆತ್ತಲಿಂದ ಬಂತು ? ಯಾವ ರೀತಿ ನೆಲೆಗೊಂಡಿತು ? ಇದೇನು ದುಃಖವೋ ಮುಳಿಸೋ ಮರುಕವೋ? ಹೇಳು. ಎಚ್ಚರಾಗು, ನನ್ನ ಮುಖ ನೋಡು ಮಾತನಾಡು ಬಣ್ಣಿಸು" ಎಂದು ಹಲವು ಬಾರಿ ಬೆಸಗೊಳಲು ಪ್ರತ್ಯುತ್ತರವೀಯಲಾರದೆ ಬದಿಯಲ್ಲಿದ್ದ ದಾಸಿಯರ ಮುಖ ನೋಡಲಾಗಿ ಅವಳು ಮೆಲುಮಾತಿನಿಂದ "ಎಲೆ ದೇವ ! ದೇವರು ದಯೆ ಗೈಯುವಾಗ ಕೊರತೆ ಎಲ್ಲಿಂದ ಬರುವುದು, ಹೇಗಿದ್ದರೂ ದೇವರಡಿಗಳಲ್ಲಿ ಅರಸಿಯರಿಗೆ ಮುನಿಸು ಹೇಗೆ

ಉಂಟಾಗುವುದು ? ಆ ಎಣಿಕೆ ನಿಲ್ಲಲಿ. ಅಲ್ಲದೆ ಅರಸಿಯರು ಹಲವು ದಿವಸಗಳಿಂದ ಶಿಶುವನ್ನು ಬಯಸಿ ದುಃಖಪಡುವುದು ಎಷ್ಟೋ ಉಂಟು. ಇಷ್ಟು ಹೊತ್ತು ಒಂದೆಡೆಯಲ್ಲಿ ನಿಲ್ಲದೆ ಕುಳಿತಿರದೆ ಮಲಗದೆ ರೇಶಿಮೆಯ ಬಟ್ಟೆಗಳನ್ನೂ ಆಭರಣಗಳನ್ನೂ ತಿಲಕವನ್ನೂ ಮುಡಿಯುವ ಮಾಟವನ್ನು ವೀಳೆಯವನ್ನೂ ತಮ್ಮ ಒತ್ತಾಯದಿಂದ ಮಾಡುತ್ತ ದೇವರಡಿಗಳಲ್ಲಿಯ ಭಯದಿಂದ ಒಮ್ಮೆಯೂ (ತನ್ನ ದುಃಖವನ್ನು) ತೋರಗೊಡದೆ ಇರುವಳು. ಈ ಹೊತ್ತು ಭಾಗವತ ಕೇಳುವಲ್ಲಿ-

ಶ್ರೀಕೃಷ್ಣನ ಬಾಲಲೀಲೆಯ ವರ್ಣನೆ

ಗೋಕುಲದಲ್ಲಿ ಎಳೆಯ ಶಿಶುತನದಿಂದೆಸೆಯುವ ವಾಸುದೇವನು ಕಾರಣವಿಲ್ಲದೆ ಆಗಾಗ ಬೀರುವ ಮುದ್ದುನಗೆಯೂ ಒಂದು ಕೈಯಿಂದ ಹಿಡಿದೆಳೆದು ಕೆಂಪಾದ ಬಾಯಲ್ಲಿಟ್ಟುಕೊಂಡು (ತನ್ನ) ಮೃದುಪಾದದ ಉಂಗುಟವೂ ಮುತ್ತಿನ ಏಕಾವಳಿಯಲ್ಲಿ ಕಟ್ಟಿ ಜೋಲುತ್ತಿದ್ದು ನಿಲುಕಿಯೂ ನಿಲುಕದೆ ತೂಗಾಡುವ ಮಾಣಿಕದ ಕುಚ್ಚವನ್ನು ತುಡುಕಲೆಳಸುವ ಹಿಂಗೈಯೂ ಬಗೆಕರಗಿ ನಡೆತಂದು ನಿಟ್ಟಿಸಿ ಮಣಿದು ಮುಖದಲ್ಲಿ ಮುಖವಿಟ್ಟು ಮುದ್ದಿಸಿ ಮೈಮರೆಯುವ ಗೋಪಿಯ ಮೊಲೆಯುಣ್ಣಲೆಳಸಿ ನಿಮಿನಿಮಿರಿ ನಿಲುಕುತ್ತ ಎಳೆಬಳ್ಳಿಯಂತಿರುವ ತೋಳುಗಳನ್ನೆತ್ತಿ ನೀಡುತ್ತ ಅಡಿಯಿಡುವ ತವಕದಲ್ಲಿ ಸಪ್ಪಳವುಂಟು ಮಾಡುವ ಕಿರುಗೆಜ್ಜೆಯ ನೂಪುರಗಳೂ ನಸುವೇ ಜೋಲುವ ಎಳಗಿವಿಯನ್ನು ತಾಗುವ ಪಚ್ಚೆಯ ಮಾಗಾಯಿಗಳ ತಾಕುವಿಕೆಯಿಂದ ಮಸುಳಿಸುತ್ತಿರುವ ಎರಡೂ ಗಲ್ಲಗಳಲ್ಲಿಟ್ಟ ಕಸ್ತೂರಿಯ ದೃಷ್ಟಿಬಟ್ಟೂ ತಿರುಗುರುಳಲ್ಲಿ ಪವಣಿಸಿ ಕಟ್ಟಿದ ಮಾಣಿಕದ ಅರಳೆಲೆಯ ಸರದ ಮುತ್ತಿನ ಚಂದ್ರನಂತೆ ಮೆರೆಯುವ ಚಂದ್ರರೇಖೆಯ ನಾಮವೂ ಮನಾಕರ್ಷಕವಾಗಿ ಬಂಗಾರದ ತೊಟ್ಟಿಲಲ್ಲಿ ಮಲಗಿದ ರೀತಿಯೂ ಮತ್ತು ಎಳೆಯ ಚಂದ್ರನಂಥ ಹಣೆಯಲ್ಲಿ ಕವಿಯುವ ಸುಳಿಗುರುಳೂ ಅರೆದೆರೆದ ಕಟವಾಯಿಯಲ್ಲಿ ಸುರಿಯುವ ಸಿಹಿ ಜೊಲ್ಲಿನಿಂದೊಡಗೂಡಿ ನಸುವೇ ತೋರುವ (ಏದು) ಉಸಿರೂ ಮುನ್ನ ಜಗತ್ತನ್ನು ಹಡೆಯುವಾಗ ಮುಖದಲ್ಲಿ ಹೊರಟು ಅಂಕುರಿಸಿದ ಅಗ್ನಿಯನ್ನು ಸರಿಗಟ್ಟುವ ಶ್ರೀ ಚೂರ್ಣದ ತಿಲಕವೂ ನೀಲಮಣಿಕಾಂತಿ ಪಡೆದ ಎದೆಯೆಂಬ ಆಕಾಶದ ಸೊಬಗಿಗೆ ಮನಸೋತು ಎರಡು ದೇಹ ಧರಿಸಿ ಉದಿಸಿದ ಚಂದ್ರನನ್ನು ಹೋಲುವ ಹುಲಿಯುಗುರೂ ಹಿಂದೆಗೆದ ಪಾದದ ಕಿರುಗೆಜ್ಜೆಯ ಉಲಿಗೇಳಿ ತಿರುಗಿನೋಡಲು ಪಸರಿಸುವ ಎಸಳುಗಣ್ಣ ಬೆಳಗೂ ಹಿಡಿ ಹಿಡಿದು ಎಳೆಯಲಾಗಿ ಹರಿದುದುರಿದ ಅರಳೆಲೆಯ ಸರದ ಮುತ್ತುಗಳು ಊರಿದ ಒಂದು ಅಂಗೈಯನ್ನೂ ಒಂದು ಮೊಳಕಾಲನ್ನೂ ಒತ್ತಲು ಅಲ್ಲಿ ನಿಂತು ಅವನ್ನು ಉದುರಿಸುವ ಮೊಳೆಬೆರಳುಗಳೂ ತುಂಬಿದ ಬಂಗಾರದ ತಟ್ಟೆಗಳನ್ನು ನೂಕಿ ಮಗುಚಲು ಹರಿಯುವ ತಿಳಿನೀರಿನಲ್ಲಿ ತನ್ನ ಪ್ರತಿಬಿಂಬವನ್ನು ಕಂಡು ಹೊಡೆಯಲು ಸಿಡಿಯುವ ತುಂತುರು ಹನಿ ಹತ್ತಿದ ಸಿರಿಯೊಡಲೂ ಆಗ ಅಂಗಳದಲ್ಲಿ ಹರಿದಾಡುವ ತನ್ನ ಬಳಿವಿಡಿದು ಮನದೊಡನೆ ದೃಷ್ಟಿಯನ್ನು ಸುಳಿಸಿ ಸೊಗಸುಗೊಂಡು ಸೊಕ್ಕಿ ಮೇಲೆತ್ತಿ ಹಿಡಿದು ಅಪ್ಪಿ ಮಗ್ಗುಲುಗೊಟ್ಟು ಮುಖನೋಡಿ ಮೊಲೆಯುಣಿಸಲು ಹಾಲು ಕುಡಿಯುತ್ತೆ, ಮೊಳೆಹಲ್ಲು

ಹೊಳೆಯಲು ಆಗಾಗ ನಗುವ ಸೊಬಗನ್ನು ! ಬಳಿಕ ಅಡಿಗಡಿಗೆ ಏಳುವ ಬೀಳುವ ಆಯಾಸದಿಂದ ಒಡಲಲ್ಲಿ ತುಂಬಿದ ಹಲವು ಲೋಕಗಳು ಕಂಪಿಸದಂತೆ ಬಿಗಿದು ಕಿಪ್ಪೊಟ್ಟೆಯಲ್ಲಿ ಕಟ್ಟಿದ ಹವಳದ ಜೋಡುಸರದಲ್ಲಿ ತೂಗುವ ಹೊನ್ನಕಿರುಗಂಟೆ ಉಲಿಯದಂತೆ ಒಂದು ಕೈಯಿಂದ ಹಿಡಿದು ಮೆಲ್ಲನೆ ಎಡಕೋಣೆಗೆ ನಡೆತಂದು ಅಲ್ಲಿ ಗೋಪಿ ಕಡೆಯುವ ಗಡಿಗೆಯಲ್ಲಿ ಬೆಣ್ಣೆ ತೆಗೆಯದೆ ಬಿಟ್ಟು, ಒಲೆಯಲ್ಲಿ ಉಕ್ಕಿ ಹರಿಯುವ ಹಾಲುಗಡಿಗೆಯನ್ನು ಇಳಿಸಿ ಬರುವಷ್ಟರಲ್ಲಿ ಆ ಕಡೆಯ ಗಡಿಗೆಯನ್ನು ಕಡೆಗೋಲಿನಿಂದ ಹೊಯ್ದೊಡೆದು ಆ ಬೆಣ್ಣೆಯಲ್ಲಿ ಬೇಕಷ್ಟನ್ನು ನುಣ್ಣನೆನುಂಗಿ ತಣ್ಣನೆ ತಣಿದು ಉಳಿದುದನ್ನು ತೆಗೆದುಕೊಂಡು ಅಂಗಳಕ್ಕೆ ನಡೆದು ಅಲ್ಲಿ ನಟ್ಟನಡುವೆ ನಟ್ಟ ಹೊನ್ನಗೂಟಕ್ಕೆ ಕಟ್ಟಿದ್ದ ಕಪ್ಪು ಕೋತಿಯ ಸರಪಳಿಯ ಕೀಲುಬಿಚ್ಚಿ ಹಿಂದೆಲೆ ಹಿಡಿದು ಅದನ್ನು ಎಳೆದೊಯ್ದು ಯಾರೂ ಅರಿಯದಂತೆ ಒಂದು ಮೂಲೆಯ ಮನೆಯಲ್ಲಿ ಕಟ್ಟಿಗೆಯ ಒರಳೊಂದನ್ನೇರಿ ಕುಳಿತು (ಅದಕ್ಕೆ) ಬೆಣ್ಣೆ ತಿನಿಸಿ ಆಗ ತಿಂದುದನ್ನು ಉಗುಳೆಂದು ದಂಡಿಸಲು ಅದಕ್ಕದು ಬೆದರಿ ಹಲ್ಲುಕಿರಿಯಿತು.

ಅದನ್ನು (ಹಲ್ಲನ್ನು) ಬೆಣ್ಣೆಯೆಂದು ಬಗೆದು ಬೆರಳಿನಿಂದ ತೆಗೆಯುತ್ತಿರಲು ಮುನ್ನ ಮನೆಗೆಲಸ ಮಾಡಿಬಂದ ಯಶೋದೆ ಗಡಿಗೆ ಒಡೆದುದನ್ನು ಕಂಡು ಅದು ತನ್ನ ಕಂದನ ಕಾರ್ಯವೆಂದು ಬಗೆದು ಸಂತಸದಿಂದೆ ನಸುನಗುತ್ತ ಎಲ್ಲಿ ಹುಡುಕಿದರೂ ಕಾಣದೆ ಅಲ್ಲಿಗೆ ನಡೆತಂದು ನಿಂತು (ಕೃಷ್ಣನ) ಆ ಕಾರ್ಯವನ್ನು ಕಂಡು ಹೆದರಿದಳು. (ಮತ್ತು) ನಸುಗೋಪದಿಂದ "ಎಲೆ ದುರದುಂಬಿ ! ಸಿಕ್ಕೆಯಲ್ಲವೆ ! ನಿನ್ನ ಉದ್ದುರುಟುತನಕ್ಕೆ ತಕ್ಕ ಬುದ್ದಿ ಕಲಿಸುವೆನೆಂದು ಗದ್ದರಿಸಿದಳು. ಆ ದನಿ ಕೇಳುತ್ತ ಅವಳು ಕೋಲುಹಿಡಿದ ಕೈಯೂ ಕುಡಿಗೊಂಡ ಹುಬ್ಬೂ ಕೆಂಗಣ್ಣೂ ಹರಿತವಾದ ನೋಟವೂ ಕೂಡಿದ ಕೋಪಾಟೋಪಕ್ಕೆ ಅಂಜಿ ತನ್ನನ್ನು ತಪ್ಪಿಸಿಕೊಳ್ಳಲೆಂದು ಅಲ್ಲಿಂದೆದ್ದು ಬೀದಿವರಿಯುತ್ತ ಮನೆ ದೇವಾಲಯವನ್ನೂ ಅಂಗಳದ ಎಳತುಳಸಿಯ ತೋಟವನ್ನೂ ಕರು-ಆಕಳುಗಳ ಕೊಟ್ಟಿಗೆಗಳನ್ನೂ ಹೊಕ್ಕು ಕಷ್ಟಪಡುವ, ತನ್ನನ್ನು ಬೆಂಬತ್ತಿದ ಆಯಾಸದಿಂದ ಬೆವರಿದ ಮುಖವೂ ಹೆಚ್ಚಿಗೆ ಏದುಸಿರೂ ಸಡಿಲುವ ಮುಡಿಯೂ ಸರಿದ ಮೇಲುದುವೂ ಬಳಕುವ ನಡುವೂ ಶಕ್ತಿಗುಂದಿದ ನಡೆಯೂ ಆದ ತಾಯಿಯ ಬಳಲಿಕೆ ಕಂಡು ಮೂಡಿದ ಮರುಕದಿಂದ ಬ್ರಹ್ಮ ಶಿವ ಮೊದಲಾದ ದೇವತೆಗಳ ದೃಷ್ಟಿಗೂ ಪರಮಯೋಗಿಗಳ ಬಗೆಗೂ ಮೈದೋರದೆ ಪರಬ್ರಹ್ಮನು ಅವಳ ಕೈವಶವಾಗುತ್ತೆ ಹುದುಗಿ ಮೂರ್ಛೆಹೋಗಿ ನಡನಡುಗಿ ಹನಿಸೂಸುವ ಬೊಗಸೆಗಣ್ಣನ್ನು ಮುಚ್ಚಿ ಹೊರಗೈಯಿಂದ ಒರೆಸುತ್ತ ನಿಂತನು. ಅವಳೂ ಪ್ರೇಮದಿಂದ ಕೊಲ್ಲಲು (?) ಎತ್ತಿದ ಕೋಲನ್ನು ಬದಿಗಿಟ್ಟು ಆವೇಶದಿಂದಾಗಿ ಅತಿ ನಿಷ್ಠುರದಿಂದ ಬೈದು ಕಟ್ಟಿನಿಲ್ಲಿಸಲೆಂದು ಒಂದು ಕಡೆಯುವ ಹಗ್ಗವನ್ನು ಒಡಲಿಗೆ ಸುತ್ತಿ ಹಿಡಿಯುವಷ್ಟರಲ್ಲಿ ಎರಡು ಬೆರಳಷ್ಟು ಕಡಿಮೆಯಾಯಿತು. ಬೇಗನೆ ತನ್ನ ಎರಡೂ ಬದಿಯ ನೆರೆಯ ಬೀದಿಯ ಹಳ್ಳಿಯ ಮನೆಗಳಲ್ಲಿದ್ದ ಹಗ್ಗವನ್ನೆಲ್ಲ ತಂದು ಗಂಡುಹಾಕಿದಾಗಲೂ ಸಿಕ್ಕದಿರಲು ಅವಳು ಅಳಲಿ ಬಳಲುವುದನ್ನು ಕಂಡು ಮಗ ಕರಗಿ ನೆಟ್ಟನೆ (ತನ್ನಷ್ಟಕ್ಕೆ ತಾನೆ) ಕಟ್ಟಲ್ಪಟ್ಟ ಅತಿಶಯತೆಯನ್ನೂ ! ಮತ್ತು 'ಕೇಳೆಲೆ ಗೋಪಮ್ಮ ! ನಿಮ್ಮೂರಲ್ಲಿದ್ದ ನಮ್ಮಂಥವರು ಮನೆಗೆಲಸ ಮಾಡುವುದು ಅಸಾಧ್ಯ. ನಿನ್ನ ಮಗನ ಕಾಟ

ವಿಪರೀತ. ಈ ಮುಂಜಾವಿನಲ್ಲಿ ಎದ್ದು ಬದಿಯ ಕೋಣೆಯಲ್ಲಿ ಕಡೆಯುತ್ತಿರುವಾಗ ಮನೆಹೊಕ್ಕು ಬಂದು ತೊಟ್ಟಿಲಲ್ಲಿ ಮಲಗಿದ್ದ ಮಗುವನ್ನು ಚಿವುಟಿದನು. ಆ ದನಿ ಕೇಳಿ ನಾನು ಸಿಟ್ಟಿನಿಂದ ನಡುಮನೆಗೆ ಬರುವಷ್ಟರಲ್ಲಿ ಅತ್ತಲಿಂದ ದಾಟಿ ಅಂಗಳಕ್ಕೆ ನಡೆದನು. ಅಲ್ಲಿ ಕಟ್ಟಿದ್ದ ಎಳಗರುವನ್ನು ಬಿಚ್ಚಿಬಿಟ್ಟು ಅದರ ಬಾಲ ಹಿಡಿದು ಬಿಡದೆ (ಅದು ಓಡಿದಂತೆ ಓಡಿ ನೆಗೆದಂತೆ ನೆಗೆದು ಸಮೀಪಿಸುವಷ್ಟರಲ್ಲಿ ಆ ಆಕಳು ಮರುಕದಿಂದೆಷ್ಟು ಮುಖತಿರುವಿ ನಟ್ಟನೋಟದಿಂದ ನೋಡುತ್ತ ಹಿಂಗಾಲುಗಳನ್ನು ಒಂದಿಷ್ಟು ಆಗಲಿಸಿ ನಿಂತಿತು. (ಆಗ) ಮೊಲೆಯುಣ್ಣ ಬಂದ ಕರುವಿನ ಮೈಗೆಂಪು ಸವಿದು ತೊರೆಯಿಳಿಸಲು, ಆ ಕರವು ಎತ್ತಿದ ಬಾಲದಿಂದಲೂ ನಿಮಿರಿದ ಹಿಂಗಾಲುಗಳಿಂದಲೂ ಮೊಲೆ ಕುಡಿಯುವ ಬೆಡಗನ್ನು ನೋಡಿ ತಾನೂ ಅದರಂತೆ ನಾಲ್ಕು ಕಾಲುಗಳಲ್ಲಿ ನಿಂತು ಮುಖವೆತ್ತಿ ಮೊಲೆಯುಣ್ಣುವಷ್ಟರಲ್ಲಿ ನಾನು ಬಂದು ಕರೆಯಲು ಅನುವಾಗುವಷ್ಟರಲ್ಲಿ ಬೆದರಿ ಅತ್ತಲಿಂದ ಬೀದಿಗೋಡಿದನು. ತಪ್ಪಿಸಿ ಪುನಃ ಮನೆಹೊಕ್ಕು ಗಡಿಗೆಯ ಬೆಣ್ಣೆಯೆಲ್ಲವನ್ನೂ ತಿಂದು ಹೋದನು" ಎಂದು ದೂರುವ ನೆರೆಮನೆಯ ಸ್ತ್ರೀಯೂ; ಮತ್ತು "ನಮ್ಮ ಅಂಗಳದಲ್ಲಿ ಕರುವಿನ ಬಾಲವನ್ನು ಕಪ್ಪುಕೋತಿಯ ಗಡ್ಡದಲ್ಲಿ ಗಂಟಿಕ್ಕಲು ಅವೆರಡೂ ಒಂದಕ್ಕೊಂದು ಬಿಗಿದು ಅವು ಪಡುವ ಹಲವು ತೊಂದರೆಗಳನ್ನು ನೋಡುತ್ತಿದ್ದನು. ಅಷ್ಟರಲ್ಲಿ ನಾನು ಬಂದು ಎಲೆಲೆ ಕೈಗೆ ಸಿಕ್ಕಿದನೆಂದೆನು. ಕೂಡಲೇ ತಪ್ಪಿಸಿ ಮನೆಹೊಕ್ಕು ಅಲ್ಲಿ ಒಲೆ ಏರಿಸಿದ ಹಾಲುಗಡಿಗೆಯನ್ನು ಕಡೆಯುವೆಡೆಯಲ್ಲಿಯೂ ಕಡೆಯುವ ಮೊಸರು ಗಡಿಗೆಯನ್ನು ಒಲೆಯೆಡೆಯಲ್ಲಿಯೂ ಅದಲುಬದಲುಗೊಳಿಸಿಟ್ಟು ಶಿಶುವಿಗೆ ಕುಡಿಸಲೆಂದಿಟ್ಟ ಬಿಸಿಹಾಲು, ಬೆಣ್ಣೆಗಳನ್ನು ಸವಿದು ಆ ಹೊನ್ನ ತಟ್ಟೆಯಲ್ಲಿ ಸುಣ್ಣವನ್ನೂ ಅದರ ತಿಳಿಯನ್ನೂ ತುಂಬಿ ಮೋಸಪಡಿಸಿದನು" ಎಂದು ಹೇಳುವ ಬಲ ನೆರೆಮನೆಯ ಸ್ತ್ರೀಯೂ ; ಮತ್ತು ಹೊತ್ತಾರೆ ನಾನು ಕರೆಯುತ್ತಿರಲು ತನ್ನ ಜೊತೆಗಿರುವ ಹಲವು ಮಕ್ಕಳು ಕೂಡಿ ಒಳಹೊಕ್ಕು, ಸುತ್ತಲು ನೋಡಿಯೂ ಕಾಣದೆ, ಕೋಣೆಯಲ್ಲಿ ಕಟ್ಟಲ್ಪಟ್ಟು ತೂಗಾಡುವ ನೆಲುವಿನಲ್ಲಿ ಮೊಸರುಗಡಿಗೆಯನ್ನು ಕಂಡು ಕಡೆಗೋಲನ್ನೆತ್ತಿ ಕುಟುಕಲು ತೂಗಾಡುವ ನೆಲುವಿನಲ್ಲಿ ಮೊಸರು ಗಡಿಗೆಯನ್ನು ಕಂಡು ಕಡೆಗೋಲನ್ನೆತ್ತಿ ಕುಟುಕಲು ನಿಲುಕದಿರಲಾಗಿ ಮಣೆಯನ್ನೂ ಕಟ್ಟಿಗೆಯ ಒರಳನ್ನೂ ಮಕ್ಕಳನ್ನೂ ಕುಳ್ಳಿರಿಸಿ (ಅವರ) ಹೆಗಲೇರಿ ನಿಂತು ಗಡಿಗೆಯನ್ನು ಕುಟುಕಲು ಸುರಿಯುವ ಮೊಸರ ಸರಿಯನ್ನು ಸವಿಯುತ್ತ ಇರಲು ನನ್ನ ಈ ಮಗಳು ಹೋಗ ಕಂಡು 'ಕಳ್ಳ ಕಳ್ಳ' ಎನ್ನಲು ಸರಿಯಾಗಿ ಬಾಯಲ್ಲಿ ತುಂಬಿದ ಮೊಸರನ್ನು ಅವಳ ಮುಖಕ್ಕೆ ಉಗಿಯಲು ಕಣ್ಣು ಮುಚ್ಚಿದವು. (ಆಗ ಕೃಷ್ಣನು) ಗಕ್ಕನೆ ತೆಕ್ಕೆ ಹಾಯ್ದು ಮೊಗದಲ್ಲಿ ಮೊಗವಿಟ್ಟು ಮುದ್ದಿಸುವ ನೆವದಿಂದ (ಅವಳನ್ನು) ಗಾಸಿಗೈದನು. ಇದೋ ನೋಡು" ಎಂದು ಮಗಳ ಬಾಯನ್ನು ತೋರಿಸಿ ದೂರುವ ಮುಂದಿನ ಮನೆಯ ಗರತಿಯನ್ನು ; ಮತ್ತು "ನಮ್ಮ ಅಂಗಳದಲ್ಲಿ ಪಂಜರದ ಕೀಲು ಸಡಿಲಿಸಿ ಗಿಳಿಯನ್ನು ತಡೆದನೆಂದೂ ಆಡುವ ಎಳೆಮಕ್ಕಳ ಕಣ್ಣಿಗೆ ಮೆಣಸು ಹಾಕಿದನೆಂದೂ ಮಲಗಿದ ಹೆಣ್ಣುಗಳ ಮುಖಕ್ಕೆ ಮಸಿಗೆರೆಯನ್ನು ಬರೆದನೆಂದೂ ಮುದುಕನು ಬಾಯ್ದೆರೆಯದಂತೆ ಗಡ್ಡ-ಮೀಸೆಗಳನ್ನು ಗಂಟಿಕ್ಕಿದನೆಂದೂ ಬಾಲಕರಾಡುವ ಹೊಡೆಚೆಂಡನ್ನು ಕೊಂಡೊಯ್ದನೆಂದೂ ಹೊನ್ನ ಬುಗುರಿಯನ್ನು ಅಪಹರಿಸಿದನೆಂದೂ ಕವಡೆಗಳನ್ನು

ಕಸಿದುಕೊಂಡನೆಂದೂ ಈ ಮುಂತಾದ ಹಲವು ಅಲ್ಲದ ನಡತೆಗಳನ್ನು ಹೇಳುವ ಬೀದಿಯ ಮನೆಯ ಹೆಂಗಸರೂ ತಮ್ಮಲ್ಲಿ ತಾವೇ ನಾಚಿ ತಲೆಬಾಗಿ ಬೇಗನೆ ಮೌನವಾಗಿ ಹೋಗುವಂತೆ ತಾಯ ಮಗ್ಗುಲಿನಿಂದ ಎದ್ದು ಸಿರಿಮೊಗ ತೋರುವ ಮುದ್ದು ರೀತಿಯನ್ನೂ; ಮತ್ತು ನೆತ್ತಿಯಲ್ಲಿ ಸಿರಿಮೈಯ ಕಾಂತಿಮೇಲಕ್ಕೆ ನೆಗೆದು ಒಗ್ಗೂಡಿದಂತೆ ಮೆರೆಯುವ ಚಂಡಿಕೆಯೂ ಅಲ್ಲಿ ಮೊತ್ತಗೊಂಡ ಕತ್ತಲೆಯು ಅತ್ತಲಿತ್ತ ಚದುರಿದಂತೆ ಸುತ್ತಿಮುತ್ತಿದ ಎಳನೇಸರ ಕಿರಣಗಳ ಸರಿದೊರೆಯಾಗಿ ಚಂಡಿಕೆಯಲ್ಲಿ ಕಟ್ಟಿರುವ ಹೊನ್ನಗುಂಡು ಸರವೂ ಜಗತ್ತನ್ನು ಹುಟ್ಟಿಸುವಾಗ ಯಾವತ್ತೂ ಹುಟ್ಟಿಸಿದ ಅಭ್ಯಾಸದಿಂದ ಈಗಲೂ ಮನದಲ್ಲಿಯೂ ಕಣ್ಣಲ್ಲಿಯೂ ಹೊಮ್ಮಿ ನಿಂತ ಬಾಲಚಂದ್ರ ಮತ್ತು ಸೂರ್ಯರು ಸಿರಿಗುರುಳ ಕತ್ತಲೆಯಲ್ಲಿಯ ಮತ್ಸರದಿಂದ ಇದಿರೇರಿದಂತೆ ಇರುವ ಚಂದ್ರರೇಖೆಯಂಥ ನಾಮ ಮತ್ತು ಮಾಣಿಕದ, ಅರಳೆಲೆಗಳೂ ದೀರ್ಘವಾದ ಕಣ್ಣೆಂಬ ಬಾಳೆಮೀನುಗಳು ಉಗುಳಿದವೆಂಬಂತೆ ತೋರುವ ಮುತ್ತಿನ ಕಟಕಗಳೂ (ಸತ್ವ ರಜ ತಮೋಗುಣಗಳೆಂಬ) ಮೂರು ಗುಣಗಳಿಂದೊಡಗೂಡಿದ, ಸೃಷ್ಟಿಗೆಯ್ಯಲೆಂದು ಎತ್ತಿ ಕಟ್ಟಿದ ಬೀಜಗಳ ಮೊತ್ತದಂತೆ ತೋರುವ ಮುತ್ತಿನ ಮಾಣಿಕ್ಯದ ನೀಲಮಣಿಯ ಕಂಠಿಸರಗಳೂ ಬಾನಿನಲ್ಲಿಯೂ ಶಿವನ ತಲೆಯಲ್ಲಿಯೂ ನೆಲಸಲೆಂದು ಎರಡು ದೇಹ ಧರಿಸೆ ಮನದಲ್ಲಿ ಹೊಮ್ಮಿದ ಬಾಲಚಂದ್ರನು ಹೊರಗಡೆ ಪ್ರತಿಬಿಂಬಿಸಿದಂತೆ ತೋರುವ ಹುಲಿಯುಗುರ ಆಭರಣವೂ ಕಲಿಯುಗದಲ್ಲಿ ಬೆಳೆಯುವ ಸಿರಿಮೈಯ ಕಪ್ಪು ಕಾಂತಿ ಹೊರನೂಕಿದರೂ ಬಿಡದೆ ಮೆತ್ತಿಕೊಂಡಿರುವ ದ್ವಾಪರದ ಹಳದಿ ಬಣ್ಣದಂತಿರುವ ಸುವರ್ಣದುಕೂಲವೂ ನಡುವನ್ನು ಬಳಸಿ ಸುತ್ತಿದ (ಬಟ್ಟೆ)ಯಲ್ಲಿ ಸಿಕ್ಕಿಸಿದ ಹೊನ್ನಕೊಳಲೂ ಏಳುಲೋಕಗಳನ್ನು ಒಳಗೊಂಡಿದ್ದರೂ ತಣಿಯದ ಹೊಟ್ಟೆಯನ್ನು ತುಂಬಲೆಂದು ಚಿಕ್ಕಗಂಟಿನಲ್ಲಿಟ್ಟು ಬಗಲಲ್ಲಿ ತೂಗುವ ಬುತ್ತಿಯೂ ಕೈಯಲ್ಲಿ ಹಿಡಿದ ಚಿಕ್ಕ ಕೋಲು ಸಹಿತವಾಗಿ ತನ್ನಂತೆ ತೋರುವ ಸಾವಿರ ಬಾಲಕರಿಂದೊಡಗೂಡಿ ಗೋಪಾಲನೆಗಾಗಿ ಅಡವಿಗೆ ಹೋಗಿ ಅಲ್ಲಿ ಕರುಗಳ ಮಂದೆಯನೆಲ್ಲ ಒಂದುಗೂಡಿಸಿ ಮೇಯಲು ನಿಲ್ಲಿಸಿ, ತಾನು ಯಮುನೆಯ ದಡದಲ್ಲಿ ಧ್ಯಾನಿಸುವ ತಪಸ್ವಿಗಳೊಡನೆ ಕುಳಿತು ಅರೆಗಣ್ಣು ಮುಚ್ಚಿ ಧ್ಯಾನಿಸುತ್ತಲೂ ಸ್ವರಮಾಡುತ್ತ ಸುತ್ತುವ ತುಂಬಿಗಳೊಡನೆ ಸುತ್ತಿ ಸ್ವರ ಮಾಡುತ್ತಲೂ ಕುಕಿಲಿಡುವ ಕೋಗಿಲೆಗಳ ಬಳಿ ಹೋಗಿ ಕೂಗುತ್ತಲೂ ಕಪ್ಪುಮೋಡದ ಎರಕದಂತೆ ಮೆರೆಯುವ ತನ್ನ ಸಿರಿಮೈಯನ್ನು ಕಂಡು ಸೊಕ್ಕೇರಿ ಕುಣಿಯುವ ನವಿಲಿನೊಡನೆ ಕುಣಿಯುತ್ತಲೂ ಆಕಾಶದಲ್ಲಿ ಹಾರುವ ಹಕ್ಕಿಗಳ ನೆಳಲನ್ನು ತರುಬಿ ಓಡುತ್ತಲೂ ಕಾಡುವ ಕಪಿಗಳನ್ನೇ ಕಾಡುತ್ತಲೂ ಅವುಗಳ ತುದಿ ಬಾಲವನ್ನು ಹಿಡಿದು ಬಿಡದೆ ಟೊಂಗೆಯಿಂದ ಟೊಂಗೆಗೆ ಮರದಿಂದ ಮರಕ್ಕೆ ನೆಗೆಯುತ್ತಲೂ, ನೀರದಂಡೆಯಲ್ಲಿ ಕುಪ್ಪಳಿಸುವ ಕಪ್ಪೆಗಳೊಡನೆ ಕುಪ್ಪಳಿಸುತ್ತಲೂ, (ತನ್ನ) ಪ್ರತಿಬಿಂಬವನ್ನು ಹೊಡೆಯುತ್ತಲೂ ಪ್ರತಿಧ್ವನಿಯನ್ನು ಬಯ್ಯುತ್ತಲೂ ಬಹಳ ಹೊತ್ತು ಕಳೆದು ಉಣ್ಣ ಬಯಸಿ ಚಿಕ್ಕ ಪ್ರವಾಸವನ್ನು ಬಳಸಿದ ಉಸುಕಿನ ಹರಹನ್ನು ಸಮೀಪಿಸಿ ಅಲ್ಲಿ ಒಬ್ಬೊಬ್ಬರ ಬುತ್ತಿಗಂಟುಗಳನ್ನು ಒಬ್ಬೊಬ್ಬರು ಕಳವೂ ಮಾಡುತ್ತಲೂ ಒಲುಮೆಯಿಂದ ಇತ್ತು ಮೇಲೆ ಹಾರಿಸುತ್ತಲೂ ಹಿಡಿಯುತ್ತಲೂ ತಣಿದು ಸಂತಸದಿಂದ ಕಟ್ಟಿದ ಬುತ್ತಿಗಳನ್ನು ಬಿಟ್ಟು (=ಬಿಚ್ಚಿ),

ತಾವರೆಯ ಕರ್ಣಿಕೆಯನ್ನು ಸುತ್ತುವರಿದ ಎಸಳುಗಳಂತೆ ನಟ್ಟನಡುವಿರುವ ತನ್ನನ್ನು ಸುತ್ತುವರಿದು ಕುಳಿತಿರುವ ಗೆಳೆಯರೆಲ್ಲರಿಗೆ ತನ್ನ ಬುತ್ತಿಯ ಸವಿತೋರಿ ತಾನೂ ಅವರ ಬುತ್ತಿಯನ್ನು ಸವಿಯುತ್ತಲೂ ನುಡಿಯುತ್ತಲೂ ನಗಿಸುತ್ತಲೂ ಹಸಿವನ್ನು ಕಳೆಯುತ್ತಿದ್ದನು. ಇಳಿಹೊತ್ತಿನಲ್ಲಿ ಮರಗಳ ತಳಿರು ಮೊಗ್ಗು ಹೂ ಮಿಡಿ ಕಾಯಿ ಹಣ್ಣುಗಳಿಂದಲೂ ಮುನ್ನ ತಾಯಿ ಇಡಿಸಿದ ಹಲವು ಆಭರಣಗಳನ್ನು ಕಳೆದು ಮನಬಂದ ಸಿಂಗಾರಗಳನ್ನು ಮಾಡಿಕೊಂಡು ಬೆಟ್ಟಗಳ ತಪ್ಪಲಲ್ಲಿದ್ದ ಅರಿದಾಳ ಕಾವಿಕಲ್ಲುಗಳಿಂದ (ಬಣ್ಣ) ತೊಡೆದುಕೊಂಡು, ತನ್ನಂತೆ ತನ್ನ ಜೊತೆ ಬರುವ ಹಲವು ಜನ ಎಳೆ ಗೋಪಾಲಕರೂ ಮುಂದೆ ನಡೆಯುವ ಕರುಮಂದೆಯನ್ನು ಸುತ್ತುವರಿದು ಚಪ್ಪಾಳೆ ತಟ್ಟುತ್ತ ಕುಣಿಯುವ ಎಳೆ ಗೋಪಾಲಕರೂ ಜೊತೆಗೆ ಬರುತ್ತಿರಲು ಪಟ್ಟಣದ ಬೀದಿ ತುಂಬಿ ಬರುವ ಬೆಡಗನ್ನೂ ! ಕೇಳಿ ತಾವೂ ಅಂಥ ಕುಮಾರನನ್ನು ಪಡೆಯಲೆಂದು ವ್ರತಮಾಡುವ ಹಿರಿಮೆಯನ್ನು ಕುರಿತು ಚಿಂತಿಸುತ್ತಿರುವರು" ಎಂದು ನುಡಿಯುತ್ತಿರುವ ದಾಸಿಯ ಮುಖ ಕಮಲದಲ್ಲಿ ಕಡೆಗಣ್ಣ ನೋಟವೆಂಬ ತುಂಬಿಗಳನ್ನು ಸುಳಿಸಿ ಅರ್ಧಚಂದ್ರನಂಥ ಹಣೆಯಲ್ಲಿ ಮಿರುಗುವ ಕಪ್ಪುಗೆರೆಯಂತೆ ನಿರಿಗೆಗೊಂಡಿರುವ ಹುಬ್ಬುಗಳಿಂದ ಜಬರಿಕೆಯನ್ನು ತೋರಿ ನಸುನಾಚಿಕೆಯಿಂದೊಡಗೂಡಿದ ಮುನಿಸನ್ನು ಹೃದಯಂಗಮಗೊಳಿಸಿ ಅಂತರಂಗದಲ್ಲಿ ಹೊಮ್ಮುವ ಸಂತಸವನ್ನು ತಡೆದುಕೊಂಡು ಸಂತಾನ ಚಿಂತಾ ಸಂತಾಪವನ್ನು ನಟಿಸುತ್ತ ಸ್ವಲ್ಪ ವೇಳೆ ಮೌನದಿಂದಿದ್ದು ನಿಟ್ಟುಸಿರಿಟ್ಟು (ಈ ರೀತಿ) ನುಡಿದನು-

"ಅರಸಿ ! ಕೇಳು, ಈ ಲೋಕದಲ್ಲಿ ಎಂಥವರಿಗೂ ಮಕ್ಕಳನ್ನು ಪಡೆಯುವ ಚಿಂತೆ ದುಃಖದಾಯಕವಾಗಿದೆ. ಅದರಲ್ಲೂ ಸಿರಿಯೂ ಅರಸುತನವೂ ಇದ್ದರೆ ಹೇಳವುದೇನು ? ಹಾಗಿದ್ದರೂ ಈ ಯದುಕುಲಶ್ರೇಷ್ಠರೆನ್ನಿಸುವ ಮೈಸೂರು ಅರಸರ ಲೇಸನ್ನು ಹೆಚ್ಚಿಸ ಬಯಸಿ ಲಕ್ಷ್ಮೀಸಮೇತನಾಗಿ ಯದುಗಿರಿಯ ಶಿಖರದಲ್ಲಿ ನೆಲಸಿ ಅಖಿಲ ಜಗತ್ಕಾರಣನೆನಿಸಿದ ನಾರಾಯಣನು (ಅದಕ್ಕೆ) ಹೊಣೆಯಾಗಿರುವನು. ಈ ಚಿಂತೆಯನ್ನು ಕಳೆಯಬೇಕು ಎಂದು ಹಲವು ಹಿತೋಪದೇಶಗಳಿಂದ ಅರಸಿಯ ಕಡು ದುಗುಡವನ್ನು ಕಳೆದು (ಅಲ್ಲಿಂದ) ನಡೆದು ಅರಮನೆಯ ದೇವಾಲಯವನ್ನು ತಲುಪಿ ಅಲ್ಲಿ ಮುನ್ನ ತಮ್ಮ ವಂಶಜರಾದ ಅರಸುಗಳು ನೆರವೇರಿಸುತ್ತಿದ್ದ ಅರ್ಚನೆಗಳಿಂದ ಹಿರಿಮೆ ಹೊಂದಿದ ಗೃಹಪೂಜಾ ಗೋಪಾಲನ ಶ್ರೀಪಾದಗಳಿಗೆ ಸಾಷ್ಟಾಂಗವೆರಗಿ ಭಕ್ತಿಭರದಿಂದ ಸ್ತುತಿಸುತ್ತಿದ್ದನು.

ಅಷ್ಟರಲ್ಲಿ ಅಳಹಿಯ ಸಿಂಗರಾರ್ಯರು ಇತ್ತ ಬ್ರಾಹ್ಮಮುಹೂರ್ತದಲ್ಲಿ ಎದ್ದು ತಮ್ಮ ಆಚಾರ್ಯಮೊದಲ್ಗೊಂಡು ಲಕ್ಷ್ಮಿ ಪ್ರತಿಯವರೆಗಾದ ಪರಮಾಚಾರ್ಯರನ್ನು ಧ್ಯಾನಿಸಿ ಸ್ನಾನಾದಿ ನಿತ್ಯ ಕರ್ಮ ಅನುಷ್ಠಾನ ಶ್ರೀ ಆರಾಧನೆಗಳನ್ನು ಸಾಂಗಗೊಳಿಸಿ ಶಿಷ್ಯರಿಗೆ ಶ್ರೀ ಭಾಷ್ಯ ಶ್ರುತ ಪ್ರಕಾಶಿಕೆಗಳ್ನು ಸ್ಪಷ್ಟವಾಗಿ ತಿಳಿಯುವಂತೆ ಚೆನ್ನಾಗಿ ಉಪದೇಶಿಸಿ ಶಾಂತಿಪಾಠವಾದ ನಂತರ ರಹಸ್ಯಾರ್ಥಗಳನ್ನು ವಿವರಿಸಿದನು. ಆ ಬಳಿಕ ನಿತ್ಯರೂಢಿಯಾದ ಗೀತಾರ್ಥವನ್ನು ನಾಮತೀರ್ಥ ಸಮಯದಲ್ಲಿ ಅರಸನಿಗೆ ತಿಳಿಸಬಯಸಿ ಅರಮನೆಗೆ ತಕ್ಕಂತೆ ಅಲಂಕರಿಸಿಕೊಂಡು ಶಿಷ್ಯ ಸಮೂಹ ಸಮೇತ ತನ್ನ ಮನೆಯಿಂದ ಹೊರಟು ಬಂಗಾರದ ಪಲ್ಲಕ್ಕಿ ಏರಿ ಅರಮನೆಯ

ಬಾಗಿಲನ್ನು ತಲುಪಿದನು. ಅಷ್ಟರಲ್ಲಿ ಅಲ್ಲಿ ನೆರೆದು ನಿಂತಿರುವ ಜನರು ಕುದುರೆ, ದೊಡ್ಡ ಆನೆ. ರಥಗಳ ಮಹಾಸಮೂಹವನ್ನು ದಾಟಿ ಹಲವು ನಾಡುಗಳಿಂದ ಹಲವು ತೆರದ ಕಪ್ಪಗಳನ್ನು ಪಡೆದುಕೊಂಡು ದರ್ಶನಕ್ಕೆ ಬಂದಿರುವ ರಾಜರ ಸಮೂಹವು ಇತ್ತಂಡದಲ್ಲಿಯೂ ಭಾಗವಾಗಿ ಸಾಲುಗೊಂಡು ತಮ್ಮ ತಮ್ಮ ವಾಹನಗಳಿಂದ ಇಳಿತಂದು ಅನುಕ್ರಮವಾಗಿ ನಮಿಸಿ ಹರಕೆಗಳನ್ನು ಸಿರದಲ್ಲಿ ಧರಿಸಿ ಸಂತಸಗೊಳ್ಳಲು ಕರುಮಾಡದ ಅರಮನೆಯ ಬಾಗಿಲನ್ನು ಹೊಕ್ಕು ದಾಟಿ ಬರುವಾಗ ಇಕ್ಕೆಲದಲ್ಲಿ ಗಡುಸಾದ ಕೊಬ್ಬಿನ ವೀರಯೋಧರು ನಿಯತವಾದ (ತಮ್ಮ) ಸ್ಥಾನದಿಂದ ನಮಸ್ಕರಿಸಲು ಅವರನ್ನು ಅಕ್ಕರತೆಯಿಂದ ಯೋಗ್ಯ ಮನ್ನಣೆಗೊಳಿಸುತ್ತ ಮುಂದೆ ಬರಲು ; ಹಜಾರದ ತೊಟ್ಟಿಯಲ್ಲಿ ಗುಂಪುಗೂಡಿ ನಿಂತ ಭಟ್ಟಂಗಿ, ನಟುವರು, (ತಮ್ಮ) ಅತಿಯಾದ ಸೌಂದರ್ಯದಿಂದ (ಮತ್ತು) ವಿಶಾಲ ನೇತ್ರಗಳುಳ್ಳವರಾದ ಎವೆ ಮಿಸುಕದ ? ದೇವತಾ ಸ್ತ್ರೀಯರನ್ನು ಕೀಳುಗೈಯುವ ವೇಶ್ಯೆಯರ ಸಮೂಹವನ್ನು ಮುಂಭಾಗದಲ್ಲಿ ಸಿಂಹಗಳಂತೆ ಒಪ್ಪಿ ಸಾಲುಗೊಂಡು ಸಜ್ಜಾಗಿನಿಂತ ಬಾಹತ್ತರ ನಿಯೋಗಿಗಳೂ ದೇಶವಿದೇಶಗಳ ನಿಯೋಗಿಗಳೂ ಬೇಗದಿಂದ ಬಂದು ಕೈಮುಗಿಯುತ್ತಿರಲು ಇಬ್ಬದಿಯಲ್ಲೂ ಪ್ರೇಮದಿಂದ ಮನ್ನಿಸುತ್ತ ನಡೆದು (ಮತ್ತು) ಆ ಸಮೀಪದ ಚಿತ್ತಾರದ ಬಾಗಿಲ ಪಕ್ಕದಲ್ಲಿ ಯಾವತ್ತೂ ತುಂಬಿದ್ದು ಕಾವಲಿರುವ ಬಲಶಾಲಿಗಳಾದ ಗೊಲ್ಲರೆಲ್ಲರೂ ಅಲ್ಲಿ ನಿಂತು ನಮಸ್ಕರಿಸುತ್ತಿರಲು ಸಡಗರದೊಂದಿಗೆ ಕಂಡು ದಯದಿಂದ ನೋಡುತ್ತ ಮುಂದೆ ಸಾಗಿ ಪಲ್ಲಕ್ಕಿಯಿಂದಿಳಿದನು. (ಅಲ್ಲಿಂದ) ಮುಂದಿನ ಮೊಗಸಾಲೆಯ ತೊಟ್ಟಿಯ ಅಂಗಳದ ಮುಂಗುಡಿಯ ಬಾಗಿಲದ ಕಾವಲುಗಾರರು ಹಿಡಿದ ಬಂಗಾರದ ಬಡಿಗೆಗಳಿಂದ ನೆಲಗಟ್ಟನ್ನಪ್ಪಳಿಸಿದ ಸಪ್ಪಳ ಕೇಳುತ್ತ ಬೇಗನೆ ತಮ್ಮ ತಮ್ಮ ಸ್ಥಾನಗಳಿಂದ ಇಳಿತಂದು ಸಾಲುಗೊಂಡು ಒಗ್ಗೂಡಿ ನಮಸ್ಕರಿಸುವ ಸಾಮಂತರು ಮಂತ್ರಿಗಳು ಮನ್ನೆಯರು ಮಂಡಳಿಕರನ್ನು ಭಾಂಡಾರಿಗಳನ್ನು ಶಯ್ಯಾಗೃಹಾಧಿಕಾರಿ ಗಳನ್ನು ಪಂಡಿತರನ್ನು ಹಡಪದವರನ್ನು ಸೇನಾಪತಿಗಳನ್ನು ರಾವುತರನ್ನು ಬೀಸಣಿಕೆಯವರನ್ನು ಅಲಂಕಾರಿಕರನ್ನು ಪ್ರೇಮದಿಂದ ಅವರವರ ಅಂತರವರಿತು ಮೆಲುಮಾತು ಗಳಿಂದ ಸಂತಸ ಪಡಿಸುತ್ತ ಅಲ್ಲಿಂದ ಮುಂದೆ ತೋರುವ ಕರುಮಾಡದ ಪಕ್ಕದಲ್ಲಿರುವ ಮಂತ್ರಿ ಪ್ರಧಾನಿಗಳೂ ರಾಯಸದವರೂ ಕಾಗದಪತ್ರದ ಅಧಿಕಾರಿಗಳೂ ಎಡಬಿಡದೆ ವಂದಿಸಲು ಅವರುಗಳ ಮನವನ್ನು ನಲ್ಮಾತುಗಳಿಂದ ತಣಿಸುತ್ತ ಅಂತಃಪುರದ ಬಾಗಿಲನ್ನು ಸಮೀಪಿಸಿದನು. ರಾಣೀವಾಸದ ಕಾವಲುಗಾರ ಮುಂತಾದವರಿಗೆ ಹೆಚ್ಚಿನ ಆಶೀರ್ವಾದದಿಂದ ಹರ್ಷವನ್ನುಂಟು ಮಾಡಿ ಅಲ್ಲಿಂದ ಮುಂದೆ ಇರುವ ನಾಮತೀರ್ಥದ ಚವುಕಿಯ ಮುಂದಣ ಮೊಗಸಾಲೆಯಲ್ಲಿ ಒಪ್ಪಿರುವ ಶಂಖ ಕಹಳೆ ಕೊಳಲು ವೀಣೆ ಮೃದಂಗ ತಾಳ ಢಕ್ಕೆ ಮುಂತಾದ ವಾದ್ಯಗಳ ವಾದಕರೂ ಸಂಗೀತ ನಿಪುಣರೂ ನಮಿಸಿದರು ಅದನ್ನು. ಕಂಡು ಸಂತಸಪಡುತ್ತ ಆ ತೊಟ್ಟಿಯ ಒಳಗೆ ಪ್ರವೇಶಿಸುವಷ್ಟರಲ್ಲಿ-

ಅಳಹಿಯ ಸಿಂಗರಾರ್ಯರ ವರ್ಣನೆ

ಆ ಕಾಲಕ್ಕೆ ತಕ್ಕಂತೆ ಅಲ್ಲಿದ್ದ ಸಾಮಾಜಿಕರು ಈ ಅಳಹಿಯ ಸಿಂಗರಾರ್ಯರನ್ನು ಕಂಡು, ಇವನನ್ನು ದೊಡ್ಡದೇವರಾಜನನ್ನು, ಇಂದ್ರನೆಂದು ಬಗೆದು ಬರುತ್ತಿರುವ ಬೃಹಸ್ಪತಿಯೋ

ದಶರಥನೆಂದು ಸಮೀಪಿಸುವ ವಶಿಷ್ಠನೋ ಜನಕರಾಜನೆಂದು ಬರುವ ಯಾಜ್ಞವಲ್ಕ್ಯನೋ ಯುಧಿಷ್ಠಿರನೆಂದು ಬಂದ ಧೌಮ್ಯನೋ ಜನಮೇಜಯನೆಂದು ಬಂದ ವೈಶಂಪಾಯನನೋ ಎಂದು ಪೌರಾಣಿಕರು ವಿಚಾರಿಸುತ್ತಿರುವಲ್ಲಿ ; ಮತ್ತು ಮುನ್ನ ತಾನು ಹೊಂದಾಣಿಕೆಗೊಳಿಸಿದ ವೇದಶಾಸ್ತ್ರಗಳು ಕಲಿಯ ದೋಷದಿಂದ ಅಸ್ತವ್ಯಸ್ತಗೊಳ್ಳಲು ಪುನಃ ಎಲ್ಲವನ್ನೂ ಮೊದಲಿನಂತೆ ಅನುಗೊಳಿಸಲು ಬಂದ ವ್ಯಾಸನೋ, ಇನ್ನೊಮ್ಮೆ ಪರತತ್ವವನ್ನು ತಿಳಿಸಲು ಬಂದ ಪರಾಶರನೋ, ಮತ್ತೊಮ್ಮೆ ಭಗವದ್ಭಕ್ತಿಯನ್ನು ಬಿತ್ತರಿಸಲು ಉದಿಸಿದ ಶುಕಮುನಿಯೋ ಮಗುದೊಮ್ಮೆ ಹರಿಹರ ಬ್ರಹ್ಮರ ಸ್ಥಿತಿಯನ್ನು ವಿಚಾರಿಸಿ ಹರಿಯೇ ಪರಬ್ರಹ್ಮವೆಂಬುದನ್ನು ನೆಲೆಗೊಳಿಸಲು ಹುಟ್ಟಿ ಬಂದ ಭೃಗುಮುನಿಯೋ ಎಂದು ತತ್ವಜ್ಞರು ಬಗೆಯುತ್ತಿರಲು-

ಮತ್ತು ಬೇರೊಮ್ಮೆ ಆರೂ ದರ್ಶನಗಳನ್ನು ವಿಮರ್ಶಿಸಿ (ಶ್ರೀ) ವೈಷ್ಣವವೇ ಸಾರವಾದುದೆಂದು ಹೇಳುವ ಭಕ್ತಿಸಾರನೋ (ತಿರುಮಲೆ ಶೈಯಾಳ್ವಾರ), ತಾವು ತಾವು ಬಯಸಿದ ದೇವರನ್ನು ಪರತತ್ವವೆಂದು ವಾದಿಸುವ ಪಂಡಿತ ಬ್ರಾಹ್ಮಣರ ಗರ್ವವನ್ನು ಕತ್ತರಿಸುವ ವಿಷ್ಣುಚಿತ್ತನೋ (ಪೆರಿಯಾಳ್ವಾರ), ಮುನ್ನ ತಾನು ಶ್ರೀರಂಗ ವೆಂಕಟಾಚಲ ಮುಖ್ಯವಾದ ದಿವ್ಯಸ್ಥಾನಗಳಲ್ಲಿ ನೆಲೆಸಿದ ಶ್ರೀಪತಿಯ ದಿವ್ಯಮಂಗಳ ಗುಣಗಳನ್ನು ಕೆಲವು ವರ್ಷ ಅನುಭವಿಸಿದುದರಿಂದ ತೃಪ್ತಿಪಡೆಯದೆ ಹೊಸಶರೀರ ಧರಿಸಿ ಅವತರಿಸಿದ ಶಠಗೋಪ (ನಮ್ಮಾಳ್ವಾರ)ನೋ, ಮುನ್ನ ತನ್ನಿಂದ ಅವಮಾನಿತರಾದ ವಾದಿಗಳು ಈಗ ಪುನರ್ಜನ್ಮದಲ್ಲೂ ಅರಿವಳಿದು ಕೆಲವರು ವೇದ ಪ್ರಮಾಣವೆಂದೂ ಕೆಲವರೂ ವೇದ ಪ್ರಾಮಾಣ್ಯವನ್ನು ಒಪ್ಪಿಯೂ ಅರ್ಥದಲ್ಲಿ ಭ್ರಮೆಗೊಂಡು (ಟಿ. ವೇದಾರ್ಥವನ್ನು ತಪ್ಪಾಗಿ ಗ್ರಹಿಸಿ) ಬೆಳಕಿಗಾಗಿ ಹಿಡಿದ ದೀಪದಲ್ಲಿ ಸಿಡಿದು ಬೀಳುವ ಪತಂಗದಂತೆ ನಾಶವಾಗಿ ಹೋಗುತ್ತಿರಲು ಅವರ ಮರುಳುತನವನ್ನು ಕಳೆದು ಶ್ರೀಮನ್ನಾರಾಯಣನೇ ಪರತತ್ವವೆಂದೂ ಅವನ ಭಕ್ತಿಯೇ ಮುಕ್ತಿಯ ಉಪಾಯವೆಂದೂ ಅವನಿಂದ ಹುಟ್ಟಿದ ಜಗತ್ತೆಲ್ಲವೂ ಸತ್ಯವೆಂದೂ ಅವನ ಸೇವಕರೆನಿಸಿ ಜೀವಾತ್ಮರು ಅವನ ದಿವ್ಯಆಜ್ಞಾರೂಪವಾದ ವರ್ಣಾಶ್ರಮಾಚಾರಗಳನ್ನು ಅನುಸರಿಸಬೇಕೆಂದೂ ಇವು ಮೊದಲಾದ ಹಿತೋಪದೇಶಗಳಿಂದ ಲೋಕವನ್ನೆಲ್ಲ ಉದ್ಧರಿಸಲು ಜನಿಸಿದ ರಾಮಾನುಜನೋ ಎಂದು ಪರಮಸಾತ್ವಿಕರಾದವರು ಭಾವಿಸುತ್ತಿದ್ದರು.

ಉದಯಗಿರಿಶಿಖರದಲ್ಲಿ ಉದಿಸುವ ರವಿಬಿಂಬದಂತೆ ಸಿರಿಮುಡಿಯಲ್ಲಿ ಧರಿಸಿದ ಕೆಂಪು ಮುಂಡಾಸೂ ಸಿರಿಮೊಗದಾವರೆಯ ಸಿಹಿಕಂಪನ್ನು ಬಯಸಿ ಸುತ್ತುತ್ತ ಮೂಗೆಂಬ ಸಂಪಿಗೆಗೆ ಅಂಜಿ ಎರಡೂ ಕಿವಿ ತುದಿಯಲ್ಲಿ ಸಾಲಾಗಿರುವ ದುಂಬಿ ಹಿಂಡಿನಂತೆ ಇರುವ ಕಾಲಕರಿ ಬಟ್ಟೆಯ ಸೆರಗುಗಳೂ ಮುನ್ನ ಆಕಾಶವನ್ನಳೆಯುವಾಗ ತನ್ನ ಉಗುರ ತುದಿ ಸೋಂಕಿನಿಂದ ಹರಿದ ಬ್ರಹ್ಮಾಂಡವೆಂಬ ಕಡಾಯಿಯ ಹೊರ ನೀರು ಇಬ್ಬದಿಯಲ್ಲಿ ಹರಿಯುತ್ತಿರಲು ಒಪ್ಪಿರುವ ತ್ರಿವಿಕ್ರಮನ ದುಂಡಾದ ಉಗುರೆಂಬಂತೆ ತೋರುವ ಪವಿತ್ರ ಊರ್ಧ್ವಪುಂಡ್ರದಿಂದ ಶೋಭಿಸುವ ಮುಖಮಂಡಲವು ಆ ಊರ್ಧ್ವಪುಂಡ್ರವನ್ನು ಕಮಲದ ಕಾಂಡವೆಂದು ಬಗೆದು ಅಲ್ಲಿ ಮಂಡಿಸಿದ ಲಕ್ಷ್ಮಿಯ ಬಂಗಾರದಂಥ ಕೋಮಲ ದೇಹ ವನ್ನು ಹೋಲುವ ಶ್ರೀಚೂರ್ಣತಿಲಕವೂ ಮುಖವೆಲ್ಲವನ್ನೂ ಆವರಿಸ ಬಯಸುವ

ಬೊಗಸೆಗಣ್ಣುಗಳನ್ನು ಮಿತಿಯಲ್ಲಿ ನಿಲ್ಲಿಸುವ ಎಲ್ಲೆಗಟ್ಟೆಗಳಂತಿರುವ ಹುಬ್ಬುಗಳೂ, ನಮಗೆ ಎದುರಿನ ವಸ್ತುಗಳನ್ನಲ್ಲದೆ (ಬೇರೆ ವಸ್ತುಗಳನ್ನು) ತಿಳಿಯುವುದು ಅಸಾಧ್ಯ. ನೀವು (ಪ್ರತ್ಯಕ್ಷ-ಪರೋಕ್ಷವಾದ) ಎರಡೂ ತತ್ವಗಳಲ್ಲಿ ಇರುವುದೆಲ್ಲವನ್ನೂ ತಿಳಿದಿರುವ ಬಗೆ ಯಾವುದೆಂದು ವಿಚಾರಿಸ ಬಯಸಿದಂತೆ ಕಿವಿವರೆಗೆ ಹಬ್ಬಿದ ಕಣ್ಣೆಂಬ ಕಮಲಗಳೂ ಕಡಲನ್ನು ಕಡೆದು ಅಮೃತ ಪಡೆಯುವಂತೆ ಶಾಸ್ತ್ರದಲ್ಲಿ ಸಾರ, ಅಲ್ಪಸಾರ, ಸಾರತರವಾದುವನ್ನು ಬಿಟ್ಟು ಸಾರತಮವಾದ ಮೂಲಮಂತ್ರಗಳ ಅರ್ಥಗಳನ್ನು ಚೆನ್ನಾಗಿ ಗ್ರಹಿಸಿ ಶ್ರೇಷ್ಠ ಆಚಾರ್ಯರು ಉಪದೇಶಗೈದುದರಿಂದ ಆ (ಓಂ ನಮೋ ನಾರಾಯಣಾಯ) ಎಂಬ ಎಂಟು ಅಕ್ಷರಗಳ ಅರ್ಥಗಳು ಬೇರೆ ರೂಪ ಧರಿಸಿ ಕಿವಿಯನ್ನು ಸೇರಿಕೊಂಡವೆಂಬಂತೆ ಇರುವ ಕಿವಿಯ ಚೌಕುಳಿಯಾಭರಣವೂ ತುಂಬಿ ತುಳುಕುವ ಉಭಯ ವೇದಾಂತಸಾರವೆಂಬ ಸಾಗರದ ತೆರೆಗಳಂತೆಯೂ ಸತ್ಯವೆಂಬ ಬಳ್ಳಿಯ ಹೂಗೊಂಚಲಂತೆಯೂ ಸತ್ವಗುಣದ ಕಣ್ಣುತೆರೆಯುವಿಕೆ ಯಂತೆಯೂ ಅಂತಃಕರಣದ ಪ್ರಸಾದದಂತೆಯೂ ಧರ್ಮದ ಅಂಕುರಗಳಂತೆಯೂ ಬೆಳಗಿ ಹೊರಸೂಸುವ ನಸುನಗೆಯೂ ರಜಸ್ತಮೋಗುಣಗಳೆರಡನ್ನೂ ಕಳೆದು ತಾನೊಂದೇ ಮುಮ್ಮಡಿಯಾದ ಸತ್ವಗುಣದಂತೆ ಹೆಗಲಲ್ಲಿ ತೋರುವ ಯಜ್ಞೋಪವೀತವೂ ಮಾನಸಪೂಜಾಸಮಯದಲ್ಲಿ ಅಂತರಾತ್ಮನಿಗೆ ಅರ್ಪಿಸಿದ ದುಂಡುಮಲ್ಲಿಗೆಯ ಮೊಗ್ಗೆಗಳೂ ನಿರ್ಮಲ ಹೃದಯ ಹೊರಗಡೆ ಕಂಗೊಳಿಸಿದಂತೆ ಹರವಾದ ಎದೆಯ ಮೇಲೆಸೆಯುವ ಮುತ್ತಿನ ಏಕಾವಳಿಯೂ ಅದರ ನರುಗಂಪಿಗೆ ಎರಗುವ ಮರಿದುಂಬಿಗಳ ಸಾಲುಗಳಂತೆ ತೋರುವ ತುಳಸಿ ತಾವರೆಮಣಿ ಸರಗಳೂ ಮೇರು ಪರ್ವತದ ತಪ್ಪಲಲ್ಲಿ ಪಸರಿಸುವ ಬೆಳ್ದಿಂಗಳಂತೆಯೂ ಅದೇ ಸ್ಥಾನದಲ್ಲಿ ಹರಿಯುವ ಗಂಗಾ ಪ್ರವಾಹದಂತೆಯೂ ಮೈಯಲ್ಲಿ ಹೊದ್ದುಟ್ಟುಕೊಂಡ ಬಿಳಿಯ ರೇಶಿಮೆ ವಸ್ತ್ರಗಳ ಜೋಡಿಯೂ ಚಿತ್ತಾಕರ್ಷಕವೆನಿಸಿ ಸಮೀಪ ಬರುವ ಅಳಹಿಯ ಸಿಂಗರಾರ್ಯರನ್ನು, ಆದರ ಪೂರ್ವಕ ಕಂಗೊಳಿಸುತ್ತ ಅರಸನ ಎದುರು ಮುಖಮಾಡಿ ಕುಳಿತವರು ಮನದಲ್ಲಿ ವಿಚಾರಿಸಿದರು. ಅದು ಹೇಗೆಂದರೆ-

ಈ ಮಹಾನುಭಾವನು ಬಾಲ್ಯದಿಂದ ನಮಗೆ ಒಳ್ಳೆಯ ಗೆಳೆಯನೂ ಒಡನಾಡಿಗನೂ ಆಗಿದ್ದರೂ ಶಮದಮ ಮೊದಲಾದ ಗುಣಗಳಿಗೆ ಆಶ್ರಯನಾಗಿದ್ದರೂ ಈತನ ದೇಹದಲ್ಲಿ ವ್ಯಾಪಿಸಿರುವ ಅತಿತೇಜದ ಹೆಚ್ಚಳದಿಂದ ಗಕ್ಕನೆ ನೋಡಲೂ ನುಡಿಸಲೂ ಅಸಾಧ್ಯವೆನಿಸಿರುವುದು ಸಹಜ. ಇಷ್ಟೊಂದು ವಿದ್ಯೆಗಳ ಹೊಸಕಾಂತಿ ಮುಖದಲ್ಲಿ ಮಿರುಗುತ್ತಿದೆ. ಈ ರೀತಿಯಾಗಿ, ಶಬ್ದದಲ್ಲಿ ಪತಂಜಲಿಯನ್ನು, ವಾಕ್ಯದಲ್ಲಿ ಜೈಮಿನಿಯನ್ನು ; ಸ್ಮೃತಿ, ಇತಿಹಾಸ, ಪುರಾಣ, ವೇದವೇದಾಂತಗಳಲ್ಲಿ ವ್ಯಾಸನನ್ನು ಸರಿಗೊಂಡು ಅಖಿಲ ತತ್ವಗಳನ್ನು ಕರತಲಾಮಲಕವೆನ್ನುವಂತೆ (ತಾನು) ತಿಳಿದು ತಿಳಿಸುವಂತೆ ಇರುವ ಈ ಮಹಾಮಹಿಮನ ಮಹಿಮೆಯನ್ನು ಹೇಳುವು ದೇನು ? ಕಲಿಯೆಂಬ (ಕೆಟ್ಟ) ಮಳೆಗಾಲದಲ್ಲಿ ಕದಡಿರುವ ಎಲ್ಲ ವಿದ್ಯೆಯೆಂಬ ಹೊಳೆಗಳು ಈತನೆಂಬ ಶರತ್ಕಾಲ ಪಡೆದು ಕಲೂಷವನ್ನು ಕಳೆದು ತಿಳಿಯಾಗುವವು. ಇವನ ಆಧಾರದಿಂದ ಈ ಲೋಕವು (ದೇವತೆಗಳ ಆಚಾರ್ಯನಾದ) ಬೃಹಸ್ಪತಿಯ ಮಹಿಮೆಯನ್ನು ಪ್ರಕಟಿಸುವ ಸ್ವರ್ಗದ ಏಳಿಗೆಯನ್ನು ಹಿಮ್ಮೆಟ್ಟಿಸಿದೆ. ಸರಸ್ವತಿಯೂ ಈತನನ್ನು ಸೇರಿ ಲಕ್ಷ್ಮಿಯ ಜತೆಗೆ ವೈರ

ತೊರೆದು ಯಾವತ್ತೂ ಸಂತಸದಲ್ಲಿರುವಳು. ವೇದಗಳ ಕೊನೆಗೆ ವಿಸ್ತಾರಗೊಂಡ ಮೂವತ್ತೆರಡು ಉಪನಿಷತ್ತುಗಳೂ ಮುನ್ನ ಪರಾಶರ, ವ್ಯಾಸ, ಶುಕ, ಶೌನಕ, ನಾಥಮುನಿ, ಯಾಮುನಾಚಾರ್ಯ, ರಾಮಾನುಜಾಚಾರ್ಯರಲ್ಲಿ ಭೇದವಿಲ್ಲದೆ ಜತೆಗೂಡಿದ್ದಂತೆ ಇವನಲ್ಲೂ ತಮ್ಮ ಅಂತರಾರ್ಥವನ್ನು ತಿಳಿಸಿಕೊಟ್ಟು (ಇವನನ್ನು) ನಂಬಿ ಸುಖವಾಗಿವೆ. ಹೆಚ್ಚೇನು ? ಮೂರ್ಖರಲ್ಲಿ ಸಿಕ್ಕಿಕೊಂಡು ತೊಂದರೆಪಡುವ ಎರಡೂ ವೇದಾಂತಗಳು ಇವನ ಸಾಹಚರ್ಯದಿಂದ ಹೆಚ್ಚಿ ಹೆಮ್ಮೆ ಪಡೆದಿವೆ. ಇಂತಹವರನ್ನು ನೆನೆದರೆ ಎಂಥ ಕಷ್ಟಗಳಾದರೂ ಪರಿಹಾರ ಹೊಂದುವವು. ಹೆಸರುಗೊಂಡ ಕೂಡಲೇ ಆತ್ಮಗತವಾದ ಪಾಪವೆಲ್ಲವೂ ತೊಲಗುವುದು. ದರ್ಶನದಿಂದ ಮೇರೆ ಮೀರುವ ಇಂದ್ರಿಯಗಳು ಕೈವಶವಾಗುವವು. ಯಾವತ್ತೂ (ಇವನ) ಒಡನಾಡಿ ನುಡಿಗೇಳಿ ವಿನಯವನ್ನಾಚರಿಸಿ ಬೇಡಿದ್ದನ್ನಿತ್ತು ಮನ್ನಿಸುವವರ ಉನ್ನತಿಗೆ ಮಿತಿಯಾವುದು ? ಇವನ ಬಳಿಗೆ ಬಂದು ಒಂದೊಂದೇ ದಿನ ಓದು ಕಲಿತರೂ ಓದುಗಳ ಮರ್ಮ ತಿಳಿದು ಕಾಮ ಕ್ರೋಧಾದಿಗಳನ್ನು ಬಿಟ್ಟು ಸಂದೇಹವನ್ನು ತ್ಯಜಿಸಿ ಮತ್ಸರವನ್ನು ಮೀರಿ (ಆಚಾರ್ಯರಿಗಿಂತ ಶ್ರೇಷ್ಠರೆನಿಸಿದ) ಕುಲಪತಿಗಳೆನ್ನಿಸುವರು. ಇಂಥವರು ಹಾಗಿರಲಿ! ಮತ್ತೆ ಎಂಥ ಪಾಪಿಗಳಾದರೂ ದುರುಳರಾದರೂ ಅವರ ಕಲ್ಲೆದೆಗಳು ಚಂದ್ರನನ್ನು ಕಂಡ ಚಂದ್ರಕಾಂತ ಶಿಲೆಯಂತೆ ತಂಪೇರಿ ಕರಗುವವು. ತಮ್ಮ ಸಂಪರ್ಕದಿಂದಲೇ ಹೆರವರನ್ನು ಬಸವಳಿಸಿ ಅರಿವುಗೆಡಿಸುವುದೇ ಸಹಜವಾದ ದುರ್ಗುಣಗಳು ಇವನಿಂದ ತಮ್ಮ ತಮ್ಮ ಸಾಮರ್ಥ್ಯವನ್ನು ಕಳೆದುಕೊಂಡು ಸದ್ಗುಣಗಳೆನಿಸುವವು.

ಅದು ಹೇಗೆಂದರೆ-ಕಾಮವು ಅಲ್ಪವೂ ಅಸ್ಥಿರವೂ ಆದ ಲೌಕಿಕ-ಪಾರಲೌಕಿಕ ಫಲ ಭೋಗದಿಂದ ಪರಾಙ್ಮುಖವಾಗಿ ಭಗವದ್ಗುಣಾನುಭವಕ್ಕೆ ಕಾರಣವೆನಿಸಿ ಭಕ್ತಿಯಾಗುವುದು. ಕ್ರೋಧವು ಸಂಬಂಧಿಗಳು ಸಾಮಂತರುಗಳನ್ನು ತ್ಯಜಿಸಿ (ಮನಸ್ಸು ಬುದ್ಧಿಚಿತ್ತ ಅಹಂಕಾರಗಳೆಂಬ) ಅಂತಃಕರಣ ಮತ್ತು (ಶರೀರ ಇಂದ್ರಿಯಾದಿ), ಬಾಹ್ಯಕರಣಗಳಲ್ಲಿ ಹೊಮ್ಮುವ ಕೆಟ್ಟ ನೆನಪನ್ನೂ ಸಲ್ಲದ ನುಡಿ-ನಡೆಗಳನ್ನೂ ತಡೆದು ವೈರಾಗ್ಯವೆನಿಸುವುದು. ಲೋಭವು ಧನ ಧಾನ್ಯಾದಿಗಳನ್ನು ನಿರಾಕರಿಸಿ ದೋಷಯುಕ್ತರಾದ ಆಶ್ರಿತ ಜನರಲ್ಲಿ ಆಶ್ರಿತವಾಗಿ ವಾತ್ಸಲ್ಯವೆನಿಸುವುದು. ಮೋಹವು ಸಲ್ಲದ ವಿಷಯಗಳ ನೆಲೆಯಿಂದ ದೂರಸರಿದು ತನ್ನ ಗುಣ ಸಮೂಹದ ಹಿರಿಮೆಯನ್ನು ಅನುಸರಿಸುವುದರಿಂದ ಸುಶೀಲವೆನಿಸುವುದು. ಮದವು ವಿದ್ಯೆ ಸಂಪತ್ತು ಶ್ರೇಷ್ಠಕುಲ ಮುಂತಾದವುಗಳಿಂದ ದೂರಾಗಿ ಭಗವಂತ ಮತ್ತು ಭಗವದ್ಭಕ್ತರ ಕೃಪೆಯಿಂದೊಡ ಗೂಡಿರುವುದರಿಂದ ಭಗವಂತನ ಮಹಿಮಾನುಸಾರಿ ಎನಿಸುವುದು. ಮಾತ್ಸರ್ಯವು ಭಗವದ್ವಿಷಯುಗಳಿಂದ ಹೊರತೆನಿಸಿ ಮಂತ್ರಸಾಧನ (ಮತ್ತು) ದೇವತಾನುಸಾರಿ ಯಾಗಿರುವುದರಿಂದ (ಸ್ವ) ಸ್ವರೂಪಜ್ಞಾನಕ್ಕೆ ಒಳಪಡುವುದು ಮತ್ತು ಈ ವೈಷ್ಣವೋತ್ತಮನು ಮಹಿಮೆಯಲ್ಲಿ ಬ್ರಹ್ಮನ ಮಗನೆಂಬ ಹೆಮ್ಮೆಯಿಂದ ಎದುರಾದ ವಶಿಷ್ಠನಿಂದಲೇ ಬ್ರಹ್ಮರ್ಷಿ ಎನಿಸಿಕೊಂಡು ಸಕಲ ವೇದಗಳ ಮಾತೆಯೂ ಬ್ರಾಹ್ಮಣತ್ವಕ್ಕೆ ಜನನಿಯೂ ಎನಿಸಿದ ಗಾಯತ್ರೀ ಮಂತ್ರಕರ್ತೃವೆನಿಸಿ, (ಎಲ್ಲಕ್ಕೂ) ತಾರಕಮಂತ್ರನೆನಿಸಿದ ಶ್ರೀ ರಾಮಚಂದ್ರನಿಗೇ ಮಂತ್ರ ರಹಸ್ಯವನ್ನು ಉಪದೇಶಿಸಿದನೆನಿಸಿ ತನ್ನ ಗೋತ್ರಪುರುಷನೆನಿಸಿದ ವಿಶ್ವಾಮಿತ್ರನಿಗೂ,

ಸದಾಚಾರದಿಂದ ಯಜುರ್ವೇದದಿಂದ ಹುಟ್ಟಿದ ಎಲ್ಲ ಶ್ರೌತ-ಸ್ಮೃತಿಕರ್ಮ ಪ್ರಯೋಗ ಪದ್ಧತಿಯಲ್ಲಿ ಯಾವದೊಂದು ಸಂಶಯಕಲಂಕ ತಲೆದೋರದು. ಉದಾಸೀನಮಾಡದೆ ಅದನ್ನರಿತು ಪರಾಮರ್ಶಿಸಿ ಪರಿಹರಿಸಿ ಸುಲಭವಾಗಿಯೂ ಸುವ್ಯಕ್ತವಾಗಿಯೂ ಹವಣುಗೊಳಿಸಿ ಆ ಸೂತ್ರ (ಆಪಸ್ತಂಭ ಸೂತ್ರಗಳ) ಕರ್ತೃವೆನಿಸಿದ ಆಪಸ್ತಂಬನಿಗೂ, ತತ್ವಹಿತ ಪುರುಷಾರ್ಥ ನಿಶ್ಚಯದಿಂದ ಶ್ರೀಹಸ್ತಿಗಿರಿನಾಥನಿಂದ ಅರ್ಥಪಂಚಕಗಳನ್ನು ತಿಳಿದು ಶ್ರೀಕುದುಂಗುಡಿ ನಂಬಿಕೆ ಉಪದೇಶವಿತ್ತು ತನ್ನ ಸ್ವಂತ ದರ್ಶನವಾದ ವಿಶಿಷ್ಟಾದ್ವೈತದ ಪ್ರವರ್ತಕನೆನಿಸಿದ ಶ್ರೀಭಾಷ್ಯಕಾರ ಶ್ರೀರಾಮಾನುಜಾಚಾರ್ಯರಿಗೂ, ಆಕಾರ ಅನುಕರಣೆ ಮತ್ತು ಪ್ರವೃತ್ತಿಗಳಿಂದ ಹಿಂದಿನ ಜನ್ಮದಲ್ಲಿ ಶ್ರೀರಾಮಚಂದ್ರನಿಗೆ ಎಲ್ಲಾ ಸ್ಥಾನ ಕಾಲ ಅವಸ್ಥೆಗಳಲ್ಲಿ ಉಚಿತವಾದ ಎಲ್ಲಾ ಸೇವಾಕಾರ್ಯವೆಂಬ ಸಾಮ್ರಾಜ್ಯಕ್ಕೆ ದೀಕ್ಷಿತನೆನಿಸಿ ಪ್ರಸಿದ್ಧಿ ಪಡೆದ (ಲಕ್ಷ್ಮಣನಂತೆ) ಶ್ರೀರಾಮಾನುಜಾಚಾರ್ಯರ ಮನ ಬಯಸಿದಂತೆ ಸತತವೂ ಮನೋವಾಕ್ಕಾಯಗಳಿಂದ ಅವರ ಜತೆಯಿದ್ದು ಸೇವಿಸಿ ಅವರ ಒಲುಮೆಯಿಂದ ತನ್ನ ನಡವಳಿಕೆಗೆ ತಕ್ಕುದಾದ 'ನಾಮಧ್ವನಿ' ಎಂಬ ಹೆಸರು ಪಡೆದ ಹಾಗೂ ತನ್ನ ಕುಲಪತಿ ಎನಿಸುವ ಎಳೆವಿಲ್ಲಿಯಾಚಾರ್ಯರಿಗೂ ಸಮನೆನಿಸಿದ್ದನು.

ಈ ದೇಶಿಕ (ಪುರೋಹಿತ)ನ ಸೌಂದರ್ಯವನ್ನು ಎಣಿಸಲು ಪುಣ್ಯವು ರೂಪ ವೆತ್ತಂತೆಯೂ ಧರ್ಮವು ಬೇರೆ ದೇಹ ಧರಿಸಿದಂತೆಯೂ ಸತ್ಯವು ಒಗ್ಗೂಡಿದಂತೆಯೂ ವೈರಾಗ್ಯವು ಮೊಗ್ಗುಗೊಂಡಂತೆಯೂ ಭಕ್ತಿ ಸಾಲುಗೊಂಡಂತೆಯೂ ಬುದ್ಧಿ ಸಿದ್ಧವಾದಂತೆಯೂ ಸತ್ವ ಧೃಢತೆ ಹೊಂದಿದಂತೆಯೂ ಕ್ಷಮೆಯು ನಿಮಿರಿದಂತೆಯೂ ಶಾಂತಿ ಗುಂಪು ಗೂಡಿದಂತೆಯೂ ತೋರುವುದು - ಎಂದೆಣಿಸಿ ಆನಂದಪಟ್ಟು ಅರಳಿದ ಕಣ್ಣುಗಳಿಂದ ಸೂಸುವ ಹರ್ಷಾಶ್ರುಗಳೂ ಹೊಮ್ಮುವ ರೋಮಾಂಚನವೂ ಕವಿಯುವ ದೃಷ್ಟಿಯೂ ಕಾತರಿಸುವ ಮನಸ್ಸೂ ಆಗಲು ಅಳಹಿಯ ಸಿಂಗರಾರ್ಯರು ಅರಸನನ್ನು ಸಮೀಪಿಸುತ್ತ ಅವನ ದಿವ್ಯತೇಜವನ್ನು ಕಂಡು, ಮುನ್ನ ತಾನು ಇತಿಹಾಸ ಪುರಾಣಗಳಲ್ಲಿ ತಿಳಿದ ಹಲವು ಪುರುಷರನ್ನು ಮನಕ್ಕೆ ತಂದುಕಂಡನು. ಅದು ಹೇಗೆಂದರೆ-

ಪೂಜಾನಿರತನಾದ ದೊಡ್ಡದೇವರಾಜನ ವರ್ಣನೆ

ಸತ್ಯಲೋಕದಿಂದಿಳಿದು ಇಕ್ಷ್ವಾಕುಕುಲ ಪರಂಪರೆಯಿಂದ ಪೂಜೆಗೊಂಡು ಕುಲಧನವೆನಿಸಿದ ಶ್ರೀರಂಗನಾಥನನ್ನು ಆರಾಧಿಸುವ ದಶರಥನೋ ? ಮತ್ತು ಆ ಸತ್ಯಲೋಕದಿಂದಲೇ ಸನತ್ಕುಮಾರನಿಂದ ಯದುಗಿರಿಯಲ್ಲಿ ನೆಲೆಸಿ ಯದುಕುಲದ ಪರಂಪರೆಯಿಂದ ಪೂಜೆಗೊಂಡ ಶ್ರೀನಾರಾಯಣನನ್ನು ಪೂಜಿಸುವ ವಸುದೇವನೋ ತನ್ನ ಉತ್ತರವೇದಿಯಲ್ಲಿ ಹುಟ್ಟಿದ ಕಾಂಚೀಪಟ್ಟಣದ ರಾಜ(ವಿಷ್ಣು)ನನ್ನು ಪೂಜಿಸುವ ಪೊಯ್‌ಗೈಯಾಪ್ಪಾರನೊ ? ರಾಜಸೂಯಯಾಗದ ಸಭೆಯ ಮಧ್ಯದಲ್ಲಿ ಅಚ್ಯುತನ ಪೂಜೆ ಮಾಡುತ್ತಿರುವ ಧರ್ಮಪುತ್ರನೋ ? ಪ್ರಭಾತದಲ್ಲಿ ವೈದಿಕ ಬ್ರಾಹ್ಮಣರ ಮಕ್ಕಳನ್ನು ಹುಡುಕುತ್ತ ಸಮುದ್ರ ಪ್ರವೇಶಿಸಿದ ಕೃಷ್ಣನ ಪಾದ ಪೂಜಿಸುವ ವರುಣನೋ ? ಗೋವರ್ಧನ ಪರ್ವತವನ್ನು

ಎತ್ತಿದ ತರುವಾಯ ಮುನ್ನ ತಾನು ಮಳೆ ಸುರಿಸಿದ ಪಾಪವನ್ನು ನೀಗಲೆಂದು ಬಂದು ಕೃಷ್ಣನನ್ನು ವಂದಿಸುವ ಇಂದ್ರನೋ ? ಪೂಜಾವಿಧಾನವನ್ನರಿಯದ ಜಗಕ್ಕೆ (ಅದನ್ನು) ತಿಳಿಸಲೆಂದು ಉತ್ತರ ಬದರಿಕಾಶ್ರಮದಲ್ಲಿ ಎರಡು ದೇಹ ಧರಿಸಿ ತನ್ನನ್ನು ತಾನೇ ಪೂಜಿಸುವ ನಾರಾಯಣನ ಶಿಷ್ಯನೆನಿಸಿದ ನರಮುನಿಯೋ ? ಎಂದು ಇಂತು ಹೊಮ್ಮುವ ವರ್ಣನೆಗಳಿಂದ ಕಳವಳಿಸುವ ಹೃದಯವನ್ನು ಕುಶಲಗೊಳಿಸಿ ಮತ್ತು ಅವನ ಚೆಲುವನ್ನು ಕಂಡು ಒಲುಮೆಯ ಭಾವದಿಂದ ಚಿಂತಿಸಿದನು : -

ಈಗ ಇವನು ಶಿವನನ್ನು ಗೆಲ್ಲಬಯಸಿ ವ್ರತಗೊಂಡ ಕಾಮನೇ ಹೌದು. ಅಲ್ಲದಿದ್ದರೆ ಈ ಸೌಂದರ್ಯವೆಲ್ಲಿಯದು ? ಅಥವಾ ಯಾವುತ್ತೂ ಪರಿಪೂರ್ಣತೆಯನ್ನು ಪಡೆಯಲೆಂದು ತಪದಲ್ಲಿ ನಿಷ್ಠನಾದ ಚಂದ್ರನಾಗಿರಬೇಕು. ಅಲ್ಲದಿದ್ದರೆ ಈ ಕಳೆಯೂ ಸೌಮ್ಯತೆಯೂ ಎಲ್ಲಿಯದು? ವರ್ಷವೆಲ್ಲವೂ ಹಮ್ಮಿರುವೆನೆಂದು ವ್ರತಗೈಯುವ ವಸಂತನಾಗಿರಬೇಕು. ಅಲ್ಲದಿದ್ದರೆ ಸುಗಂಧ ಸುಕುಮಾರತೆಗಳು ಯಾವ ಬಗೆಯವು ? ಎಂದು ವಿಚಾರಿಸುತ್ತ ಮತ್ತು ಅವನ ಧೀರ, ಉದಾರ, ಪ್ರಸನ್ನ ಆಕಾರವನ್ನು ನಿರೀಕ್ಷಿಸುತ್ತ ಶಿರದಿಂದ ಓರಣವಾಗಿ ಬಂದು ಕಿವಿಯನ್ನು ಸಮೀಪಿಸಿ ಬಿಳಿಬಟ್ಟೆಯಿಂದ ಕಟ್ಟಲ್ಪಟ್ಟು ದೊಡ್ಡದೆನಿಸಿ ಅಚ್ಚಹೊಸ ಸೇವಂತಿಗೆ ಯೆಸಳ ಮಾಲೆಯ ಸುತ್ತಿನಿಂದ ಒಂದಿಷ್ಟು ನಡುಭಾಗವನ್ನು ಬಿಟ್ಟು ತಲೆಯ ಬದಿಯನ್ನು ಬೆಳ್ಳಗಾಗಿಸುವ ಓರೆಶಿಖಿಯು ತನ್ನ ಕುಲದ ಏಳಿಗೆಯನ್ನು ನೋಡಲೆಂದು ಇಳಿತಂದ ಚಂದ್ರನೆಂಬ ಸಂದೇಹವನ್ನುಂಟು ಮಾಡುತ್ತಿದೆ. ಆ ಶಿಖಿಯಲ್ಲಿ ಕಟ್ಟಿದ ಶ್ರೇಷ್ಠಬಟ್ಟೆಯು ಮೂರು ಸೆರಗುಗಳಲ್ಲಿ ಪವಣಿಸಿ ಜೋಲುತ್ತಿರುವ ದೊಡ್ಡಮುತ್ತುಗಳೂ ಕಿವಿಯಲ್ಲಿಟ್ಟು ಚೌಕಳಿ ಬಾವುಲಿಗಳೂ ತಮ್ಮ ಪತಿ (ಚಂದ್ರ)ಯನ್ನು ಬೆಂಬತ್ತಿ ಬಂದ ತಾರಾಕನ್ಯೆಯರೆಂಬ ನೆನಪನ್ನುಂಟು ಮಾಡುತ್ತಿವೆ. ಹೊನ್ನಹಲಿಗೆಯಂತಿರುವ ನೊಸಲಲ್ಲಿ ಮಿರುಗುವ ಚಂದ್ರನಂತಿರುವ ನಾಮ ಮತ್ತು ಶ್ರೀಚೂರ್ಣಗಳು, ಗೋವಿಂದನ ಅಡಿಯಿಂದ ಹೊಮ್ಮುವ ಗಂಗಾಪ್ರವಾಹದ ವೇಗದಿಂದಾಗಿ ಸಡಿಲುವ ಮುಡಿಯಿಂದ ಶಿವನ ನುಣುಪಾದ ಮುಖದಲ್ಲಿ ಹರಿದು ಹಣೆಗಣ್ಣಿನ ಕೆಳಗಿಳಿದು ಮೂಗಿನ ಆಧಾರದ ಮೇಲೆ ನಿಂತಿರುವ ಚಂದ್ರಕಳೆಯ ಸೊಬಗನ್ನು ಸೂಚಿಸುತ್ತಿದೆ. ಅತಿ ದೀರ್ಘವಾದ ಕಣ್ಣೆಂಬ ಕಮಲಗಳು ಶತ್ರುಗಳು, ಮಿತ್ರರು ಮತ್ತು ಉದಾಸೀನರೆಂಬ ಮೂರು ಪ್ರಕಾರದ ದೊರೆಗಳು ಸಪ್ತಾಂಗ ರಾಜ್ಯದ ಸ್ಥಿತಿಯಲ್ಲಿ ತಮ್ಮಲ್ಲಿ ಒಬ್ಬರೊಬ್ಬರು ಅರಿಯದಂತೆ ಒಂದೊಂದೆಡೆಗೆ ಕಳುಹಿಸಿದ ಮೂರು-ಮೂರು ಜನ ಗುಪ್ತಚಾರರಿಂದ ಬೇರೆ ಬೇರೆಯಾಗಿ ಕೇಳಿ ಸ್ಪಷ್ಟವಾಗಿ ತಿಳಿದುಕೊಂಡೂ ತೃಪ್ತಿಹೊಂದದೆ ಅರಸನ ಅಭಿಪ್ರಾಯವನ್ನು ಗ್ರಹಿಸಿ ಬೇಹಿನವರು ಕಿವಿ ತುಂಬಿಕೊಂಡಿದ್ದ ಭೂಮಂಡಲದ ವೃತ್ತಾಂತವೆಲ್ಲವನ್ನೂ ಪ್ರತ್ಯಕ್ಷ ಕಾಣಬಯಸಿ (ಕಣ್ಣುಗಳು) ಕಿವಿಗಳನ್ನೇ ಪ್ರವೇಶಿಸುವ ಸನ್ನಾಹವನ್ನು ತೋರುತ್ತಿದೆ. (ಟಿ. ಕಿವಿಯವರೆಗೂ ಕಣ್ಣುಗಳು ವ್ಯಾಪಿಸಿವೆ ಎಂದು ಭಾವ) ಆ ಕಣ್ಣುಗಳ ತುದಿಯವರೆಗೂ ಹಬ್ಬಿರುವ ಕೊಂಕಾದ ಹುಬ್ಬುಗಳು ಅವನ್ನು ತಾವರೆಯೆಂದು ಭಾವಿಸಿ ಸಾಲಾಗಿ (ಜೇನು ಸವಿಯಲು) ಎರಗಿದ ತುಂಬಿಹಿಂಡೆಂಬ ಭಾವನೆಯನ್ನುಂಟು ಮಾಡುತ್ತಿವೆ. ನಸು ನೀಳವಾದ, ಮೂಗೆಂಬ ಗೋಡೆಯು ನಯನಾಮೃತ ಸಾಗರಗಳೆರಡೂ ಬೆರೆಯದಂತೆ ಎದೆಯಲ್ಲಿಟ್ಟ

ಬಂಗಾರದ ಕಟ್ಟೆಯ ಸ್ಥಿತಿಯನ್ನುಂಟು ಮಾಡಿದೆ. ಹಿರಿಕಿರಿದಾಗದೆ ಎರಡೂ ಬದಿಯಲ್ಲಿ ಮೆರೆಯುವ ಮೀಸೆಗಳು ಮುಖಚಂದ್ರನ ಕಪ್ಪುಗೆರೆಯ ಸಿರಿಯನ್ನು ಸೆರೆಗೈಯುತ್ತಿವೆ. ಒತ್ತಿ ಕತ್ತರಿಸಿದ ಹವಣಾದ ಕಲ್ಲಿಮೀಸೆಯು, ಒಂದೇ ಸಮವಾಗಿ ಹರಿಯುವ ಯೌವನವೆಂಬ ಮದ್ದಾನೆಯ ಮದೋದಕ ಧಾರೆಯ ರೀತಿಯಲ್ಲಿ ಕಂಗೊಳಿಸುತ್ತಿದೆ. ಮಂತ್ರಾಕ್ಷರಗಳ ಉಚ್ಚರಣೆಯಲ್ಲಿ ನಸುದೆರೆದ ಬಾಯ್ದೆರೆಯಿಂದ ಹೊರಸೂಸುವ ಮೊಲ್ಲೆಯಂತಿರುವ ಹಲ್ಲುಗಳ ಬೆಳಗು, ಭಗೀರಥನ ಬಿನ್ನಹಕ್ಕೊಲಿದು ಜಹ್ನುಮುನಿ ಮುಖದಿಂದ ಹೊರಹೊಮ್ಮುವ ದೇವಗಂಗೆಯ ಹೊಚ್ಚ ಹೊಸ ಪ್ರವಾಹದಂದವನ್ನು ಸೆರೆಗೈಯುತ್ತಿದೆ. ಭಗವಂತನ ಗುಣಗಳ ಅನುಭವದಿಂದ ಗದ್ಗದಗೊಳ್ಳುವ ಗೆರೆಗೊರಳು ಪವಿತ್ರವಾದ ಸ್ತುತಿಯಕ್ಷರಗಳೆಂಬ ಹಾಲನ್ನು ತುಂಬಿ ಮುಖಕಮಲದಿಂದ ಮುಚ್ಚಿ ಸಜ್ಜುಗೆಯ್ದು ಭಗವಂತನ ಸ್ನಾನಕ್ಕೆಂದು ಇಟ್ಟ ಶಂಖ-ಚಕ್ರ ಲಾಂಛನಗಳು, ಮುನ್ನ ಪರಶುರಾಮನು ಕೈಯಲ್ಲಿ ಹಿಡಿದ ಆಯುಧಗಳನ್ನು ತನ್ನ ಅಪರಾವತಾರವೆನಿಸುವ ರಾಮಚಂದ್ರನಲ್ಲಿರಿಸಿ ಕ್ಷೇಮದಿಂದಿದ್ದಂತೆ ಈಗ ಶ್ರೀಕೃಷ್ಣನೂ ತಾನು ಧರಿಸಿದ್ದ ಶಂಖ-ಚಕ್ರಗಳನ್ನು ಇವನ ಭುಜಗಳಲ್ಲಿರಿಸಿದನೆಂಬ ಭಾವನೆಯನ್ನುಂಟುಮಾಡುತ್ತಿವೆ. ಹೀಗಿರುವ ನಿಡುದೋಳುಗಳೆರಡೂ ಹಲವುದಿನ ಪಾತಾಳದಲ್ಲಿದ್ದು ಬೇಸರಗಳೆಯಲೆಳಸಿ ಭೂತಳಕ್ಕೇರುತ್ತ, ಗರುಡನಿಂದ ಏನಾದರೂ ಎಡರು ತೋರದಂತೆ ಶ್ರೀ ವಿಷ್ಣುವಿನ ದಿವ್ಯಾಯುಧಗಳ ಮುದ್ರೆ ಧರಿಸಿ ನಿರ್ಭಯಗೊಂಡು ಆನಂದಬಡೆದ ಆದಿಶೇಷ-ವಾಸುಕಿಗಳ ಹಿರಿಮೆಯನ್ನು ಹೊಂದಿದೆ. ಧರಿಸಿದ ಮುತ್ತಿನ ಏಕಾವಳಿ, ತ್ರಿಸರ, ಪಂಚಸರಗಳ ಶುಭಕಿರಣದೆರೆಗಳಿಂದ ತುಂಬಿ, ಮೇಲ್ಗಡೆ ಶ್ರೀಕಾಂತನು ಧರಿಸಿರುವ ಹರವಾದ ಎದೆಯು ಕ್ಷೀರಸಾಗರ ವೈಭವವನ್ನು ವಿಡಂಬಿಸುತ್ತಿದೆ. ಹೊದ್ದುಟ್ಟಿರುವ ಬಿಳಿಬಟ್ಟೆಗಳು ಎರಡೂ ಗುಣಗಳನ್ನು ನುಂಗಿ ಹೊರಹೊಮ್ಮುವ ಸತ್ವದ ಎತ್ತರವನ್ನು ವಿಸ್ತರಿಸುತ್ತಿದೆ. ಪದ್ಮಾಸನದಲ್ಲಿರುವುದರಿಂದ ಹೊರಗೆ ತೋರುವ ಒಂದಡಿಯ ಹೆಬ್ಬೆರಳು ಇತರ ಬೆರಳುಗಳ ದುಂಡಾದ ಉಗುರುಗಳು (ಈತನ) ಮುಖಸಿರಿಗೆ, ತಡೆದು ನಿಂತು (ತನ್ನ) ಅಂತಃಪುರದೊಡನೆ ಬಂದು ನಮಸ್ಕರಿಸುತ್ತಿರುವ ಚಂದ್ರನ ರೀತಿಯಲ್ಲಿ ತೋರುತ್ತಿವೆ' ಎಂದೆಣಿಸುತ್ತ ಮತ್ತೆ 'ಇವನು ಭಗವದಾರಾಧನೆಗೆ ವಿಧಿಗೆ ಪ್ರಾರಂಭವೆಂದೆನಿಸುವ ಮಾನಸ ಪೂಜಾ ವಿಧಿಯಲ್ಲಿ ಹೆಚ್ಚಿ, ಭಕ್ತಿಭರದಿಂದ ನಸುಮಣಿದ ಶಿರದಲ್ಲಿ ಧರಿಸಿದ ಜೋಡು ಕೈಯ್ಯೂ ಅರೆದೆರೆದ ಕಣ್ಣುಗಳೂ ಅಲುಗದ ಅಂಗಾಂಗಗಳೂ ಆಗಿರಲು ಈ ಸ್ಥಿತಿಯನ್ನು ಅರಗಳಿಗೆ ನೋಡುತ್ತಿರುವಷ್ಟರಲ್ಲಿ ಅರಳುವ ಮುಖವೂ ಸುಖಾಶ್ರು ಸೂಸುವ ಕಣ್ಣೆಂಬ ಕಮಲಗಳೂ ಸೆರೆಬಿಗಿಯುವ ಕೊರಳೂ ಹೊಮ್ಮುವ ರೋಮಾಂಚನವೂ ಆದ ಸ್ಥಿತಿಯನ್ನು ಕಾಣಿಸಿ ಆ ಇಂಗಿತಗಳಿಂದ 'ಮಾನಸ ಪೂಜೆಯಲ್ಲಿ ಈವರೆಗಾದುದು ಈ ತೆರದ್ದು (ಈಗ) ಆಗುತ್ತಿರುವುದು ಈ ಅಂಶದ್ದು' ಎಂಬುದನ್ನು ಸಂಶಯವಿಲ್ಲದೆ ನಿರೂಪಿಸಿದನು. ಅದು ಹೇಗೆಂದರೆ-

ರಾಜನ ಮಾನಸಾರಾಧನೆ

ಮೊದಲಲ್ಲಿ ಹದಿನಾಲ್ಕು ಲೋಕಗಳನ್ನೂ ಅವುಗಳಿಂದ ತುಂಬಿದ ಬ್ರಹ್ಮಾಂಡವನ್ನೂ

ಅದರ ಹೊರವಲಯದಲ್ಲಿ ಕ್ರಮವಾಗಿ ಒಂದರಿಂದೊಂದು ಹತ್ತುಪಟ್ಟು ದೊಡ್ಡದೆನಿಸುವ ಜಲದಿಂದಾದಿಯಾಗಿ ಪ್ರಕೃತಿಯಿಂದದಂತ್ಯವಾಗುವ ಏಳೂ ಆವರಣಗಳನ್ನು । ಅವುಗಳಿಂದ ಮೇಲೆ ಪರಮವ್ಯೋಮವೆಂಬ ಹೆಸರಿನಿಂದೆಸೆದು ಬ್ರಹ್ಮಮೊದಲಾದ ದೇವತೆಗಳ ನುಡಿಗೂ ನೋಟಕ್ಕೂ ನೆನಪಿಗೂ ನಿಲುಕದಂಥ ಮಹಿಮೆ ಹೊಂದಿದ ವೈಕುಂಠಲೋಕವನ್ನು । ಅಲ್ಲಿ ಚೆಲವು ಹೊಂದಿ ಹಲವು ರನ್ನ ಹೊನ್ನಗಳಿಂದ ರಚಿತವಾಗಿ ತಳತಳಿಸುವುದರಿಂದ ಇಷ್ಟು ಉದ್ದ, ಇಷ್ಟು ಅಗಲ ಈ ಪ್ರಕಾರವೆಂದು ಅರಿಯಲು ಅಸಾಧ್ಯವೆನಿಸಿದ ಹಲವು ಪ್ರಕಾರಗಳಿಂದ ಸುತ್ತುವರಿದ ವೈಕುಂಠವೆಂಬ ದಿವ್ಯನಗರವನ್ನು । ಅಲ್ಲಿ ಯಾವತ್ತೂ ಚಿಗಿತು ಮೊಗ್ಗಾಗಿ ಹೂವರಳಿ ಕಾಯಿಬಿಟ್ಟು ಹಣ್ಣಾಗಿ, ನಲಿದು ಉಲಿಯುವ ಕೋಗಿಲೆ, ತುಂಬಿ, ಗಿಳಿ, ಸಾರಿಕೆ ಮೊದಲಾದುವುಗಳನ್ನು ರಕ್ಷಿಸುವ ಹಲವು ಜಾತಿಯ ಹೆಮ್ಮರಗಳಿಂದೆಸೆಯುವ ಹಲವು ಸಿಂಗರದೋಟಗಳನ್ನು । ಅದರ ನಡುವೆ ಮಾಣಿಕ್ಯ, ಪಚ್ಚೆ, ಮುತ್ತು, ನೀಲ, ವಜ್ರಗಳಿಂದ ಬೇರೆ ಬೇರೆಯಾಗಿ ನಿರ್ಮಿಸಿದ ನೆಲಗಟ್ಟುಗಳಲ್ಲಿ ಬೆಳೆದ ಮಂದಾರ, ಪಾರಿಜಾತ ಮುಂತಾದ ಕಲ್ಪವೃಕ್ಷಗಳಿಂದ ಉದುರಿದ ನರುಗಂಪಿನ ಹೂಗಳಿಂದ ಹೂಬೆಟ್ಟಗಳೆನಿಸುವ ಹಲವು ಸಿಂಗಾರ ದೋಟಗಳನ್ನು । ಅಲ್ಲಿ ಒಂದೆಡೆಯಲ್ಲಿ, ಮೊಲ್ಲೆ, ಮಲ್ಲಿಗೆ ಮೊದಲಾದ ಹೂಗೊಂಚಲುಗಳಿಂದ, ಮತ್ತೊಂದೆಡೆಯಲ್ಲಿ ಕಬ್ಬು, ಮಾವು ಮೊದಲಾದವುಗಳ ತಳಿರುಗೊಂಬೆಗಳಿಂದ, ಮತ್ತೊಂದೆಡೆಯಲ್ಲಿ ರನ್ನ ಹೊನ್ನುಗಳಿಂದ ರಚಿಸಿದ ಶಯ್ಯಾಗೃಹಗಳನ್ನು । ಆ ಕ್ರೀಡಾಪರ್ವತಗಳ ಒತ್ತಿನಲ್ಲಿ ಸುತ್ತುವರಿದ ಸ್ಫಟಿಕದ ಹಲಗೆಯ ನೆಲಗಟ್ಟೂ ಹವಳ ಮುತ್ತುಗಳ ಪಾರಟೆಗಳೂ, ಅಮೃತವನ್ನು ಕೀಳ್ಗೈಯ್ಯುವ ತಂಪು, ಇಂಪು, ಕಂಪುಗಳು ತುಂಬಿದ ತಿಳಿನೀರು, ಇಂಚರಗೈಯುವ ಹಂಸ, ಕ್ರೌಂಚ ಮೊದಲಾದ ಹಲವು ನೀರುಹಕ್ಕಿಗಳೂ ಮನ ಸೂರೆಗೈಯುವ ತಾವರೆನೈದಿಲೆ ಕೊಳಗಳನ್ನು । ಹೀಗೆ ಎಸೆಯುವ ಪಟ್ಟಣದ ನಟ್ಟನಡುವೆ ಯಾವತ್ತೂ ನೆಲಸಿರುವವರೆಗೂ, ಮೂರುಹೊತ್ತೂ ಹೊಸಹೊಸದೆನಿಸಿ ಅಚ್ಚರಿಪಡಿಸುವ ಸರ್ವಾಶ್ಚರ್ಯಮಯವಾದ ಅರಮನೆಯನ್ನು । ಅಲ್ಲಿ ಹಲವು ಬಣ್ಣದ ಸುವರ್ಣವಸ್ತ್ರದ ಮೇಲ್ಕಟ್ಟೂ, ಮುತ್ತಿನ ಮಾಲೆಗಳೂ, ನೀಲದ ನೆಲೆಗಟ್ಟೂ, ಹಲವು ಬಗೆಯ ರತ್ನಗಂಬಳಿಗಳೂ ಆಗಿ ಕಾಲತತ್ವವು ಇರುವವರೆಗೂ ಎಷ್ಟು ಜನಬಂದರೂ ಎಲ್ಲರಿಗೂ ಪ್ರಶಸ್ತವಾಗಿ, ಪ್ರವೇಶಿಸದವರ ಮನಸ್ಸನ್ನು ಗಕ್ಕನೆ ಸೊಕ್ಕೇರಿಸುವ ಸಾವಿರ ಕಂಬದ ಮಹಾಮಣಿಮಂಟಪವನ್ನು। ಅಲ್ಲಿ ಮೇರೆಯಿಲ್ಲದ ಸಾಮರ್ಥ್ಯವೂ ಪರಾಕ್ರಮವೂ ಐಸಿರಿಯೂ ವೀರವೂ ತೇಜವೂ ಸಫಲವೆನಿಸುವಂತೆ ಪರಮಪದನಾಥ ಪಾದಸೇವೆಯೇ ತಮಗೆ ಭೋಗವೆಂದಿರುವ ಹಲವು ಜನ ನಿತ್ಯಮುಕ್ತರನ್ನು ಶಂಕ, ಚಕ್ರ, ಗದೆ, ಖಡ್ಗ, ಶಾರ್ಙ್ಗ ಮೊದಲಾದ ಆಯುಧಗಳನ್ನು ತಮ್ಮ ತಮ್ಮ ತಲೆಯ ಮೇಲೆ ಧರಿಸಿ ಭಯವಿಲ್ಲದ ಪ್ರದೇಶವಾದರೂ ಭಕ್ತಿವಿಶೇಷದಿಂದ ಯಾವತ್ತೂ ಸಿದ್ಧರಾಗಿರುವ ಸುದರ್ಶನ, ಪಾಂಚಜನ್ಯ ಮುಂತಾದ ದಿವ್ಯಾಯುಧರೂಪೀ ಪುರುಷನನ್ನು । ಒಡೆಯನ ಸೇವೆಯೆಲ್ಲವನ್ನೂ ತಾನೊಬ್ಬನೇ ಮಾಡುವ ಅತ್ಯಾಶೆಯಿಂದ ಪಟ್ಟಮಣೆಯೂ ಧ್ವಜವೂ ತೇರೂ ಕುದುರೆಯೂ ಬೀಸಣಿಕೆಯೂ ಮೇಲ್ಕಟ್ಟೂ ಒಳ್ಳೆಯ ಜತೆಗಾರನೂ ಸೇವಕನೂ ಆಗಿಯೂ ತಣಿಯದೆ ಭಗವದ್ಗುಣಗಳೆಲ್ಲವನ್ನೂ ತೋರ್ಪಡಿಸುವ ಕೈಗನ್ನಡಿಯಂತೆ ನಿರ್ಮಲನಾಗಿ ವೇದಮಯವಾದ

ರೆಕ್ಕೆತಾಳಿ ಸೇವಕನಂತೆ ದೇಹವೊಂದನ್ನು ಧರಿಸಿ ಇದಿರಿನಲ್ಲಿ ಕೈಮುಗಿದು ಸಿದ್ಧನಾಗಿರುವ ಗರುಡನನ್ನು । ಒಡೆಯನು ಉಂಡು ಉಳಿಸಿದ ಅಮೃತಾನ್ನವನ್ನು ಸವಿಯುವ ಬಲದಿಂದ. ಅವನು ಹೊಂದಿದ ಉಭಯ ವಿಭೂತಿಯ ಅರಸುತನದ ಹೊರೆಹೊತ್ತು ಆಯಾ ಕಾರ್ಯ ಗಳನ್ನು ಒಡೆಯನ ಇಂಗಿತವನರಿತು ನೆರವೇರಿಸುವ ಸೇನಾನಿಯಾದ ವಿಷ್ವಕ್ಸೇನರನ್ನು ಅಲ್ಲಿ ನಟ್ಟುನಡುವೆ ಧರ್ಮದ ಆದಿಪೀಠವೆಂಬ ಹೆಸರಿನ ಪಟ್ಟಮಣೆಯ ಮೇಲೆ ಪವಿತ್ರ ಆದಿಶಕ್ತಿ ಮಯವಾದ, ಹನ್ನೆರಡು ಎಸಳುಗಳಿಂದೆಸೆಯುವ ಹೊಂದಾವರೆಯ ದಿವ್ಯ ರತ್ನಕರ್ಣಿಕೆಯ ತುದಿಯಲ್ಲಿ ಹೂವಿನ ಸಂಗ್ರಹದಿಂದ ಅಲಂಕರಿಸಿದ ದಿವ್ಯಯೋಗಶಯ್ಯೆಯೆಂಬ ಹಾಸುಗೆಯಲ್ಲಿ ಸಾವಿರ ಚಂದ್ರರನ್ನೆ ಒಂದುಗೂಡಿಸಿ ಎರಕಹೊಯ್ದಂತೆ ಕೋಮಲವಾದ ಶಾಂತಿಯಿಂದ, ತನ್ನ ಸದ್ಗುಣಗಳಿಗೆ ಕೊನೆಯಿಲ್ಲದಿರುವುದರಿಂದ ಅನಂತನೆಂದೂ ಹಾಸುವ, ಉಡಿಸುವ, ಹೊದಿಸುವ ಪಾದುಕೆ ತೊಡಿಸುವ, ಕೊಡೆ ಹಿಡಿಯುವ ಮೊದಲಾದ ಸೇವೆಗಳೇ ಕಾರ್ಯ ವಾಗಿರುವುದರಿಂದ ಶೇಷನೆಂದೂ ಪ್ರಸಿದ್ಧಿಗೊಂಡು ಮಂದಗಾಳಿಯೆಂಬ ಅರಳೆಯಿಂದ ತುಂಬಿದ ನಾಗರಾಜನೆಂಬ ಮೃದುಹಾಸಿಗೆಯನ್ನು (ಕಂಡನು). ಈಗ ಅಲ್ಲಿ ಮುಚ್ಚಳ ತೆಗೆದ ಬೆಳ್ಳಿಯ ಕರಡಿಗೆಯಲ್ಲಿ, ತಳತಳಿಸುವ ವೇದವೆಂಬ ಸ್ತ್ರೀಯರ ಪಚ್ಚೆಯ ಗೊಂಚಲು ಆಭರಣ ದಂತೆಯೂ ಲಕ್ಷ್ಮಿಯು ತನ್ನ ಕಣ್ಣು ಶೃಂಗರಿಸಲೆಂದು ಎತ್ತಿ ಮುತ್ತಿನ ಸಿಪ್ಪಿನಲ್ಲಿ ತುಂಬಿದ ಹೊಸಬಗೆಯ ಕಾಂತಿಗೂಡಿದ ಕಾಡಿಗೆಯಂತೆಯೂ ಭೂಕಾಂತೆ ತನ್ನ ದೇಹದ ಶೃಂಗಾರಕ್ಕೆಂದು ಸ್ಫಟಿಕದ ತಟ್ಟೆಯಲ್ಲಿಟ್ಟ ಕಸ್ತೂರಿಲೇಪನದಂತೆಯೂ ಹಿಮಪರ್ವತದ ತಪ್ಪಲಲ್ಲೊಪ್ಪುವ ಮದ್ದಾನೆಯಂತೆಯೂ ಅಲ್ಲಿ ಅಮೃತ ಮಳೆಗರೆಯಲು ಇಳಿದ ಕಾಂತಿ ಚಿಮ್ಮುವ ಕಾರ್ಮುಗಿಲಿನಂತೆಯೂ ಸ್ಫಟಿಕದ ನೆಲಗಟ್ಟಿನಲ್ಲಿ ಬೆಳೆದ ಕಲ್ಪವೃಕ್ಷದಂತೆಯೂ ಶೇಷವಿಷ್ಣುಗಳ ಸಮುದಾಯ ಶೋಭೆಯನ್ನು ಭಾವಿಸಿದನು. ಮತ್ತೆ, ಅಲ್ಲಿ ಮೋಡಗಳೊಳಗೆ ಮಸಗುವ ಮಿಂಚು ಬಳ್ಳಿಗಳಂತೆಯೂ ನೀಲಮಣಿ ಪರ್ವತದಲ್ಲಿ ಹೊಳೆಯುವ ಹೊನ್ನಗೆರೆಗಳಂತೆಯೂ ಕಲ್ಪವೃಕ್ಷವನ್ನಾಶ್ರಯಿಸಿದ ಹೊನ್ನಸೆಳೆಗಳಂತೆಯೂ ಇಬ್ಬದಿಗಳಲ್ಲಿರುವ ಶ್ರೀದೇವಿ ಭೂದೇವಿಯರ ಸ್ಥಿತಿಯನ್ನು ದೃಷ್ಟಿಸಿ, ಅವಯವಗಳ ಶೋಭೆಯನ್ನು ಬೇರೆಬೇರೆಯಾಗಿ ಭಾವಿಸುವೆನೆಂದು ಮುಂದುವರಿಯುವಷ್ಟರಲ್ಲಿ, ಹೊನ್ನನ್ನು ಪಚ್ಚೆಯನ್ನು ನೀಲಮಣಿಯನ್ನು ಸಮವಾಗಿ ತೆಗೆದುಕೊಂಡು ಕರಗಿಸಿ ಆ ತನಿರಸದಿಂದ ತುಂಬಿದ ಸಮುದ್ರದ ಎಡೆಯಿಂದ ಕವಿಯುವ ತೆರೆಗಳ ಸಮೂಹದಂತೆ ಮೇಲುವರಿಯುವ ಪ್ರಕಾಶದ ಪ್ರವಾಹಕ್ಕೆ ಎದುರು ಹಾಯ್ದುವೆನಿಸುವ ದೃಷ್ಟಿಗಳ ಒಳಗೂ ಹೊರಗೂ ಹಸಿರೂ ಕಪ್ಪೂ ಹಳದಿಯೂ ಆಗಿ ಪರಿಣಮಿಸಿದುದರಿಂದ ಯಾವ ಸ್ಥಳ ನೋಡಿದರೂ ಮೂರು ಬಣ್ಣವಾಗಿ ಕತ್ತಲೆಗವಿದು ಕೊಂಚ ಹೊತ್ತುತಡೆದು ನಿಲ್ಲುವಷ್ಟರಲ್ಲಿ ತಾವಿಬ್ಬರೂ ಕಟ್ಟೈಸಿರಿಯಲ್ಲಿ ಸುಖದಿಂದಿರುವಾಗಲೇ, ಮರುಳುಗೊಂಡು ತಮ್ಮನ್ನಗಲಿ ಹಲವು ನಾಡುಗಳಲ್ಲಿ ಕಷ್ಟಪಡುತ್ತ, ರೂಪೂ ಹೆಸರೂ ಮಸುಕಾದ ಮಗನ ಆ ಮರುಳುತನವನ್ನು ಹೋಗಲಾಡಿಸಿ ತನ್ನವರನ್ನು ನೆನೆದು ಬಂದು ಮುಂದೆ ನಿಂತಿರಲು ಕಂಡ ತಂದೆ ತಾಯಿಗಳು ಮುದದಿಂದ ಕರಗಿದ ಮನಸ್ಸೂ ಕಳವಳಿಸುವ ದೇಹವೂ ಕವಿದ ನೋಟವೂ ಗದ್ಗದಿಸುವ ಕೊರಳೂ ಆಗಿ ನಟ್ಟನೋಟವು ಅಲುಗದಂತೆ ಅತಿ ಪ್ರೀತಿಯಿಂದ ನೋಡುವ

(ತಂದೆ ತಾಯಿಗಳ ಮತ್ತು) ಲಕ್ಷ್ಮೀನಾರಾಯಣರ ಕಡೆಗಣ್ಣ ನೋಟವೆಂಬ ಅಮೃತಸೇಚನದಿಂದ ಸಂತೃಪ್ತಿ ಪಡೆದು ತನ್ನ ದೃಷ್ಟಿ, ನಾಲಗೆ ಮೂಗು ಚರ್ಮ ಕಿವಿಗಳೆಂಬ ಆಯ್ದೂ ಇಂದ್ರಿಯಗಳೂ ಅಸಾಮಾನ್ಯವಾದ ದಿವ್ಯಾದ್ಭುತವೆನಿಸುವ ರೂಪ ರಸ ಗಂಧ ಸ್ಪರ್ಶ ಶಬ್ದಗ್ರಹಣಗಳಲ್ಲಿ ತನ್ಮಯವಾಗಿರಲು ಆ ವಿಷ್ಣುವಿನ ಕೇಶದಿಂದ ಪಾದಗಳವರೆಗಿನ ದಿವ್ಯಾಂಗ ಸೌಂದರ್ಯವನ್ನು ಅಂತರಂಗದಲ್ಲಿ ಭಾವಿಸಿದನು. ಅದು ಹೇಗೆಂದರೆ-

ಪರಮಪದನಾಥನ ವರ್ಣನೆ

ಸಿರಿಮೊಗದ ಒಳ್ಬೆಳಗು ಮೇಲೆ ನೆಗೆಯಿತೆಂಬ ಸಂದೇಹವನ್ನುಂಟು ಮಾಡುತ್ತ ನಿತ್ಯ ಮತ್ತು ಲೀಲಾ ವಿಭೂತಿಗಳೆರಡರ ಒಡೆತನವನ್ನು ಕುರಿತು ಚಾಡಿ (ಕದ್ದು) ಹೇಳುವ ರತ್ನ ಮುಕುಟವನ್ನೂ ! ನೋಡುವವರ ಕಣ್ಮನಗಳಿಗೆ ಮರೆವು ಕವಿಸಿ ತನ್ನಂತೆ ಸುಳಿಗೊಳಿಸುವ ಸುಳಿಗುರುಳುಗಳನ್ನೂ ! ಹೊಳಪೂ ಮಿದುವೂ ಆಗಿದ್ದುದರಿಂದ ನಸುಬೆವರಿದಂತಿರುವ ಸುಂದರಹಣೆಯನ್ನೂ ! ಅರ್ಧಚಂದ್ರನಲ್ಲಿ ತುಂಬಿ ತುಳುಕುವ ಅಮೃತವು ಇಬ್ಬದಿಯಲ್ಲಿ ಹರಿಯುತ್ತಿರುವಂತೆ ಒಪ್ಪಿರುವ ಪವಿತ್ರವಾದ ಊರ್ಧ್ವಪುಂಡ್ರವನ್ನೂ ! ಮುಖವೆಂಬ ಕನ್ನಡಿಯಲ್ಲಿ ಪ್ರತಿಬಿಂಬಿತವಾದ ಕೈಯಲ್ಲಿ ಹಿಡಿದ ಶಾರ್ಙ್ಗದ ಎರಡೂ ಕಡೆಗಳನ್ನು ಕಡೆಗಣಿಸುವ ಕೊಂಕಿದ ಹುಬ್ಬನ್ನೂ ! ಕಡುನುಣುಪೂ ಹೊಳಪೂ ಹೊಂದಿ ಕಪ್ಪುಬಿಳಿಪುಂಟಾಗಿ, ಹರವಾಗಿ ದೀರ್ಘಿಸಿ ಕಡೆಬಾಯಲ್ಲಿ ಕೆಂಪುಗೆರೆಗೊಂಡ ಮುಖಕಾಂತಿಯನ್ನೂ ನೀರಿನಲ್ಲಿ ಒಂದಕ್ಕೊಂದು ಅಸೂಯೆಪಟ್ಟು ಪ್ರತಿಬಿಂಬಿತ ಮುಖದಲ್ಲಿ ಎಳೆಮೀನುಗಳಂತೆ ತೋರುವ ಬೊಗಸೆಗಣ್ಣುಗಳನ್ನೂ ! ಮೂರು ಪಾದದ ಭೂಮಿಯೊಡೆತನದಿಂದ ಮಹಿಮೆ ಹೊಂದಿ, ಎಡ-ಬಲದ ಲಕ್ಷ್ಮೀ-ಭೂದೇವಿಯರನ್ನು ಎಡಬಿಡದೆ ನೋಡುವುದರಿಂದುಂಟಾದ ಸ್ನೇಹರಸದಿಂದ ನೆನೆದು ಎಲ್ಲೆಡೆಯೂ ಎಲ್ಲಾ ಹೊತ್ತೂ ಎಲ್ಲಾ ತೆರದಲ್ಲೂ ಸೇವೆಗೈಯುವ ಹಳೆ-ಹೊಸ ಸೇವಕರಲ್ಲಿಯ ಮರುಕದಿಂದ ತಂಪೇರಿ ಕವಿಯುವ ಕರುಣಾರಸಾವಲೋಕನಗಳನ್ನೂ ! ವಿಶಾಲ ಕಣ್ಣುಗಳ ನಡುವಿನ ದ್ವೀಪದಲ್ಲಿ ಮೊಳೆತ ಕಲ್ಪಲತೆಯ ಮುಂಗುಡಿ ಮಿಡಿಯಂತೆ ಶೋಭಿಸುವ ನಾಸಾಪುಟವನ್ನೂ ! ಅದರ ತಳಿರು ಗೊಂಚಲಂತಿರುವ ಕೋಮಲ ಕಪೋಲಗಳನ್ನೂ ! ಅದರ ಹೊಸಹೂವಿನಂತೆಸೆಯುವ ನಸುನಗೆಯನ್ನು ! ತನ್ನ ಪ್ರೇಮ ಸಾಗರದಲ್ಲಿ ಮುಳುಗಿಸುವ ಕೆಂಪು ಬಾಯ್ದೆರೆಯನ್ನೂ ! ಮೇರು ಪರ್ವತದಿಂದ ಎಡಬಲದ ಬೆಟ್ಟಗಳಿಗಿಳಿಯುವ ದೇವಗಂಗೆಯ ಪ್ರವಾಹಗಳನ್ನು ಸರಿಗಟ್ಟಿ ದಿವ್ಯವಾದ ರತ್ನಕಿರೀಟದಿಂದ ಹೆಗಲುಗಳಳತೆಗೆ ಇಳಿತಂದು ಭುಜಾಲಂಕಾರದ ಕಾಂತಿಪ್ರವಾಹದಲ್ಲಿ ಹೊಳೆದು ಸುಳಿಯುವ ಮೊಸಳೆಗಳಂತಿರುವ ಕರ್ಣಕುಂಡಲಗಳನ್ನೂ ! ಹೊಳಪು ಒಳ್ಪು ತಂಪು ಇಂಪುಗಳು ತುಂಬಿರುವುದರಿಂದ ಪೂರ್ಣಚಂದ್ರನನ್ನ ಹೋಲುವ ಸಿರಿಮೊಗವನ್ನೂ ! ಉತ್ತಮ ನೆಲದಲ್ಲಿ ಹುಟ್ಟಿ ಹೊಮ್ಮಿ ಹೊಗರಿನಿಂದೊಡಗೂಡಿರುವ ಎಳೆ ಅಡಿಕೆಯ ಕಾಂಡವನ್ನು ಕೀಳ್ಗೈಯುವ ಗೆರೆಗೊರಳನ್ನು ! ತಮ್ಮ ತಂಪಾದ ನೆರಳಿನಲ್ಲಿ (ನಿತ್ಯ ಮತ್ತು ಲೀಲಾ) ವಿಭೂತಿಗಳನ್ನೂ ನೆಲೆಗೊಳಿಸಿ ಸೊಬಗುಂಟುಮಾಡಿ ದಿವ್ಯಾಯುಧಗಳೆಂಬ ಹೊಸಬಗೆಯ ಹೂಗೊಂಚಲನ್ನು

ಧರಿಸಿರುವುದರಿಂದ ದಿವ್ಯಕಲ್ಪವೃಕ್ಷದ ಕೊನೆಗಳನ್ನು ಸರಿಗಟ್ಟುವ ನಿಡುದೋಳುಗಳನ್ನೂ ! ಹೊದ್ದ ಹೊಂಬಟ್ಟೆಯ ಮೇಲ್ಕಟ್ಟಿನಿಂದ ಸಿರಿಗೊರಳ ಆಭರಣದಲ್ಲಿ ಜೋಲುವ ಮುತ್ತು ರತ್ನದ ಮಾಲೆಗಳಿಂದ ಶ್ರೀಗಂಧ ಲೇಪನದ ಮೃದುಹಾಸಿಗೆಯಿಂದ ಎಳೆತುಳಸಿಯ ಮಾಲೆಯ ಉಯ್ಯಲಿಂದ ಕೌಸ್ತುಭಮಣಿ ದೀಪದಿಂದ ಶೋಭಿಸುವ ಸಿರಿಯರಸಿಯ ಶಯ್ಯಾಗೃಹವೆನಿಸಿದ ಹರವಾದ ಎದೆಯನ್ನು ! ಸೌಂದರ್ಯಾಮೃತ ರಸದ ಪ್ರವಾಹದಲ್ಲಿ ಕಟ್ಟಿದ ಕಟ್ಟೆಯಂತಿರುವ ರತ್ನದ ಹೊಟ್ಟೆಯ ಕಟ್ಟನ್ನೂ ! ಆ ಕಟ್ಟೆಯಿಂದ ಹೊಮ್ಮಿ ಹೊನಲಿಡುವ ಕಾಲುವೆಗಳೆನಿಸುವ ಜನ್ನಿವಾರವನ್ನು ! ಆ ಲಾವಣ್ಯಾಮೃತರಸ ಪ್ರವಾಹವು ಹೆಚ್ಚಿ ಸುಳಿಗೊಂಡಂತಿರುವ ಸುಳಿ ಹೊಕ್ಕುಳನ್ನು ! ಶಂಖ ಚಕ್ರಗಳನ್ನು ಚಂದ್ರಸೂರ್ಯರೆಂದು ಬಗೆದು ಅರಳಲೂ ಮುಚ್ಚಲೂ ಸಮರ್ಥವಾಗದೆ ಅರೆಬಿರಿದು ಬ್ರಹ್ಮನ ತಾಯ್ಮನೆಯೆನಿಸುವ ಹೊಟ್ಟೆಯ (ಮೇಲಿನ) ತಾವರೆಯನ್ನು ! ಕಂಡರಿಸಿದ ಪಚ್ಚೆಯ ಕಂಬಗಳನ್ನು ಹೋಲುವ ತೊಡೆಗಳನ್ನು ಬಳಸಿ ಮುತ್ತುವ ಉಡೆನೂಲಿನ ಮಾಣಿಕಗಳ ಕಾಂತಿತರಂಗಗಳನ್ನು ಹೀಗಳೆಯುವ ಸುವರ್ಣ ಬಟ್ಟೆಯನ್ನು ! ಶಂಖ ಚಕ್ರ ಕಲ್ಪವೃಕ್ಷ ಧ್ವಜ, ಅಂಕುಶ ವಜ್ರಗಳನ್ನು ತಾಳಿ ಅರಳಿದ ಕೆಂದಾವರೆಗಳನ್ನು ಹೋಲುವ ಚೆನ್ನಡಿಗಳನ್ನೂ ಭಾವಿಸಿದನು. (ಹೀಗೆ ಭಾವಿಸಿದ) ರಾಜನು ಆನಂದಭರಿತನಾಗಿ ನೋಡಿ ಎಳೆಶಿಶುವು ತನ್ನ ಪ್ರಯೋಜನಕ್ಕೆಂದೇ ಹಚ್ಚಿಕೊಟ್ಟಿರುವ ಮೊಲೆಯಲ್ಲಿ ಬಾಯಿಟ್ಟು ಹಾಲುಂಡು ತಣಿದು ಸೊಕ್ಕುವಂತೆ ಭಕ್ತಜನದ ಸೌಭಾಗ್ಯಕ್ಕೆ ಬಂದಂತೆ ಅಮೃತ ಸುರಿಯುವ ಪಾದಕಮಲಗಳಿಗೆ ಎರಗಿ ಮುನ್ನ ಕಡುಬೇಸಿಗೆಯ ನಡುಹಗಲಿನಲ್ಲಿ ನೀರಡಿಕೆಯಿಂದ ಗಕ್ಕನೆ ಅಡವಿ ಹೊಕ್ಕು ಅಲ್ಲಿ ಸಿಂಹದ ಗರ್ಜನೆ ಕೇಳಿ ಬೆಚ್ಚಿ ಸಿಕ್ಕತ್ತ ಓಡಿ ಶಕ್ತಿಗುಂದಿ ಸೊಕ್ಕಳಿದು, ಎಲ್ಲೆಡೆಯೂ ದಳ್ಳುರಿಗೊಂಡು ತಿವಿಯವ ಕಾಳ್ಗಿಚ್ಚಿನಿಂದ ಬೆಂದು ನೊಂದು ಬಾಯಿ-ಮೂಗುಗಳೊಣಗಿ ಹೊಟ್ಟೆಯ ನೀರನ್ನು ಹೊರಚೆಲ್ಲಿ ಒಣಗಿ ಬಣ್ಣಗುಂದಿ ಬಸವಳಿದಿರುವ ಆನೆಯು ಸವಿಯಾದ ರಸತುಂಬಿ ತಂಪುಂಟಾಗಿ ಕಂಪೇರಿರುವ ತಾವರೆಯ ಕೊಳವನ್ನು ಕಂಡೊಡನೆ ಅದನ್ನು ಹೊಕ್ಕು ಮುಳುಗಿ ತೇಲಿ ತುಳುಕಿ ನೀರನ್ನೀಂಟಿ ಮುಖದಲ್ಲೂ ಮೈಯಲ್ಲೂ ಚೆಲ್ಲಿಕೊಂಡು ಚಲ್ಲಾಟವಾಡುವಂತೆ ಇವನೂ ಆ ಶ್ರೀಪಾದಕಮಲಗಳನ್ನು ಮುಡಿಯಲ್ಲೂ ಎರಡು ಕಣ್ಣುಗಳಲ್ಲೂ ಹೃದಯದಲ್ಲೂ ಧರಿಸಿ ಎಲ್ಲ ರೀತಿಯ ಸಾಂಸಾರಿಕ ದುಃಖಗಳನ್ನು ಕಳೆದನು ಮತ್ತು (ಅಷ್ಟಕ್ಕೆ) ತೃಪ್ತಿಹೊಂದದೆ ಮುನ್ನ ಬತ್ತಿದ ಹಳೆಯ ಕೊಳದಲ್ಲಿ ಕಂಡಂತೆ ಹಾರಿ ಬಾಯೊಣಗಿ ರೆಕ್ಕೆ ಸೋತು ಸುತ್ತಿ ಕೊಳಗುಳಿಕೆಯ ಕಾಡಿನಲ್ಲಿ ಬಿದ್ದು ಮುಳ್ಳು ಮೊನೆ ನೋವಿನಿಂದ ಮುಖಗೆಟ್ಟು ಚೀರುವ ಮರಿದುಂಬಿ, ತಿಳಿನೀರುಗೊಳದಲ್ಲಿ ಅರಳಿದ ತಾವರೆಯನ್ನು ಕಂಡು ಅದರಲ್ಲಿ ಜೇನು ಸವಿಯಲೆಂದೆರಗಿ ನಸು ಹೊಗರಂ ಬೆರಸಿದ ಹೆಚ್ಚಳ ಪಡೆದು ತಂಪಾದ ಕಂಪಿನ ಇಂಪು ಸವಿದು ಆ ಸೊಕ್ಕು ತಲೆಗೇರಲು ಮೈಮರೆದು ಕಟ್ಟಿಹಾಕಿದಂತೆಯೂ ಕಾಸಿ ಬಿಸಿಯೇರಿದಂತೆಯೂ ಕೊರೆದು ಪೋಣಿಸಿದಂತೆಯೂ ಒಳಗೆ ಸಿಕ್ಕುಕೊಂಡಂತೆಯೂ ಅಗೆದು ನಟ್ಟಂತೆಯೂ ಅಂಟಿಸಿದಂತೆಯೂ ಬತ್ತಿದಂತೆಯೂ ಬೇರು ಬಿಟ್ಟಂತೆಯೂ ಮಗ್ನವಾದಂತೆಯೂ ಆ ಮೆಲ್ಲಡಿಯ ಸಿಹಿಗಂಪನ್ನು ಸವಿಯುವಲ್ಲಿ ಮನಸ್ಸು ಮತ್ತು ಶರೀರಗಳು ತಮ್ಮ ತಮ್ಮ ಕಾರ್ಯಗಳನ್ನೂ ತಮ್ಮನ್ನೂ ಮರೆಯಲು

ಮರುಳುಗೊಂಡಂತೆಯೂ ಮರವಟ್ಟಂತೆಯೂ ನಿದ್ರಿಸಿದಂತೆಯೂ ನೇಮದಿಂದಿರುವಂತೆಯೂ ಎವೆ ಮಿಸುಕದೆ ಉಸಿರು ತೋರದೆ ಅಲುಗದೆ ಕಡಲಲ್ಲಿ ಸಾಗಿರುವವನಿಗೆ ನಡುಮಡುವಿನಲ್ಲಿ ನಾವೆಯೊಡೆದಂತೆ ಸಂತೋಷಸಾಗರದಲ್ಲಿ ಸಾಗುವುದಕ್ಕೆ ಸಾಧನವಾದ ತಿಳಿವೂ ದೂರಾದುದರಿಂದ ಆನಂದಸಾಗರದಲ್ಲಿ ಮುಳುಗಿ ಜೀವಾತ್ಮ-ಪರಮಾತ್ಮರ ಐಕ್ಯಸಾಮ್ರಾಜ್ಯ ವನ್ನನುಭವಿಸುತ್ತಿರುವನೆಂದು ನೋಡುತ್ತಿರುವಲ್ಲಿ-

ಅಷ್ಟು ಹೊತ್ತು ಮೈಮರೆತು ಒರಗಿದ ಅರಸನ ಮನಸ್ಸು ಎಚ್ಚತ್ತು ಮುನ್ನ ಮರವಟ್ಟ ಅಂಗೈ-ಅಂಗಾಲುಗಳಲ್ಲಿ ಕಿಂಚಿತ್ ಬೆವರಿ ಒಂದಿಷ್ಟು ನಡುಕುವುಂಟಾಗಿ ರೋಮಾಂಚನ ತಳೆದ ದೇಹವೂ ಆ ಬಿಗುವನ್ನು ಸಡಿಲಿಸಿ ಸುಖಾಶ್ರು ಸುರಿಸಿ ಮತ್ತೆ ಕಣ್ಣೆಂಬ ಹೂಗಳು ಅರಳಿಯೂ ಎದಿರು, ಎಡ, ಬಲಗಳನ್ನೂ ತನ್ನನ್ನೂ ನೋಡಿಕೊಂಡು ಅಚ್ಚರಿಪಟ್ಟು ಈಗ ತಾನು ನಿತ್ಯ ವಿಭೂತಿಯಿಂದ ಲೀಲಾವಿಭೂತಿಯೆಡೆಗೆ ಇಳಿದು ಬಂದಂತೆ ವಿಚಾರಿಸುತ್ತಿರುವಲ್ಲಿ ಈ ಅಳಹಿಯ ಸಿಂಗರಾರ್ಯನೂ ಪ್ರಸನ್ನ-ಮಧುರ ಗಂಭೀರ ಸ್ವರದಿಂದ :

ಶ್ಲೋಕ :- 'ಶ್ರೀರಂಗವಾಸಿಯಾದ ಆ ವಿಷ್ಣುವಿನ ಅನುಗ್ರಹದಿಂದ ನಿನಗೆ ಆಯುಸ್ಸು, ಆರೋಗ್ಯ, ಪುತ್ರ, ಸಂಪತ್ತು, ರಾಜ್ಯ ಬಂಧುಗಳ ಸಮೃದ್ಧಿಯಾಗಲಿ'

ಎಂದು ಆಶೀರ್ವದಿಸಿದನು. ಆ ದನಿ ಕೇಳಿ ಮುಂಗಾರಿನ ಗುಡುಗು ಕೇಳಿದ ನವಿಲಂತೆ ಕಣ್ಮನಗಳಿಗೆ ಸಂತಸವುಂಟಾಗಿ (ಅಳಹಿಯ ಸಿಂಗರಾರ್ಯರನ್ನು) ಸ್ನೇಹ ಬೆರಸಿ ಬಹು ಮರ್ಯಾದೆಯಿಂದ ಸಮೀಪದಲ್ಲಿ ಕುಳ್ಳಿರಿಸಲಾಗಿ, (ತನ್ನ) ಕಣ್ಮನಗಳಿಗೆ ಸುಖವುಂಟಾಗಿ ಅಚ್ಚರಿಯನ್ನು ಸೂರೆಗೈಯುತ್ತ ಸಿರಿಯರಸನ ಅಡಿದಾವರೆಗಳನ್ನು ಪೂಜಿಸುವಲ್ಲಿಯ ರಾಜನ ಭಾವಶುದ್ಧಿಯನ್ನು ಭಾವಿಸಿ ತನ್ನಲ್ಲಿ (ಹೀಗೆ) ಆಲೋಚಿಸಿದನು : ಲೋಕದ ದುಷ್ಕರ್ಮಿಗಳಲ್ಲಿ ಕೆಲವರು ಪರಲೋಕ (ಲಾಭ)ವಿಲ್ಲೆಂದೂ ಕೆಲವರು ವೇದ ವಿರುದ್ಧವಾದ ಆಗಮ ಪ್ರಣೀತ ಆಚಾರವೇ ಅದಕ್ಕೆ ಸಾಧನವೆಂದೂ, ಕೆಲವರು (ಯಜ್ಞ ಯಾಗಾದಿ) ವೈದಿಕಕರ್ಮ ಫಲವನ್ನೀಯುವ ದೇವತೆಗಳ ಸಮೂಹವೇ ಪರಲೋಕ (ಲಾಭ)ಕ್ಕೆ ಕಾರಣೀಭೂತವೆಂದೂ ಕೆಲರು ದೇವತೆಗಳಿಂದ ನಿರಪೇಕ್ಷವಾದ ಕರ್ಮದಿಂದಲೇ (ಪರಲೋಕ ಪ್ರಾಪ್ತಿರೂಪದ) ಫಲವೆಂದೂ ನಂಬಿ ಕೆಡುವರು. ಸತ್ಕರ್ಮಿಗಳಲ್ಲಿಯೂ ಕೆಲರು ಭಗವಂತನ ಆರಾದನೆಯೇ ಇಷ್ಟಾರ್ಥಸಾಧನವೆಂದು ತಿಳಿದು ಅದನ್ನಾಚರಿಸಿಯೂ ತಮ್ಮನ್ನು ಹೆತ್ತು ಬೆಳೆಯಿಸಿ ಪೋಷಿಸಿ ವಿದ್ಯೆಗಲಿಸಿ ಬುದ್ಧಿ ಹೇಳುವ ತಂದೆಗೆ ಏನಾದರರೊಂದು ಸೇವೆ ಸಲ್ಲಿಸಿ ಅದಕ್ಕೆ ಕೂಲಿ ಪಡೆಯುವಲ್ಲಿಯೂ ತಮ್ಮ ಹಿತವನ್ನೂ ಅವನ ಪ್ರೀತಿಯನ್ನೂ ಅರಿಯದೆ ಕಳವಿನಲ್ಲೂ ಜೂಜಿನಲ್ಲೂ ಸೊಕ್ಕಿನಲ್ಲೂ ಬಾಳುವೆವೆಂದು ಕೇಳುವ ಕಳ್ಳಮಕ್ಕಳಂತೆ ಲೌಕಿಕ ಪಾರಲೌಕಿಕ ಫಲವನ್ನು ಬಯಸುವರು.

ಕೆಲವರು ತಮ್ಮನ್ನು ಕೈಹಿಡಿದು (ತನ್ನ) ಒಳ್ಳೆಯ ಆಭರಣವೆಂದೂ ಮತ್ತೊಂದು ದೇಹವೆಂದೂ ಬಗೆದು ರಕ್ಷಿಸಿ ಸಲಹಿ ಸರ್ವಸ್ವವನ್ನಿತ್ತು ಯಾವತ್ತೂ ಸಂತಸಗೊಳಿಸುವ ತನ್ನ ಪತಿಗೆ ತಾನು ಮಾಡುವ ಮನೆಗೆಲಸ ಶಯ್ಯೆಯ ಸೇವೆ ಮೊದಲಾದುವನ್ನು ಲೆಕ್ಕಹಾಕಿ,

ಹೊತ್ತಾರೆ ಹಣ ಕೇಳುವ ಮೂರ್ಖ ಹೆಂಡಿರಂತೆ ತಮ್ಮ ಕರ್ಮ-ಜ್ಞಾನ ಭಕ್ತಿಗಳಿಗೆ ಫಲವಾಗಿ ಮುಕ್ತಿಯನ್ನು ಬಯಸುವರು. ಈ ರಾಯನು ಅವರಂತಲ್ಲದೆ ತನ್ನ ಒಡೆಯರ ನೆಲೆಯನ್ನೂ ತನ್ನದನ್ನೂ ತಿಳಿದಿರುವುದರಿಂದ ನಾರಾಯಣನು ತನ್ನ ಸೇವಕರಾದ ನಮ್ಮಲ್ಲಿ ಕಾರಣವಿಲ್ಲದೆ ಸ್ನೇಹಬೆರಸಿ ಎಳೆಶಿಶುವಿನ ರೋಗವನ್ನು ನಿವಾರಿಸಲೆಂದು ಔಷಧಿ ಕುಡಿಯುವ ತಾಯಿಯಂತೆ ತಾನಿತ್ತ ಇಂದ್ರಿಯ ದೇಹಗಳಿಂದ ತಾನಿತ್ತ ಪೂಜೋಪಕರಣಗಳಿಂದ ತನ್ನನ್ನು ತಾನೇ ಪೂಜಿಸಿಕೊಳ್ಳುವನೆಂದು ತನ್ನ ಸ್ವರೂಪ ಹಾಗೂ ಪರಾಧೀನತೆಯನ್ನು ಅರಿತು ನಿರ್ಭಯನಾಗಿರುವನು. ಈ ಸ್ಥಿತಿಯು ಸತ್ಸಂಗದಿಂದಲೂ ಒಳ್ಳೆಯ ಆಚಾರ್ಯರಿಂದ ದೀಕ್ಷೆ ಪಡೆಯುವುದರಿಂದಲೂ ಗುರುಕುಲವಾಸದಿಂದಲೂ ಭಗವಂತನ ಕಟಾಕ್ಷದಿಂದಲೂ ದೊರಕೊಳ್ಳುವುದಲ್ಲದೆ ಬರೀ ವಿದ್ಯೆ ಕಲಿಯುವ ಬಲದಿಂದುಂಟಾಗದು. ಈ ಶೇಷತ್ವ ಪಾರತಂತ್ರ್ಯಗಳನ್ನು ತಿಳಿಯುವುದೇ ಸಕಲವೇದಾಂತ ಜ್ಞಾನವೂ ಮೂಲಮಂತ್ರದ ಅರ್ಥತತ್ತ್ವವೂ ಮಂತ್ರರತ್ನದ ತಾತ್ಪರ್ಯವೂ ಚರಮಶ್ಲೋಕದ ಅರ್ಥನಿರ್ಣಯವೂ ಎನಿಸಿದೆ. ಇದನ್ನೇ ದಿವ್ಯಸೂರಿಗಳೂ ತಮ್ಮದಿವ್ಯ ಪ್ರಬಂಧಗಳ ಮೂಲಕ ಹಲವು ಬಗೆಯಿಂದ ನಿರೂಪಿಸುವರು. ನಾಥಮುನಿ ಯಾಮುನಾಚಾರ್ಯರಾದಿಯಾಗಿ 'ಇದನ್ನೇ ತಮ್ಮ ಪಾದಗಳನ್ನಾಶ್ರಯಿಸಿದ ಶಿಷ್ಯರಿಗೆ ಉಪದೇಶಿಸುವರು. ಇವನ ಇರವನ್ನು ಕಂಡರೆ ಮುನ್ನ ಕೊಲ್ಲಿನಗರದಲ್ಲಿ ಉದಿಸಿದ ಕುಲಶೇಖರನನ್ನು ನೆನಪಿಗೆ ತರುತ್ತಾನೆ ಎಂದು ಮನದಲ್ಲಿ ಆನಂದಪಡುತ್ತಿದ್ದನು.

ರಾಜನೂ ಮಂತ್ರ, ಸ್ನಾನ, ಅಲಂಕಾರ, ನೈವೇದ್ಯ ಆಸನಗಳಿಂದ ಉಚಿತವಾದ ಆಯಾ ಭಗವದುಪಚಾರಗಳಿಂದ ಪೂಜೆಯನ್ನು ನೆರವೇರಿಸಿ ತೀರ್ಥಪ್ರಸಾದಗಳನ್ನು ಕೈಕೊಂಡು ಕೃತಾರ್ಥನೆನಿಸಿ ಮತ್ತೆ ಭಗವದ್ಗುಣಗಳ ಅನುಭವವನ್ನು ಬಯಸಿ ಅಳಹಿಯ ಸಿಂಗರಾರ್ಯರನ್ನು ನೋಡಿ ಸ್ಮೃತಿ, ಇತಿಹಾಸ ಪುರಾಣಗಳಲ್ಲಿ ಭಗವದ್ವೈಭವವನ್ನು ಸಂಶಯ-ವಿಪರ್ಯಯಗಳಿಲ್ಲದಂತೆ ತಿಳಿಸುವ ಒಂದು ಅಂಶವನ್ನು ಹೇಳಬೇಕೆಂದನು. ಅದಕ್ಕವರು ಹೆಗ್ಗಳಿಸಿ (ತನ್ನ) ಗುರುಪರಂಪರೆಯನ್ನು ನೆನೆದು ಪ್ರಾರಂಭಿಸಿ ತಿಳಿಸಿದರು. ಅದು ಹೇಗೆಂದರೆ-

ಭಗವದ್ವೈಭವ ವಿವರಣೆ

ಶ್ರೀಯಃಪತಿಯೂ ಎಲ್ಲ ಬಯಕೆಗಳನ್ನು ಈಡೇರಿಸುವವನೂ ಅಖಿಲ ಹೇಯ ನಾಶಕನೂ ಸಮಸ್ತಕಲ್ಯಾಣಗುಣಗಳಿಗೆ ಆಶ್ರಯನೂ ಆದ ಶ್ರೀಮನ್ನಾರಾಯಣನು ಬ್ರಹ್ಮಾದಿ ದೇವತೆಗಳನ್ನೂ ಮನುಷ್ಯರನ್ನೂ ಸೃಜಿಸಿ ಅವರಿಗೆ ಹಿತ-ಅಹಿತಗಳನ್ನು ತಿಳಿಯುವುದಕ್ಕೆ ನಾಲ್ಕೂ ವೇದಗಳನ್ನುಪದೇಶಿಸಿ ಆ ವೇದಾರ್ಥವನ್ನು ಸ್ಪಷ್ಟವಾಗಿ ತಿಳಿಸುವುದಕ್ಕೆ ಸ್ಮೃತಿ, ಇತಿಹಾಸ, ಪುರಾಣಗಳನ್ನು ನಿರೂಪಿಸಿದನು. ಅವುಗಳಲ್ಲಿ ಸ್ಮೃತಿಗಳು ಭಗವಂತನ ಪೂಜಾರೂಪವಾದ ವರ್ಣಾಶ್ರಮಗಳಿಗೆ ಉಚಿತವಾದ ಕರ್ಮಗಳನ್ನು ವಿಧಿಸುವ ವೇದಗಳ ಪೂರ್ವಭಾಗದರ್ಥವನ್ನು ತಿಳಿಸುವವು. ಇತಿಹಾಸ ಪುರಾಣಗಳೆರಡೂ ಭಗವತ್ಸ್ವರೂಪ ರೂಪ, ಗುಣ, ವಿಭವ, ಐಶ್ವರ್ಯಗಳನ್ನು ಪ್ರತಿಪಾದಿಸುವ ವೇದಾಂತಗಳ ತತ್ತ್ವಾರ್ಥಗಳನ್ನು ಸ್ಪಷ್ಟವಾಗಿ ತಿಳಿಸುವವು. ಈ ಎರಡರಲ್ಲೂ :

ಶ್ಲೋಕ : ಇತಿಹಾಸ-ಪುರಾಣಗಳು ವೇದವನ್ನು ಸಮರ್ಥಿಸಬೇಕು

ಎಂಬ ಮಾತಿನಲ್ಲಿ ಇತಿಹಾಸವನ್ನು ಮೊದಲು ಹೇಳಿದುದರಿಂದ ಇದೇ ಮುಖ್ಯವಾದುದು. ಇತಿಹಾಸಗಳಲ್ಲೂ ದ್ವಾಪರದ ಕೊನೆಯಲ್ಲಿ ವೇದದ ಉದ್ಧಾರಕ್ಕಾಗಿ ಶ್ರೀಮನ್ನಾರಾಯಣನ ಅಂಶದಿಂದ ಹುಟ್ಟಿದ ವೇದವ್ಯಾಸರು ಸಕಲ ವೇದ ಶಾಸ್ತ್ರಾರ್ಥಗಳನ್ನು ಪರೀಕ್ಷಿಸಿ ತಾನು ತಿಳಿದ ಹಲವು ತತ್ವಾರ್ಥಗಳನ್ನು ಲೋಕ ಹಿತಾರ್ಥವಾಗಿ ಸಂಕಲನ ಗೊಳಿಸಿದುದರಿಂದ ಈ ಮಹಾಭಾರತವೇ ಪ್ರಬಲವಾಗಿದೆ. ಇದರಲ್ಲೂ ಭಗವದ್ವಿಷಯವನ್ನೇ ಪ್ರತಿಪಾದಿಸುವುದರಿಂದ ಶ್ರೀವಿಷ್ಣುಸಹಸ್ರನಾಮವೂ ಮೋಕ್ಷ ಧರ್ಮವೂ ಭಗವದ್ಗೀತೆಯೂ ಉತ್ತಮವಾಗಿದೆ. ಇವುಗಳಲ್ಲಿ ಶ್ರೀ ವಿಷ್ಣು ಸಹಸ್ರನಾಮವು ಭಗವದಾರಾಧನೆ, ಜಪಾದಿಗಳಿಗೆ ಉಪಯುಕ್ತವಾಗಿದ್ದರೂ ಅದರಿಂದ ತತ್ವ ಮತ್ತು ಯೋಗ್ಯ ಪುರುಷಾರ್ಥಗಳನ್ನು ಅರಿಯುವುದು ಅಸಾಧ್ಯವಾಗಿದೆ. ಮೋಕ್ಷ ಧರ್ಮವು ಸಕಲ ಪುರುಷಾರ್ಥ ಪ್ರತಿಪಾದಕವಾಗಿದೆ. ಆದರೂ ಈ ಭಗವದ್ಗೀತೆಯು-

ಭಗವದ್ಗೀತೆಯ ಮಹಾತ್ಮೆ

ಶ್ಲೋಕ : ಸ್ವಯಂ ಶ್ರೀಕೃಷ್ಣನ ಮುಖಪದ್ಮದಿಂದ ಹೊರಹೊಮ್ಮಿದ ಗೀತೆಯನ್ನು ಹಾಡತಕ್ಕುದು ಹಾಗೂ ಪಠಿಣಗೈಯತಕ್ಕುದು. ಬೇರೆ ಶಾಸ್ತ್ರ ಸಂಗ್ರಹಗಳಿಂದ ಇನ್ನೇನಾಗಬೇಕು?

ಎಂಬ ಮರ್ಯಾದೆಯಿಂದ ಶ್ರೀಕೃಷ್ಣನ ದಿವ್ಯಮುಖಕಮಲದಿಂದ ಜನಿಸಿದ್ದಾಗಿರುವ ಕಾರಣ ಸರ್ವೋತ್ಕೃಷ್ಟವೆನಿಸುವುದು. ಅದರಿಂದ ಇದನ್ನು ಸಕಲ ವೈದಿಕರೂ ಉಪನಿಷತ್ತೆಂದು ಹೇಳುವರು. ಅವುಗಳ ವ್ಯಾಖ್ಯಾನಕಾರರೂ ಮೂವತ್ತೆರಡು ಉಪನಿಷತ್ತುಗಳೊಡನೆ ಇದನ್ನೂ ವ್ಯಾಖ್ಯಾನಿಸಿದರು' ಎಂದು ಅದರ ಮಹಾತ್ಮೆಯನ್ನು ಸ್ಪಷ್ಟಪಡಿಸಿ ಹದಿನೆಂಟೂ ಅಧ್ಯಾಯ ಗಳನ್ನೋದಿ, ಅದರಲ್ಲಿ ಏಳುನೂರಕ್ಕೆ ಪ್ರತಿಶ್ಲೋಕದ ಅರ್ಥ ಹೇಳಿದನು.

ಆದರದಿಂದ ಕೇಳಿದ ಅರಸನೂ ಅಖಿಲ ತತ್ವಾರ್ಥಗಳನ್ನು ಅಂಗೈನೆಲ್ಲಿಯಂತೆ ತಿಳಿದ ಅರ್ಥಗಳನ್ನೆಂದೂ ಮರೆಯದಂತೆ ಎಲ್ಲವನ್ನೂ ಸಂಗ್ರಹಿಸಿ ಹೇಳಬೇಕೆಂದು ಬೆಸಗೊಂಡನು. ಇವರೂ-

ಶ್ಲೋಕ : ಈ ಲೋಕದ ವಿದ್ವಾಂಸರಿಗೆ, (ಶಾಸ್ತ್ರ ವಿಷಯವನ್ನು) ಸಂಗ್ರಹವಾಗಿ ಮತ್ತು ವಿಸ್ತಾರವಾಗಿ ಧಾರಣಮಾಡುವುದು ಯೋಗ್ಯವಾಗಿದೆ

ಎಂಬ ರೀತಿಯಲ್ಲಿ ವಿಸ್ತಾರವಾಗಿ ಕೇಳಿದ ಅರ್ಥವನ್ನು ಸಂಕ್ಷಿಪ್ತವಾಗಿಯೂ ಕೇಳಿದರೂ ಮರೆವು ತೋರದೆ ನೆನಪಿರುವುದೆಂದು ಮನವೊಲಿದು ಹದಿನೆಂಟು ಅಧ್ಯಾಯಕ್ಕೂ ಒಂದು ಸಮುದಾಯಾರ್ಥವನ್ನೂ ಆರಾರು ಅಧ್ಯಾಯಗಳಿಗೆ ಒಂದೊಂದರ್ಥವಾಗಿ ಮೂರು ಷಟ್ಕ (ಭಾಗ)ಗಳ ಅರ್ಥಗಳನ್ನೂ ಒಂದೊಂದು ಅಧ್ಯಾಯಕ್ಕೆ ಒಂದೊಂದು ಅರ್ಥವಾಗಿ ಹದಿನೆಂಟು ಅಧ್ಯಾಯಗಳ ಅರ್ಥಗಳನ್ನೂ ಸಂಗ್ರಹಿಸಿ ಸುಲಭವಾಗಿಯೂ ಸುವ್ಯಕ್ತವಾಗಿಯೂ ತಿಳಿಸಿದರು. ಅದು ಹೇಗೆಂದರೆ-

ಭಗವದ್ಗೀತೆಯ ಸಮುದಾಯಾರ್ಥ

ತಮ್ಮ ತಮ್ಮ ವರ್ಣ-ಆಶ್ರಮಗಳಿಗೆ ಉಚಿತವಾಗಿ ವೈರಾಗ್ಯದಿಂದೊಡಗೂಡಿದ ಕರ್ಮ, ಭಕ್ತಿ, ಜ್ಞಾನಗಳಿಂದ ಬೆಳೆದ ಭಕ್ತಿಗೆ ವಿಷಯವಾದ ಪರಬ್ರಹ್ಮನು ಶ್ರೀಮನ್ನಾರಾಯಣನೇ ಎಂಬುದು ಸಮುದಾಯಾರ್ಥ.

ಷಟ್ಕಾರ್ಥಗಳು

ಜ್ಞಾನ ಕರ್ಮಗಳೆರಡೂ ಯೋಗಾಭ್ಯಾಸದಿಂದೊಡಗೂಡಿ ಆತ್ಮಸಾಕ್ಷಾತ್ಕಾರಕ್ಕೆ ಸಾಧನವಾಗಿರುವುದೆಂಬುದನ್ನು ಮೊದಲ ಆರು ಅಧ್ಯಾಯಗಳಲ್ಲಿ ಹೇಳುವುದು. ಜ್ಞಾನ-ಕರ್ಮಗಳಲ್ಲುದಿಸಿದ ಭಕ್ತಿಯೋಗದಿಂದ ಪರಮಾತ್ಮ ತತ್ವದ ಜ್ಞಾನ ಹುಟ್ಟುವುದೆಂಬುದು ಎರಡನೆಯ ಆಧ್ಯಾಯದಲ್ಲಿ ಹೇಳುವುದು. ಪ್ರಕೃತಿ, ಜೀವಾತ್ಮ, ಪರಮಾತ್ಮಸ್ವರೂಪವನ್ನೂ ಕರ್ಮಜ್ಞಾನ, ಭಕ್ತಿಗಳ ಸ್ವರೂಪವನ್ನೂ ಕಡೆಯ ಆಧ್ಯಾಯದಲ್ಲಿ ಹೇಳುವುದು.

ಪ್ರತಿ ಅಧ್ಯಾಯದ ಸಂಗ್ರಹಾರ್ಥ

ಎರಡು ಪಕ್ಷಕ್ಕೂ ಕಾಳಗವುಂಟಾದ ಸಮಯದಲ್ಲಿ ಬಂಧುಸ್ನೇಹವೂ ಕರುಣೆಯೂ ಸ್ವಜಾತಿ ಧರ್ಮವಾದ ಯುದ್ಧದಲ್ಲಿ ಅಧರ್ಮಬುದ್ಧಿಯೂ ಹುಟ್ಟಿ ಅರ್ಜುನನು ವ್ಯಾಕುಲಚಿತ್ತನಾದನೆಂಬುದನ್ನು ಮೊದಲಧ್ಯಾಯದಲ್ಲಿ । ಇಂತು ಶೋಕಾಕುಲನಾಗಿ ತನ್ನಡಿಗೆರಗಿದ ಅರ್ಜುನನಿಗೆ ಅನಿತ್ಯವಾದ ಶರೀರಾದಿಗಳಿಂದ ಬೇರೆಯಾಗಿ, ನಿತ್ಯವಾಗಿರುವ ಜೀವಾತ್ಮನನ್ನು ತಿಳಿಯುವ ಸಾಂಖ್ಯವೆಂಬ ತಿಳಿವನ್ನೂ, ಫಲವಾಗಲೀ ಅದರ ಸಂಗವಾಗಲೀ 'ನಾನು ಮಾಡಿದೆ'ನೆಂಬ ಹೊಣೆಯಾಗಲೀ ಇಲ್ಲದ ಕರ್ಮಸ್ವರೂಪವನ್ನು ತಿಳಿಸುವ ಯೋಗವೆಂಬ ತಿಳಿವನ್ನೂ ಆತ್ಮನಿರೀಕ್ಷಣೆಗೆ ಸಾಧನವಾದ ಸ್ಥಿರಬುದ್ಧಿಯನ್ನೂ ಹುಟ್ಟಿಸುವವೆಂಬ ಎರಡನೆಯ ಅಧ್ಯಾಯದಲ್ಲಿ । ಈ ಕರ್ಮದಿಂದ ಈ ಫಲವನ್ನು ಸಾಧಿಸುವೆನೆಂಬ ಫಲಾಪೇಕ್ಷೆಯನ್ನು, ಈ ಕರ್ಮವು ನನಗೆ ಫಲವನ್ನು ಸಾಧಿಸುವುದರಿಂದ (ಇದು) ನನ್ನದೆಂಬ ಸಂಗವನ್ನೂ ಈ ಕರ್ಮವನ್ನು ನಾನೆಸಗುವೆನೆಂಬ ಕರ್ತೃತ್ವವನ್ನೂ ಕಳೆದು ಸತ್ವರಜಸ್ತಮೋ ಗುಣಗಳು ತಮ್ಮ ತಮ್ಮ ಸ್ವರೂಪಕ್ಕನುಗುಣವಾಗಿ ಕರ್ಮಗಳನ್ನು ಮಾಡಿಸುವವೆಂದಾದರೂ ಕರಣ,ದೇಹಗಳನ್ನಿತ್ತ ಪರಮಾತ್ಮನೇ (ನಿಜವಾಗಿ) ಮಾಡಿಸುವನೆಂದು ತಿಳಿದು ಕರ್ಮವನ್ನಾಚರಿಸಬೇಕೆಂಬುದನ್ನು ಮೂರನೆಯ ಅಧ್ಯಾಯದಲ್ಲಿ । ಈ ಕರ್ಮಯೋಗವನ್ನಾಚರಿಸುವುದು ಸುಲಭವೆಂದೂ ಇದರಿಂದ ಬೇಗ ಫಲಸಿದ್ಧಿಯಾಗುವುದೆಂದೂ ಇದರ ಭೇದಗಳನ್ನೂ ಆಯ್ದನೆಯ ಅಧ್ಯಾಯದಲ್ಲಿ । ಯೋಗಾಭ್ಯಾಸ ಪ್ರಕಾರವನ್ನೂ ನಾಲ್ಕು ತೆರನಾದ ಯೋಗಗಳ ಭೇದವನ್ನೂ ಯೋಗಸಾಧನಗಳನ್ನೂ ಯೋಗಸಿದ್ಧಿಯನ್ನು ಹಲವು ತೆರದ ಯೋಗಿಗಳಿಗಿಂತ ಪರಮಾತ್ಮೋಪಾಸಕನಾದ ಯೋಗಿಯೇ ಮುಖ್ಯನೆಂಬುದನ್ನೂ ಆರನೆಯ ಅಧ್ಯಾಯದಲ್ಲಿ । ಪರಮಪುರುಷನ ಮಹಿಮೆಯನ್ನು, ಜೀವಾತ್ಮನಿಗೆ ಪ್ರಕೃತಿಯ ಬಂಧನದಿಂದ ಆ ಮಹಿಮೆ ತಿಳಿಯದೆ ಇರುವ ರೀತಿಯನ್ನು ಆ ಪ್ರಕೃತಿಬಂಧವನ್ನು ಹರಿಯುವುದಕ್ಕೆ ಆ ಪರಮಪುರುಷನ ಪಾದ ಹಿಡಿಯುವುದೇ ಉಪಾಯವೆಂಬುದನ್ನೂ

ನಾಲ್ಕು ಪ್ರಕಾರದ ಭಕ್ತರನ್ನೂ ಅವರಲ್ಲಿ ಪ್ರಾಪ್ತಿ ರೂಪವಾದ ಮುಕ್ತಿಯನ್ನು ಬಯಸುವ ಜ್ಞಾನಿಯೇ ಉತ್ತಮನೆಂಬುದನ್ನೂ ಏಳನೆಯ ಅಧ್ಯಾಯದಲ್ಲಿ ಲೌಕಿಕ ಪಾರಲೌಕಿಕವಾದ ಐಶ್ವರ್ಯವನ್ನು ಜೀವಾತ್ಮಪ್ರಾಪ್ತಿರೂಪವಾದ ಕೈವಲ್ಯವನ್ನು ಪರಮಾತ್ಮ ಪ್ರಾಪ್ತಿರೂಪವಾದ ಮುಕ್ತಿಯನ್ನು ಬಯಸುವ ಮೂರು ಪ್ರಕಾರದ ಭಕ್ತರಿಗೆ ಬೇರೆಬೇರೆ ತಿಳಿಯುವಂತೆ ಹೇಳಬೇಕೆಂಬುದನ್ನು ಎಂಟನೆಯ ಅಧ್ಯಾಯದಲ್ಲಿ । ಪರಮ ಪುರುಷನ ಅಸಾಮಾನ್ಯ ಮಹಿಮೆಯನ್ನು, ಅವನು ಮನುಷ್ಯರಲ್ಲಿ ಅವತರಿಸಿದರೂ (ಅ) ಒಂದೇ ತೆರನಾಗಿರುವುದೆಂಬುದನ್ನು, ಭಗವದ್ಭಕ್ತನ ರೀತಿಗಳನ್ನೂ ಭಕ್ತಿಯೋಗದ ನೆಲೆಯನ್ನು ಒಂಭತ್ತನೆಯ ಅಧ್ಯಾಯದಲ್ಲಿ । ಪರಮಪುರುಷನಲ್ಲಿ ಭಕ್ತಿಹುಟ್ಟುವುದಕ್ಕಾಗಿಯೂ ಅವನ ಕಲ್ಯಾಣಕಾರೀ ಗುಣಗಳನ್ನೂ ಈ ಜಗವೆಲ್ಲವೂ ಅವನ ಒಡವೆಯೂ ಒಡಲೂ ಆಗಿ ಅವನ ಅಧೀನವಾಗಿರುವುದೆಂಬುದನ್ನೂ ಹತ್ತನೆಯ ಅಧ್ಯಾಯದಲ್ಲಿ । ಪರಮಪುರುಷನ ದಿವ್ಯಮಹಿಮೆಯನ್ನು ಅರ್ಜುನನು ಪ್ರತ್ಯಕ್ಷವಾಗಿ ಕಂಡ ರೀತಿಯನ್ನು ಆ ಪರಮ ಪುರುಷನನ್ನು ತಿಳಿಯುವುದಕ್ಕೂ ಅವನ ಅಡಿದಾವರೆಗಳನ್ನು ಸೇವಿಸುವುದಕ್ಕೂ ಭಕ್ತಿಯೇ ಉಪಾಯ ವೆಂಬುದನ್ನು ಹನ್ನೊಂದನೆಯ ಅಧ್ಯಾಯದಲ್ಲಿ । ಭಗವದುಪಾಸನಾರೂಪವಾದ ಭಕ್ತಿಯೋಗವೇ ಸರ್ವೋತ್ತಮವೆಂಬುದನ್ನು, ಇದರಲ್ಲಿ ಶಕ್ತಿಯಿಲ್ಲದವರಿಗೆ ಈ ಭಕ್ತಿಯನ್ನು ಸಾಧಿಸುವುದಕ್ಕೆ ತಮ್ಮ ತಮ್ಮ ಶಕ್ತಿಗೆ ಅನುಗುಣವಾದ ನಡತೆಗಳನ್ನೂ ಜೀವೋಪಾಸಕನ ನಡತೆಗಳನ್ನೂ ಹನ್ನೆರಡನೆಯ ಅಧ್ಯಾಯದಲ್ಲಿ । ಶರೀರದ ನೆಲೆಯನ್ನು ಆತ್ಮಜ್ಞಾನಕ್ಕೆ ಸಾಧನಗಳನ್ನು ಆತ್ಮ ಸ್ವರೂಪವನ್ನು ಆತನಿಗೆ ಸಂಸಾರ ಬಂಧನ ಕಾರಣವನ್ನು, ಪ್ರಕೃತಿ-ಜೀವಾತ್ಮರ ಭೇದವನ್ನು ಹದಿಮೂರನೆಯ ಅಧ್ಯಾಯದಲ್ಲಿ । ಸತ್ವ-ರಜಸ್ತಮೋಗುಣಗಳು ಜೀವಾತ್ಮನಿಗೆ ಬಂಧನ ಕಾರಿಗಳಾದ ರೀತಿಯನ್ನು ಆಯಾ ಗುಣಗಳು ಹೆಚ್ಚಿರುವವೆಂಬುದಕ್ಕೆ ಗುರುತಾದ ಕಾರ್ಯಗಳನ್ನೂ ಆಯಾಗುಣಗಳಿಂದ ಬರುವ ಉತ್ತಮ, ಮಧ್ಯಮ, ಅಧಮಗಳಾದ ಜನ್ಮಗಳನ್ನೂ ಆಯಾಗುಣಗಳನ್ನು ಜಯಸಿರುವವನ ನಡತೆಗಳನ್ನೂ ಜಯಿಸುವ ಪ್ರಕಾರವನ್ನೂ ಹದಿನಾಲ್ಕನೆಯ ಅಧ್ಯಾಯದಲ್ಲಿ । ಪ್ರಕೃತಿಯ ಜತೆಗೂಡಿ ವರ್ತಿಸುವ ಜೀವಾತ್ಮವರ್ಗವೂ ಪ್ರಕೃತಿಬಂಧನವನ್ನು ಕಳೆದು ಮುಕ್ತಿ ಹೊಂದಿರುವ ಜೀವಾತ್ಮವರ್ಗವೂ ಪ್ರಕೃತಿಬಂಧನವನ್ನು ಕಳೆದು ಮುಕ್ತಿ ಹೊಂದಿರುವ ಜೀವಾತ್ಮವರ್ಗವೂ ಪುರುಷರೆನ್ನಿಸುವವು. ಈ ಎರಡಕ್ಕೂ ಒಡೆಯನಾಗಿ, ಇವುಗಳಲ್ಲಿ ವ್ಯಾಪಿಸಿ ಇವನ್ನು ರಕ್ಷಿಸುವುದರಿಂದ ಪರಮಾತ್ಮನು ಪುರುಷೋತ್ತಮನೆನಿಸಿ ಈ ಜೀವಾತ್ಮರಿಂದ ಬೇರೆಯೇ ಆಗಿರುವನೆಂಬುದನ್ನು ಹದಿನೈದನೆಯ ಅಧ್ಯಾಯದಲ್ಲಿ । ವೇದ ಶಾಸ್ತ್ರಗಳಲ್ಲಿ ವಿಶ್ವಾಸವುಂಟಾಗಿ ನಡೆವವರು ದೇವಪ್ರಕೃತಿಯವರೆಂದೂ ಈ ವಿಶ್ವಾಸವಿಲ್ಲದೆ ತಮ್ಮ ಇಚ್ಛೆ ಬಂದಂತೆ ನಡೆಯುವವರು ರಾಕ್ಷಸ ಪ್ರಕೃತಿಯವರೆಂದೂ ತಿಳಿಸಿ ಶಾಸ್ತ್ರದಲ್ಲಿ ನಡೆಯುವವರಿಗಲ್ಲದೆ ತತ್ವಜ್ಞಾನವೂ ಸದಾಚಾರವೂ ದೊರಕೊಳ್ಳದೆಂಬುದನ್ನು ಹದಿನಾರನೆಯ ಅಧ್ಯಾಯದಲ್ಲಿ । ಶಾಸ್ತ್ರವಿಧಿಯಿಲ್ಲದೆ ನಡೆಯುವ ನಡತೆಯೆಲ್ಲವೂ ವಿಪರೀತವಾದುದರಿಂದ ನಿಷ್ಫಲವೆಂದೂ ಶಾಸ್ತ್ರವಿಹಿತವಾದ ಕರ್ಮವೂ ಸಾತ್ವಿಕ ರಾಜಸ ತಮಸ ಭೇದದಿಂದ ಮೂರು ತೆರನಾಗಿರುವುದೆಂದು ಅದರ ಕುರುಹುಗಳನ್ನು ಹದಿನೇಳನೆಯ

ಅಧ್ಯಾಯದಲ್ಲಿ । ತಾಮಸ ರಾಜಸ ಸಾತ್ವಿಕಗಳಾದ ನಡತೆಗಳನ್ನು ಬೇರೆ ಬೇರೆ ತಿಳಿಸಿ ಇವುಗಳಲ್ಲಿ ಮೋಕ್ಷಾರ್ಥಿಗೆ ಸಾತ್ವಿಕ ನಡತೆಗಳೇ ಆಚರಿಸತಕ್ಕವುಗಳೆಂಬುದನ್ನು ಈ ಸಾತ್ವಿಕ ಕರ್ಮಾಚರಣೆಯಿಂದ ಹೆಚ್ಚಿದ ಭಗವದ್ಭಕ್ತಿಯೆ ಮೋಕ್ಷ ಸಾಧನವೆಂಬುದನ್ನು ಹದಿನೆಂಟನೆಯ ಅಧ್ಯಾಯದಲ್ಲಿ ಪ್ರತಿಪಾದಿಸಲಾಗಿದೆ.

ಕರ್ಮಜ್ಞಾನ ಭಕ್ತಿಯೋಗಗಳ ನಿಶ್ಚಿತಾರ್ಥ

ಇವೆಲ್ಲವನ್ನು ವಿಚಾರಿಸಲು ತಪಸ್ಸುಗೈಯುವುದೂ ತೀರ್ಥಯಾತ್ರೆಗಳನ್ನು ಮಾಡುವುದೂ ದಾನ-ಯಜ್ಞಾದಿಗಳನ್ನು ಆಚರಿಸುವುದೂ ಮೊದಲಾದವು ಕರ್ಮಯೋಗವೆನಿಸುವುದು. ಪರಿಶುದ್ಧವಾದ ಅಂತಃಕರಣದಿಂದ ಆತ್ಮಜ್ಞಾನ ಹೊಂದುವುದು ಜ್ಞಾನಯೋಗವೆನಿಸುವುದು. ಅತ್ಯಂತ ಪ್ರೀತಿಯಿಂದ ಪರಮಾತ್ಮನನ್ನು ಧ್ಯಾನಿಸುವುದು ಭಕ್ತಿಯೋಗವೆನಿಸುವುದು. ಇವು ಮೂರೂ ಒಂದರೊಳಗೊಂದು ಬೆರೆತಿವೆ. ಅದರಲ್ಲಿ ಕರ್ಮಯೋಗಿಗೆ ಕರ್ಮ ಪ್ರಧಾನವಾಗಿ ಭಕ್ತಿ-ಜ್ಞಾನಗಳೆರಡೂ ಅದಕ್ಕೆ ಅಂಗಗಳಾಗಿರುವವು. ಈ ಮೂರೂ ಯೋಗಗಳಿಗೂ ತಮ್ಮ ತಮ್ಮ ವರ್ಣಾಶ್ರಮೋಚಿತವಾದ ಸದಾಚಾರಗಳೇ ಅಂಗಗಳಾಗಿರುವವು. ಮಿಕ್ಕೆರಡೂ ಯೋಗಗಳಿಗಿಂತ ಭಕ್ತಿಯೋಗವೇ ಉತ್ತಮ. ಇದು ಐಶ್ವರ್ಯ, ಕೈವಲ್ಯಗಳಿಗೆ ಸಾಧನವಾಗಿದ್ದರೂ ಇದರಿಂದ ಮುಕ್ತಿ ಸಾಧಿಸುವುದೇ ಜಾಣ್ಮೆ. ಇಂತು ಮೋಕ್ಷಾರ್ಥಿಯಾದ ಭಕ್ತನು ತನ್ನ ಶರೀರ ಸ್ಥಿತಿ ಮುಂತಾದ ಯೋಗಕ್ಷೇಮದಲ್ಲಿ ತನಗೆ ಆಸಕ್ತಿಯಿಲ್ಲದೆ ಸ್ವಾಮಿ ಕಟ್ಟುಮಾಡಿದನಂತೆ ಇರುವುದೆಂದು (ತನ್ನನ್ನು) ಪರಮಾತ್ಮನ ಅಧೀನಗೊಳಿಸಿ ತನಗೆ ಪರಮಾತ್ಮನ ಸೇವೆ ದೊರಕಿದುದೇ ಸುಖವೂ, ಅದಿಲ್ಲದುದೇ ದುಃಖವೂ ಆಗಿರುವುದರಿಂದ ಯಾವತ್ತೂ ಸ್ವಾಮಿಯ ಈ ಧ್ಯಾನವೂ ವಂದನೆಯೂ ಕೀರ್ತನೆಯೂ ಯಾತ್ರೆಯಾಗಿ ಇರುವನು. ಇರುವಷ್ಟು ಕಾಲವೆಲ್ಲವೂ ತನ್ನ ವರ್ಣಾಶ್ರಮೋಚಿತವಾದ ಸದಾಚಾರವನ್ನಾಚರಿಸುವೆಡೆಯಲ್ಲಿ ಸಾಧಿಸಬೇಕೆಂಬ ಬುದ್ಧಿಯನ್ನು ಬಿಟ್ಟು ಸ್ವಾಮಿಯ ಸೇವೆಯೆಂದು ನಡೆಯುತ್ತ ನಿಶ್ಚಿಂತನಾಗಿದ್ದು ಮೋಕ್ಷಪಡೆಯುವನು ಎಂದು ಗೀತೆಯ ತಾತ್ಪರ್ಯ ಎಂದು, ಹೀಗೆ ಅಳಹಿಯ ಸಿಂಗರಾರ್ಯರು ಹೇಳಿದ ಸಮುದಾಯಾರ್ಥವನ್ನು ಷಟ್ಕಾರ್ಥಗಳನ್ನು ಅಧ್ಯಾಯಾರ್ಥಗಳನ್ನು ತಾತ್ಪರ್ಯವನ್ನೂ ಮನದಲ್ಲಿ ಗುರುತಿಸಿಕೊಂಡು ಸಂತಸಪಟ್ಟನು. ರಾಜನು ತನಗಿರುವ ದೇಶಕೋಶಗಳೆಲ್ಲವೂ ಭೇದವಿಲ್ಲದೆ ತನಗೂ ಇವರಿಗೂ ಸಮಭೋಗ್ಯವಾಗಿದ್ದರೂ ಕೊಡುವುದು-ಕೊಳ್ಳುವುದು ಎಂಬ ತಮ್ಮಿಬ್ಬರ ಕುಲಧರ್ಮ ಬೆಳೆಯಿಸಲೆಂದು ಉಡುಗೆ-ತೊಡುಗೆಗಳನ್ನು, ಹೊನ್ನನ್ನು, ಅಗ್ರಹಾರಗಳನ್ನು ಕೊಟ್ಟು ಮನ್ನಿಸಿದನು. ಬಳಿಕ ಇಬ್ಬದಿಗೆ ನೆರೆದಿದ್ದ ಋತ್ವಿಜರು ಪುರೋಹಿತರು ಜೋಯಿಸರು ಮೊದಲಾದ ತನ್ನ ಆಶ್ರಿತ ವರ್ಗಕ್ಕೂ ಸ್ವ-ಪರದೇಶಗಳಿಂದ ಬಂದ ಹಲವು ಶ್ರೋತ್ರೀಯರ ವರ್ಗಕ್ಕೂ ನಿತ್ಯ-ವಿಶಿಷ್ಟವಾದ ದಾನಗಳನ್ನು ಮತ್ತು ಅವರು ಬೇಡುವ ವಸ್ತುಗಳನ್ನು ಕೊಟ್ಟು ಬೀಳ್ಕೊಟ್ಟು ಏಕಾಂತದಲ್ಲಿ ಕುಳಿತು ಇಷ್ಟಾಲಾಪಗೈಯುತ್ತಿದ್ದನು. ಆಗ "ನಮಗೆ ಯದುಗಿರಿನಾರಾಯಣನ ಕರುಣಾಕಟಾಕ್ಷದಿಂದ ಎಲ್ಲ ಇಚ್ಛೆಯೂ ಕೈಗೂಡಿರುವುದು. ನನ್ನ ತಮ್ಮಂದಿರಾದ ದೇವರಾಜರಸ

ಮರಿದೇವರಾಜರಸರನ್ನು ನಾನು ಮಕ್ಕಳೆಂದು ಭಾವಿಸಿದುದರಿಂದ ಪುತ್ರವಂತನೂ ಆಗಿರುವೆನು. ಆದರೂ ಮಗುವನ್ನು ಬಯಸುವ ರಾಣಿಯ ವ್ರತ ಪೂರೈಸುವ ನೆವದಿಂದ ಭೂಲೋಕ ವೈಕುಂಠವೂ ಜ್ಞಾನಮಂಟಪವೂ ಎನಿಸುವ ಮೇಲುಕೋಟೆಗೆ ಹೋಗಬೇಕೆಂದು ವಿಚಾರಿಸಿರುವೆನು" ಎಂದನು.

ಈ ಮಹಾರಾಯನ ನುಡಿಗೇಳಿ ಇವರೂ ಅತ್ಯಂತ ಸಂತೋಷದಿಂದ "ಈಗ ಯದುಗಿರಿಯಲ್ಲಿ ಚೈತ್ರಮಾಸದ ಆರಿದ್ರಾ ನಕ್ಷತ್ರದಲ್ಲಿ ತಿರುನಕ್ಷತ್ರವೆಂಬ ಮಹೋತ್ಸವವುಂಟಾಗುತ್ತದೆ. ಅದಕ್ಕೆ ಹಲವು ದಿವ್ಯ ಪ್ರದೇಶಗಳಿಂದ ಬರುವ ದೇಶಿಕರ ಸಾರ್ಥಕವಾದ ದರ್ಶನದಿಂದ ಕೃತಾರ್ಥರಾಗುವೆವು" ಎಂದು ಹೇಳಿದನು. ರಾಜನೂ ಅತಿಹರ್ಷದಿಂದ ಜೋತಿಷಿಗಳು ನಿಶ್ಚಯಿಸಿದ ಸುಮುಹೂರ್ತದಲ್ಲಿ, ಆನೆ, ಕುದುರೆ, ಕಾಲಾಳುಗಳ ಸಮೂಹದ ಅತಿಶಯ ಕಳಕಳ ಧ್ವನಿಯ ಜೊತೆಗೆ ಮೊಳಗುವ ಪಟಹ, ಕಹಳೆ ಮುಂತಾದ ವಾದ್ಯಘೋಷದಿಂದ ಸಂತಸಗೊಂಡು ಪಯಣಗತಿಯಿಂದ ಅಂತಃಪುರದೊಡನೆ ಯದುಗಿರಿಯ ತಪ್ಪಲನ್ನು ತಲುಪಿದನು. ಅಲ್ಲಿ ಮಹಾಸೈನ್ಯವನ್ನಿಳಿಸಿ ಮಿತ ಪರಿವಾರದೊಡನೆ ಕೂಡಿಕೊಂಡು ಮುಂದಕ್ಕೆ ನಡೆದನು.

ಯಾದವಾಚಲದ ದಾರಿಯ ವರ್ಣನೆ

ಅಲ್ಲಿ ನೆಟ್ಟನೆ ಬೆಳೆದು ಆಕಾಶಮಾರ್ಗವನ್ನು ಕಟ್ಟಿ ಮುಡಿಯಲ್ಲಿ ಸೂರ್ಯನೆಂಬ ಬಟ್ಟನ್ನು ಧರಿಸಿರುವುದರಿಂದ ಸಿರಿಯರಸನ ಅಡಿದೊಳೆಯಲು ಹೆಗಲಲ್ಲಿ ಮಜ್ಜನದ ಹೊಂಗಳಸು ಧರಿಸಿ ಶೋಭಿಸುವ ಆನೆಯಂತಿರುವ ಕಪ್ಪುತಾಳೆಮರಗಳೂ, ಅತ್ತ ಇತ್ತ ಬೆಳೆದು ಹಲವಾರು ಕೊನೆಗಳ ಹೂತಿರುವುದರಿಂದ ಆಯಾ ಉಚಿತಸ್ಥಾನಗಳಲ್ಲಿ ಹನ್ನೆರಡು ನಾಮ (ಮುದ್ರೆ) ಧರಿಸಿದ ದೇಶಿಕರಂತಿರುವ ಕೇದಗೆಗಳೂ, ಫಲ ಭಾರವನ್ನು ಹೊರಲಾರದೆ ನೆಲದವರೆಗೆ ಬಾಗಿದುದರಿಂದ ಪುರುಷೋತ್ತಮನ ಅಡಿದಾವರೆಗಳಿಗೆರಗುವ ಪರಮಭಾಗವತರನ್ನು ಸರಿಗಟ್ಟುವ ಬಾಳೆಗಳೂ, ಎತ್ತರವಾಗಿ ಬೆಳೆದು ತುದಿಯ ಕೊನೆಯಲ್ಲಿ ಅರೆಬಿರಿದ ತಳಿರುಗೊಂಚಲನ್ನು ಧರಿಸಿ ಶೋಭಿಸುವುದರಿಂದ ಪುರುಷೋತ್ತಮನಿಗೆ ಮಸ್ತಕದಲ್ಲಿ ಕೈಯಿಟ್ಟು ಮುಗಿಯುವ ಭಕ್ತರಂತಿರುವ ಮಾವುಗಳೂ ಎಡೆಬಡದೆ ಒಂದೇ ಸಲದಲ್ಲಿ ಚಿಕ್ಕ ಮೊಗ್ಗೆಗಳನ್ನು ಧರಿಸಿರುವುದರಿಂದ ಮಾಧವನ ಮಾನಸಪೂಜಾವಿಧಿಯಲ್ಲಿ ರೋಮಾಂಚನಗೊಂಡ ಯೋಗಿಗಳನ್ನು ಸರಿಗಟ್ಟುವ ಕದಂಬದ ಮರಗಳೂ ಮಂದ ಮಾರುತದ ಆಘಾತಕ್ಕೆ ತಲ್ಲಣಗೊಂಡು ಅರಳಿದ ಹೂಗಳನ್ನುದುರಿಸುವ ಬಳ್ಳಿಗಳ ಟೊಂಗೆಗಳಲ್ಲಿ ಕುಳಿತಿರುವುದರಿಂದ ಅಚ್ಯುತನ ಅಡಿದಾವರೆಗಳನ್ನು ಪೂಜಿಸುವ ಅರ್ಚಕರಂತೆಸೆಯುವ ನವಿಲುಗಳೂ ದೀರ್ಘಶಾಕೆಯಿಂದ ಉಕ್ಕಿಹರಿಯುವ ತಿಳಿನೀರು ಪ್ರವಾಹವನ್ನು ಹೋಲುವುದರಿಂದ ವಿಷ್ಣುವಿನ ಪೂಜೆಗೆ ಸುವರ್ಣಕಲಶಗಳ ನೀರನ್ನು ಕೈಯೆತ್ತಿ ಸೂಸುವ ಆಚಾರ್ಯರಂತೆ ಸೊಗಯಿಸುವ ಕಿರುಬೆಟ್ಟಗಳೂ ಮೀರಿ ಮುಂದಕ್ಕೆ ಚಾಚಿರುವ ಉದ್ದಟೊಂಗೆಯಲ್ಲಿ ರಾತ್ರಿಯ ಬಾಲಚಂದ್ರನನ್ನು ಧರಿಸಿರುವುದರಿಂದ ಕಮಲಾಕ್ಷನ

ಬಾಯ್ದಂಬುಲ (ಮುಕ್ಕುಳಿಸಿದ) ನೀರನ್ನು ಹಿಡಿಯಲು ಸ್ಫಟಿಕದ ಪೀಕುದಾನಿ ಹಿಡಿದ ಊಳಿಗದವರನ್ನು ಸರಿಗಟ್ಟುವ ದೊನ್ನೆಗಳೂ ಕೊಂಬುಗಳೆಡೆಯಲ್ಲಿ ತೂಗಾಡುವ ದೊಡ್ಡಕಾಯಿಗಳನ್ನು ಧರಿಸಿದುದರಿಂದ ವನಮಾಲಿಗೆ ಧರಿಸಲೆಂದು ಕಟ್ಟಿದ ಮಾಲೆಗಳನ್ನು ತುಂಬಿದ ಬುಟ್ಟಿಗಳನ್ನು ಹಿಡಿದು ಸಿದ್ಧರಾಗಿರುವ ಮಾಲೆಗಾರರಂತೆ ಇರುವ ಹಲಸುಗಳೂ ತಳದಿಂದ ತುದಿಯವರೆಗೆ ಹೂವಾಗಿ ಶೋಭಿಸಿರುವ ಒಂದು ಕೊಂಬೆಯ ಮೇಲೆ ಹಬ್ಬಿ ಚಲ್ಲುವರಿದು ಜೋಲುವ ಕಾಡುಮಲ್ಲಿಗೆ ಬಳ್ಳಿಯನ್ನು ಹೊತ್ತಿರುವುದರಿಂದ ಅಸುರಾರಿಗೆ ಧರಿಸಲೆಂದು, ಸುವಾಸನೆಯು ಹೂವುಳ್ಳ ತುಳಸಿಯು ಜೊತೆಗೆ ಸಿದ್ಧಗೊಳಿಸಿದ ದುಂಡುದಂಡೆಯನ್ನೆತ್ತಿ ನೀಡುವ ಪರಿಚಾರಕರನ್ನು ಹೋಲುವ ಸುರಗಿಗಳೂ ಬಿರಿದ ದೊಡ್ಡ ಕಾಯಿಗಳು ಒಡೆದಿರುವುದರಿಂದ, ವಿಷ್ಣುವನ್ನಲಂಕರಿಸಲು ಬಣ್ಣಗರಡಿಗೆಯ ಮುಚ್ಚಳ ತೆಗೆದು ರನ್ನಹಾರವನ್ನೀಯುವ ಭಂಡಾರಿಗರಂತೆ ಶೋಭಿಸುವ ದಾಳಿಂಬಗಳೂ ಹೊಮ್ಮಿ ಹೊಗರೇರಿದ ಹೊಂಬಾಳೆಗಳನ್ನು ಹೊತ್ತಿರುವುದರಿಂದ ಹರಿಗೆ ಬಿಳಿಚವರಿಯನ್ನು ಬೀಸುವ ಹರಿದಾಸರ ರೀತಿಯಲ್ಲಿರುವ ತೆಂಗುಗಳೂ ಕುಕಿಲಿಟ್ಟು, ಗಳಹಿ, ಪಾಡಿ, ಕೇಕಾರವುಂಟುಮಾಡುವುದರಿಂದ ಕ್ರಮವಾಗಿ ಋಗ್ವೇದ, ಯಜುರ್ವೇದ, ಸಾಮವೇದಗಳನ್ನೂ, ತಮಿಳು ಪ್ರಬಂಧಗಳನ್ನೂ ಪಠಿಸುವ ಅಧ್ಯಾಪಕರನ್ನನುಸರಿಸುವ ಕೋಗಿಲೆ, ಗಿಳಿ, ತುಂಬಿ, ನವಿಲುಗಳೂ ಮನವನ್ನು ಸೂರೆಗೊಂಡವು (ಹೀಗೆ) ಮೆರೆಯುತ್ತಿರುವ ನೆಲಗಾಡನ್ನು ನೋಡುತ್ತಿರಲು-

ನೆಲಗಾಡ ವರ್ಣನೆ

ಮುಂದಕ್ಕೆ ನಡೆದು ಆಸ್ಥಾನದಲ್ಲಿ ಮುನ್ನ ದತ್ತಾತ್ರೇಯನು ಒಳ್ಳೆಯ ಆಶ್ರಯ ಪಡೆದು ತ್ರಿದಂಡಗೊಂಡ ಬಿದಿರು ಮೆಳೆಗಳನ್ನು, ಆ ನಡುವೆ ರಾಮನು ಮಲಗಲೆಂದು ಲಕ್ಷ್ಮಣನು ಸಿದ್ಧಗೊಳಿಸಿದ ನುಣುಪಾದ ಹಾಸುಗಲ್ಲುಗಳನ್ನು, ಸತ್ಯಭಾಮೆಯ ಅಂತಃಪುರದಲ್ಲಿಯ ಅಂಗಳದಲ್ಲಿ ಹಣ್ಣಾಗಿ ಉದುರಿದ ಬೀಜಗಳಿಂದ ಮೊಳೆತ ಎಳೆಸಸಿಗಳನ್ನು ತಂದು ಮುಕುಂದನೂ ತಾನೂ (ಇತರ) ದೇವಿಯರೂ ತಮ್ಮ ಸಿರಿಗೈಗಳಿಂದ ಅಗಿದು ನಟ್ಟು ನೀರೆರೆದು ಬೆಳೆಯಿಸಿದ ಹಲವು ಶ್ರೇಷ್ಠ ಪಾರಿಜಾತಗಳನ್ನು, ಮತ್ತೆ ಯಾವಾಗಲೂ ತಳಿತು ಮೊಗ್ಗಾಗಿ ಹೂತು ಕಾಯಾಗಿ ಹಣ್ಣಾಗಿರುವ ಹಲವು ಹೂಬಳ್ಳಿ ಗಿಡಮರಗಳಿಂದ ಸಿಂಗರಗೊಂಡ ಹೂದೋಟಗಳ ರೀತಿಯನ್ನು ನಿರೀಕ್ಷಿಸಿ ಅತ್ಯಾಶ್ಚರ್ಯಗೊಂಡು ನಿಂತು, ಅಲ್ಲಿ ಟೊಂಗೆಯೇರಿ ಆಯುವ ಹೂವಾಡಿಗರ ಕೈಗೆ ನಿಲುಕದೆ ಅರಳಿರುವ ಕೊಂಬೆಗಳು ಕೈಗೆಟುಕುವಂತೆ ಉದ್ದಟೊಂಗೆಗಳನ್ನು ಬಗ್ಗಿಸಿ ಕೊಡುವ ಕಪಿಗಳನ್ನು, ಆಗಿರುವ ಹಣ್ಣುಗಳನ್ನು ಕುಟುಕದೆ ಕಾಲಿಂದ ಸೋಂಕದೆ ಮೀಸಲಳಿಯದಂತೆ ತೊಟ್ಟು ಹರಿದು ಕೆಡಹಿ ಕೈಗೆಟುಕುವಂತೆ ಮಾಡುವ ಗಿಳಿಗಳನ್ನು, ಎಳೆತುಳಸಿಯ ಸಸಿಗಳನ್ನು ಬಳಸಿ ಅಗಿದು ಮಡಿಮಾಡಿ ದಣಿದ ತೋಟಿಗರಿಗೆ ನೆರವಾಗಿ ತಮ್ಮ ಬಾಗಿದ ಹರಿತವಾದ ಕೋರೆಗಳೆಂಬ ಗುದ್ದಲಿಗಳಿಂದ ಅಗಿಯುವ ಕಾಡುಹಂದಿಗಳ ಮಂದೆಗಳನ್ನು, ಅವನ್ನು ಕಡೆಗಣಿಸಿ ತಮ್ಮ ಕವಲುಗೋಡುಗಳಿಂದ ಇಮ್ಮಡಿಯಾಗಿ ತೋಡುವ ಕಡವೆ-ಸಾರಂಗಗಳನ್ನು, ಆ ದೊಡ್ಡ ಕುಳಿಗಳು ತೋಟಿಗಗೆಲಸದಲ್ಲಿ

ಸುರಿಯುವ ಸಣ್ಣ ಕೊಡದ ನೀರಿನಿಂದ ತುಂಬದಿರಲು ತಮ್ಮ ಹೊಟ್ಟೆಯಲ್ಲಿ ತಂದ ನೀರನ್ನು ಸೊಂಡಿಲಲ್ಲಿ ಮೊಗೆಮೊಗೆದು ಸುರಿಯುವ ಮದ್ದಾನೆಗಳನ್ನು, ಹೇಗಾದರೂ ಈ ಸಸಿಗಳನ್ನು ಮೇಯುವವೆಂಬ ವ್ಯರ್ಥ ಸಂಶಯದಿಂದ ಕಾಯುತ್ತಿರುವ ಹೆಬ್ಬುಲಿಗಳನ್ನು, ಅವುಗಳ ಮರಿಗಳು ತಾಯನ್ನಗಲಿರುವುದರಿಂದ ಹಸಿದು ಬಸವಳಿಯಲು ಕಂಡು ಮರುಗಿ ತೊರೆಬಿಟ್ಟು ಮೊಲೆಯುಣಿಸುವ ಹೆಣ್ಣುಜಿಂಕೆಗಳನ್ನು ಕಂಡು ಮನಕರಗಿದನು. ಮತ್ತೆ ಸ್ವಲ್ಪ ದೂರ ನಡೆದು ಆ ಎಡೆಯಲ್ಲಿ ಸಮಿತ್ತು ದರ್ಬೆ ಹೂಗಳನ್ನು ಸಂಗ್ರಹಿಸುವೆಡೆಯಲ್ಲಿಯೂ ಬಿಡದೆ ಉಪಾಧ್ಯಾಯರೊಡನೆ ಓದುತ್ತ ಬರುವ ಜಾಣವಟುಗಳ ವೇದಘೋಷವೆಂಬ ಮಂಗಳತೂರ್ಯಧ್ವನಿಯೊಡನೆ ಗಿರಿಯೇರಿ ಶ್ರೀನಾರಾಯಣಪುರದ ದ್ವಾರವನ್ನು ಸಮೀಪಿಸಿದನು.

ಮೇಲುಕೋಟೆಯ ಪ್ರವೇಶ

ಅಲ್ಲಿ ಮಹಾರಾಜನು ಬಂದನೆಂದು ಕೇಳಿ, ಎದ್ದು ಇಬ್ಬಗೆಯಲ್ಲಿ ಸಾಲುಗೊಡು ನಿಂತು ವಂದನೆಗೈಯುವ ಹೆಬ್ಬಾಗಿಲ ಕಾವಲುಗಾರರ ಗುಂಪಿನ ನಾಯಕರು ಹೆಸರುಗೊಂಡು ಘೋಷಿಸುವ ಭಟ್ಟಂಗಿಗಳ ಘೋಷಣೆಯನ್ನು ಆಲಿಸುತ್ತ ಆಯಾ ಮುಖಂಡರಲ್ಲಿ ಕುಡಿಗಣ್ಣ ನೋಟವನ್ನು ಸುಳಿಸಿ ಮನ್ನಿಸಿ ಒಳಹೊಕ್ಕು (ಮುಂದೆ) ನಡೆದನು.

ಅಲ್ಲಿ ತಮ್ಮ ಸಿರಿಗಣ್ಣುಗಳ ತಂಪುಕಿರಣಗಳಿಂದ ಹೂವಿನ ಮಳೆಕರೆಯುವಂತೆಯೂ ಹರಕೆಯಿಂದೊಡಗೂಡಿದ ಒಳ್ಮಾತುಗಳಿಂದ ಸಿರಿರಸದ ಮಳೆ ಸುರಿಯುವಂತೆಯೂ ಪ್ರೇಮಪೂರ್ವಕ ಯೋಗಕ್ಷೇಮಗಳನ್ನು ಕೇಳುವ ಪಾವಿತ್ರ್ಯದಿಂದ ಸಂತೋಷಸಾಗರದ ತೆರೆಗಳನ್ನು ಒಟ್ಟೈಸುವಂತೆಯೂ ಸಮೀಪಿಸುವ ಸಾತ್ವಿಕರ ಸಮೂಹಕ್ಕೆ ಅಡಿಗಡಿಗೆ ವಂದಿಸುತ್ತಲೂ ತಡೆತಡೆದು ಒಂದೊಂದು ಹೆಜ್ಜೆ ಇಡುತ್ತಲೂ ಸಿರಿಯರಸನ ಉತ್ಸವದಲ್ಲಿ ಪ್ರದಕ್ಷಿಣೆಗೈಯುವ ಬೀದಿಯನ್ನು ತಲುಪಿದನು.

ಅಲ್ಲಿಯ ಶ್ರೀವೈಷ್ಣವರ ವರ್ಣನೆ

ಅಲ್ಲಿ ಶ್ರೀನಾರಾಯಣನ ಸಿರಿಯಡಿಯ ಸೇವೆಗೆ ಯೋಗ್ಯರನ್ನು ಹದಿನಾಲ್ಕು ಲೋಕಗಳಲ್ಲಿ ಹುಡುಕಿತಂದು ಒಟ್ಟುಗೂಡಿಸಿದಂತೆಯೂ ಮುಕ್ತಿ (ವೈಕುಂಠವಾಸ)ಯಲ್ಲಿ ದೊರೆಯ ಸೌಲಭ್ಯಗುಣವನ್ನು ಪೂಜಾರೂಪದ ಅವತಾರದಲ್ಲಿ ಅನುಭವಿಸಲೆಂದು ಬಂದು ನಿತ್ಯಮುಕ್ತರು ನೆಲಸಿದಂತೆಯೂ ರಾಜಸಿಯಾದ ಬ್ರಹ್ಮನನ್ನು ಸಮೀಪದಲ್ಲಿರಿಸದೆ ವಾಸುದೇವನು ತಾನೇ ರಚಿಸಿದ ಸತ್ವಗುಣಯುತವಾದ ಸೃಷ್ಟಿ ವರ್ಧಿಸಿದಂತೆಯೂ ಕಲಿಯುಗವು ಪ್ರವೇಶಿಸದ ನೆಲವೆಂಬ ನಂಬಿಕೆಯಿಂದ ಹಲವು ನಾಡ ಹಿರಿಯರು ನಡೆತಂದು ಸಂದಣಿಸಿದಂತೆಯೂ ಅಯ್ವತ್ತಾರೂ ನಾಡುಗಳಲ್ಲಿ ತುಂಬಿರುವ ಪರವಾದಿಗಳನ್ನು ಗೆಲ್ಲಲು ಪ್ರತಿಜ್ಞೆಗೈದ ಯತಿರಾಜ(ರಾಮಾನುಜ)ನಿಗೆ ಬೆಂಬಲವಾಗಿ ವಿಷ್ವಕ್ಸೇನರ ಸೈನ್ಯವು ಸನ್ನದ್ಧವಾದಂತೆಯೂ ಶ್ವೇತದ್ವೀಪದ ಸಿರಿ ಹೆಚ್ಚಿದಂತೆಯೂ ಮುಕ್ತಿಯ ಆಯ್ಸಿರಿ ಪಸರಿಸಿದಂತೆಯೂ ಒಗ್ಗೂಡಿ ತಮ್ಮಲ್ಲಿರುವ ಪಾಂಡಿತ್ಯದ ಬೆಳಕು ಹೊರಹೊಮ್ಮಿದಂತೆಯೂ ಹೊಳೆಯುವ

ಮುಖಕಾಂತಿಯಿಂದ ದಿಕ್ಕುಗಳನ್ನು ಬೆಳಗಿಸುತ್ತಲೂ (ಅಜ್ಞಾನವೆಂಬ) ಕತ್ತಲೆಯನ್ನು ಬೆನ್ನಟ್ಟುತ್ತಲೂ, ಸತ್ವಗುಣದಿಂದ ಸಿದ್ಧಗೊಳಿಸಿದಂತೆಯೂ ನೇಮದಿಂದ ರಚಿಸಿದಂತೆಯೂ ವಿನಯದಿಂದ ವಿಸ್ತರಿಸಿದಂತೆಯೂ ಬಿನ್ನಾಣದಿಂದ ಬಣ್ಣವಿಟ್ಟಂತೆಯೂ ಒಳ್ಳಡತೆಯಿಂದ ಒಪ್ಪಗೊಳಿಸಿದಂತೆಯೂ ತಾಳ್ಮೆಯಿಂದ ಹೆಚ್ಚಿಸಿದಂತೆಯೂ ಔಜೆಯಿಂದ ಒಡರಿಸಿದಂತೆಯೂ ಪುಣ್ಯದಿಂದ ಹೊಮ್ಮಿಸಿದಂತೆಯೂ ಯಶದಿಂದ ಹುಟ್ಟಿದಂತೆಯೂ ಧರ್ಮಮಯರೆನಿಸಿ ದಯಾಮಯರೆನಿಸಿ ಪರಮಭಕ್ತಿ ನಿಷ್ಣಾತರಾದ ಶ್ರೀವೈಷ್ಣವರನ್ನು ಕಂಡನು.

ಮತ್ತು, ಅಲ್ಲಿಯವರಿಗೆ ರಾಗ-ದ್ವೇಷವಿಲ್ಲದುದರಿಂದ ಯಾವತ್ತೂ ಹೊಳಪೇರಿ ಶಾಂತವಾಗಿರುವ ಸಿರಿಮೊಗಗಳಿಂದ, ಒಮ್ಮೆಯೂ ಅಗ್ನಿ-ಸೂರ್ಯರು ಸೋಂಕದ ಹೊಸಬಗೆಯ ಹಲವು ಸಾವಿರ ಸಂಖ್ಯೆಯ ಚಂದ್ರಬಿಂಬಗಳನ್ನೂ ನುಣುಪಾದ ಹಣೆಯಲ್ಲಿ ಶೋಭಿಸುವ ಶ್ರೀಮೃತ್ತಿಕೆ ಬೆಳಗುಗಳಿಂದ ಹೆಚ್ಚಿದ ಬಿಳಿಕಮಲಗಳನ್ನು ಎಡಬಿಡದೆ ದಿವ್ಯ ಪ್ರಬಂಧಗಳನ್ನು ಪಠಿಸುವಲ್ಲಿ ಹೊರಸೂಸುವ ದಂತಕಾಂತಿಗಳಿಂದ ಚಿತ್ತದಲ್ಲಿ ನೆಲಸಿ ವಿಸ್ತಾರಗೊಂಡ ಸತ್ವಗುಣವನ್ನು ಸಿರಿಗೊರಳಲ್ಲಿ ಧರಿಸಿದ ತುಳಸಿ-ತಾವರೆ ಮಣಿಸರಗಳಿಂದ (ತಮ್ಮ) ದಿವ್ಯದೇಹಗಳಲ್ಲಿ ಬ್ರಹ್ಮಾಂಡ ಸಮೂಹ ಕೋಟಿಯನ್ನು ಹೊತ್ತ ಪುರುಷೋತ್ತಮನ ನಿಜರೂಪವನ್ನು, ಹೊದ್ದುಕೊಂಡ ರೇಶಿಮೆಬಟ್ಟೆಯ ನಿರಿಗೆಗಳಿಂದ ಹೃದಯದಲ್ಲಿರುವ ವಿಷ್ಣುವನ್ನು ಸುತ್ತುವರಿದ ಕ್ಷೀರಸಾಗರದ ಪ್ರತಿರೂಪವನ್ನು ಹೋಲುತ್ತಿದ್ದರು.

ಮತ್ತೆ, ಅವರಿಗೆ ವರ್ಣಾಶ್ರಮಾಚರಣೆಯಲ್ಲಿ ಕಾಮವೂ ಅದರಿಂದ ಆನುಷಂಗಿಕವಾಗಿ ಬರುವ ತ್ರಿವರ್ಗ ಫಲದಲ್ಲಿ ಕ್ರೋಧವೂ ಅದರಿಂದುಂಟಾಗುವ ದೇವನ ಮುಖದ ಉಲ್ಲಾಸದಲ್ಲಿ ಲೋಭವೂ ಆ ಅನುಭವದಿಂದ ಹುಟ್ಟುವ ಪ್ರೀತಿಯಲ್ಲಿ ಮೋಹವೂ ಪ್ರೇಮದಿಂದ ಮಾಡಿದ ಸೇವಾಲಾಭದಲ್ಲಿ ಮದವೂ ಉಬ್ಬಿನಿಂದ ಮಾಡುವ ಸೇವೆಯಲ್ಲಿ ತೋರುವ ವಿಘ್ನದಲ್ಲಿ ಮಾತ್ಸರ್ಯವೂ ಪೂರ್ವಪಕ್ಷವನ್ನು ವಿವರಿಸುವಲ್ಲಿ ಮಿಥ್ಯಾವಾದವೂ ಸ್ತೋಭದಲ್ಲಿ ಅನರ್ಥಕ ಮಾತುಗಳೂ ಇಂದ್ರಿಯನಿಗ್ರಹದಲ್ಲಿ ಆಗ್ರಹವೂ ಬುದ್ಧಿಯಲ್ಲಿ ತೀಕ್ಷ್ಣತೆಯೂ ಒಳಗೊಂಡಿರುತ್ತವೆ. ಮತ್ತೆ ! ವಿದ್ಯೆಯೇ ರಾಜ್ಯವೂ ವಿನಯವೇ ಧನವೂ ವೈರಾಗ್ಯವೇ ಭಾಗ್ಯವೂ ಸಹನೆಯೇ ವೀರವೂ ಸತ್ಯವೇ ನೆರವೂ ಚಾತುರ್ಯವೇ ಬೆಂಬಲವೂ ವಿವೇಕವೇ ರಕ್ಷೆಯೂ ನೇಮವೇ ಕ್ಷೇಮವೂ ಒಳ್ಪೇ ಬಲವೂ ಸಂತಸವೇ ಸಾಮ್ರಾಜ್ಯವೂ ಆಗಿರುವವು. ನಿತ್ಯವೂ ಭಗವಂತನಿಗೆ ನಿವೇದಿಸುವ ದ್ರವ್ಯವನ್ನು ಸಿದ್ಧಗೊಳಿಸುವ ಸಮಯದಲ್ಲಿ ಬೆಳೆ ಕೊಯ್ಲುಮಾಡಿದ ಹೊಲದಲ್ಲಿ ಉದುರಿದ ಧಾನ್ಯಕಣಗಳನ್ನು ಅಂದಂದಿಗೆ ಸಾಕಾಗುವಷ್ಟರಲ್ಲದೆ ಹೆಚ್ಚಿನ ಒಂದು ಕಾಳನ್ನಾದರೂ ಆಯ್ದುಕೊಳ್ಳುವುದು ಕಟ್ಟಾಸೆಯೆನಿಸುವುದು. ಯಜ್ಞ (ಬಲಿಯ)ದ ಕಾಲದಲ್ಲಿ ಪ್ರಸಾದ ಸಮರ್ಪಣೆಗೈಯುತ್ತ ಸವಿಯನ್ನು ಭಾವಿಸುವುದು ಇಂದ್ರಿಯ ಸುಖಾಭಿಲಾಷೆಯೆನಿಸುವುದು. ಉಭಯ ವೇದಾಂತಗಳನ್ನು ಓದುವಲ್ಲಿ ಮತ್ತೊಮ್ಮೆ ಕೇಳಿ ಅರ್ಥ-ನಿಶ್ಚಯ ಮಾಡಿಕೊಳ್ಳುವುದು ಬುದ್ಧಿಮಾಂದ್ಯವೆನಿಸುವುದು. ತನ್ನ ಪ್ರಯೋಜನಕ್ಕಾಗಿ ಕರ್ಮ ಜ್ಞಾನ ಭಕ್ತಿ ಮುಂತಾದವುಗಳಲ್ಲಿ (ಏನನ್ನಾದರೂ) ಸಾಧಿಸಬೇಕೆಂಬ ಬುದ್ಧಿಯಿಟ್ಟು ಕೊಳ್ಳುವುದು ಲಂಪಟತನವೆನಿಸುವುದು. ನಿಷೇಧಿಸಬೇಕಾದುದಕ್ಕೂ 'ಆಂ' ಎನ್ನದೆ ಅನುಮೋದಿಸುವುದು ಅವಾಚ್ಯವೆನಿಸುವುದು.

ಭಗವಂತನ ಗುಣಗಾನದಿಂದ ಮನೆ, ಹೊಲ, ಮಕ್ಕಳು, ದನಕರು ಮುಂತಾದ ಕ್ಷುದ್ರಫಲಗಳನ್ನು ಕೊಡುವನೆಂದು ಹೊಗಳುವುದು ಲಜ್ಜಾಸ್ಪದವಾದುದು. ಪರಸ್ಪರ ವಂದನೆಯಲ್ಲಿ ಒಂದಿಷ್ಟು ಹಿಂಜರಿಯುವುದು ಗರ್ವವೆನ್ನಿಸಿ ಖೇದಕ್ಕೆ ಕಾರಣವೆನ್ನಿಸುವುದು. ಬಯಸಿಬಂದ ಶಿಷ್ಯ ಸಮೂಹವನ್ನು ಒಂದೆರಡು ಸಾರೆ ಕಡೆಗಣಿಸದೆ ದಯೆಯಿಂದ ಅಂಗೀಕರಿಸುವುದು ಖ್ಯಾತಿ, ಲಾಭ, ಪೂಜ್ಯತೆಗಾಗಿ ಎನಿಸುವುದು. ಒಳ್ಳೆಯ ಶಿಷ್ಯನನ್ನು ಪರಮಭಾಗವತ 'ಶ್ರೀವೈಷ್ಣವ'ನೆಂದು ಹೆಸರುಗೊಳ್ಳದೆ ತನ್ನ ಶಿಷ್ಯನೆಂದು ಹೇಳುವುದು ಮಾತಿನ ಕಠಿಣತೆಯೆನಿಸುವುದು. ಮತ್ತೆ ! ಅವರು ಮನೆಯನ್ನು ಅವನ (ದೇವನ) ದೇಗುಲವೆಂದೂ ಮಡದಿ-ಮಕ್ಕಳನ್ನು ಅವನ ಊಳಿಗದವರೆಂದೂ ಸಂಪತ್ತನ್ನು ಅವನ ಒಡವೆಯೆಂದೂ ಗೃಹೋಪಕರಣಗಳನ್ನು ಅವನ ಪೂಜೋಪಕರಣಗಳೆಂದೂ ತಮ್ಮನ್ನು ಅವನ ಪೂಜಕರೆಂದೂ ತನ್ನ ಮನೋವೃತ್ತಿಯೆಲ್ಲವೂ ಅವನ ಸ್ತುತಿಯೆಂದೂ ತಮ್ಮ ಕಾರ್ಯವೆಲ್ಲವೂ ಅವನ ಊಳಿಗವೆಂದೂ ಅವನ ಒಲುಮೆ ತಮಗೆ ಆಧಾರವೆಂದೂ ಅವನ ಗುಣಾನುಭವವೇ ತಮಗೆ ಪೋಷಕವೆಂದೂ ಅವನ ಸೇವೆಯೇ ತಮಗೆ ಭೋಗವೆಂದೂ ತಿಳಿದಿರುವುರು.

ಹೀಗಿರುವ ವೈಷ್ಣವರ ಸಮೂಹದಿಂದೊಡಗೂಡಿ ಶ್ರೀ ಗೋಪುರದ್ವಾರವನ್ನು ತಲುಪಿ ಸಾಷ್ಟಾಂಗಪ್ರಣಾಮಗೈದು ಒಳಹೊಕ್ಕು ನಡೆದು ಅಲ್ಲಿ ಲಕ್ಷ್ಮೀಪತಿಯ ಸೇವೆಗೆ ತವಕಿಸುವವರು ತಮ್ಮಲ್ಲಿ ತಾವು ನುಡಿಯುವ ಮಾತುಗಳನ್ನು ಕೇಳಿದೆನು. ಅದು ಹೇಗೆಂದರೆ-

ದೇವಸ್ಥಾನದ ಗೋಪುರದ್ವಾರದಲ್ಲಿ ಸೇವಾತವಕಿಗಳ ಮಾತುಗಳು ಮತ್ತು ಅಷ್ಟ ತೀರ್ಥಗಳ ವರ್ಣನೆ :

ಪವಿತ್ರೋದಕವನ್ನು ತರಲೆಂದು ತನ್ನಿಂದ ತಾನೆ ಮಿಂದು ಬಂದ ಕಾಡಾನೆಯ ಮುಖದಲ್ಲಿ ಸಿರಿಬಣ್ಣ (ನಾಮ ?)ವನ್ನು ಹಚ್ಚೆಂದೂ ಶ್ರೀ ಕಲ್ಯಾಣೀ ತೀರ್ಥದಲ್ಲಿ ಮುನ್ನ ಸುಚರಿತನು ದೇವಗಂಗೆಯ ಮಹಾಪೂರದಿಂದ ಹೊರಟ ಜಲಧಾರೆಯ ಮುಖದವರೆಗೂ ಮುಳುಗಿ ಎತ್ತಿ ತಂದು ನೀಡುವ ನೀರಾನೆಯ ಕೋಡುಗಳಲ್ಲಿ ಶೋಭಿಸುವ ಹೊನ್ನ ತಂಬಿಗೆಯ ತೀರ್ಥವನ್ನೇ ತರಬೇಕೆಂದೂ, ದರ್ಭತೀರ್ಥದಲ್ಲಿ ಉದ್ಭವಿಸಿದ ದರ್ಭೆಗಳಿಂದ ಸಿದ್ಧಗೊಳಿಸಿದ ಬರಲು (=ಪೊರಕೆ)ಗಳಿಂದ, ಅಂಗಳದ ಮೇಲ್ಕಟ್ಟಿನ ಮಾಲೆಯ ಸರಗಳಿಂದುದರಿ ಪರಮ ಭಾಗವತರ ಪಾದಧೂಳಿಯಿಂದ ಹೆಚ್ಚಿದ ಹೂವಿನ ಹುಂಡಿಯನ್ನು ಗುಡಿಸಿ ಮುಚ್ಚಿಡುವುದೆಂದೂ ಅಂದು ಸನಕಾದಿಗಳು ಮಂದಾಕಿನೀ ನದಿಯಲ್ಲಿ ಶುದ್ಧಗೊಳಿಸಿ ತಂದ ಹೊನ್ನದುಕೂಲಗಳನ್ನು ಜಡೆಯ ಕಾಡನ್ನೂ ಉದರಭಾಗವನ್ನೂ ಬೂದಿಯ ಬೆಟ್ಟವನ್ನೂ ಮುಟ್ಟಿ ಮೀಸಲುಗೆಡದ ವೈಕುಂಠಗಂಗೆಯಲ್ಲಿ ಮಡಿ ಮಾಡಬೇಕೆಂದೂ (ಟಿ. ದೇವಗಂಗೆಯು ಶಿವನ ಜಡೆಯೆಂಬ ಕಾಡನ್ನೂ ಜಹ್ನುಮುನಿಯ ದೇಹವನ್ನೂ ಸಗರಪುತ್ರರ ಬೂದಿಯನ್ನೂ ಸೋಂಕಿ ಅಪವಿತ್ರಳಾದುದರಿಂದ ವೈಕುಂಠದಲ್ಲಿಯ ಗಂಗೆಯೇ ನಿಜವಾದ ಪವಿತ್ರಳೆಂದು ಇಲ್ಲಿಯ ಭಾವ) ಶ್ರೀಮೃತ್ತಿಕೆಗಣೆಯಲ್ಲಿ ಮುನ್ನ ಗರುಡನು ತಂದು ನಿಕ್ಷೇಪಿಸಿದ ಮೂಲ ಮೃತ್ತಿಕೆಯನ್ನೇ ತಂದು ಸಿದ್ಧಪಡಿಸಬೇಕೆಂದೂ ನಯನ, ವಾರಾಹ ಸೀತಾರಣ್ಯಾದಿ ಪುಣ್ಯಕ್ಷೇತ್ರಗಳಲ್ಲಿ ಬೆಳೆದು

ಎಳೆತೆನೆ ಹೊಂದಿದ ತುಳಸಿಯ ಹೊಸಗೊನೆಗಳನ್ನೇ ಸಹಸ್ರನಾಮ ಜೊತೆಗೆ ಮೀಸಲಿಡಬೇಕೆಂದೂ ನೇಮದಿಂದ ತಿರಿಯುವ ಭಾಗವತರು ಪಠಿಸುವ ದಿವ್ಯ ಪ್ರಬಂಧವೆಂಬ ಸುಗಂಧದಿಂದೊಡಗೂಡಿದ ಹೂವುಗಳನ್ನೇ ತರಹೇಳಬೇಕೆಂದೂ ಮುನ್ನ ಪ್ರಹ್ಲಾದನು ಬಿತ್ತಿದ ನರಸಿಂಹ ಶಿಖರದ ಬದಿಯ ಶ್ರೀಗಂಧ ಕಾಡಿನ ಹಳೆಯ ಮರದ ಒಣಕೊಂಬಿನ ಕೆಚ್ಚದ ಗಂಧಲೇಪವನ್ನು ಸಂಪಾದಿಸಬೇಕೆಂದೂ, ಅಂದು ವನವಾಸ ದೆಸೆಯ ಬೇಸಿಗೆಯಲ್ಲಿ ನೀರಡಿಕೆಯಾದ ತನ್ನ ಸ್ಥಿತಿಯನ್ನು ಬಗೆದು ರಾಘವನು ಬಿಲ್ಲು ತುದಿಯಿಂದ ತಿವಿದ ಬಂಡೆಗಲ್ಲಿನಲ್ಲಿ ಹೊಮ್ಮಿದ ತಿಳಿನೀರ ಪ್ರವಾಹದಲ್ಲಿ ಮಿಂದ ಸೀತಾದೇವಿಯ ಸಿರಿಯೊಡಲಿನ ಕುಂಕುಮದಿಂದ ಹೊಂಬಣ್ಣವಾದ ಧನುಷ್ಕೋಟಿ ತೀರ್ಥದ ನೀರಿನಿಂದ ಲಕ್ಷ್ಮಿಗೆ ಅರಿಷಣಲೇಪನದಿಂದ ಬಣ್ಣಹಚ್ಚಬೇಕೆಂದೂ ಅತ್ರಿಕುಮಾರ ದತ್ತ ಮುನಿಯು ಉತ್ತಮಾಶ್ರಯದಲ್ಲಿ ಹೊದ್ದ ಹೊಸಕಾವಿಯ ಬಟ್ಟೆಯನ್ನು (ನೀರಲ್ಲಿ) ಅದ್ದಿದ್ದರಿಂದ ನಸುಗೆಂಪಾದ ವೇದಪುಷ್ಕರಿಣಿಯ ನೀರಿನಿಂದ ರಾಮಾನುಜಾಚಾರ್ಯರ (ಮೂರ್ತಿಯ)ದುಕೂಲವನ್ನು ಚಿಗುರೆಲೆಗೆಂಪಾದ ಕಾವಿಬಣ್ಣಗೊಳಿಸಬೇಕೆಂದೂ ಪದ್ಮತೀರ್ಥದ ಮಧ್ಯದಲ್ಲಿ ಅರಳಿದ ಹೊಂದಾವರೆಯ ಹೊಸದಂಟುಗಳ ಎಸಳುಗಳಿಂದ ಆರತಿಯ ಬತ್ತಿಯನ್ನು ವಿಸ್ತರಿಸಬೇಕೆಂದೂ, ಮುನ್ನ ಅಂಬರೀಷಾದಿ ಅಯ್ವರು ಭಾಗವತರು ಪಾದ ತೊಳೆದ ತೀರ್ಥದಲ್ಲಿ ಬೆಳೆದ ಬಿನ್ನಾಣದ ಅರಳಿಯ ಮರದಿಂದಲೇ ನಿತ್ಯ ಹೋಮಕ್ಕೆ ಬೇಕಾದ ಸಮಿಧೆಗಳನ್ನು ಸಂಗ್ರಹಿಸಬೇಕೆಂದೂ ಯದುಮಹಾರಾಜ ಶೂರವಸುದೇವ, ಬಲರಾಮ, ಕೃಷ್ಣಾದಿಗಳು ಹಲವು ಬಾರಿ ಬಂದು ಮಿಂದು ಎರಡೂ ದಡದಲ್ಲಿ ಹಲವು ಜನ್ಮಗಳಲ್ಲಿ ಹದಿನಾರು ಮಹಾದಾನಗಳನ್ನು ಮಾಡಿದುದರಿಂದ ಅದರ ಗುರುತಾದ ಯಾದವ ತೀರ್ಥದ ಕಾಲುವೆಗಳಿಂದ ಬೆಳೆದ ಭತ್ತವನ್ನು ಹಲವು ಬಾರಿ ತೊಳೆದು ಅಡಿಗೆಮನೆಯಲ್ಲಿ ಸಜ್ಜುಗೊಳಿಸುವುದೆಂದೂ ಮೈತ್ರೆಯೊತ್ತಿಗೆ ತೀರ್ಥಜಲ ಸಂಗ್ರಹಿಸುವ ಮಣ್ಣಿನಿಂದ ರಚಿಸಿದ ಕೋಶಗಳಲ್ಲಿ ನಾರಾಯಣತೀರ್ಥ ನೀರನ್ನು ಎಸರಿಡಬೇಕೆಂದೂ ಹೀರೆ, ಸೋರೆ, ಮುಂತಾದವನ್ನು ಬಿತ್ತಿದ ಕಾಯ್ತೋಟದಲ್ಲಿ ಬೆಳೆದ ಪಡವಲು ಹಾಗಲ ಮೊದಲಾದ ಒಳ್ಳೆಯ ಕಾಯಿಗಳನ್ನು ಕೊಯ್ಯಬೇಕೆಂದೂ ಶಂಖ, ಚಕ್ರಗಳಿಂದ ಅಂಕಿತವಾಗದ ಆಕಳುಗಳನ್ನು ಕರೆಯಲಾಗದೆಂದೂ ಕರುವುಂಡ ಮೊಲೆಯನ್ನು ಹಲವುಬಾರಿ ತೊಳೆದು ಕಪಿಲೆಯನ್ನು ಕರೆಯಬೇಕೆಂದೂ ಎಳೆ ಶಿಶುತನದಲ್ಲಿ ಶೋಭಿಸುವ ಮುಂಗಾರು ಮೋಡದ ಬಣ್ಣದವ (ಬಾಲಕೃಷ್ಣ)ನ ಸುಂದರ ಹಾಡುಗಳನ್ನು ಹಾಡದ ಕಾಡುಸ್ತ್ರೀಯರು ಕಡೆದ ಬೆಣ್ಣೆಯನ್ನು ನಿರಾಕರಿಸಬೇಕೆಂದೂ ಎಷ್ಟು ಒಳ್ಳೆಯವಾಗಿದ್ದರೂ ಉಪಕರಣಗಳನ್ನೂ ವೇಳೆವೇಳೆಗೆ ಮೂಲಮಂತ್ರ ಸಂಹಾರನ್ಯಾಸ ಮುಂತಾದ ತಂತ್ರಗಳಿಂದ ಅವುಗಳ ಪ್ರಾಕೃತರೂಪವನ್ನು ಕಳೆದು ಸೃಷ್ಟಿನ್ಯಾಸದಲ್ಲಿ ಹೊಸಜನ್ಮಗೊಳಿಸಬೇಕೆಂದೂ ; ಹಲವು ಮಾತಿನಿಂದೇನು ? ಅವನ ಭಕ್ತಿಯೊಂದರಿಂದಲೇ ಹಲವು ವಸ್ತುಗಳೂ ಅವನಿಗೆ ಸಿಹಿಯೆನಿಸುವವು-ಹೀಗೆ ನುಡಿಯುವ ಹಲವು ಒಳ್ನುಡಿಗಳನ್ನು ಕೇಳುತ್ತ ಒಳ ಪ್ರಾಕಾರವನ್ನು ಬಲವಂದನು-

ದೇವಸ್ಥಾನದ ವರ್ಣನೆ

ದೇವಸ್ಥಾನದ ಒಳಪ್ರಾಕಾರವನ್ನು ಸುತ್ತುವರಿಯುತ್ತ ದರ್ಶನ ಮಾಡಿದ (೧) ಶ್ರೀವತ್ಸಾಂಕರ ವರ್ಣನೆ :

ಅಲ್ಲಿ ತೇಜೋವಿಶೇಷದಿಂದ ನೆಲದಲ್ಲಿ ಹುಟ್ಟಿದ ಸೂರ್ಯನಂತೆಯೂ ದೇಹಧಾರಣ ಮಾಡಿದ ಅಗ್ನಿಯಂತೆಯೂ ಕಾಂತಿಯಿಂದ ಪೂರ್ಣಚಂದ್ರನಂತೆಯೂ ಮೆರೆಯುತ್ತವಾದವೆಂಬ ಯುದ್ಧಕ್ಕೆ ನಿಶ್ಯಂಕರಾದ ಶ್ರೀವತ್ಸಾಂಕರಲ್ಲಿ ವಂದಿಸಿ ನೋಡಿ ಮನದಲ್ಲಿ ಎಣಿಸಿದನು-ಈ ದೇಶಿಕ ಶ್ರೇಷ್ಠನು ತಾಳ್ಮೆಯಲ್ಲಿ ಭೂಮಿಯನ್ನೂ ಆಳದಲ್ಲಿ ಸಮುದ್ರವನ್ನೂ ನಿಸ್ಸಂಗದಲ್ಲಿ ಗಾಳಿಯನ್ನೂ ನಿರ್ಲೇಪದಲ್ಲಿ ಆಕಾಶವನ್ನೂ ಸರಿಗಟ್ಟಿರುವನು ಮತ್ತು ಇವನ ಗರ್ವದ ಏಳಿಗೆಯು ಅರಿಯಲಸಾಧ್ಯವಾಗಿದೆ. ಮುನ್ನ ಪ್ರತಿಜ್ಞಾಪತ್ರವನ್ನು ಬರೆಯಲೆಳಸಿದ ಚೋಳರಾಜನ ಗರ್ವದೊಡನೆ ಶಿವೈಕ್ಯವನ್ನುಂಟು ಮಾಡುವ ಪರತ್ವವನ್ನು ಕೀಳ್ಮಾಡಿದನು ಮತ್ತು ಈ ಕೂರಕುಲ ಶ್ರೇಷ್ಠನು ಎಲ್ಲಾ ಅರ್ಥಗಳನ್ನೂ ಅಂಗೈನೆಲ್ಲಿಯಂತೆ ತಿಳಿದಿರುವನು. ಅಲ್ಲದಿದ್ದರೆ ಈ ಭಾಷ್ಯಕಾರನು (ಶ್ರೀರಾಮಾನುಜ) ಶ್ರೀ ಭಾಷ್ಯ ರಚನೆಯಲ್ಲಿ ಇವನ ನೆರವನ್ನು ತೆಗೆದುಕೊಂಡನು (?) ಎಂದೆಣಿಸಿ ದಂಡ ಪ್ರಣಾಮಗೈದು ಮುಂದಕ್ಕೆ ನಡೆದನು.

ಹನ್ನೆರಡು ಜನ ಆಳ್ವಾರರ ವರ್ಣನೆ

ಅಲ್ಲಿ ಮುನ್ನ ಸಿರಿಗೋವಲೂರಲ್ಲಿ ಭಾಗವತನೊಬ್ಬನ ಚಿಕ್ಕಮನೆಯಲ್ಲಿ ಗುಂಪಾಗಿ ನಿಂತು ತಮ್ಮ ತಮ್ಮ ಕಷ್ಟವನ್ನು ತೋರ್ಪಡಿಸಲೆ ಸಂತಸದಿಂದಿರುವ ಸೌಜನ್ಯವನ್ನು ತಾನೂ ಅನುಭವಿಸಲೆಂದು ಕತ್ತಲಲ್ಲಿ ಬಂದು ಹೊಕ್ಕ ಮುಕುಂದನಿಗೆ ಸೂರ್ಯ ಮತ್ತು ಜ್ಞಾನಗಳನ್ನೇ ದೀಪವನ್ನಾಗಿಸಿ (ಆತನ) ದೇಹವು ಕಂಗೊಳಿಸುವಂತೆ ಮಾಡಿ ಕೀರ್ತಿವೆತ್ತ ಮೊತ್ತ ಮೊದಲಿನ ಮೂವರು ಸೂರಿಗಳೂ ಸೂಜಿಯ ಜೊತೆಯಲ್ಲಿ ದಾರ ಬರುವಂತೆ ಕರುಣಿಸಬೇಕೆಂದು ವರ ಬೇಡಿ ಶಿವನನ್ನು ವಿಡಂಬಿಸಿ ಕಡೆಗಣಿಸಿದಂಥ ವೈರಾಗ್ಯಸಾರದಿಂದೊಡಗೂಡಿದ ಭಕ್ತಿಸಾರನೂ । ಹುಟ್ಟಿದಂದು ಮೊದಲಾಗಿ ತಾಯ ಮೊಲೆಹಾಲು ಮುಟ್ಟದೆ ಭಗವಂತನ ಗುಣಗಳ ಅನುಭವವೇ ತನಗೆ ಆಧಾರವೂ ಪೋಷಣೆಯೂ ಭೋಗವೂ ಆಗಿ ಬೆಳೆದು ಪ್ರಸಿದ್ಧನಾದ ಶಠಗೋಪನೂ । ಶ್ರೀವೈಷ್ಣವರು ಕಳವು ಮಾಡುವವರಲ್ಲವೆಂಬ ನಂಬುಗೆಯಿಂದ ಹಾವಿನ ಕೊಡದಲ್ಲಿ ಕೈಯಿಟ್ಟು ಗೆದ್ದು ಭಾಗವತ ಕುಲಶೇಖರನೆನಿಸಿದ ಕುಲಶೇಖರನೂ । ಪಾಂಡ್ಯರಾಜ್ಯಸಭೆಯಲ್ಲಿ ಪರವಾದಿಗಳನ್ನು ಜಯಿಸಿ ಹರಿಯೇ ಪರತತ್ವವೆಂದು ನೆಲೆಗೊಳಿಸಿ ಕೀರ್ತಿ ಹೊಂದಿದ ವಿಷ್ಣುಚಿತ್ತನೂ । ಹಸಿದು ಬಸವಳಿದಿರುವ ಸ್ಥಿತಿಯಲ್ಲಿ ಶ್ರೀರಂಗನಾಥನು ವಟುರೂಪದಲ್ಲಿ ಹೊತ್ತು ತಂದು ಕೊಟ್ಟು ನೈವೇದ್ಯದ ಹೊನ್ನತಟ್ಟೆಯ ಅಮೃತಾನ್ನವನ್ನು ಸವಿದು ಸತ್ವಶುದ್ಧನಾದ ಭಕ್ತಾಂಘ್ರಿರೇಣುವೂ । ಲಕ್ಷ್ಮೀಪತಿಯ ಅಡಿಯಿಂದ ಮುಡಿಯವರೆಗೆ ನೋಡಿ ನಿಟ್ಟಿಸಿದ ಕಣ್ಣುಗಳಿಂದ ಬೇರೊಂದನ್ನು ನೋಡೆನೆಂದು, ನುಡಿದಂತೆ ನಡೆದ ಮುನಿವಾಹನನೂ । ತನ್ನ ಪತ್ನಿಯಾದ ಕುಮುದವಲ್ಲಿಯ ಆಜ್ಞೆಯಿಂದ. ಮಾಡುವ ಆ ಸಮಾರಾಧನೆಗೆ ತಕ್ಕುದಾದ ಹೊನ್ನ ಕೊಡ ಮತ್ತು ಖಡ್ಗದ ಬಲದಿಂದಲೇ ಮೂಲಮಂತ್ರವನ್ನು

ಸಾಧಿಸಿ ಹೆಸರಾಂತ ಪರಕಾಲನೂ । ಎಳಮೆಯಲ್ಲಿ ಚಾತುರ್ಯವು ಪಕ್ವವಾದುದರಿಂದ ಅರ್ಚಾವತಾರದಲ್ಲಿ ಆಸಕ್ತಿ ಹುಟ್ಟಿ ಮುಂಚೆ ವೈಭವದಲ್ಲಿ ಅನುರಕ್ತೆಯಾದ ಗೋಪಿಯರನ್ನು ಹೀಗಳೆದ ಪ್ರಸಿದ್ಧಳಾದ ಗೋದಾದೇವಿಯೂ । ದಕ್ಷಿಣದಲ್ಲಿ ಹೊರಹೊಮ್ಮಿದ್ದ ಸೂರ್ಯನಂತೆ ತೋರಿ ತನ್ನನ್ನು ವಶಪಡಿಸಿಕೊಂಡು ಒಡೆತನಗೊಂಡ ಶಠಗೋಪರ ಸಿರಿಯಡಿನ್ನುಳಿದು ಬೇರೊಂದನ್ನರಿಯೆನೆಂದು ಆಚಾರ್ಯನಿಷ್ಠೆಯಲ್ಲಿ ನೆಲೆನಿಂತ ಮಧುರ ಕವಿಯೂ, ಎಂದು ಈ ಹನ್ನೆರಡು ಜನರೂ ದಿವ್ಯಸೂರಿಗಳು ಯಾವತ್ತೂ ಸೇವೆಗೈಯುವುದರಿಂದ ಕುಂದಿಲ್ಲದಂತೆ ತಾವು ಅವನ ಗುಣಗಳನ್ನನುಭವಿಸುವಲ್ಲಿ ಮಗ್ನರಾಗಿ ಮೆರೆದಿರುವ ಅನಂತ, ಗರುಡ, ವಿಷ್ವಕ್ಸೇನರೂ ! ಮತ್ತೆ, ಎಡಬಲದ ಒತ್ತಿನಲ್ಲಿ ಕುಳಿತು ಇರುವ ಸಮಯವೆಲ್ಲವೂ ತನ್ನ ಸ್ವರೂಪ, ರೂಪ ಗುಣಗಳನ್ನನುಭವಿಸುತ್ತಲೂ ತಣಿಯದೆ ಹೊಸ ಹೊಸದಾಗಿ ಸವಿಯುವ ಲಕ್ಷ್ಮೀ ಭೂ, ನೀಳೆಯರೆಂಬ ಪತ್ನಿಯರಿಂದೊಡಗೂಡಿ ಒಡ್ಡೋಲಗಗೊಡುವ ಪರವಾಸುದೇವನ ಠೀವಿಯನ್ನು ಕಂಡು, ಕವಿಯುವ ಆಸೆ, ಅಚ್ಚರಿ, ಮರವೆ, ಅಕ್ಕರೆ, ಆನಂದಗಳ ತೆರೆಯಲ್ಲಿ ತೇಲುವ ಬಗೆಯನ್ನುಂಟುಮಾಡಿ ಸಾಷ್ಟಾಂಗವೆರಗಿ ಸ್ವಲ್ಪ ದೂರ ನಡೆದನು.

ಸುದರ್ಶನ ಕಾಂಚೀಪೂರ್ಣರ ವರ್ಣನೆ

ಅಲ್ಲಿ ಚಂಚಲತೆಯನ್ನುಳಿದು ಮಿಂಚುಬಳ್ಳಿಗಳು ಒಗ್ಗೂಡಿದಂತೆಯೂ ನಟ್ಟನಡು ಹಗಲಿಗೆ ಬಂದ ಬೇಸಗೆಯ ಸೂರ್ಯಮಂಡಲದಂತೆಯೂ ದೃಷ್ಟಿಸಲು ಅಸಾಧ್ಯವೆನಿಸಿದ ದಿವ್ಯತೇಜೋಮಯರಾದ ಸುದರ್ಶನರನ್ನು ದರ್ಶನಗೈದು ನಮಸ್ಕರಿಸಿ ಅದೇ ಸಮಯದಲ್ಲಿ ಸಕಲಕಲ್ಯಾಣಗುಣವುಳ್ಳವರಾದ ಕಾಂಚೀಪೂರ್ಣರನ್ನು ವಂದಿಸಿ ಮುಂದಕ್ಕೆ ನಡೆದನು.

ಯದುಗಿರಿ ನಾಯಕಿಯ ವರ್ಣನೆ

ಅಲ್ಲಿ ಮುನ್ನ ಕ್ಷೀರಸಾಗರದಿಂದ ಹೊರಹೊಮ್ಮುವೆಡೆಯಲ್ಲಿ ಕಾಲಿಗೆ ತೊಡಕಿದ ಹವಳದ ಕುಡಿಗಳ ರೀತಿಯನ್ನನುಕರಿಸಿದ ಮಾಣಿಕ್ಯಗಳೂ ಅವುಗಳ ಟಿಸಿಲು-ಕೊನೆಗಳಲ್ಲಿ ಸಿಲುಕಿದ ಮುತ್ತುಗಳ ವಿಡಾಯವನ್ನು ವಿಸ್ತರಿಸುವ ಬಟ್ಟುಗುರುಗಳೂ ಕೆಂದಾವರೆಯ ಮನೆಯಲ್ಲಿ ಮಕರಂದವೆಂಬ ಕೆಸರಿನಲ್ಲಿ ಹತ್ತಿಕೊಂಡ ಹೊಸ ಎಸಳೆನ್ನುವ ಸಂದೇಹವನ್ನುಂಟು ಮಾಡುವ ಕೆಂಪುಪಾದತಳವೂ ಸೊಬಗಿನ ಅಡಿದಾವರೆಯನ್ನು ಸುತ್ತಿಮುತ್ತಿದ ತುಂಬಿಹಿಂಡನ್ನು ಕೀಳ್ಗೆಯ್ಯುವ ನೀಲದ ಪೆಂಡೆಯವೂ ಬೆನ್ನಲ್ಲಿ ಹುಟ್ಟಿದ ಚಂದ್ರನ ಬಿಳಿಕಿರಣವೂ (ಅವಳ) ದೇಹದಲ್ಲಿ ಹುದುಗಿಸಿದ ಸೊಗಸನ್ನು ಬಗೆಗೊಳಿಸುವ ದುಕೂಲವೂ, ಹೊನ್ನ ಸೆಳೆಮ್ಮೆಯ ಚಿಕ್ಕಕುಡಿಗಳು ಹೂ, ಮಿಡಿ ಬಿಟ್ಟು ಹಬ್ಬಿಹರಡಿದಂತಿರುವ ಕಿರುಗಂಟೆಯ ಗೆಜ್ಜೆಗಳನ್ನು ಧರಿಸಿದ ಹೊನ್ನ ಬಲೆಯ ಉಡೆನೂಲು, ಮೊದಲು ಮತ್ತು ಕೊನೆಗಳಿಲ್ಲದ ವೇದದಂತೆ ಮಧ್ಯವೂ ಇಲ್ಲೆನ್ನುವ ನಮ್ಮಂಥವರ (ಕವಿಗಳ) ನುಡಿಯನ್ನು ನಿಜಗೊಳಿಸುವ ಸೆಳೆನಡುವೂ ಸರ್ವಲೋಕ ಮಾತೆಯಾಗಿ ತನ್ನ ಮಕ್ಕಳನ್ನು ಹೊರೆಯಲು ತಕ್ಕುವಾದ ದೊಡ್ಡಮೊಲೆಗಳೂ ಹೊಂದಿಕೆ ಗೊಳಿಸಲು ಚೇತನೆ ಮತ್ತು ಈಶ್ವರಿಬ್ಬರನ್ನೂ ತಿದ್ದುವ ಮಹಾಕೃತ್ಯವೆರಡರಲ್ಲಿ ಹೆದರಿಕೆಯನ್ನು ಹೋಗಲಾಡಿಸಿ, ಬೇಡುವ ಬಯಕೆಯನ್ನಿತ್ತು ಭಕ್ತರನ್ನು ಹುರಿದುಂಬಿಸಲಿಕ್ಕೆ ಅಭಯ ಮತ್ತು

ವರದಗಳೆರಡೂ, ಕೋಪವನ್ನು ಶಾಂತಗೊಳಿಸಿ ಕೃಪೆಯನ್ನು ಜಾಗ್ರತಗೊಳಿಸಿ ಈಶ್ವರನನ್ನು ಸನ್ನದ್ಧಗೊಳಿಸಲು ತಕ್ಕುದಾದ ಲೀಲಾಕಮಲಧಾರಣಮಾಡಿ ಎರಡಾಗಿ ವಿಭಾಗಗೊಂಡು ನಿರ್ವಹಿಸುವ ನಾಲ್ಕೂ ಶ್ರೀಹಸ್ತಗಳೂ ತನ್ನ ಮಾಯಾ ಮಾತ್ರದಿಂದ ಮೂರೂ ಲೋಕಗಳನ್ನು ಮೋಸಗೊಳಿಸುವ ಮುಕುಂದನಿಗೆ ಮೋಹರಸವನ್ನು ಮುಳುಗು ನೀರಾಗಿಸುವ ಮುಗುಳ್ನಗೆಯೂ ಸೊಕ್ಕಿ ಪಕ್ಕದಲ್ಲಿರುವ ಪತಿಯಲ್ಲೂ ಹೆದರಿ ಇದಿರಲ್ಲಿರುವ ಮಕ್ಕಳಲ್ಲಿಯೂ ಕ್ರಮವಾಗಿ ಪ್ರಣಯ ಮತ್ತು ಕರುಣಾರಸಗಳು ಮೇರೆ ಮೀರುತ್ತಿರಲು ಕೊಂಕಿ ಪ್ರೇಮದಿಂದ ಹೆಚ್ಚಿ ಕವಿದು ಕರಗಿ (ಎಲ್ಲವನ್ನು) ವ್ಯಾಪಿಸಿಯೂ ತಣಿಯದ ನೋಟಗಳೂ, ಹೆಣ್ಣುತನದ ಸಹಜದಿಂದಲೇ ಆದರೂ ಪುರುಷೋತ್ತಮನ ಚಿತ್ತವನ್ನು ಉನ್ಮತ್ತಗೊಳಿಸಿದ ತನ್ನ ಮೈಸಿರಿಯನ್ನು ನಿಟ್ಟಿಸಲೆಂಬಂತೆ ನಸುಮಣಿದ ಸಿರಿಮೊಗವೂ ಆದ ಯದುಗಿರಿ ನಾಯಕಿಯ ಸನ್ನಿಧಿಯನ್ನು ಸಮೀಪಿಸಿ ಸಾಷ್ಟಾಂಗ ಪ್ರಣಾಮಗೈದು (ತನ್ನಷ್ಟಕ್ಕೆ) ವಿಚಾರಿಸಿದನು. (ಅದು ಹೇಗೆಂದರೆ :)

ಇವಳು ಗಡ ! ಕ್ಷೀರಸಾಗರವನ್ನೇರಿದ ವ್ರತಸಂಪತ್ತೂ ಕಮಲದ ಒಳ್ಗಂಪಿನ ಗುಂಪೂ ವಿಷ್ಣುವಿನ ಹೃದಯಮಂದಿರಲ್ಲಿ ಬೆಳಗುವ ಮಂಗಳ ರತ್ನದ್ವೀಪವೂ ವೇದ ವಾಕ್ಯವೆಂಬ ಸ್ತ್ರೀಯರ ಬೈತಲೆಮಣಿಯೂ ಎಲ್ಲ ಲೋಕಗಳವರ ಆನಂದಕ್ಕೆ ಬೀಡೂ ನಮ್ಮ ಭಾಗ್ಯದ ಏಳಿಗೆಯೂ ಮತ್ತು ಶೀಲದ ನೆಲೆಬೀಡೂ ದಯೆಯ ತವರುಮನೆಯೂ ತ್ಯಾಗದ ಆಗರವೂ ಬಿನ್ನಾಣದ ಫಲವತ್ಕ್ಷೇತ್ರವೂ ಸೌಲಭ್ಯದ ಶಾಲೆಯೂ ಕಲ್ಯಾಣದ ವಿದ್ಯೆಯೂ ಕ್ಷೇಮದ ಅಭ್ಯಾಸವೂ ಒಳ್ನುಡಿಯ ಪತಾಕೆಯೂ ಮರುಕದ ಸೌಧವೂ ಶೃಂಗಾರದ ವಿಸ್ತಾರವೂ ಗೆಲುವಿನ ಗರಡಿಯೂ ಚದುರದ ಚೌಕಿಯೂ ಐಸಿರಿಯ ಅರಮನೆಯೂ ಸಂತಸದ ಅಂತಃಪುರವೂ ಸಕಲ ಸದ್ಗುಣಗಳ ಕಣಿಯೂ ಆಗಿರುವುದರಿಂದ ಪತಿಯ ಹೃದಯವನ್ನು ಸೆರೆಗೈದುದಲ್ಲದೆ ಮನಸ್ಸನ್ನೂ ಬಂಧಿಸಿದ್ದಾಳೆ. ಆ ಮಾಧವನೂ ಮನಮೆಚ್ಚುವಂತೆ ಇವಳ ತವರುಮನೆಯಾದ ಹಾಲುಗಡಲನ್ನು ಉಜ್ವಲಗೊಳಿಸಿದ್ದಾನೆ. ಎಡಬಿಡದೆ ಇವಳನ್ನು ನಿಟ್ಟಿಸಿ ನೋಟದಲ್ಲಿ ಅಳವಡಿಸಿಕೊಂಡಿರುವುದರಿಂದ ಪದ್ಮಾಕ್ಷನೆನಿಸುವನು. (ಟಿ. ೧. ಕಮಲದಂತೆ ಕಣ್ಣುಳ್ಳವನು ೨. ಲಕ್ಷ್ಮಿಯನ್ನು ಕಣ್ಣಲ್ಲಿಟ್ಟುಕೊಂಡವನು) ಇವಳ ಜತೆ ಹುಟ್ಟಿದವನಾದ ಚಂದ್ರನನ್ನು ನೆನಪಿಸುವಳು. ಮಿಕ್ಕದ್ದೇನು ? ಯಾವತ್ತೂ ಲೋಕಸೃಷ್ಟಿಯ ಬಿಟ್ಟಿಗೆಲಸವು ಇವಳು ಒಲಿದು ನೋಡುವ ದೃಷ್ಟಿಯಿಂದ ಸಫಲವೆಂದೆನಿಸುತ್ತದೆ. ಅರಿತವನು-ಅರಿಯದವನು, ಸಮರ್ಥನು-ಅಸಮರ್ಥನು, ಒಳ್ಳೆಯವನು-ಕೆಟ್ಟವನು, ಬಡವನು-ಬಲ್ಲಿದನು, ಆಳು-ಅರಸನು ಎಂದು ಕಿರಿದು-ಹಿರಿದೆನಿಸದೆ ಸೃಜಿಸುವಾಗ ಇವಳ ಕಟಾಕ್ಷ ತಾರತಮ್ಯವನ್ನು ನೋಡುತ್ತ ಸೃಷ್ಟಿಸುವನು. ದೇವರಲ್ಲಿ ಶ್ರೇಷ್ಠರನ್ನರಸುವ ಹೊಸಯೋಗಿಗಳಿಗೆ ತನ್ನೆದೆಯಲ್ಲಿ ಇವಳ ಪಾದದ ಅಲತಿಗೆಯ ಗುರುತು ತೋರಿಸಿ ಶ್ರೇಷ್ಠತ್ವವನ್ನು ಪ್ರಕಟಿಸುವನು.

ಸಡಿಲುವ ಮುಡಿಯೂ ವ್ಯಸ್ತಗೊಳ್ಳುವ ಉಡಿಗೆ-ತೊಡಿಗೆಗಳೂ ಬೆವರುವ ಶರೀರವೂ ಹೆಚ್ಚುವ ನಿಟ್ಟುಸುರೂ ಆಗಿ ಕಡಲನ್ನು ಕಡೆಯುವಾಗ ತಾನು ಪಟ್ಟ ಪಾಡೆಲ್ಲವನ್ನೂ ಇವಳನ್ನು ಪಡೆದ ಸಂತೋಷಸಾಗರದ ತುಂತುರು ಹನಿಯಲ್ಲಿಯೇ ಕಳೆದನು. ಹಾಲ್ಗಡಲ ನಡು ಮಡುವಿನಿಂದ ಗಮ್ಮನೆ ಹೊರಹೊಮ್ಮುವಾಗ ಇವಳ ಮುಖಕಾಂತಿಯನ್ನು, ತೋಳೆಂಬ

ಕಲ್ಪಲತೆಗಳನ್ನು ಮೊಲೆಯೆಂಬ ಅಮೃತ ಕಲಶಗಳನ್ನು ಮೆರಗುಗೊಳಿಸಿ, ಇವಕ್ಕೆ ದೃಷ್ಟಿ ತಾಗದಂತೆ (ಕ್ಷೀರಸಾಗರ ಮಥನ ಕಾಲದಲ್ಲಿ) ಮುನ್ನ ಹುಟ್ಟಿದ ಚಂದ್ರ, ಕಲ್ಪಲತೆ, ಅಮೃತಕಲಶಗಳನ್ನು ನಿವಾಳಿಸಿ ತೆಗೆದುವೆಂದು ಕಡೆಗಣಿಸಿದ್ದಾನೆ. ಈ ಲೋಕಗಳೆಲ್ಲವೂ ಇವಳು ಹೊತ್ತುಗಳೆಯುವ ವಿನೋದದಾಟದ ಹುರುಳೆನಿಸಿಯೂ ಮುಕ್ತಿಯು ಇವಳ ವಾಸದ ಅರಮನೆಯೆನಿಸಿಯೂ ತನ್ನ ಶ್ರೇಷ್ಠ ಒಡವೆಯೆಲ್ಲವೂ ಇವಳ ಒಡವೆಯೆನಿಸಿಯೂ ತಣಿಯದೆ ತಾನೂ ಇವಳ ಜತೆಯಲ್ಲಿಯೆ ಇದ್ದಾನೆ. ಸಾವಿರ ಮುಖ ಕೈಕಾಲು ಹೊಂದಿ ವಿಶ್ವರೂಪ ಧರಿಸಿಯೂ ಇವಳ ಲೀಲೆಗಳನ್ನು ಕಡೆಗಣಿಸಲಾರದೆ ಹೊಸಹೊಸದನ್ನು ಅನುಭವಿಸುತ್ತ ಆನಂದಮಯನೆನಿಸಿದ್ದಾನೆ. ಮುನ್ನ ಸೀತೆಯ ಅವತಾರದಲ್ಲಿ, ಸುಂದರ ಕೈಕಾಲು ಮುಖಕಮಲಗಳೂ ಕಣ್ಣೆಂಬ ನೈದಿಲೆಗಳೂ ನಾಸಿಕವೆಂಬ ಸಂಪಿಗೆಯೂ ಬಾಯ್ದೆರೆಯೆಂಬ ದಾಸವಾಳವೂ ಹಲ್ಲೆಂಬ ಮೊಲ್ಲೆಗಳೂ ಎಂಬ ಹಲವು ತರದ ಕಂಪಿನಹೂದಳೆದು ಶೋಭಿಸುವ ಹೊಸ ಬಗೆಯ ಹೊನ್ನ ಸೆಳೆಯಂತೆ ರಂಜಿಸುವ ಮೈಸಿರಿಯಲ್ಲೂ ಸದ್ಗುಣಗಳ ಸಮೂಹದಲ್ಲೂ ಮಗ್ನನೆನಿಸಿ ಅವಳು ಹೇಳಿದ ಕೂಡಲೇ ಒಡಂಬಟ್ಟು (ತನ್ನ) ಸರ್ವಜ್ಞತ್ವವನ್ನು ಮರೆತು ಮುಂದೆ ಬರುವುದನ್ನು ತಿಳಿಯದೆ ಆವೇಶಗೊಂಡು ಬಿಲ್ಲು ಬಾಣಗಳೊಡನೆ ಹೊನ್ನಮೃಗವನ್ನು ಬೆಂಬತ್ತಿದನು. ಇಂತು ಕಾಂತನನ್ನು ತನ್ನ ಗುಣಗಳಿಂದ ವಶಪಡಿಸಿಕೊಂಡಿರುವ ಇವಳ ಅಡಿದಾವರೆಯ ಬಲವೊಂದುಂಟೆಂಬ ಬಲದಿಂದಲ್ಲವೆ ನಾವು ಹಿಂದಣ ಕರ್ಮಕ್ಕಂಜದೆ ದೃಢವಾಗಿರುವುದು? ಎಂದು ಹಲವು ಮಹಿಮೆಗಳನ್ನುಭಾವಿಸುತ್ತ ಮತ್ತೆ ಅರೆಮುಚ್ಚಿದ ನಯನಕಮಲಗಳೂ ಸುರಿಯುವ ಆನಂದಾಶ್ರುಗಳೂ ಸೆರೆಬಿಗಿದ ಕೊರಳಲ್ಲಿ ಸಿಕ್ಕು ತಡವರಿಸುವ ಕ್ಷೀಣಧ್ವನಿಯೂ, ಕಡಬವು ಹೂಬಿಟ್ಟಂತೆ ಮೈಯಲ್ಲಿ ಹೊಮ್ಮಿದ ರೋಮಾಂಚನವುಳ್ಳವನಾಗಿ ಸ್ತುತಿಮಾಡಿದನು.

ಸ್ತುತಿ ! ಅದು ಹೇಗೆಂದರೆ

ಜಗನ್ಮಾತೆ ! ನೀನು ಹಾಲುಗಡಲಲ್ಲಿ ಹುಟ್ಟಿ ತಾವರೆಯಲ್ಲಿ ದಟ್ಟಡಿಯಿಟ್ಟು ದೇವತೆಗಳ ತಲೆಮುಡಿಯ ಸರಗಳಲ್ಲಿ ನಡೆಗಲಿತು ನಾರಾಯಣನ ಎದೆಯ ತುಳಸಿಸರಗಳಲ್ಲಿ ಉಯ್ಯಾಲೆ ಯಾಡುತ್ತಿರುವ ನಿನ್ನ ಮಾರ್ದವವನ್ನು ಯಾರು ಬಣ್ಣಿಸುವರು ? ನೀನು, ಹುಟ್ಟಿದುದರಿಂದ ಕ್ಷೀರಸಮುದ್ರದಲ್ಲಿ ಹಿರಿಮೆಯೂ, ನೆಲೆಸಿದುದರಿಂದ ತಾವರೆಯಲ್ಲಿ ಕಂಪೂ, ಒಡಹುಟ್ಟಿದುದ ರಿಂದ ಅಮೃತದಲ್ಲಿ ಇಂಪೂ ಚಂದ್ರನಲ್ಲಿ ತಂಪೂ ಜೊತೆಗೂಡಿವೆ. ಜಗಕ್ಕೆ ಮಂಗಲವೆನಿಸುವ ವಿಷ್ಣುವಿನ ದೇಹವು ನಿನ್ನ ಜೊತೆಯಿಂದ (ಮತ್ತೂ) ಮಂಗಲವೆನಿಸುವುದು. ಹೂ ಮತ್ತು ಅದರ ಕಂಪೂ ರತ್ನ ಮತ್ತು ಅದರ ಕಾಂತಿಯೂ ಜೊತೆಯಾಗಿರುವಂತೆ, ಜೊತೆಗೂಡಿರುವ ನೀನೂ ನಿನ್ನ ಪತಿಯೂ ಒಂದೇ ಸತ್ವವೆನ್ನುವರು. ದಯೆಯಿದ್ದರೂ ಮುಂದಣ ಹಿತವನ್ನು ಬಯಸಿ ಮಕ್ಕಳನ್ನು ಶಿಕ್ಷಿಸುವುದು ತಂದೆಗೆ ಸಹಜವಾದುದರಿಂದ ಎಂತೊ ಒಮ್ಮೆ ಕೋಪಗೊಳ್ಳುವ ಪತಿಯ ಕೋಪದ ಬಿಸಿಯನ್ನು ತಗ್ಗಿಸಿ ನಮ್ಮನ್ನು ರಕ್ಷಿಸಿ ಹೇಳಬೇಕು. ಮುನ್ನ ಲಂಕೆಯ ಅಶೋಕ ವನದಲ್ಲಿ ನಿನ್ನನ್ನು ಜರೆದು ನುಡಿದು ಗದರಿಸಿ-ಬೆದರಿಸಿ ಕಾಡಿ ಆಯುಧವೆತ್ತಿ ಕರ್ಕಶನಾದ ರಾಕ್ಷಸನ ಹೆಂಡಿರನ್ನು ಕಡಿಕಂಡಗೊಳಿಸುವೆನೆಂದ ಹನುಮಂತನ ಬಿಗಿದ

ಮುಷ್ಟಿಯನ್ನು ಬಿಚ್ಚಿಸಿದ ನಿನಗೆ, ನೀನು ಹೇಳಿದ್ದಕ್ಕೆ 'ಹಸಾದ'ವೆಂದು ಎಸಗುವ ಮುಕುಂದನನ್ನು ಶಾಂತಗೊಳಿಸುವುದು ಅಸಾಧ್ಯವಲ್ಲ ಅಲ್ಲವೆ ? ಅತಿ ಪ್ರೀತಿಯಿಂದ ತೊರೆದ ಮನಸ್ಸೆಂಬ ಮೊಲೆಯ ಕರುಣೆಯ ಹಾಲನ್ನು ಕಂಠಪೂರ್ತಿಯಾಗಿ ಹೀರಿ ಸೊಕ್ಕೇರಿ ಅಮೃತವನ್ನು ಉಪ್ಪು ನೀರೆಂದು ಬಗೆದು ಅಮೃತಪಾನಿಗಳಾದ ದೇವತೆಗಳನ್ನು ಲೆಕ್ಕಿಸದಿರುವೆನು. ಹರಿಯುವ ಹಾವು, ಉರಿಯುವ ಕಿಚ್ಚು ಮೊದಲಾದುವನ್ನರಿಯದ ಎಳೆಶಿಶುವನ್ನು ತಡೆದು ಕಾಪಾಡುವಂತೆ ದುರ್ವಿಷಯಕ್ಕೆಳಸದಂತೆ ನಮ್ಮನ್ನು ಕ್ಷೇಮದಿಂದಿರಿಸುವುದೇ ಲೇಸು. ಹಾಗಲ್ಲದಿದ್ದರೆ ಜಗದೊಡೆಯನು ತನ್ನ ಆಜ್ಞೆ ಮೀರಿದನೆಂದು ಅತಿ ಕೋಪಿಸಿ ಆಯುಧಪಾಣಿಯಾಗಿ ರೋಷಗೊಳ್ಳುವಷ್ಟರಲ್ಲಿ (ಮತ್ತು) ನಾನು ನನ್ನ ದುಷ್ಕಾರ್ಯಗಳನ್ನು ನೆನೆದು ನಡುನಡುಗಿ ಕಾತರಿಸಿ ದಿಙ್ಮೂಢನಾಗಿರುವಷ್ಟರಲ್ಲಿ ನಮ್ಮಿಬ್ಬರನ್ನೂ ನಿಟ್ಟಿಸಿ (ದೆಸೆಗೆಟ್ಟು) ಅವನನ್ನು ಸಮಾಧಾನ ಪಡಿಸುವುದಕ್ಕೆ ನೀನು, ಯಾವ ಬಗೆಯ ಸೊಗದ ನೋಟಗಳನ್ನು, ಯಾವ ಬಗೆಯ ಮೆಲ್ನುಡಿಗಳನ್ನು ಯಾವ ಬಗೆಯ ಶೃಂಗಾರಲೀಲೆಗಳನ್ನು ಎಸಗುವೆಯೋ ? ಅರಿತರಿತು ಅಡಿಗಡಿಗೆ ನಾನು ಮಾಡಿದ ದುಷತ್ಯಗಳನ್ನು ಕಂಡು ಕಾದೆಣ್ಣೆಯ ಸಮೀಪ ತಣ್ಣೀರು ಹರಿಯುವಂತೆ ಮೆಲ್ಲನೆ ಬಿಸಿಯೇರಿ ಮುಪ್ಪುರಿಗೊಂಡ ಹುಬ್ಬೂ ಕಟ್ಟಿದ ಬಾಯಿಯೂ ಕಡಿಯುವ ಹಲ್ಲುಗಳೂ ಕೆಂಪೇರಿದ ಕಡೆಗಣ್ಣೂ ಕಿಡಿಸೂಸುವ ತದೇಕ ದೃಷ್ಟಿಯೂ ನಡುಗುವ ಮೀಸೆಯೂ ಉಬ್ಬಿಸಿದ ಏದುಸಿರೂ ನಸುನಡುಗುವ ಕೈಕಾಲುಗಳೂ ಆಗಿ ಎತ್ತಿದ ಹೊನ್ನ ಬೆತ್ತದಿಂದ (ಶಿಕ್ಷಿಸುವ) ನಿರ್ಧಾರದಿಂದ ನಡೆಯುವಲ್ಲಿ, ಬಿರುಗಾಳಿಯಲ್ಲಿ ತೆರೆಮಸಗಿ ಮಿತಿಮೀರಿ ಉಕ್ಕುಕ್ಕಿ ಕವಿದು ಬರುವ ಕಡಲ ಆವೇಶವನ್ನು ತಡೆಯುವ ದಂಡೆಯಂತೆ ನೀನೂ ಅವನನ್ನು ನಯಗೊಳಿಸಿ ಅಸ್ತ್ರ-ಪ್ರತ್ಯಸ್ತ್ರ ನ್ಯಾಯದಿಂದ ಭಯ-ಪ್ರಣಯಗಳನ್ನು ಒಂದುಗೂಡಿಸಿ ನಸುಮಣಿದ ಮುಖವೂ ಬೆಚ್ಚುವ ಮನಸ್ಸೂ ಬೆದರುನೋಟವೂ ಆಗಿ ನಿಂತು ಅವನ ಕೋಪವು ಅಷ್ಟಷ್ಟೆ ಶಾಂತಗೊಂಡು ಇಳಿಯುವುದನ್ನು ಕಂಡು "ಏನಿದು ? ಈ ಅರಿಯದ ಮಕ್ಕಳಲ್ಲಿ ಈ ಪರಿಯ ಕೋಪಾಟೋಪವು ಉಚಿತವಲ್ಲ, ಸಾಕು ! ಇಂದು ಮೊದಲು ಮುಂದೆಂದೂ ಇವರು ತಪ್ಪು ಮಾಡರು. ಹಿಂದಣ ತಪ್ಪನ್ನು ಮರೆತು ಸಲಹಬೇಕು" ಎಂದು ಮೆಲುಮಾತುಗಳನ್ನಾಡುತ್ತ ಮೆಲ್ಲಮೆಲ್ಲನೆ ಹತ್ತಿರ ಸರಿದು ಅವನ ಎತ್ತಿದ ಕೈಯನ್ನು ಒಂದು ಕೈಯಿಂದ ತಡೆಯುತ್ತ ಮತ್ತೊಂದು ಕೈಯಿಂದ ನನ್ನನ್ನು ಹಿಡಿದೆಳೆದು ಅವನ ಅಡಿದಾವರೆಗಳಲ್ಲಿ ಕೆಡಹಿ ಹುಬ್ಬುಗಂಟನ್ನು ಸಡಿಲಿಸಿ ನೋಟವನ್ನು ಶಾಂತಗೊಳಿಸಿ ನಗೆಯನ್ನುಂಟುಮಾಡಿ (ಅವನ) ಮನೋಮಂದಿರದ ಒಳಕೋಣೆಯಲ್ಲಿ ಮಲಗಿದ ದಯೆಯನ್ನು ಎಚ್ಚರಿಸಿ ಕೃತಾರ್ಥಳಾಗುತ್ತಿ. ನೀನು ಒಡತಿಯೂ ತಾಯಿಯೂ ದಯಾಳುವೂ ಆದುದರಿಂದ ನಮ್ಮವರು ನನ್ನನ್ನು ನಿನ್ನ ಕೈಗೆ ಒಪ್ಪಿಸಿದರು. ನನ್ನ ಗುಣದೋಷಗಳನ್ನೆಣಿಸದೆ ರಕ್ಷಿಸಹೇಳಬೇಕು' ಎಂದು ಸಾಷ್ಟಾಂಗವೆರಗಿ ತೀರ್ಥ-ಪ್ರಸಾದ ಪಡೆದು ಮುಂದೆ ನಡೆದನು.

ಗಜೇಂದ್ರವರದರು

ಅಲ್ಲಿ, ಮೇರುಗಿರಿಯನ್ನು ಹಿಡಿದೇರಿ ಅಮೃತವನ್ನುಂಡ ಕಾರ್ಮೋಡವನ್ನು ಹೋಲುವ ಗರುಡಾರೂಢನಾದ ಗಜೇಂದ್ರ ವರದನನ್ನು ಸ್ವಲ್ಪ ದೂರ ನಡೆದನು.

ಶ್ರೀ ರಾಮಾನುಜಾಚಾರ್ಯರ ವರ್ಣನೆ

ಅಲ್ಲಿ, ಮಾನವ ಅವತಾರಕ್ಕೆ ಅನುಗುಣವಾಗಿ ಸಾವಿರ ಹೆಡೆಯನ್ನು ಮರೆಸುವಲ್ಲಿ ಮರೆತು ಉಳಿಸಿದ ಮಹಾಶೇಷನ ಕೆಲವು ಬಿಳಿಹೆಡೆಗಳಂತೆಯೂ ಒಳಗೆ ಸಂಗ್ರಹಿಸಿದ ಸತ್ವಸುದ್ಧಿ ಹೊರಸೂಸಿದಂತೆಯೂ ಶೋಭಿಸುವ ಪವಿತ್ರ ಊರ್ಧ್ವಪುಂಡ್ರಗಳೂ, ಶ್ರೀ ಮನ್ನಾರಾಯಣನಿಗೆ ಭಕ್ತರ ಮೇಲೆ ಹುಟ್ಟಿದ ಅನುರಾಗವು (ಟಿ. ೧. ಪ್ರೀತಿ ೨. ಕೆಂಬಣ್ಣ) ಈ ಭಕ್ತೋತ್ತಮರಲ್ಲಿ ಸಾಕಾರವಾಗಿ ಮೈಗೆ ಹತ್ತಿಕೊಂಡಂತಿರುವ ಸುಂದರವಾದ ಕವಿಯ ಉಡುಗೆಯೂ । ಭಗವದ್ವಿಷಯವನ್ನುಳಿದು ಕೆಲಕ್ಕೆ ಸರಿಯದಂತೆ ತನ್ನ ಶಿಷ್ಯರ ಮನೋವಾಕ್ಕಾಯಗಳನ್ನು ನಿಗ್ರಹಿಸುವುದಕ್ಕೂ ಬೇರೊಂದರೊಡಗೂಡಿರುವ ಮೂರೂ ಗುಣಗಳನ್ನು ದಂಡಿಸುವುದಕ್ಕೂ ಮೋಕ್ಷವಿರೋಧಿಯಾದ ಸತ್ವರಜಸ್ತಮೋಗುಣಗಳನ್ನು ತಡೆಯುವುದಕ್ಕೂ ಸ್ವೀಕಾರ ಮಾಡಿದಂತೆ ಒಪ್ಪುವ ತ್ರಿದಂಡವೂ ಒಪ್ಪಿ ಶರೀರ ಧರಿಸಿದ ವಿಷ್ಣು ಶಕ್ತಿಯಂತೆಯೂ ಪ್ರಾಣಧರಿಸಿದ ವಿಷ್ವಕ್ಸೇನನ ಆಜ್ಞೆಯಂತೆಯೂ ಅಭಿವ್ಯಕ್ತಿಪಡೆದ ಶಠಗೋಪನ ಭಕ್ತಿಯಂತೆಯೂ ಸನ್ನದ್ಧವಾದ ನಾಥಮುನಿಯ ಚಾತುರ್ಯದಂತೆಯೂ ಸಾಕಾರವಾದ ಯಮುನಾಚಾರ್ಯರ ಇಚ್ಛೆಯಂತೆಯೂ ಕಣದಂತೆಯೂ ವೈರಾಗ್ಯದ ಹೆಚ್ಚಳದಂತೆಯೂ ಶ್ರೀ ವೈಷ್ಣವರ ಭಾಗ್ಯದಂತೆಯೂ ತೋರುವ ರಾಮಾನುಜಾಚಾರ್ಯರ ಅಡಿಗೆರಗಿ, ಸೂರ್ಯನ ತೇಜದಲ್ಲಿ ಕರಗಲಾರದ ತಂಪು ಬೆರಸಿದಂತಿರುವ ಮೈಕಾಂತಿಯೂ ಹಲವು ವಿದ್ಯೆಗಳನ್ನು ಪ್ರತಿಬಿಂಬವನ್ನು ತನ್ನಲ್ಲಿ ಒಳಗೊಂಡ ರನ್ನಗನ್ನಡಿಯಂತೆ ಇರುವ ಮುಖಕಾಂತಿಯೂ ತೆರೆಸೊರೆಗಳಿಲ್ಲದ ಅಮೃತಸಮುದ್ರದ ಮಡುವನ್ನು ಹೋಲುವ ಗಾಂಭೀರ್ಯವೂ ಅಂಚು ಮುಟ್ಟಿ ಕವಿಯುವ ಕರುಣೆಯೆಂಬ ಅಮೃತಸಾಗರದ ಕಲ್ಲೋಲವನ್ನು ಹೋಲುವ ಶಾಂತದೃಷ್ಟಿಯೂ ಬಿಳಿಹಲ್ಲುಗಳ ಬೆಳಕಿನ ವಿಸ್ತಾರದಂತೆ ತೋರುವ ನಸುನಗೆಯೂ ಶ್ರೀ ನಾರಾಯಣನ ಸೇವಾಸಮಯದಲ್ಲಿ ಕೊರಳೊಳಗೆ ಧರಿಸಿದ ಸಂಪಿಗೆ ದಂಡೆಯನ್ನು ಹೋಲುವ ಸಿರಿದೋಳುಗಳೂ ಅವುಗಳ ಕೊನೆಯಲ್ಲಿ ಕಟ್ಟಿದ ಎರಡು ತಾವರೆಗಳನ್ನು ಜೊತೆಗೂಡಿಸಿದಂತೆ ಮುಗಿದ ಕೈಗಳೂ ವೇದವಾಕ್ಕೆಂಬ ಸ್ತ್ರೀಯರ ಮುಂಗುರುಳ ಸಿಕ್ಕು ಬಿಡಿಸಲೆಂದು ಹಿಡಿದ ಬಾಚಣಿಗೆಯನ್ನು ಹೋಲುವ ತ್ರಿದಂಡವೂ ಎಳೆಬಿಸಿಲ ಸೋಂಕಿನಲ್ಲಿ ಹೊಳೆಯುವ ಕೆಂದಾವರೆಗಳಂತೆ ಎಳಗಾವಿಯ ಉಡಿಗೆ ಮುಚ್ಚಿದ ಶ್ರೀಪಾದವೂ ಆಗಿ ಪದ್ಮಾಸನದಲ್ಲಿರುವ ಅಂದವನ್ನು ತನ್ನ ಮನದಲ್ಲಿ ಸೆರೆಹಿಡಿದು (ಹೀಗೆ) ವಿಚಾರಿಸಿದನು-

"ಮುನ್ನ ಮಹಾಶೇಷನು ವೈಕುಂಠದಲ್ಲಿ ವೈಕುಂಠಪತಿಯ ಸೇವಾಸಾಮ್ರಾಜ್ಯದೊಳಗೆ ತೃಪ್ತಿಹೊಂದಿದ್ದೂ ಭಗವಂತನ ಸಂಕಲ್ಪಕ್ಕೆ ಅನುಗುಣವಾಗಿ ಕಲಿದೋಷದಿಂದ ದೂಷಿತರಾದ ಜನರ ದೋಷವನ್ನು ಕಳೆದು ದೇವಾಂಶವನ್ನು ಜಾಗೃತಗೊಳಿಸಿ ಸಲಹುವುದಕ್ಕೆ ಅವತರಿಸಿದನು. ಶ್ರೀರಂಗನಾಥನಿಗೆ, ನಿತ್ಯದ ಪಕ್ಷದ ಮಾಸದ ವರ್ಷದ ಉತ್ಸವಗಳನ್ನು ಸಾಂಗವಾಗಿ ನೆರವೇರಿಸಿದನು. ಶ್ರೀಕಾಂಚೀಪೂರ್ಣರ ಮುಖಾಂತರ ಕಾಂಚೀನಾಥ (ವಿಷ್ಣು)ನಿಂದ ತತ್ವದೊಡನೆ ಪುರುಷಾರ್ಥಗಳ ನೆಲೆಯನ್ನರಿತನು. ಶ್ರೀ ವೆಂಕಟೇಶನಿಗೆ ಶಂಖಚಕ್ರಗಳ ಲಾಂಛನಗಳನ್ನು

ಸಮರ್ಪಿಸಿದನು. ಸಿದ್ಧಾಶ್ರಮದಲ್ಲಿಯ ಪೂರ್ಣನಲ್ಲಿ, ಮೂಲ ಮಂತ್ರಾರ್ಥವನ್ನು ತಿಳಿದುಕೊಂಡನು. ಶ್ರೀಧನ್ವಿನೂತನ ಪುರದಲ್ಲಿ ಶ್ರೀ ಗೋದಾದೇವಿಯವರಿಗೆ ಸಹೋದರನೆನಿಸಿದನು. ಅಂತಲ್ಲದೆ ನಮ್ಮ ಯದುಗಿರಿಯಲ್ಲಿ ಕುಲದೇವತೆಯಾದ ನಾರಾಯಣನ ಪ್ರತಿಬಿಂಬವೆನಿಸಿ ಉತ್ಸವದಲ್ಲಿ ಸಲ್ಲುವ ಚೆಲುವನಾರಾಯಣನು ದಿಲ್ಲೀಶ್ವರನ ಮಗಳಾದ ವರನಂದಿಗೆ ಒಲಿದು ಮೈಮರೆತಿರಲು ಹಿತೋಪದೇಶಗೈದು ಕರೆತಂದು ಅವನಿಗೆ ತಂದೆಯೆನಿಸಿದನು. ಅದರಿಂದ ಈ ಯತೀಂದ್ರರು ಯಾದವರಿಗೆ ಕುಲಗುರುವೆನಿಸಿದರು" ಎಂದು ಸಂಬಂಧವನ್ನು ನೆನೆಸಿಕೊಂಡು ಮತ್ತೆ ಸ್ತುತಿಗೈದನು. ಅದು ಹೇಗೆಂದರೆ-

'ಪರತತ್ವವನ್ನು ನಿರ್ಣಯಿಸಲು ಹಲವು ಅನುವಾಕ್ಯ (ವೇದಸೂಕ್ತ ಸಮುದಾಯ)ಗಳು ಇವೆಯಾದರೂ (ಅವುಗಳಲ್ಲಿ) ಪುರುಷಸೂಕ್ತವೊಂದೇ ಪ್ರಧಾನ, ಮಿಕ್ಕೆಲ್ಲವೂ ಇದಕ್ಕೆ ಅನುವರ್ತಿಗಳಾಗಿರುವವೆಂಬ ನೆಲೆಯನ್ನು, ಒಬ್ಬಳೂ ಉಳಿಯದಂತೆ ಮೂವತ್ತೆರಡೂ ಉಪನಿಷತ್ತೆಂಬ ವಧುಗಳ ಒಕ್ಕೊರಲಿಂದ ಪುರುಷೋತ್ತಮನ ಪಾಣಿಗ್ರಹಣ ಮಾಡಿ ಪತಿವ್ರತೆಯರಾಗಿದ್ದರೂ ಬೇರೆ ದೇವತೆಗಳ ಸಂಬಂಧದಿಂದ ಇವರನ್ನು ನಾಶಪಡಿಸುವ ಶಪಥಗೈದ ಶೈವ, ಪಾಶುಪತಾದಿ ದುರ್ವಾದಿಗಳನ್ನು ನ್ಯಾಯಮಾರ್ಗದಿಂದಲೇ ಖಂಡಿಸಿ ತರುಬಿ ಆ ಪತಿವ್ರತೆಯರನ್ನು ಯಾವತ್ತೂ ಕಾಪಾಡಲು ಶ್ರೀಭಾಷ್ಯ, ವೇದಾಂತದೀಪ, ವೇದಾಂತಸಾರ, ಗೀತಾಭಾಷ್ಯ ಮುಂತಾದ ಗ್ರಂಥಗಳನ್ನು ನಿಯಮಿಸಿ ರಕ್ಷಿಸಿದೆ ಗಡ ! ನಿನ್ನ ಭಗವದ್ವಿಷಯದ ನೈಪುಣ್ಯ ಎಂಥದೋ ! ಮತ್ತೆ, ಆ ಜಗದೀಶ್ವರನ ಸಂಪದವೆನಿಸುವ ಹದಿನಾಲ್ಕು ಲೋಕಗಳನ್ನು ಅವನ ರಾಜಧಾನಿಯಾದ ವೈಕುಂಠವನ್ನು ಅವನ ಅರಮನೆಯನ್ನು ಛತ್ರಚಾಮರಾದಿ ಚಿಹ್ನೆಗಳನ್ನು, ಅಷ್ಟೇ ಏನು ? ಅವನ ದಿವ್ಯಾಂಗವನ್ನೂ ಅಪಹರಿಸಿ '(ಅದೆಲ್ಲ) ಹುಸಿ' ಎನ್ನುವ ಚಾರ್ವಾಕ, ಬೌದ್ಧ, ಜೈನ, ಮಾಯಾವಾದಿಗಳು ಮುಂತಾದ ಕೇಡಿಗಳನ್ನು ಸದೆದು, ಶ್ರೇಷ್ಠ ಒಡವೆಗಳಲ್ಲಿ ಎಳ್ಳಷ್ಟೂ ಹೋಗದಂತೆ ಪರಿಪಾಲಿಸಿದೆ ಗಡ ! ಭಗವತ್ಸಂಪದದ ನಿನ್ನಭಿಮಾನ ಎಂಥದೋ ! ನಿತ್ಯವೂ ನಮ್ಮ ಚೆಲುವರಾಯನು ತನ್ನ ಸಾವಿರ ಹೆಸರುಗಳನ್ನು ಕೇಳದೆ ಯತಿ ರಾಜಕುಮಾರನೆಂಬ ಹೊಸ ಹೆಸರನ್ನು ಕೇಳಿ ಮೈನವಿರೇರಿ ಮುಖಕಾಂತಿದುಂಬುತ್ತಾನೆ. ಈ ಮಹಿಮೆಯನ್ನಾರು ಬಣ್ಣಿಸುವರು ?

ಎಂದು ವಂದಿಸಿ ಹೃದಯ ತುಂಬಿಸುವ ಪಾದತೀರ್ಥವನ್ನಾಸ್ವಾದಿಸಿ ಮುಂದಕ್ಕೆ ನಡೆದು ಹೊನ್ನಧ್ವಜಸ್ತಂಭವನ್ನು ಬಲವಂದನು. ಅಲ್ಲಿ ಒಳಬಾಗಿಲಲ್ಲಿ ರತ್ನಾಭರಣಗಳನ್ನು ಹಣ್ಣು-ಕಾಯಿಗಳನ್ನು ಕಾಣಿಕೆಯಾಗಿ ತೆಗೆದುಕೊಂಡು ಭಕ್ತಿಭರದಿಂದ ಹೋಗುವ ನಾಡು ಬೀಡಿನವರು ; ಮತ್ತೆ ಸವಿಸವಿದು ತಣಿವುದೋರುವ ಅಮೃತವನ್ನು ಹೋಲುವ ಚೆಲುವನಾರಾಯಣರ ಮೈಸಿರಿಯನ್ನು ನಿಟ್ಟಿಸಿ ಮನಗಂಡು ಮುಖದಲ್ಲಿ ಹೊಸಕಾಂತಿಯೂ ಕಣ್ಣಲ್ಲಿ ಆನಂದಬಾಷ್ಪವೂ ಕೊರಳಲ್ಲಿ ಗದ್ಗದವೂ ಕಂಠದಲ್ಲಿ ಪ್ರಸಾದ ಹೂಸರವೂ ಕೈಯಲ್ಲಿ ಸಹಸ್ರನಾಮ ಪೂಜೆಯ ತುಳಸಿಯೂ ಮೈಯಲ್ಲಿ ರೋಮಾಂಚನವೂ ಆಗಿ

ಹೊರಹೋಗುವವರು ಒಬ್ಬರನ್ನೊಬ್ಬರು ಎದುರಿಸುವ ತಾಕಲಾಟವನ್ನು ಕಂಡು ಸ್ವಲ್ಪ ಹೊತ್ತು ತಡೆದನು. (ಅಷ್ಟರಲ್ಲಿ) ಅಲ್ಲಿಯ ಸಂದಣಿ ನಸುವೇ ಹರಿಯಿತು.

ರಂಗಮಂಟಪದ ವರ್ಣನೆ

ಎದುರಿನಲ್ಲಿ ಕವಿದು ಹಾಯುವ ಜಗದೀಶ್ವರನ ಕಡೆಗಣ್ಣ ನೋಟವೆಂಬ ಅಮೃತವನ್ನು ಇದಿರು ಈಸುತ್ತ ಹೊನ್ನಬಾಗಿಲ ಒಳಹೊಕ್ಕನು. ಅಲ್ಲಿ ಸಾಲುಗೊಂಡು ಇಕ್ಕೆಲದಲ್ಲಿ ದಿವ್ಯಪ್ರಬಂಧಾಧ್ಯಯನ ಗೈಯುವ ಶ್ರೀವೈಷ್ಣವರ ದನಿಯಿಂದ ಶಬ್ದಮಯವೂ । ಮೇಲ್ಕಟ್ಟಿನ ಮಾಲೆಗಳ ಹೂಸರಗಳಿಂದ ಸುರಿಯುವ ಜೇನುಮಳೆಯಿಂದ ರಸಮಯವೂ । ಬಳಸಿದ ರತ್ನಗೋಡೆಗಳಿಗೆ ಲೇಪಿಸಿದ ಪಚ್ಚೆಗಪ್ಪುರದ ತಂಪಿನಿಂದ ಗಂಧಮಯವೂ । ಪರಮ ಭಾಗವತರ ಮೈಯಲ್ಲಿ ಹೊಳೆಯುವ ಪವಿತ್ರ ಊರ್ಧ್ವಪುಂಡ್ರ ಕಾಂತಿಯಿಂದ ಸತ್ವಮಯವೂ । ವಂದಿಸುವ, ಮನ ಕರಗುವ, ಏಳುವ, ನಿಲ್ಲುವ, ನೆಲೆಗೊಳುವ ಕೈಮುಗಿಯುವ ನಿಟ್ಟಿಸುವ ನೋಡುವ ಭಾವಿಸುವ ಬಗೆಗೊಳಿಸುವ ನಲಿಯುವ ರೋಮಾಂಚಿತವಾಗುವ ಆಶ್ಚರ್ಯಪಡುವ ಆನಂದಾಶ್ರು ಸುರಿಸುವ ಸೊಕ್ಕುವ ಸುಖಪಡುವ ಭಕ್ತರ ಕಾರ್ಯಗಳಿಂದ ಭಕ್ತಿಮಯವೂ । ಒಬ್ಬರೊಬ್ಬರಿಗೆ ನಮಸ್ಕರಿಸುವ ಸಿಹಿ ಮಾತಾಡುವ ಸಮೀಪ ಕರೆಯುವ ಒಳ್ಳೆಯತನ ತೋರುವ ಸ್ವಾಮಿಯ ಸೇವೆ ಮಾಡಿಸುವ ಯೋಗ್ಯಉಪಚಾರಗಳಿಂದ ಸೌಜನ್ಯ ಮಯವೂ । ಹಿಡಿದ ಚಾಮರ ಬೀಸಣಿಗೆಗಳನ್ನು ಕೊಟ್ಟು ತಾವು ಹೊತ್ತಿರುವ ಬಂಗಾರದ ಪೀಕದಾನಿಗಳನ್ನು ಅದಲು ಬದಲುಗೊಳಿಸುವ ಮಾನವ ಸೇವಾನಂದಕ್ಕೆ ಒಲುಮೆ ತೋರುವ ಬ್ರಹ್ಮಮೊದಲಾದ ದೇವಸಮೂಹದ ವಿನಯದಿಂದ ಸುಶೀಲ ಮಯವೂ । ಸಂದಣಿಸಿ ಸಾಷ್ಟಾಂಗವೆರಗಿ ನೆಟ್ಟನೆ ಏಳುವಲ್ಲಿ ವಜ್ರಮುಕುಟದ ಕುಚ್ಚದ ಮೊಳೆಗಳಲ್ಲಿ ಸಿಲ್ಕಿದ, ವಿರಾಗಿಗಳ ಸ್ವಚ್ಛತರ ಉತ್ತರೀಯ ತುಂಡುಗಳನ್ನು ಹೂಸರವೆಂದು ಬಗೆದು ಸುತ್ತಿಕೊಳ್ಳುವ ಇಂದ್ರಾದಿ ದೇವತೆಗಳ ಕ್ರಿಯೆಯಿಂದ ವೈರಾಗ್ಯಮಯವೂ । ಭಗವಂತನ ಅತಿಶಯ ಸೌಂದರ್ಯದಿಂದಾಗಿ, ಕಣ್ಣೆವೆಗಳ ಅಲ್ಲಾಟವಿಲ್ಲದೆ ಒಂದೇ ತೆರನಾಗಿದ್ದರೂ ದೇವಲೋಕದಲ್ಲಿ ಎಂದೂ ಕಾಣದ ಅರ್ಚಾವತಾರದ ನೋಟದಲ್ಲಿ ದೇವತೆಗಳು ಆಶ್ಚರ್ಯಪಡುವರು ಎಂದು ತಿಳಿಯುವುದರಿಂದ ವಿವೇಕಮಯವೂ। ಆಯಾ ಸಮಯದಲ್ಲಿ ತೆರೆದೆಗೆದು ಬೆಳಗುವ ಆರತಿಯ ಹಲವು ದೀವಿಗೆಯ ಕುಡಿಗಳು ಹಲವು ರತ್ನಗಂಬಗಳಲ್ಲಿ ಪ್ರತಿಬಿಂಬಿಸುವುದರಿಂದ ತೇಜೋಮಯವೂ । ಮುನ್ನ ಭರದ್ವಾಜ ಋಷ್ಯಾಶ್ರಮದಲ್ಲಿಯೂ ಶಬರಿಯ ಗುಡಿಸಲಲ್ಲಿಯೂ ನಂದಗೋಪನ ಮನೆಯಲ್ಲೂ ಗೋಕುಲದ ಗುಡಿಸಲುಗಳಲ್ಲೂ ಗೋವರ್ಧನ ಪರ್ವತ ಶಿಖರದಲ್ಲೂ ಋಷಿಪತ್ನಿಯರ ಹತ್ತಿರದಲ್ಲೂ ಸವಿದ ಶಾಕ ಅನ್ನ ರಸ ಸೂಪ, ಸಿಹಿವಡೆ ಪಾಯಸ ಪರಮಾನ್ನ ಮೂಲ (ಗಡ್ಡೆ) ಮೊಸರು ಹಾಲು ಬೆಣ್ಣೆ ಮೊದಲಾದುವಷ್ಟನ್ನೂ ಒಂದೊಂದು ಸಮಯದಲ್ಲಿ ತನ್ನ ಮೈಸೂರರಸರು ನಿವೇದನಗೈದುದನ್ನು ಉಂಡು ಆ ಅಮೃತಾನ್ನವನ್ನು ತನ್ನ ಭಕ್ತರಿಗೆ ಸವಿದೋರು ವುದರಿಂದ ಅಮೃತಾಸ್ವಾದನಾಮಯವಾಗಿರುವ ರಂಗಮಂಟಪದಲ್ಲಿ ಸಾಷ್ಟಾಂಗ ಪ್ರಣಾಮಗೈದು ಎದ್ದು, ಮುಗಿದ ಕೈಯೂ ಮಣಿದ ದೇಹವೂ ಆಗಿ ಭಕ್ತಿಭರದಿಂದ ಗರ್ಭಗೃಹದ ಬಾಗಿಲಲ್ಲಿ ನಿಂತನು.

ಶ್ರೀ ನಾರಾಯಣರ ದಿವ್ಯಾಂಗ ಸಮುದಾಯ ಶೋಭೆಯ ವರ್ಣನೆ

ಒಂದೇ ಸಮಯದಲ್ಲುದಿಸಿದ ಸಾವಿರ ಸೂರ್ಯರ ಕಾಂತಿಯನ್ನು ಕಗ್ಗತ್ತಲೆಯೆನಿಸಿ ಮೆರೆಯುವ ದಿವ್ಯಾದ್ಭುತಕಾಂತಿಯು ಅಮೃತಸಾಗರದಲ್ಲಿ ತೊಳೆದು ಬೆಳುದಿಂಗಳಲ್ಲಿ ತಂಪುಗೊಳಿಸಿ ಬಂಗಾರ ಮತ್ತು ನೀಲಮಣಿಯ ಕಾಂತಿಗಳಿಂದ ಬಣ್ಣವಿಟ್ಟು ಶ್ರೀವತ್ಸ ಮತ್ತು ಆಭರಣ ಮಣಿಗಳ ಬೆಳಗಿನಲ್ಲಿ ಬೆರೆಸಿ ಮತ್ತೆ ಮತ್ತೆ ವಿಸ್ತಾರಗೊಳ್ಳುತ್ತ ಸುತ್ತಲೂ ಪಚ್ಚೆಯ ಗೋಡೆಯಂತೆಯೂ ಮೇಲ್ಗಡೆ ರಾಜಾವರ್ತದ ಮುಚ್ಚಳ-ಹಲಗೆಯಂತೆಯೂ ಇದಿರು ನಿಂತು ನೋಡುವವರ ದೃಷ್ಟಿಗಳಿಗೆ ತಂಪು ಕಾಡಿಗೆಯಂತೆಯೂ ಮೈಗೆ ಕಸ್ತೂರಿಯ ಲೇಪನದಂತೆಯೂ (ಕಾಂತಿ) ಕವಿಯುತ್ತಿದೆ. ಮತ್ತೆ ! ಚಂದನದ ಕಪ್ಪುರದ ಕುಂಕುಮದ ಕಸ್ತೂರಿಯ ಹಲವು ಸುಗಂಧ ಕುಸುಮಗಳಲ್ಲಿಯ ಕೊಳೆಗಳೆದು ಒಳ್ಳೆಯ ಕಂಪನ್ನು ಒಂದುಗೂಡಿಸಿದಂತೆಸೆಯುವ ಸಿರಿಮೈಯ ತನಿಗಂಪೂ, ಅತಿಶಯವಾದುದರಿಂದ ಲೇಪಿಸುವಂತೆಯೂ ತುಂಬುವಂತೆಯೂ ನಾಸಿಕವನ್ನು ತೃಪ್ತಿಪಡಿಸುತ್ತದೆ. ಈ ರೀತಿ ಕಾಂತಿ, ಸುಗಂಧಗಳಲ್ಲಿ ಮುಳುಗಿ ದಿವ್ಯಾಂಗದ ಸಮಗ್ರಶೋಭೆಯನ್ನು ನಿಟ್ಟಿಸುತ್ತ ಎಂದನು :

"ಇಂದು ಈ ವಸ್ತು ರೀತಿ ಎಂದು ತಿಳಿಯುವುದಕ್ಕೆ ಯೋಗಿಗಳ ಬಗೆಗೂ ವೇದಕ್ಕೂ ಅಸಾಧ್ಯವಾಗಿರುವುದರಿಂದ ಅಪ್ರಮೇಯವೆಂದೂ ಕಿರಿದಕ್ಕೆ ಕಿರಿದೆಂದೂ ಹಿರಿದಕ್ಕೆ ಹಿರಿದೆಂದೂ ಎಲ್ಲ ಅರ್ಥಗಳಲ್ಲಿರುವುದೆಂದೂ ಜಗವನ್ನು ಹೆರುವ ರಕ್ಷಿಸುವ ಅಳಿಯುವ ವಿನೋದ ಕಾರ್ಯದಲ್ಲಿ ಹೊತ್ತುಗಳೆಯುವನೆಂದೂ ಹೇಳುವರು ! ಮತ್ತು ಲಕ್ಷ್ಮೀದೇವಿಯಡಿಯ ಅಲತಿಗೆಯ ಗುರುತು ಧರಿಸಿರುವುದರಿಂದ ಪರತತ್ವವೆಂದೂ ಪರಂಜ್ಯೋತಿಯೆಂದೂ ಪರಮಾತ್ಮನೆಂದು ಪರಬ್ರಹ್ಮನೆಂದೂ ಪರಮಪದವಾಸನೆಂದೂ ಪರವಾಸುದೇವನೆಂದೂ ಶ್ರೀಮನ್ನಾರಾಯಣನೆಂದೂ ಕೀರ್ತಿಹೊಂದಿದ್ದಾನೆ. ಅಬ್ಬಬ್ಬ ! ನಿಟ್ಟಿಸಲೂ ಮುಟ್ಟಲೂ ಮೂಸಲೂ ಸವಿಯಲೂ ಕೇಳಲೂ ಹೇಳಲೂ ತಿಳಿಯಲೂ ಧ್ಯಾನಿಸಲೂ ಗುರುತುಗೊಳ್ಳಲೂ ಸಾಕ್ಷಾತ್ಕರಿಸಲೂ ಸೇವಿಸಲೂ ಅತ್ಯಂತ ದುರ್ಲಭವಾದ ವಸ್ತು. ನಮ್ಮ ಭಾಗ್ಯೋದಯದಿಂದ ಮುನ್ನ ಬ್ರಹ್ಮಲೋಕದಲ್ಲಿ ಹಲವು ಕಾಲವಿದ್ದು ಸನತ್ಕುಮಾರನಿಗೊಲಿದು ಅವನೊಡನೆ ಉತ್ತರ ಬದರಿಕಾಶ್ರಮಕ್ಕೆ ಹೋಗಿ ಅಲ್ಲಿ ನರನ ಮಿತ್ರನಾದ ನಾರಾಯಣ ಮುನಿಯಿಂದ ಪೂಜೆಗೊಂಡು ತಣಿದು ಅಲ್ಲಿಂದ, ಕಲಿದೋಷವು ಸೋಂಕದ ಸ್ಥಳವನ್ನರಸಿ ಬರುವ ಮುನಿಗಳಿಗೆ ಮೊದಲಿಗರಾದ ಸನತ್ಕುಮಾರರೊಡನೆ ಯದುಗಿರಿಗೆ ಬಂದು ಪರಬ್ರಹ್ಮಸ್ವರೂಪವಾಗಿ ವೇದಾಂತವಿದ್ಯೆಯಂತೆ ಭಾವಿಸಲಶಕ್ಯವಾದರೂ ಅಲ್ಲಿ ರಾಮಾನುಜಾಚಾರ್ಯರಿಂದ ಸೇವೆಗೊಂಡು ಸರ್ವಾತ್ಮರಿಂದ ಸೇವ್ಯವೆನಿಸಿದ ಆನಂದಮಯ ವಿಮಾನದಲ್ಲಿ ಸುಲಭವಾಗಿಯೂ ಸುವ್ಯಕ್ತವಾಗಿಯೂ ತೋರುತ್ತಿದೆ ಮತ್ತು ಈ ವಸ್ತುವನ್ನು ಭಾವಿಸಲು, ಎದೆಯಲ್ಲಿರುವ ಲಕ್ಷ್ಮಿಯ ಮೈಕಾಂತಿಯು ಹೊರಹೊಮ್ಮಿದಂತೆ ತೋರುವ ಹಳದಿ ಉಡುಗೆಯ ಹೊನ್ನಿನಲ್ಲಿ ಹುದುಗಿಸಿ, ಪಚ್ಚೆಮಣಿಯಲ್ಲಿ ಸಿದ್ಧಗೊಳಿಸಿದ ವೇದಕನ್ಯೆಯರ ಬೈತಲೆಮಣಿಯ ಗುಚ್ಛದಂತೆಯೂ, ಭೂದೇವಿ ನೀಳಾದೇವಿಯರ ಸುಂದರ ದೇಹಗಳ ಕಸ್ತೂರಿ ಲೇಪದಿಂದ

ಕಾಂತಿಯುತವಾದ ಯದುಗಿರಿ ಶಿಖರದ ಕಪ್ಪುನೈದಿಲೆಯ ಬಾಸಿಗದಂತೆಯೂ ಮಾಣಿಕವೆಂಬ ತಳಿರುಗಳಿಂದ ದಿವ್ಯಾಯುಧಗಳೆಂಬ ಹೂಗೊಂಬೆಗಳಿಂದ ಶೋಭಿಸುವ ಪಾರಿಜಾತದಂತೆಯೂ ಅಡಿ, ಕೈ, ಕಣ್ಣೆಂಬ ತಾವರೆಗಳಿಂದಲೂ ಶ್ರೀ, ಭೂದೇವಿ, ಹಂಸಗಳಿಂದಲೂ ಚೆಲುವುಗೊಂಡ ಅಮೃತ ಸರೋವರದಂತೆಯೂ ಸುವರ್ಣಾಭರಣಗಳ ವರ್ಣಿಕೆಯ ಬೆಳಗಿನಿಂದ ಕಾಮನ ಬಿಲ್ಲನ್ನು, ಲಕ್ಷ್ಮಿಯ ಹೊಸಸೆಳೆಮೈಯಿಂದಾಗಿ ಮಿಂಚುಬಳ್ಳಿಯಿಂದೊಡಗೂಡಿ ಅಮೃತಪಾನಮಾಡಿದ ಕಾರ್ಮೋಡದಂತೆಯೂ ತೋರುವನು ಮತ್ತು ವಸ್ತುವನ್ನು ನೋಡುವಷ್ಟರಲ್ಲಿ ನನ್ನನ್ನು ನನ್ನ ಹೊನ್ನನ್ನು ನನ್ನ ಸಂಪತ್ತನ್ನು ನನ್ನ ಐಸಿರಿಯನ್ನು ನನ್ನ ಅರಮನೆಯನ್ನು ನನ್ನೊಡೆಯನನ್ನು ನನ್ನ ತಾಯಿಯನ್ನು ನನ್ನ ತಂದೆಯನ್ನು ನನ್ನ ಪುಣ್ಯೋದಯವನ್ನು ನನ್ನ ಭಾಗ್ಯದ ಫಲವನ್ನು ನನ್ನ ಇಷ್ಟಾರ್ಥವನ್ನು ನನ್ನ ದೇಹವನ್ನು ನನ್ನ ಪ್ರಾಣವನ್ನು ನನ್ನ ಆತ್ಮವನ್ನು ನನ್ನ ಗುರುವನ್ನು ನನ್ನ ಕುಲದೇವತೆಯನ್ನು ಮೀರಿ ಹಾಯ್ದು ನನ್ನನ್ನು ತೇಲಿಸುತ್ತಲೂ ತೆರೆಗಳಿಂದ ಉಯ್ಯಲಾಡಿಸುತ್ತಲೂ ಪರವಶಗೊಳಿಸುತ್ತದೆ. ಮತ್ತೆ ಮತ್ತೆ ಭಾವಿಸಲು ಸತ್ವಕ್ಕೆ ಸತ್ವವೂ ಆಭರಣಕ್ಕೆ ಆಭರಣವೂ ಪ್ರಾಣಕ್ಕೆ ಪ್ರಾಣವೂ ಚೈತನ್ಯಕ್ಕೆ ಚೈತನ್ಯವೂ ಆತ್ಮಕ್ಕೆ ಆತ್ಮವೂ ಆಗಿರುವನು. ಮತ್ತೆ ! ಒಂದೊಂದವಯವದ ಸೌಂದರ್ಯವನ್ನು ನಿರೀಕ್ಷಿಸುವಲ್ಲಿ ಸಾಸಿವೆಯನ್ನು ಕೊರೆದು ಕಡಲನ್ನು ತುಂಬಲು ಅಡಗದೆ ಹೊರಹೊರಡುವಂತೆ. ಮನದಲ್ಲಿ ಹಿಡಿಸಲಾರದೆ ಹೊರಸೂಸುವ ಆನಂದರಸದ ಪ್ರವಾಹವೆನ್ನುವ ಬಗೆಯಲ್ಲಿ ಸ್ತುತಿಗೈದನು. ಅದು ಹೇಗೆಂದರೆ-

ಸ್ತುತಿ

ಈ ಶ್ರೀಪಾದವಲ್ಲವೆ ಮುನ್ನ ಜಗವನ್ನಳೆಯುವಾಗ ಬ್ರಹ್ಮಮೊದಲಾಗಿ ಹುಳುಗಳವರೆಗೆ ಹಿರಿದು-ಕಿರಿದೆಂಬ ಲೆಕ್ಕವಿಲ್ಲದೆ ಎಲ್ಲರ ಶಿರಗಳಲ್ಲಿ ಅರಳಿದ ಕಮಲದಂತೆ ಶೋಭಿಸಿದುದು ? ಇದರ ಉಂಗುಟದ ಉಗುರುಗೊನೆಯಿಂದ ಬ್ರಹ್ಮಾಂಡದ ಹೊರವಲಯ ಹೊಸನೀರಿನಲ್ಲಿ ಬೆರಸಿ ಬ್ರಹ್ಮನು ತನ್ನ ಕೈಗಿಂಡಿಯ ನೀರಿನಿಂದ ತೊಳೆಯಲು ಆ ತೀರ್ಥದಿಂದಲ್ಲವೆ ಶಿವನು ಶಿವನೆನಿಸಿದನು ? ಇದನ್ನಲ್ಲದೇ ದೇವತೆಗಳು ಮುಡಿಯಲ್ಲೂ ಯೋಗಿಗಳು ಸಹಸ್ರಾರದಲ್ಲೂ ಧರಿಸಿದ ಸಂತಸ ಪಡುವರು ? ಇದರ ಸೋಂಕಿನಿಂದಲ್ಲವೆ ಕಲ್ಲುಬಂಡೆ ಕಣ್ದೆರೆದುದು ? ಸೀದ ಮಾಂಸವು ಶಿಶುವಾದುದು ? ಇದಲ್ಲವೆ ಕರ್ಮಭಕ್ತಿ ಜ್ಞಾನಗಳನ್ನು ಕಡೆಗಣಿಸಿ ತನ್ನನ್ನು ನೆರೆನಂಬಿದವರಿಗೆ ಸಾಕ್ಷಾತ್ತಾಗಿ ಮೋಕ್ಷೋಪಾಯವಾದುದು ? ಇದಲ್ಲದೆ ಸನಕಾದಿ ಮುನಿಗಳ ಹೃದಯದಲ್ಲಿ ಚಂಚಲವಾಗಿಯೂ ನನ್ನಿದಿರು ಈ ಪದ್ಮಪೀಠದಲ್ಲಿ ನೆಲೆಸಿರುವುದರಿಂದ ತನ್ನ ಸುಲಭತೆಯನ್ನು ಪ್ರಕಟಿಸಿದುದು ? ಈ ಕಿರುದೊಡೆಗಳಲ್ಲವೇ ಶ್ರೀ ಮತ್ತು ಭೂದೇವಿಯರ ಕರಕಮಲಗಳಿಂದ ಸೇವಿತವಾದವುಗಳಾದರೂ ಹಸ್ತಿನಾಪುರಿಗೆ ದೌತ್ಯಹೋಗಿ ತನ್ನ ಭಕ್ತಾಧೀನತೆಯನ್ನು ಮೆರೆದುವು. ಈ ದುಂಡುದೊಡೆಗಳಲ್ಲವೆ ನೀಳ ಲೀಲಾದಿಂಬುಗಳಾಗಿಯೂ ಮದು-ಕೈಟಭರೆಂಬ ಕೀಟಗಳನ್ನು ತೊತ್ತಳದುಳಿದು ತನ್ನ ದುಷ್ಟನಿಗ್ರಹಗುಣವನ್ನು ಪ್ರಕಟಿಸಿದವು. ಈ ಬಲಮುರಿ ಹೊಕ್ಕುಳೆಂಬ ಕೊಳವಲ್ಲವೆ ತನ್ನಲ್ಲಿ ಬೆಳೆದ ತಾವರೆಯಿಂದ ಬ್ರಹ್ಮನನ್ನು

ನಿರ್ಮಿಸಿ ಜಗತ್ಕಾರಣತ್ವವನ್ನು ನೆಲೆಗೈದುದು. ಈ ತೆಳುಬಸಿರಲ್ಲವೆ ಹದಿನಾಲ್ಕೂ ಲೋಕಗಳನ್ನೊಳಗೊಂಡೂ ತುಂಬದೆ ಗೋಕುಲದ ಗುಡಿಸಲುಗಳಲ್ಲಿ ಕದ್ದ ಹಾಲು ಮೊಸರು ಬೆಣ್ಣೆಗಳಿಂದಲೂ ಸುಚರಿತನ ಭಿಕ್ಷಾನ್ನದಿಂದಲೂ ತಣಿದು ಭಕ್ತರು ಮುಟ್ಟಿದ ವಸ್ತುವಿನ ಮೇಲಿರುವ ಪ್ರೀತಿಯನ್ನು ಪ್ರಕಟಿಸಿದುದು. ಈ ಹರವಾದ ಎದೆಯಲ್ಲವೆ ಲಕ್ಷ್ಮಿ ಕೌಸ್ತುಭಮಣಿ ತುಳಸೀಮಾಲೆಗಳನ್ನು ಒಂದಿಷ್ಟು ತೊಲಗಿಸಿ ಅವಕಾಶವಿತ್ತು ಭೃಗುಮುನಿಯ ಪಾದದ ಕುರುಹನ್ನು ಅಂಗೀಕರಿಸಿ ತನ್ನ ಸತ್ವಗುಣವನ್ನು ಪ್ರಕಟಿಸಿದ್ದು, ಈ ನಿಡುದೋಳುಗಳಲ್ಲವೆ ದಿವ್ಯರಾಣಿಯರ ಅಪ್ಪುಗೆಯಲ್ಲಿ ಸಹಜವಾಗಿದ್ದರೂ (ಕೂದಲಿನ) ನೆರೆ, (ಮೈಯ) ತೆರೆ (ಕೊರಳು) ಸೆರೆಗಳಿಂದೊಡಗೂಡಿದ ಸುದಾಮನ ದೇಹವನ್ನು ತಕ್ಕೈಸಿ ಹಿಗ್ಗಿ ತನ್ನ ವಾತ್ಸಲ್ಯವನ್ನು ತೋರಿಸಿದ್ದು. ಈ ಸಿರಿಮೊಗವಲ್ಲವೆ ಯೋಗಿಗಳ ಬಗೆಗೆ ಸುಳಿವುದೋರದಿದ್ದೂ ನನ್ನಿದಿರು ಮುಗುಳುನಗೆಯೂ ಶಾಂತನೋಟವೂ ಆಗಿ ತನ್ನ ಸುಶೀಲವನ್ನು ಹೇಳಿದುದು. ಈ ಸಿರಿಮುಡಿಯಲ್ಲವೆ ಉಭಯ ವಿಭೂತಿಯ ಒಡೆತನಕ್ಕೆ ತಕ್ಕ ರತ್ನಕಿರೀಟವನ್ನು ಧರಿಸಿಯೂ ತಿರುಕರಾದ ಹಾರುವರ ಅಡಿಗಳಿಗೆರಗಿ ತನ್ನ ಸ್ವಾತಂತ್ರ್ಯವನ್ನು ತೋರಿದ್ದು ಎಂದು ಹೀಗೆ ದಿವ್ಯಾಯವಗಳ ಚರಿತ್ರೆಯನ್ನು ನಿರೂಪಿಸಿ ಸೌಂದರ್ಯವನ್ನು ಹೃದಯದಲ್ಲಿ ಬಂಧಿಸಿ ಬಣ್ಣಿಸಿದನು. ಅದೆಂತೆಂದರೆ-

ಚೆಲುವರಾಯನ ಸೌಂದರ್ಯ

ಮುಖಕಮಲದ ಕಳೆಯಿಂದಲೋ ಮುಂಗುರುಳುಗಳ ಕತ್ತಲೆಯ ದ್ವೇಷದಿಂದಲೋ ತನ್ನ ಹುಟ್ಟುತಾಣವೆನಿಸುವ ವಿಷ್ಣುನಯನದ ಮೇಲಿನ ಪ್ರೇಮದಿಂದಲೋ ಏತರಿಂದಾದರೇನು? ಸೂರ್ಯನು ಹುಟ್ಟಿ ಬಂದಿರುವುದೇ ದಿಟ ; ಆದರೂ ಕಿರೀಟ ರತ್ನಗಳು ಕೀರ್ತಿ ಪಡೆದವು! ಹಣೆಪಟ್ಟದ ರತ್ನಕಾಂತಿಗೆ ಅಳುಕಿ ಕೆಳಗೆ ನಡೆದು ಅಲ್ಲಿ ಎಳನಗೆಯ ಬೆಳ್ದಿಂಗಳು ಬೆನ್ನಟ್ಟಲು ಮೇಲಕ್ಕೆ ಹಾಯ್ದು ಸುಳಿಗೊಂಡು ಶ್ರೀಮೃತ್ತಿಕೆಯ ಬೆಳಗಿನ ಅಬ್ಬರಕ್ಕೆ ಇಬ್ಬಗಿಯಾಗಿ ಇಕ್ಕೆಲಕ್ಕೆ ಸರಿಯುತ್ತ ಅಲ್ಲಿಯೂ ಕೈಗಳಿಂದ ನೆಗಹಿದ ಶಂಖ ಚಕ್ರಗಳೆಂಬ ಚಂದ್ರಸೂರ್ಯರನ್ನು ಕಂಡು ಕಾತರಿಸಿ ಕುರುಳಗಳ ಕತ್ತಲೆ ನುಣುಪು ಹಣೆಯನ್ನು ಆವರಿಸಿ ಕ್ಷೇಮದಿಂದಿರುವುದು. ಆದರೂ ಮುಖವೆಂಬ ಚಂದ್ರನು ಯಶಹೊಂದಿದನು. ದೇಹದ ಅತಿಶಯ ಕಾಂತಿಯೆಂಬ ಪನ್ನೀರ ಪ್ರವಾಹವೂ ಸಿರಿದೋಳ್ಗಳೆಂಬ ಹೆದ್ದೆರೆಗಳೂ ಕೊರಳಲ್ಲಿ ಧರಿಸಿದ ಮುತ್ತಿನ ಕಂಠಹಾರದ ನೆವದಿಂದ ಹರಿದು ಬರುವ ಆಕಾಶಗಂಗೆಯೂ ಕೆಂಪು ಆಭರಣದ ಕಿರಣಗಳೆಂಬ ಹವಳದ ಕುಡಿಗಳೂ ಕೊರಳೆಂಬ ಶಂಖವೂ ಆಗಿ ತೋರುವ ಹರವಾದ ಎದೆಯನ್ನು ಸಾಗರವೆಂದು ಭಾವಿಸಿ ಕೌಸ್ತುಭವೂ ಲಕ್ಷ್ಮಿಯೂ ನೆಲಸಿರುವರು. ಆದರೂ ಮನದಲ್ಲುಂಟಾದ ಚಂದ್ರನ ಸೋದರ ಸ್ನೇಹವು ಪ್ರಸಿದ್ಧವಾಯಿತು. ಒಳತುಂಬಿದ ಮೂರೂ ಲೋಕಗಳ ಭಾರದಿಂದ ಸರಿಯದಂತೆ ಹೊಟ್ಟೆಯ ಮೇಲಿನ ರತ್ನದ ಕಟ್ಟು ಕಟ್ಟಿದೆ ! ಆದರೂ ಬೆಣ್ಣೆ ಕಳುವಿನ ಕಾಲದಲ್ಲಿ ಗೋಪಿಕಟ್ಟಿದ ಕಡೆಹಗ್ಗವು ಪ್ರಸಿದ್ಧವಾಗಿದೆ. ಎದೆಯಲ್ಲಿರುವ ರಾಣಿಯ ಮೈಕಾಂತಿಯಿಂದಲೇ ಹೊದ್ದ ದುಕೂಲವು ಹೊಂಬಣ್ಣವಾಯಿತು. ಆದರೂ ಪೀತಾಂಬರವು

ಹಿರಿಮೆ ಹೊಂದಿತು! ಉಡೆನೂಲ ಮಾಣಿಕಗಳ ಕಾಂತಿಯಿಂದಲೇ ತೊಡೆಗಳು ಕೆಂಪೇರಿದವು. ಆದರೂ ಮುನ್ನ ಹತ್ತಿದ ಮಧುಕೈಟಭರ ನೆತ್ತರು ನೆವವಾಯಿತು. ಗತಿಹೀನರಿಗೆ ಗತಿಯೆನಿಸುವ ದಿವ್ಯಪದಾಂಬುಜಗಳ ಸೋಂಕಿನಿಂದಲೇ ಕಿರುದೊಡೆಗಳು ರೋಮಾಂಚನಗೊಂಡವು. ಆದರೂ ಪಾದಪೀಠದಲ್ಲಿರುವ ಭೂಕಾಂತೆಯ ಮೈಸೋಂಕು ಮಹಿಮೆ ಪಡೆಯಿತು ! ಮತ್ತು ಪಾದಗಳೆಂಬ ಕಲ್ಪವೃಕ್ಷಗಳ ಬೆರಳುಗೊನೆಗಳು ಹೂವಿನ ಟೊಂಗೆಗಳೆಂಬ ನೆನಪನ್ನುಂಟು ಮಾಡುತ್ತ ಸಕಲ ಜಗತ್ತನ್ನು ಒಂದೇ ಕಾಲಕ್ಕೆ ಪಾವನಗೊಳಿಸುವ ತವಕದಲ್ಲಿ ಹತ್ತುದೇಹ ಧರಿಸಿ ಹರಿಯುವ ಉಗುರು ಕಾಂತಿಯೆಂಬ ಗಂಗಾಪ್ರವಾಹದಲ್ಲಿ ಮಿಂದು ನನ್ನ ದೋಷಗಳನ್ನು ಕಳೆಯುವೆನು. ಪರಿಮಳಕ್ಕೆ ಆಶಿಸಿ ಕಾಲನೆಡೆಯಲ್ಲಿ, ಸುತ್ತಿಮುತ್ತಿದ ತುಂಬಿಗಳಿಂದೊಪ್ಪುವ ಸಹಸ್ರನಾಮ ಪೂಜೆಯ ತಾವರೆಗಳಲ್ಲಿ ಸರೋವರ ನೀಲವರ್ಣದ ಪೆಂಡೆಯಗಳನ್ನು ಧರಿಸಿದ ಸಿರಿಯಡಿಗಳನ್ನು ಹುಡುಕಿ ಗುರುತು ಕಂಡು ನಮಸ್ಕರಿಸಿ ಕೃತಾರ್ಥನಾಗುವೆನು. ಭೂಕಾಂತೆಯ ಕೈಸೋಂಕಿನಿಂದ ರೋಮಾಂಚನಗೊಂಡಿರುವುದರಿಂದ ಅಡಿದಾವರೆಯ ದೊಡ್ಡದಂಟೆನಿಸುವ ಕಿರುದೊಡೆಗಳನ್ನು ಕಂಡು ನನ್ನಭವಮಾರ್ಗದ ಬೆಳವಣಿಗೆಯನ್ನು ಕಂಡು ನನ್ನ ಭವಮಾರ್ಗದ ಬೆಳವಣಿಗೆಯನ್ನು ಕಳೆಯುವೆನು. ಒಂದಡಿಯ ಸ್ಪರ್ಶದಿಂದ ಪ್ರಸಿದ್ಧವಾದ ಗಂಗೆಯನ್ನು ಕೀಳುಗೊಳಿಸಲೆಂದು ಎರಡು ಭಾಗಗೊಂಡ ಪಾದಗಳಿಗೆ ತಾಗುವ ಯಮುನೆಯಂತಿರುವ (ದೊಡ್ಡ) ತೊಡೆಗಳನ್ನು ಶರಣುಹೋಗಿ ನನ್ನ ಮನದ ಬಡತನವನ್ನು ಪರಿಹರಿಸುವೆನು. (ಹೊಟ್ಟೆಯ ಮೇಲಿನ) ಮಡಿಕೆಗಳೆಂಬ ತೆರೆಗಳೂ ನಾಭಿಯೆಂಬ ಸುಳಿಯೂ ಆಗಿ ಹೊಮ್ಮುವ ಶರೀರಕಾಂತಿಯ ಪ್ರಭಾವದಲ್ಲಿ ಮುಳುಗಿ ನನ್ನ ತಾಪತ್ರಯವನ್ನು ತಡೆಯುವೆನು. ಹೊದ್ದ ದುಕೂಲದ ತೆರೆಗಳೂ ಮುತ್ತಿನ ಸರಗಳೆಂಬ ನೊರೆಗಳೂ ಹೊಮ್ಮಿದ ಕೌಸ್ತುಭವೂ ಲಕ್ಷ್ಮಿಯೂ ಉಂಟಾಗಿರುವುದರಿಂದ ಕಡಲದಂಡೆಯನ್ನು ಹೋಲುವ ಹರವಾದ ಎದೆಯಲ್ಲಿ ನೆಲಸಿ ದೇವತ್ವವನ್ನು ಪಡೆದು ನನ್ನ ಕಣ್ಣುಗಳಿಂದ ಅಮೃತವುಂಡು ತಣಿಯುವೆನು.

ಬಿಳಿಯ ನಾಮದ ನೆವದಿಂದ ನೆಗೆದ ಕೇದಗೆಯ ಗೊನೆಯೆಸಳುಗಳೂ ದೀರ್ಘ ನಯನವೆಂಬ ಕಮಲಗಳೂ ನಾಸಿಕವೆಂಬ ಸಂಪಿಗೆಯೂ ಬಾಯ್ದೆರೆಯೆಂಬ ದಾಸವಾಳವೂ ಹಲ್ಲೆಂಬ ಮೊಲ್ಲೆಗಳೂ ಒಪ್ಪಿರಲು ಲಕ್ಷ್ಮಿಯು ಕೈಯಲ್ಲಿ ಹಿಡಿದಾಡಲೆಂದು ಕೊರಳೆಂಬ ತೊಟ್ಟಿನಲ್ಲಿ ಕಟ್ಟಿದ ಹೊಸಬಗೆಯ ಹೂಚಂಡನ್ನು ಹೋಲುವ ಮುಖದ ಸುಗಂಧವನ್ನು ಆಘ್ರಾಣಿಸಿ ಮನದ ಜಾಡ್ಯವನ್ನು ತೊಲಗಿಸುವೆನು. ಮತ್ತೆ ! ಹೊಸ ಹೊಸ ಕಾಂತಿಗಳಿಂದ ಮಿರುಗುವ ಮುಕುಟವೂ ಹೊಳೆಯುವ ಹಣೆಯೂ ಚಂದ್ರಲೇಖೆಯಂಥ ನಾಮವೂ ನಿಮಿರಿದ ಹುಬ್ಬೂ ನೀಳಕಣ್ಣೂ ಹಿರಿಮೆಹೊಂದಿದ ಮೂಗೆಂಬ ಸಂಪಿಗೆಯೂ ತೊಳಗುವ ಕಪೋಲವೂ ತೊಂಡೆಹಣ್ಣಿನಂಥ ಬಾಯ್ದೆರೆಯೂ ಮುದ್ದುನಗೆಯ ಮೊನೆಹಲ್ಲೂ ಒಳ್ಳೆಯ ಕಿವಿಯೂ ತೂಗುವ ಕುಂಡಲವೂ ದುಂಡುಗೊರಳೂ ದೊಡ್ಡ ಹೆಗಲೂ ಒಪ್ಪಿದ ತೋಳೂ ತಾವರೆಗೈಯು ಬಲಮುರಿ ಶಂಖವೂ ಚಕ್ರಾಯುಧವೂ ಹರವಾದ ಎದೆಯೂ ಕಂಠಹಾರಗಳೂ ಕೌಸ್ತುಭಮಣಿಯೂ ಶ್ರೀವತ್ಸ ಗುರುತೂ ಲಕ್ಷ್ಮಿಯೂ ಹೊಸ ತುಳಸಿ ಮಾಲೆಯೂ ಹೊನ್ನುಡುಗೆಯೂ ಶುಭ್ರ ಜನ್ನದಾರವೂ ರತ್ನಾಭರಣಗಳೂ ರಂಜಿಸುವ ಹೊಟ್ಟೆಯ ಕಟ್ಟೂ

ತೆಳುವಾದ ಹೊಟ್ಟೆಯೂ ತ್ರಿವಳಿಯೂ ಬಡನಡುವೂ ಬಣ್ಣದುಡುಗೆಯೂ ಹೊನ್ನ ಉಡೆನೂಲೂ ಮಿರುಗುವ ಕಾಂಚೀದಾಮವೂ ಬಲವಾದ ತೊಡೆಗಳೂ ಬಟ್ಟ ಮೊಳಕಾಲುಗಳೂ ಆದ ದಿವ್ಯಮಂಗಳ ವಿಗ್ರಹವನ್ನು ನೋಡಿ ತಣಿಯದೆ ಕಟ್ಟಾಸೆಯಿಂದ ವಶಪಡಿಸಿಕೊಳ್ಳಲೆಂದು ಕಣ್ಣಬಾಗಿಲಿಂದ ಒಳಹೊಗಿಸಿ ಮನಮಂದಿರದಲ್ಲಿರಿಸ ಭಾವಿಸುವಲ್ಲಿ ಕನಸಿನಂತೆಯೂ ಯೋಗ ಸಾಕ್ಷಾತ್ಕಾರದಂತೆಯೂ ಅದಲ್ಲದೆ ಪ್ರತ್ಯಕ್ಷವಾಗಿ ಮುದ್ದುಮುಖವೂ ಮುಗುಳುನಗೆಯೂ ಒಲುಮೆಯ ನೋಟವು ಒಳ್ಳೆಯ ಮಾತು ಆಗಿ ನೆಲೆನಿಂತು-"ಎಲೆ ಅರಸ ! ನಿನ್ನ ಭಕ್ತಿಗೆ ಮೆಚ್ಚಿ ದಶರಥನಂತೆಯೂ ವಸುದೇವನಂತೆಯೂ ನಿನ್ನನ್ನು ತಂದೆಯೆಂದು ಬಗೆದು ನಿನ್ನ ಎದೆಯಲ್ಲಿ ನೆಲಸಿದೆನು. ನಿನಗೆ ಔರಸಪುತ್ರನಾಗಿ ಜನಿಸುವೆನು. ನೀನೂ ಅಂಜದೆ ಆಶ್ಚರ್ಯಪಡದೆ ನನ್ನನ್ನೂ ನನ್ನ ವಾತ್ಸಲ್ಯವನ್ನೂ ನೆನೆದು ಕ್ಷೇಮಗೊಂಡು ನಿನ್ನ ಒಳ್ಳೆಯ ಗೆಳಯ ಅಳಹಿಯ ಸಿಂಗರಾರ್ಯರಿಗೂ ನಿನ್ನ ಮನದನ್ನೇ ಅಮೃತಾಂಬೆಗೂ ಅಲ್ಲದೆ ಬೇರೆಯವರಿಗೆ ತಿಳಿಸದೆ ಮೌನದಲ್ಲಿರಬೇಕು. ನಾನೂ ನಿನ್ನರಮನೆಯ ಕೃಷ್ಣಾವತಾರದ ಚಾತುರ್ಯವನ್ನು ಒಂದಗೂಡಿಸಿ ಒಪ್ಪುಗೊಳಿಸಿ ಹಲವು ದಿವ್ಯಾದ್ಭುತ ಕೃತಿಗಳನ್ನೆಸಗಿ ದುಷ್ಟರೆಲ್ಲರನ್ನೂ ಮೆಟ್ಟಿ ಶಿಷ್ಟರನ್ನು ನೆಲೆಗೊಳಿಸಿ ಸಾತ್ವಿಕಧರ್ಮಗಳನ್ನು ಸ್ಥಾಪಿಸುವೆನು. ಕಲಿದೋಷವನ್ನು ಕಳೆದು ಕೃತಯುಗದಲ್ಲಿಯಂತೆ ಸಕಲವರ್ಣಾಶ್ರಮ ಧರ್ಮಗಳನ್ನು ಸಂಗತಿಗೊಳಿಸುವೆನು" ಎಂದು ಹೇಳಿದನು. ಅರಸನು 'ಹಸಾದ'ವೆಂದು ಆಜ್ಞೆಯನ್ನು ಶಿರದಲ್ಲಿ ಧರಿಸಿ ಕಣ್ದೆರೆದನು. ಅರ್ಚಕರು ಕೊರಳಿಗೆ ದುಂಡು ಮಲ್ಲಿಗೆ ದಂಡೆಯನ್ನು ತಲೆ ಎದೆ ಭುಜಗಳಿಗೆ ಶಠಗೋಪವನ್ನು, ಕೈಗೆ ತೀರ್ಥವನ್ನು ಬಳಿಕ ಅಭಯಹಸ್ತವನ್ನು ಕೊಡಲು ಅಂಗೀಕರಿಸಿ ಧನ್ಯತೆ ಹೊಂದಿ ಅಲ್ಲಿಂದ ಹೊರಬಂದು ಚೆಲುವರಾಯನ ಸನ್ನಿಧಿಯಲ್ಲಿ ನಿಂತು ಕೈಮುಗಿದು ವಿಚಾರಿಸಿದನು :

ಚೆಲುವರಾಯನನ್ನು ದರ್ಶನಮಾಡಿ ಎಣಿಸಿದ ಪ್ರಕಾರ

ಶ್ರೀಮನ್ನಾರಾಯಣನು ತನ್ನ ಸನ್ನಿಧಿಗೆ ಬಂದು ನಮಸ್ಕರಿಸುವುದಕ್ಕೆ ಸಮರ್ಥರಾಗದ ಮುದುಕರೂ ಮಕ್ಕಳೂ ಹೆಳವರೂ ಬೇನೆಯವರೂ ದರ್ಶನಮಾಡಿ ಬದುಕಲೆಂದು ಉತ್ಸವದಲ್ಲಿ ಬೀದಿಯಲ್ಲಿ ಬಲಬರುವುದಕ್ಕೆ ಧರಿಸಿದ ಹೊಸರೂಪವಿದಷ್ಟೆ ? ದೀರ್ಘ ಮುಕುಟವೂ ಹೊಳೆಯುವ ಕಸ್ತೂರಿತಿಲಕವೂ ಕೊಂಕಿದ ಹುಬ್ಬೂ ಬೊಗಸೆಗಣ್ಣೂ ಅರೆಬಿರಿದ ಸಂಪಿಗೆಯ ಮೊಗ್ಗನ್ನು ಹಳಿಯುವ ಮೂಗೂ ಎಳನಗೆಯೂ ಕೆಂಪಾದ ಬಾಯ್ದೆರೆಯೂ ಗೆರೆಯ ಕೊರಳೂ ಒಯ್ಯಾರದಿಂದ ಊರಿದ ಗದೆಯೂ ನಸು ಮುಂದೆ ಮಾಡಿದ ಅಭಯ ಹಸ್ತವೂ ಬಡನಡುವಿನಲ್ಲಿ ಕಟ್ಟಿದ ಹೊಂಬಟ್ಟೆಯ ದಟ್ಟಿಯೂ ಕಮಲಪೀಠದಲ್ಲಿ ನೆಲಸಿದ ಪಾದಕಮಲವೂ ಆದ ನೆಲೆಯನ್ನು ನಿಟ್ಟಿಸಲು ಇಕ್ಕೆಲದಲ್ಲಿ ಭುಜ ಸೋಂಕಲು ನಿಂತಿರುವ ರಾಣಿಯರನ್ನೊಡಗೂಡಿ ಕುಣಿಯುತ್ತ (?) ಬಯಸಿದಂತೆಯೂ ನಗುತ್ತ ನುಡಿಸುತ್ತ ಬಂದ ನನ್ನ ಜೊತೆಗೆ ಬೆರೆತಂತೆಯೂ ಒಳಪ್ರವೇಶಿಸುವಂತೆಯೂ ತೋರುತ್ತಿದೆ ಮತ್ತು ಕಿರೀಟದಲ್ಲಿ ಒಡೆತನವೂ ನೋಟದಲ್ಲಿ ಕಾರುಣ್ಯವೂ ನಸುನಗೆಯಲ್ಲಿ ವಾತ್ಸಲ್ಯವೂ ಕೈಗಳಲ್ಲಿ ಅಭಯಪ್ರದಾನವೂ ಎದೆಯಲ್ಲಿ ಐಸಿರಿಯೂ ಹೊಟ್ಟೆಯ ಕಟ್ಟಿನಲ್ಲಿ ಸೌಲಭ್ಯವೂ ಹೊಕ್ಕುಳಲ್ಲಿ

ಲೋಕ ನಿರ್ಮಾಣ ಕಾರಣವೂ ಶ್ರೀಪಾದಗಳಲ್ಲಿ ಉಪಾಯವೂ ಇಕ್ಕೆಲದ ರಾಣಿಯರಲ್ಲಿ ಪುರುಷಕಾರತ್ವವೂ ಪ್ರತ್ಯಕ್ಷವಾಗಿ ತೋರುತ್ತಿದೆ ಮತ್ತು ಈ ವಸ್ತು ನಿಟ್ಟಿಸಿದೊಡನೆ ಕಣ್ಮನಗಳನ್ನು ಸೆಳೆದುಕೊಳ್ಳುತ್ತಿದೆ. ದೇವತೆಗಳು ಕುಡಿಯುವ ಅಮೃತದಂತೆ ಬೆಡಗುತೋರದೆ ಎಲ್ಲ ಸಮಯದಲ್ಲೂ ಎಡಬಿಡದೆ ಸವಿದರೂ ತೃಪ್ತಿಯೀಯದೆ ಸವಿಯೇರುತ್ತಿದೆ. ಈ ವಸ್ತುವನ್ನು ನೋಡುವ ನನ್ನ ಕಣ್ಣುಗಳು ಹಲವಾಗಲಿ, ಧ್ಯಾನಿಸುವ ಮನಸ್ಸೂ ಬೃಹತ್ತಾಗಲಿ ಸೇವೆ ಸಲ್ಲಿಸುವ ದೇಹವು ಎರಡೂ ನೂರು ಸಾವಿರವೂ ಆಗಲಿ ; ಆದರೂ ತಣಿವುದೋರುವುದು ಅಸಾಧ್ಯ. ಒಂದೊಂದು ಅವಯುವದ ಸೌಂದರ್ಯವೇ ಮೂಲೋಕವನ್ನು ಬೆಲೆಗಟ್ಟಿಕೊಳ್ಳಬಯಸುತ್ತಿದೆ. (ಹೀಗಿರುವಲ್ಲಿ) ಎಲ್ಲಾ ಅವಯವಗಳ ಸೌಂದರ್ಯವನ್ನು ತಿಳಿಯಲು ನಾನೆಷ್ಟರವನು ? ಆದರೂ ಕಿರು ಕೊಳಗು ಬಳ್ಳದಲ್ಲಿ ಅಡಕಗೊಳಿಸಬಲ್ಲ ಅಘಟಿತಘಟನಾ ಸಮರ್ಥನಾದ ಜಗದೊಡೆಯನೇ ಸರ್ವಸ್ವವನ್ನೂ ನಿರ್ವಹಿಸಲಿ. ತನ್ನನ್ನು ನಂಬಿದವರ (ಅಜ್ಞಾನವೆಂಬ) ಕತ್ತಲನ್ನು ತಗ್ಗಿಸಿ ಸತ್ವವನ್ನು ಹೆಚ್ಚಿಸಿ ಬುದ್ಧಿಯನ್ನು ಪ್ರಬುದ್ಧಗೊಳಿಸಿ ಹಿರಿಯರೊಡನೆ ಜತೆಗೊಳಿಸಿ ಶ್ರೇಷ್ಠ ಆಚಾರ್ಯನಲ್ಲಿ ಹೊಂದಿಸಿ ಮುಕ್ತಿಯವರೆಗೂ ಮಾಡಬೇಕಾದ ಉಪಕಾರಗಳನ್ನು ಮಾಡಿ ಸಲಹುವನು. ತಾನೂ ಒಡೆಯನೂ ನಾನು (ಅವನ) ಒಡವೆಯೂ ಎಂಬುದನ್ನು ಅರಿಯದಿದ್ದರೂ ಅನಾದಿ ಕಾಲದಿಂದ ಈವರೆಗೆ ನನ್ನನ್ನುಳಿಸಿ ಈ ಜನ್ಮದಲ್ಲಿ ಯದುವಂಶದಲ್ಲಿ ತನ್ನ ಭಕ್ತರೆಂದು ಪ್ರಸಿದ್ಧರಾದ ಮೈಸೂರರಸದಲ್ಲಿ ರಾಜರ್ಷಿಯೆನಿಸಿದ ದೇವರಾಜರಸನ ಬಸಿರಲ್ಲಿ ಹುಟ್ಟಿಸಿ ಆಚಾರ್ಯ ಶ್ರೇಷ್ಠರೆನಿಸಿದ ರಾಮಾನುಜರ ಅಡಿಗಳನ್ನು ಸೇರಿಸಿ ತನ್ನವನೆಂದು ಅಭಿಮಾನ ಪಟ್ಟನು. ಇನ್ನು ಮೇಲೆ ನನ್ನನ್ನು ಸಲಹುವುದು ಅಚ್ಚರಿಯಲ್ಲ ; ಆದರೂ ನನ್ನ ಚಾಪಲ್ಯದಿಂದ ಬಿನ್ನವಿಸುವೆನು. ನನ್ನಲ್ಲಿ ತಪ್ಪು ಎಷ್ಟಿದ್ದರೂ ಅಷ್ಟನ್ನೂ ಸೈರಿಸಿ ದಯೆಯಿಂದ ನನ್ನನ್ನು ಸಲಹುವನು' ಎಂದು ವಂದಿಸಿ ತೀರ್ಥ ಪ್ರಸಾದಗಳನ್ನು ಸ್ವೀಕರಿಸಿ ಹೊರಗಡೆ ಬಂದು ಹಲವು ವಾದ್ಯ ಘೋಷಗಳನ್ನೂ ಉಗ್ಗಡಿಸುವ ಕೈವಾರಿಗಳ ದನಿಯನ್ನೂ ತಮ್ಮತಮ್ಮ ಮನೆಗಳ ಬಾಗಿಲಲ್ಲಿ ನಿಂತು ಹರಸುವ ಪತಿವ್ರತೆಯರ ಹರಕೆ ದನಿಯನ್ನೂ ಕೇಳುತ್ತ ಸಂತಸದಿಂದ ಅರಮನೆಯನ್ನು ಹೊಕ್ಕನು. ಒಳಬಾಗಿಲಲ್ಲಿ ನಿಂತು ಅಲ್ಲಿ ಸಾಮಂತರಾಜರನ್ನು, ಪುರೋಹಿತ ಮಂತ್ರಿ ಸೇನಾಪತಿ ಸೇವಕ ಸಮೂಹವನ್ನು ಕಳುಹಿಸಿ ಅಳಹಿಯ ಸಿಂಗರಾರ್ಯರೊಡನೆ ಒಳಚೌಕಿಯ ಹೊನ್ನಜಗುಲಿಯಲ್ಲಿ ಕುಳಿತನು.

ಅರಸನ ಮನಸ್ಸಿನ ಗೆಲುವನ್ನೂ ಕಳಕಳಿಸುವ ಮೊಗಸಿರಿಯನ್ನೂ ಕಂಡು ಅಳಹಿಯ ಸಿಂಗರಾರ್ಯನು ಹೀಗೆ ನುಡಿದನು :-

'ದೇವ ! ಚಿತ್ತೈಸಬೇಕು. ಈಗ ದೇವರನ್ನು ನೋಡಿದರೆ ದೇವಲೋಕದಿಂದ ಇಳಿತಂದಂತೆಯೂ ಬಯಸಿದ ವರವನ್ನು ಪಡೆದಂತೆಯೂ ಅಮೃತ ಕುಡಿದಂತೆಯೂ ದಿವ್ಯ ಶಕ್ತಿಯಿಂದೊಡಗೂಡಿದಂತೆಯೂ ದೇವತೆಯನ್ನು ವಶಪಡಿಸಿಕೊಂಡಂತೆಯೂ ಸಾಕ್ಷಾತ್ ದೇವತೆಯಂತೆಯೂ ತೋರುತ್ತಿದೆ. ಇದಕ್ಕೆ ಕಾರಣ ಚಿಕ್ಕದಾಗಿರದು. ಎಂಥ ಸಂತಸದಲ್ಲೂ

ಆತುರಪಡದೆ ಕಡಲಿನ ಮಡುವಿನಂತಿರುವ ದೇವರ ಚಿತ್ತದಲ್ಲಿ ಹೊಮ್ಮುವ ಸಂತೋಷದ ತರಂಗಗಳು ಮುಖಕಾಂತಿಯಲ್ಲಿ ಪ್ರತಿಫಲಿಸುತ್ತಿವೆ. ಇದನ್ನು ತಿಳಿಸಬೇಕು' ಎಂದನು.

ಕೇಳುವ ಈ ಕಾರ್ಯದ ಹಿರಿಮೆಯನ್ನು ಗಮನಕ್ಕೆ ತಂದು ಸುತ್ತುವರಿದ ಸೇವಕರು ಹಿಂದೆಗೆದು ದೂರದಲ್ಲಿ ನಿಶ್ಶಬ್ದವಾಗಿ ನಿಲ್ಲಲು ರಾಯನು ಇವನನ್ನು ಸಮೀಪ ಬರಿಸಿ ಕಿವಿಯಲ್ಲಿ ಆ ವೃತ್ತಾಂತವೆಲ್ಲವನ್ನೂ ಹೇಳಿದನು. ಇವನೂ ಕಿವಿಯ ಮಾರ್ಗವಾಗಿ ಹೊಕ್ಕು ಮನದ ಕೊಳವನ್ನು ತುಂಬಿದ ಸಂತಸದ ಹೊನಲನ್ನು ಕೋಡಿಗೊಳಿಸುವಂತೆ ನಲ್ಮಾತುಗಳನ್ನಾಡಿದನು. ಅದು ಹೇಗೆಂದರೆ-"ಇಂದಲ್ಲವೆ ಜಗತ್ತು ಸನಾಥವಾಯಿತು. ಯದುಕುಲವು ಏಳಿಗೆ ಹೊಂದಿತು. ಸಂಸಾರವು ಸಾರವೆನಿಸಿತು. ರಾಜಧರ್ಮ ಹಿರಿಮೆ ಹೊಂದಿತು. ಕನ್ನಡನಾಡು ಉನ್ನತಿ ಪಡೆಯಿತು. ಪ್ರಜೆಗಳ ಸೌಖ್ಯವು ಪ್ರಬಲವಾಯಿತು. ದೇವರ ಏಳಿಗೆ ದಿಟವಾಯಿತು. ಹಾರುವರ ಆಸೆ ಹಣ್ಣುಬಿಟ್ಟಿತು. ತನ್ನ ಇಷ್ಟಾರ್ಥವು ಈಡೇರಿತು" ಎಂದು ನುಡಿದು ಹರಸಿ ಮನೆಗೆ ಹೋದನು.

ಅರಸನೂ ಅರಮನೆಗೆ ಹೋಗಿ ಅಲ್ಲಿ ಎದುರುಗೊಂಡು ರಾಣಿಯ ಕೈಹಿಡಿತದಿಂದ ಶ್ಯಯಾಗೃಹ ಸೇರಿ ಹೊನ್ನಮಂಚದಲ್ಲಿ ಕುಳಿತು ನಗುತ್ತ "ಎಲೆ ಅರಿಸಿ, ನಿನಗೊಂದು ಸಂತಸದ ಸಂಗತಿ ಹೇಳುವೆನು. ನನಗೆ ಕೊಡುವ ಕಾಣಿಕೆ ಯಾವುದು?" ಎಂದನು. ರಾಣಿಯೂ ಒಡನೆ ನಿಟ್ಟಿಸಿ ಬಾಗಿದ ನೋಟವೂ ನಸುಬಾಗಿದ ಸಿರವೂ ಮೂಡುವ ನಗೆಯೂ ತೋರುವ ವಿನಯವೂ ಆಗಿ ಬಿನ್ನವಿಸಿದಳು : ರಾಯ ಚಿತ್ತೈಸಬೇಕು. ನಾನೂ ದೇವರೊಡವೆಯಾದುದರಿಂದ ದೇವರ ಒಡೆತನದಲ್ಲಿಯೆ ಅಡಕಗೊಂಡುದಲ್ಲದೆ ನನಗೇ ಎಂದು ಬೇರೊಂದು ಒಡವೆಯೂ, ಬೇರೊಂದು ಒಡೆತನವೂ ಇಲ್ಲದ್ದರಿಂದ ನಾನು ಕೊಡುವುದು ಎತ್ತಣದು ? ದೇವರು ನಿರೂಪಿಸಿದುದನ್ನು ಕೇಳಿ ನನ್ನ ಮನದಲ್ಲಿ ಹೊಮ್ಮಿದ ಸಂತಸದಿಂದ ದೇವರ ಸಂತಸವನ್ನು ಇಮ್ಮಡಿಗೊಳಿಸುವೆನು" ಎಂದಳು. ವಿನೋದಕ್ಕೂ ವಿನಯಕ್ಕೂ ಬಿನ್ನಾಣಕ್ಕೂ ತಕ್ಕುದಾದ ಆ ನುಡಿಯನ್ನು ಕೇಳಿ ಹಿಗ್ಗಿ ಹೇಳಿದನು "ಎಲೆ ರಾಣಿ ! ಶ್ರೀಮನ್ನಾರಾಯಣನ ಕೃಪೆಗೆ ನೆವವೂ ಮೇರೆಯೂ ಇಲ್ಲದಿರುವುದರಿಂದಲೂ ನಮ್ಮ ಯದುಕುಲದಲ್ಲಿ ಅತಿಶಯವಾದ ಪ್ರೀತಿಯಿಂದಲೂ ರಾಜರಸ, ದೇವರಾಜರಸರ ಭಕ್ತಿಯ ಹೆಚ್ಚಳದಿಂದಲೂ ನಮ್ಮ ಭಾಗ್ಯೋದಯದಿಂದಲೂ ಮುನ್ನ ಪ್ರಶ್ನಿ-ಸುತಪರಲ್ಲೂ ಅದಿತಿ-ಕಶ್ಯಪರಲ್ಲೂ ದೇವಕಿ-ವಸುದೇವರಲ್ಲೂ ಉದಿಸಿದಂತೆ ನಮ್ಮ ಬಸಿರಲ್ಲಿ ಬಂದು ಲೋಕವನ್ನು ಸಲಹುವೆನೆಂದು ತನ್ನ ಅರ್ಚಾವತಾರ ಮರ್ಯಾದೆಯನ್ನು ಮೀರಿ ಶ್ರೀಮುಖ ತೆರೆದು ನಿರೂಪಿಸಿ ನನ್ನ ಹೃದಯದಲ್ಲಿ ಬಂದು ನೆಲಸಿದನು" ಎಂದನು. ರಾಣಿಯೂ ರೋಮಾಂಚನಗೊಂಡು ಆನಂದಾಶ್ರು ಸುರಿಸಿ ಕೊರಳ ಸೆರೆಗಳಿಂದ ಬಿಕ್ಕುತ್ತ ಬಿನ್ನವಿಸಿದಳು: "ಜಗದೀಶ್ವರನು ಸರ್ವತಂತ್ರ ಸ್ವತಂತ್ರನಾದುದರಿಂದ ಹೇಗೆ ವರ್ತಿಸಿದರೂ ಅಡ್ಡಿಪಡಿಸುವವರಾರು ? ಕಿರಿದನ್ನು ಹಿರಿದುಗೊಳಿಸಿದರೆ ಬೇಡವೆಂದು ತಡೆಯುವವರಾರು ? ತಮ್ಮಲ್ಲಿ ತಮಗೆ ವ್ಯತ್ಯಾಸವಿದ್ದಾಗಲೂ ಸೂರ್ಯ ಮೂಡಿದೊಡನೆ ಚಂದ್ರನೂ ಬೆಳ್ಳುಗಿಲೂ ಒಂದೇ ಎನಿಸುವಂತೆ ಅವನ

ಮಹಿಮೆಯನ್ನು ವಿಚಾರಿಸಲು ಹುಳುವೂ ಬ್ರಹ್ಮನೂ ಒಂದೇ ತೆರನಲ್ಲವೆ ? ಆ ಸ್ವಾಮಿಯ ಕೃಪೆಯಿಂದ ನಮ್ಮ ಜನ್ಮ ಸಫಲವಾಯಿತು" ಎಂದು ಇಬ್ಬರೂ ಈ ಬಗೆಯ ಸಂತಸದ ಮಾತುಗಳನ್ನಾಡುತ್ತ ರಾತ್ರಿಯನ್ನು ಕಳೆದರು.

ಹೊತ್ತಾರೆ ಎದ್ದು ಅರಸನು ಮಿಂದು ಮಡಿಯುಟ್ಟು ಸಂಧ್ಯಾವಂದನೆಯನ್ನಾಚರಿಸಿ ನಾಮತೀರ್ಥದ ಚೌಕಿಗೆ ಬಂದು ದೇವರ ಸನ್ನಿಧಿಯಲ್ಲಿ ಕುಳಿತು ಅಳಹಿಯ ಸಿಂಗರಾರ್ಯರನ್ನು ಬರ ಹೇಳಿ ಬೇಗನೆ ಪ್ರತಿಹಾರಿಗಳನ್ನು ಕಳುಹಿಸಿದನು.

ಅಳಹಿಯ ಸಿಂಗರಾರ್ಯರ ಮನೆ ಮತ್ತು ಅವರ ಶರೀರ ಮುಂತಾದುವುಗಳ ವರ್ಣನೆ :

ಅವರು ಅರಸನ ಆಜ್ಞೆಯನ್ನನುಸರಿಸಿ ಕಡುವೇಗದಿಂದ ಬರುತ್ತ ಚೆಲ್ಲಿದ ನೀರನ್ನೂ ಹಾಕಿದ ರಂಗವಲ್ಲಿಯ ಗೆರೆಗಳನ್ನೂ ಬೀದಿಯ ಸಿಂಗಾರವನ್ನೂ ನೋಡುತ್ತ ಬರಲು ಹೊರಬಾಗಿಲ ಇಕ್ಕೆಲದ ದೊಡ್ಡಜಗುಲಿಗಳಲ್ಲಿ, ಹಿಡಿದ ಮುತ್ತುಗದ ದಂಡವೂ ಉಟ್ಟ ಬಿಳಿಬಟ್ಟೆಯ ಮೇಲೆ ಮೂರು ಸುತ್ತು ಸುತ್ತಿದ ಮುಂಜಿಯೂ ಪವಿತ್ರ ಜನ್ನಿವಾರವೂ ಹೊದ್ದ ಮೃಗ ಚರ್ಮವೂ ಬಿಳಿಯ ಊರ್ಧ್ವಪುಂಡ್ರವೂ ಆಗಿ ಸತ್ವದ ಬೀಜವೂ ಸತ್ಕರ್ಮದ ಅಂಕುರವೂ ಎನಿಸುವ ಎಳೆಯ ಮಕ್ಕಳು ಓದುವ ವೇದಗಳ ಪವಿತ್ರ ಧ್ವನಿಯೂ ಒಂದೆಡೆಯಲ್ಲಿ ತಳತಳನೆ ಹೊಳೆಯುವ ಹನ್ನೆರಡು ನಾಮವೂ ಹೊದ್ದು ಉಟ್ಟ ಚಿಗುರೆಲೆಯಂಥ ಕಾವಿಯ ಉಡಿಗೆಗಳೂ ಧರಿಸಿದ ತುಳಸಿ-ತಾವರೆ ಮಣಿಸರಗಳೂ ಶಾಂತಿರಸವು ತುಂಬಿತುಳುಕುವ ಮುಖಕಾಂತಿಯೂ ಆದ ಎಡಹರೆಯದ ಕುಮಾರರು ಓದುವ ದಿವ್ಯಪ್ರಬಂಧದ ಬಂಧುರ ಧ್ವನಿಯೂ ಒಂದುಗೂಡಿ ಕಿವಿಗೆ ಆನಂದವನ್ನೀಯಲು ಕೇಳುತ್ತ ಬಾಗಿಲನ್ನೇರಿದರು. (ಅದರ) ಒಳಹೊಕ್ಕು ತೊಟ್ಟಿಯ ನಾಲ್ಕು ದೆಶೆಯ ಜಗುಲಿಗಳೊಳಗೆ ಒಂದೆಡೆಯಲ್ಲಿ ಧರ್ಮಶಾಸ್ತ್ರ ಸಂಶಯಗಳನ್ನು, ನ್ಯಾಯದಿಂದ ಅನುಗೃಹಿಸಲ್ಪಟ್ಟ ಧರ್ಮಶಾಸ್ತ್ರದ ಮಾತುಗಳಿಂದ ಪರಿಹರಿಸುವವರೂ ಒಂದೆಡೆಯಲ್ಲಿ ಪಾಂಚರಾತ್ರಾಗಮಗಳಲ್ಲಿ ಹೇಳಿದ ಪಾಂಚಕಾಲಿಕ ಕ್ರಿಯಾಕಲಾಪಗಳನ್ನು ಉಪನ್ಯಾಸ ಗೈಯುವವೂ ಆಗಿರಲು, ಅವರಿಗೆ ಕೈಮುಗಿದು (ದೂತರು) ಆಲೋಚಿಸಿದರು. ಕಾಮನು ಈ ಸ್ಥಾನವನ್ನು ಒಮ್ಮೆಯೂ ಹೊಕ್ಕಿಲ್ಲ, ಕ್ರೋಧವು ಈ ಭೂಮಿಯಲ್ಲಿ ಅಡಿಯಿಟ್ಟಿಲ್ಲ. ಮೋಹವು ಈ ನೆಲವನ್ನು ನಿಟ್ಟಿಸಿಲ್ಲ. ಮದವು ಈ ದಿಕ್ಕಿನ ಹೆಸರೆತ್ತಿಲ್ಲ. ಮತ್ಸರವು ಈ ಭಾಗವನ್ನು ನೆನೆಸಿಲ್ಲ ; ಶಮೆದಮೆ ಮೊದಲಾದ ಗುಣಗಳೆಲ್ಲವೂ ಇಲ್ಲಿ ಗುರುಕುಲವಾಸದಿಂದ ಹೆಚ್ಚಳಗೊಂಡು ಜಗದಲ್ಲಿ ಕೀರ್ತಿ ಪಡೆದವು. ಮತ್ತೆ ಇದು ಕಲಿಯರಿಯದ ನೆಲವೂ ಮತ್ಸರಕಾಣದ ತಾಣವೂ ಹಿಂಸೆ ಸಂಚರಿಸದ ಮನೆಯೂ ಚಾಡಿ ಸುಳಿಯದ ಬಾಗಿಲೂ ಹುಸಿ ಪ್ರವೇಶಿಸದ ಆಗರವೂ, ಹೋರಾಟ ತೋರದ ಎಡೆಯೂ ಠಕ್ಕರಿಯದ ಠಾವೂ ಬೆಕ್ಕಸ ಬೆರೆಯದ ಸ್ಥಳವೂ ಅತಿಕ್ರಮವಿಲ್ಲದ ದೇಶವೂ ಮೋಸ ಸಲ್ಲದ ಮೇರೆಯೂ ಎನಿಸುವುದು ಮತ್ತು ಈ ಸಾತ್ವಿಕರಿಗೆ ತೀಕ್ಷ್ಣತೆಯು ಬುದ್ಧಿಯಲ್ಲಲ್ಲದೆ ಸ್ವಭಾವವನ್ನು ಭೇದಿಸದು. ಭ್ರಮಣವು ದೇವಾಲಯವನ್ನು ಸುತ್ತುವುದರಲ್ಲಲ್ಲದೆ ಜ್ಞಾನವನ್ನಾವರಿಸದು. ಮಾಲಿನ್ಯವು ಹೋಮದ

ಹೊಗೆಯಲ್ಲಲ್ಲದೆ ಚಿತ್ತಕ್ಕೆ ಹತ್ತದು. ದೂಷಣೆಯು (ವಾದದ) ಪೂರ್ವಪಕ್ಷ ವಿಷಯದಲ್ಲಲ್ಲದೆ ಪರಗುಣಗಳಲ್ಲಿ ಪಸರಿಸದು. ಮುಖವಿಕಾರವು ಮುಪ್ಪಿನಿಂದಲ್ಲದೆ ವಿದ್ಯೆ ಮತ್ತು ಸಂಪತ್ತಿನ ಮದಗಳಿಂದ ಉಂಟಾಗದು. ದಂಡಗ್ರಹಣವು (೧. ಬಡಿಗೆ ಹಿಡಿಯುವುದು. ೨. ಶಿಕ್ಷಿಸುವುದು ವಯಸ್ಸಿಗೆ ತಕ್ಕ) ಆಶ್ರಮಧರ್ಮವಾಗಿದೆಯಲ್ಲದೆ ಶಿಕ್ಷೆಯನ್ನುಂಟುಮಾಡದು. ಮತ್ತೆ ಇವರು ತರ್ಕದಲ್ಲಿ ಗೌತಮ ಕಣಾದರನ್ನು, ಶಬ್ದದಲ್ಲಿ ಪಾಣಿನಿ-ಪತಂಜಲಿಗಳನ್ನು, ಮೀಮಾಂಸೆಯಲ್ಲಿ ಜೈಮಿನಿ-ಶಬರರನ್ನು, ವೇದಾಂತದಲ್ಲಿ ವ್ಯಾಸ-ಬೋಧಾಯನರನ್ನು ಸರಿಗಟ್ಟುವರೆಂದು ಅವರಿಗೆ ವಂದಿಸಿ ಒಳಬಾಗಿಲಲ್ಲಿ ಹೊಕ್ಕರು. ಅಲ್ಲಿ ಅಮೃತದಂತೆ ಶುಭ್ರವಾದ ದೊಡ್ಡ ಜಗಲಿಯಲ್ಲಿ ಸುತ್ತ ಹಾಸಿದ ರತ್ನಕಂಬಳಿಗಳ ನಡುವೆ ಹೊನ್ನಮಣೆಯ ಮೇಲೆ ತಾರೆಗಳ ನಡುವಿನ ಮೇರುಪರ್ವತದಂತೆಯೂ ಬ್ರಾಹ್ಮಣರ ನಡುವಿನ ಬ್ರಹ್ಮನಂತೆಯೂ ದೇವತೆಗಳ ನಡುವಿನ ವಾಸುದೇವನಂತೆಯೂ ಬಳಸಿ, ಕುಳಿತು ಭಕ್ತಿವಿನಯ ವಿಶ್ವಾಸಗಳ ಒಟ್ಟಿನಿಂದ ಏಕಾಗ್ರಚಿತ್ತನಾಗಿ ಪುಸ್ತಕ ಹಿಡಿದು ಓದುವ ಆಚಾರಸಂಪನ್ನರಾದ ಹಲವು ಶಿಷ್ಯರ ನಡುವೆ ಶ್ರೀ ಭಾಷೆಯನ್ನು ಶ್ರುತ ಪ್ರಕಾಶಿಕೆಯ ವ್ಯಾಖ್ಯಾನ ರೀತಿಯಿಂದ ಉಪನ್ಯಾಸವನ್ನೆಸಗುತ್ತ ಉಪದೇಶಗೈಯುವ ವೈಖರಿಯನ್ನು ನೋಡಿ ಮನದಲ್ಲಿ (ಆ ದೂತರು) ಆಲೋಚಿಸಿದರು : "ಈ ಮಹಾನುಭಾವನು ಹುಣ್ಣಿಮೆಯ ಚಂದಿರನಂತೆ ತಂಪುವೆತ್ತಿದ್ದರೂ ಮೈಕಾಂತಿ ಮುಂಗಾರು ಮಿಂಚಿನಂತೆ ಮಿರುಗುತ್ತಿದೆ. ಈ ವೈಷ್ಣವರು ಏನು ಧನ್ಯರೋ ! ಯಾವತ್ತೂ ಇವನೊಡನಿದ್ದು ಇವನ ಸೇವೆಗೈದು, ಇವನ ಉಪದೇಶ ಕೇಳುವರು.

ಈ ಊರವರು ಏನು ಧನ್ಯರೋ ! ಮೂರು ಹೊತ್ತು ಬಂದು, ವಂದಿಸಿ, ಇವನಿಂದ ಹರಕೆ ಪಡೆಯುವರು. ಈ ನಾಡಿಗರು ಏನು ಭಾಗ್ಯವಂತರೋ ! ಆಯಾ ಉತ್ಸವಗಳಲ್ಲಿ ಚೆಲುವನಾರಾಯಣ, ರಾಮಾನುಜರೊಡನೆ ಇವನ ದರ್ಶನವನ್ನು ಪಡೆಯುವರು. ಮತ್ತೆ, ಸರಸ್ವತಿಯೂ ಏನು ಪುಣ್ಯವಂತೆಯೋ ! ಯಾವತ್ತೂ ಪ್ರಸನ್ನಳಾಗಿ ಕರುಣೆಯೆಂಬ ಅಮೃತ ನೀರಿನಿಂದ ತುಂಬಿ ಮಾನಸ ಸರೋವರವನ್ನು ಹೋಲುವ ಮುಖ ಕಮಲದಲ್ಲಿ ನಲಿಯುತ್ತಿರುವಳು. ಈ ಎಡೆಯಲ್ಲಿ ಧರ್ಮವು ನಾಲ್ಕು ಪಾದಗಳಿಂದ ಪೂರ್ಣವಾಗಿರುವುದರಿಂದ ಯಾವತ್ತೂ ಕೃತಯುಗವಲ್ಲದೆ ಯುಗಪರಿವರ್ತನೆಯ ನೆನಪಿಲ್ಲದಿರುವುದು. ಭೂಮಿಯಲ್ಲಿ ಈ ಮಹಾನುಭಾವನು ಹುಟ್ಟಿರುವುದರಿಂದ ಸೂರ್ಯನನ್ನು ಹೊತ್ತ ಆಕಾಶದ ಗರ್ವವು ಚಿಕ್ಕದಾಗಿದೆ. ಇವನ ಸಾಮರ್ಥ್ಯದಿಂದ ಭೂಮಿ ಅಚಲವಾಗಿದೆ. ಮತ್ತೆ ! ಇವನ ಇರುವನ್ನು ವಿಚಾರಿಸಲು ಕೃಪೆಯ ಹೊನಲೂ ಸಂಸಾರವೆಂಬ ಕಡಲ ತೀರಗಾಣಿಸುವ ಸೇತುವೆಯೂ ಆಸೆಯೆಂಬ ವಿಷಬಳ್ಳಿಗೆ ನಡುಬೇಸಿಗೆಯೂ ಸಂತಸವೆಂಬ ಅಮೃತಕ್ಕೆ ಹೆಗ್ಗಡಲೂ ಸಿದ್ಧಮಂತ್ರಗಳಿಗೆ ಅಧಿದೇವತೆಯೂ ಶಾಂತಿಯೆಂಬ ಹೆಮ್ಮರಕ್ಕೆ ತಾಯಿಬೇರೂ ಆಚಾರಗಳ ನೆಲೆಬೀಡೂ ಧರ್ಮವೆಂಬ ಧ್ವಜಕ್ಕೆ ಬಲಿಷ್ಠ ಕಂಬವೂ ಶಾಸ್ತ್ರವೆಂಬ ಹೊನ್ನಿಗೆ ಒರೆಗಲ್ಲು ಸಿಟ್ಟೆಂಬ ಹಾವಿಗೆ ಗರುಡನೂ ಮೋಹವೆಂಬ ಕಗ್ಗತ್ತಲೆಗೆ ಸೂರ್ಯನೂ ಮಂಗಳದ ಅಂಗಳನೂ ಸತ್ವಕ್ಕೆ ಆಶ್ರಯನೂ ತಪಕ್ಕೆ ಸ್ಥಾನವೂ ನೇಮಕ್ಕೆ ನೆರವೂ ಸತ್ಕಕ್ಕೆ ಸಂಗಾತಿಯೂ ಎನಿಸಿದ್ದಾನೆ. ಮತ್ತೆ, ಆಚಾರ್ಯಪಟ್ಟವೆಂಬ ಸಾಮ್ರಾಜ್ಯ ಸೂಚಕವಾಗಿ

ಹೊನ್ನ ಕಿರೀಟವನ್ನು 'ಹೋಲುವ ಪೀತಾಂಬರದ ಮುಂಡಾಸು ಮಾನಸ ಪೂಜಾಸಮಯದಲ್ಲಿ ಭಾವಿಸಿದ ಆ ತ್ರಿವಿಕ್ರಮನ ಪಾದದ ಉಂಗುಟದಿಂದ ಮುಡಿಮಣಿಯ ಮೇಲೆಬಿದ್ದ ಗಂಗೆ ಎರಡು ಪ್ರವಾಹಗೊಂಡು ಹರಿಯುವಂತೆ ತೋರುವ ಪವಿತ್ರನಾಮವೂ ಕರುಣಾರಸದ ತೆರೆಗಳೆನಿಸುವ ಕಣ್ಣುಗಳೂ ಅವುಗಳ ನೀಲದ ಕಟ್ಟೆಗಳನ್ನು ಹೋಲುವ ಹುಬ್ಬುಗಳೂ ನಾಲ್ಕುಪಟ್ಟು (ಮೂವತ್ತೆರಡು) ಗೊಳಿಸಿದ ಅಷ್ಟಾಕ್ಷರೀ ಮಂತ್ರದ ಅಕ್ಷರಗಳನ್ನು ಹೋಲುವ ಬಿಳಿಹಲ್ಲುಗಳ ಬೆಳಕಿನಿಂದ ಹೆಚ್ಚಿದ ನಸುನಗೆಯೂ ಶಿಷ್ಯರ ಹೃದಯಗಳಲ್ಲಿ ಬಿತ್ತಲಿಕ್ಕೆಂದು ಸಂಗ್ರಹಿಸಿದ ಸತ್ವಗುಣದ ಬೀಜಗಳಂತೆ ಇರುವ ಮುತ್ತಿನ ಕಂಠಸರಗಳೂ ರೇಶಿಮೆಬಟ್ಟೆಗಳೂ ಉಳ್ಳ ದಿವ್ಯಆಕಾರದಿಂದ ನೋಡುವಷ್ಟರಲ್ಲಿ ಕತ್ತಲು ತಗ್ಗುತ್ತಿದೆ. ಸತ್ವವು ವಿಸ್ತರಿಸುತ್ತಿದೆ ಎಂದು ಅಚ್ಚರಿಪಡುತ್ತ ಭಕ್ತಿ-ವಿನಯಗಳಿಂದೊಡಗೂಡಿ ಸಮೀಪಿಸಿ ಸಾಷ್ಟಾಂಗ ಪ್ರಣಾಮಗೈದು ಬದಿಯಲ್ಲಿ ನಿಂತು (ಹೀಗೆ) ಬಿನ್ನವಿಸಿದರು : "ಸ್ವಾಮೀ ದೇವರನ್ನು ಬರಹೇಳಿ ಅರಸರು ಆಜ್ಞೆ ಮಾಡಿ ನಮ್ಮನ್ನು ಕಳುಹಿಸಿದರು" ಎಂದರು.

ಅಳಹಿಯ ಸಿಂಗರಾರ್ಯರು ತವಕದಿಂದೆದ್ದು ಶಿಷ್ಯಸಮೂಹದೊಡನೆ ಮನೆಯ ಬಾಗಿಲದಿಂದ ಹೊರಬಂದು ಮೇಣೆಯೇರಿ ಅರಮನೆಗೆ ಬಂದು ಮುದದಿಂದ ರಾಯನ ಸಮ್ಮುಖಕ್ಕೆ ಬಂದನು. ಅಷ್ಟರಲ್ಲಿ ರಾಯನು ಸಹಜದಿಂದ ನಿರ್ಮಲನಾಗಿ ಸ್ನೇಹದಿಂದ ಕರಗಿ ಕವಿಯುವ ನೋಟಗಳಿಂದ ಈ ಅಳಹಿಯ ಸಿಂಗರಾರ್ಯರನ್ನು ದಯಾರಸದಿಂದ ಅಭಿಷೇಕ ಮಾಡುವಂತೆಯೂ ಸಂತಸವನ್ನು ಒಡಲಲ್ಲಿ ತುಂಬುವಂತೆಯೂ ತಂಪುಗೊಳಿಸುವಂತೆಯೂ ಹೆಮ್ಮೆ ಪಡಿಸುವಂತೆಯೂ ನೋಡಿ ಸನಿಹಕ್ಕೆ ಬರಿಸಿದನು.

ಅವರು "ಎಲೆ ಮಹಾರಾಜ, ನಿನಗೆ ಧನಕನಕ ವಸ್ತುವಾಹನಾದಿ ಸಮೃದ್ಧಿಯೂ ಸತಿ ಮಿತ್ರ ಬಂಧು ಸಮೃದ್ಧಿಯೂ ಆಯುರಾರೋಗ್ಯವೂ ಉಂಟಾಗುವುದರಿಂದ ನಾನು ಹರಸತಕ್ಕುದೆಲ್ಲವೂ ಸಮೃದ್ಧಿಯಾಗಿದೆ. ಆದರೂ ನಿನ್ನಂತೆ ರೂಪವೂ ಗುಣವೂ ಉಳ್ಳ ಕುಮಾರನನ್ನು ಪಡೆದು ಲೋಕವನ್ನು ಸನಾಥಗೊಳಿಸಬೇಕು" ಎಂದನು. ರಾಜನು ಅರಳುವ ಮುಖವೂ ನಗೆ ಮೂಡುವ ಬಾಯ್ದೆರೆಯೂ ಆಗಿ ಹರಕೆಯನ್ನು ಸ್ವೀಕರಿಸಿ ಅವರನ್ನು ಸಿಂಹಾಸನದ ಸಮೀಪದಲ್ಲಿ ಕುಳ್ಳಿರಿಸಿ ಹೇಳಿದನು "ಅಯ್ಯಾ, ನೀವಿತ್ತ ಹರಕೆಗಳೂ ಶ್ರೀನಾರಾಯಣಸ್ವಾಮಿಯ ಆಜ್ಞೆಯೂ ಒಂದೇ ತೆರನಾಗಿದೆ" ಎಂದು ಸನ್ನಿಧಿಯಲ್ಲಿ ನಡೆದ ವೃತ್ತಾಂತವೆಲ್ಲವನ್ನೂ ಹೇಳಿದನು.

ಇವರು ಅಮೃತವನ್ನು ಸೇವಿಸಿದಂತೆ ಸಂತೋಷದಿಂದ ಸುರಿಯುವ ಆನಂದಾಶ್ರುವೂ ನಿಮಿರುವ ರೋಮಾಂಚನವೂ ಆಗಿ ನುಡಿದರು "ಅಬ್ಬ ! ಈ ನಮ್ಮ ಮೈಸೂರರಸುಗಳಲ್ಲಿ ಈ ಲಕ್ಷ್ಮೀಪತಿಗೆ ಎಷ್ಟು ಅಭಿಮಾನವೊ ! ಎಷ್ಟು ಪಕ್ಷಪಾತವೋ ! ಎಷ್ಟು ಬಹುಮಾನವೊ! ಎಷ್ಟು ದಯೆಯೋ ! ಎಷ್ಟು ಮನ್ನಣೆಯೋ ! ಊರಲ್ಲೂ ಮನೆಯಲ್ಲೂ ಎದೆಯಲ್ಲೂ ನೆಲೆಗೊಂಡು ಭಕ್ತರ ಮುಖದಲ್ಲೂ ಅರ್ಚಕರ ಮುಖದಲ್ಲಿ ಹೇಳಿಸಿ ಮನ್ನಿಸಿ ವರಗಳನ್ನಿತ್ತು ತೃಪ್ತನಾಗದೆ ಸಾಕಾರವಾಗಿ ನಿಮ್ಮೆದೆಯಲ್ಲಿ ನಿಂತು ಔರಸಪುತ್ರನಾಗಿ ಹುಟ್ಟುವೆನೆಂದು ಪ್ರತಿಜ್ಞೆ ಮಾಡಿದನು. ಪ್ರಜೆಯೆಲ್ಲವೂ ಕಲಿದೋಷದಿಂದ ದೂಷಿತವಾಗಿ ತಮ್ಮ ತಮ್ಮ

ವರ್ಣಧರ್ಮಗಳನ್ನು ಆಚರಿಸದೆ ತಮ್ಮ ಇಚ್ಛೆ ಬಂದಂತೆ ನಡೆಯುತ್ತಿರಲು (ಅದನ್ನು) ಕಂಡು ಮರುಗಿ ಇವರಲ್ಲಿ ಹೇಳಿದಂತೆ ಕೇಳುವವರನ್ನು ಅನುಗ್ರಹಿಸಿ ಕೇಳದ ದುರಾಗ್ರಹಿಗಳನ್ನು ನಿಗ್ರಹಿಸಿ ಮೋಕ್ಷಧರ್ಮವನ್ನು ನೆಲೆಗೊಳಿಸಲು ಅವತರಿಸುವನು. ಕೃಷ್ಣಾವತಾರದಲ್ಲಿ ಸಾಂದೀಪ ಮುನಿಗೆ ಬಂದ ಹಿರಿಮೆ ಈ ಅವತಾರದಲ್ಲಿ ನನಗೆ ಬಂದುದು. ಈ ಅರ್ಥದಲ್ಲಿ ನಾನು ಕಂಡ ಒಂದು ಕನಸನ್ನು ಹೇಳುವೆನು ಕೇಳಬೇಕು. ನೀನೂ ನಾನೂ ಇಬ್ಬರೂ ಶ್ರೀ ನಾರಾಯಣನ ಸನ್ನಿಧಿಯಲ್ಲಿ ನಿಂತು ಸೇವೆಗೈಯುತ್ತಿರುವಷ್ಟರಲ್ಲಿ ತನ್ನ ದಿವ್ಯಾಂಗದಿಂದ ತನ್ನ ಪ್ರೀತಿ ಬಿಂಬವೆನಿಸಿದ ಚೆಲುವರಾಯನನ್ನು ಹೋಲುವ ಅದೊಂದು ಮಗುವನ್ನು ತೆಗೆದು ನನ್ನ ಕೈಯಲ್ಲಿಟ್ಟನು. ನಾನು (ಅದನ್ನು) ನಿಮಗಿತ್ತೆನು. ಅಷ್ಟರಲ್ಲಿ, ಅಪರಾತ್ರಿಯಲ್ಲೇಳುವ ಮಕ್ಕಳ ಸಮೂಹದ ಧ್ವನಿಯಿಂದ ಎಚ್ಚೆತ್ತು ಕಣ್ದೆರೆದು ಅಚ್ಚರಿಪಟ್ಟೆನು" ಎಂದನು.

ರಾಯನೂ ಪ್ರೇಮದಿಂದ ಕೈಮುಗಿದು "ಮುನ್ನ ಸ್ವಾಮಿ ತಾನೇ ಬಂದು ಎದೆಯಲ್ಲಿ ನೆಲೆಸಿದುದರಿಂದ ಸ್ವತಂತ್ರನಾಗಿರುವೆನೆಂಬ ಸಂಶಯವುಂಟಾಗಿದೆ. ಈ ವೇದಾಂತಜ್ಞರಾದ ನಿಮ್ಮ ಕೈ ಸೇರಿ ನನ್ನ ಕೈಗೆ ಬಂದುದರಿಂದ ನನಗೆ ವಿಧೇಯನಾಗಿದ್ದಾನೆ. ಭಗವತ್ಪ್ರಸಾದವು ಭಾಗವತಪ್ರಸಾದ ಮೂಲಕವಾಗಿ ಬಂದರೆ ಪರಿಶುದ್ಧವಾಗಿರುವುದು" ಎಂದು ಹಿಗ್ಗಳಿಸಿ ತಾನು ಹೊದ್ದುಕೊಂಡಿದ್ದ ಹೊನ್ನದುಕೂಲವನ್ನು ಇವರಿಗೆ ಹೊದಿಸಿ, ತೊಟ್ಟಿದ್ದ ರತ್ನಾಭರಣ ಗಳನ್ನು ತೊಡಿಸಿ ಮುದದಿಂದ ಅವರಿತ್ತ ಹರಕೆಗೆ ಹರುಷಪಟ್ಟನು. (ತರುವಾಯ) ನಿತ್ಯನಿಯಮ ವಾದ ಗೀತಾಧ್ಯಾಯಾರ್ಥವನ್ನು ಇವರಿಂದ ಭಕ್ತಿಪೂರ್ವಕ ಚಿತ್ತದಲ್ಲಿ ನೆಲೆಗೊಳಿಸಿದನು. ದೇವಪೂಜೆಯನ್ನು ರಚಿಸಿ ತೀರ್ಥ ಸ್ವೀಕರಿಸಿದ ಬಳಿಕ ಇವರನ್ನು ಮನೆಗೆ ಕಳುಹಿಸಿದರು. ತಾನು ಅಂತಃಪುರಕ್ಕೆ ಹೋಗಿ ಅಮೃತಾನ್ನವನ್ನು ಸವಿದನು. (ಆಮೇಲೆ) ಹರುಷದಿಂದ ರಾಣಿಗೆ ಅಳಹಿಯ ಸಿಂಗರಾರ್ಯರು ಕಂಡ ಕನಸಿನ ವೃತ್ತಾಂತವನ್ನು ತಿಳಿಸಿ ಸಂತಸ ವನ್ನು ಹಂಚಿಕೊಟ್ಟನು. ಬಳಿಕ ಹೊರಗೆ ಬಂದು ಅಳಹಿಯ ಸಿಂಗರಾರ್ಯರನ್ನು ಬರಿಸಿ ಶ್ರೀರಾಮಾಯಣ ಭಾರತಾದಿ ಇತಿಹಾಸ ಪುರಾಣಗಳ ರಹಸ್ಯಾರ್ಥಗಳನ್ನು ಕೇಳಿ ಮತ್ತೆ ಆ ಸ್ವಪ್ನ ವೃತ್ತಾಂತವನ್ನು ಹೇಳಿದನು. ಇದಕ್ಕೆ ಇವರು "ಮುನ್ನ ತಾನೇ ಪ್ರಸನ್ನನಾದುದರಿಂದ ಈ ಅವತಾರದಲ್ಲಿ ದುಷ್ಟನಿಗ್ರಹ-ಶಿಷ್ಟಪರಿಪಾಲನೆ ಗೈಯುವೆನೆಂದು ನಿಶ್ಚಯಿಸಿದನು. ಮತ್ತೀಗ ಆರ್ಯಮುಖದಿಂದ ಪ್ರಸನ್ನನಾದುದರಿಂದ ಮೋಕ್ಷಧರ್ಮವನ್ನು ನೆಲೆಗೊಳಿಸುವಲ್ಲಿ ಸಂದೇಹವಿಲ್ಲ. ಈ ಮುಂತಾದ ಸಂತಸದ ಮಾತುಗಳಿಂದ ಇಬ್ಬರೂ ಅನ್ಯೋನ್ಯವಾದ ಮಾತುಕತೆಯಾಡುತ್ತ ಕೆಲಹೊತ್ತುಗಳೆದು, ನಾಳೆ ಹೊತ್ತಾರೆ ಪಟ್ಟಣಕ್ಕೆ (ಮರು) ಪ್ರಯಾಣವೆಂದು ದಳವಾಯಿಗೆ ತಿಳಿಸಿದರು. ಸೇನಾ ಪ್ರಯಾಣದ ಸಂಜ್ಞೆಗೆ ಪಟಹ ಬಾರಿಸಲು ಆಜ್ಞಾಪಿಸಿದನು. ತಾನೂ ಸಾಯಂಕಾಲದ ಸಂಧ್ಯಾವಂದನಾದಿ ರಾತ್ರಿಯ ಕೆಲಸಗಳನ್ನು ತೀರಿಸಿ ರಾತ್ರಿಯನ್ನು ಸುಖದಲ್ಲಿ ಕಳೆದರು. ಉದಯಕಾಲದಲ್ಲಿ ಮಂಗಳಪಾಠಕರು, ಕೊಳಲು ವೀಣೆಗಳಿಂದೊಡಗೂಡಿದ ಎಚ್ಚರಗೊಳಿಸುವ ಬಣ್ಣನೆಯ ಹಾಡುಗಳನ್ನು ಕೇಳುತ್ತ ಎಚ್ಚೆತ್ತು ನಿತ್ಯಕರ್ಮಗಳನ್ನಾಚರಿಸಿದರು. ಅಷ್ಟರಲ್ಲಿ ಪಯಣಕ್ಕೆ ಸಿದ್ಧನಾಗಿ ಬಂದ ಅಳಹಿಯ ಸಿಂಗರಾರ್ಯರನ್ನು ಸನಿಹಕ್ಕೆ ಬರಿಸಿ ನುಡಿದನು "ಶುಭಕಾಲದಲ್ಲಿ ಸಂತಸದ ಮೇಲೆ

ಸಂತಸವುಂಟಾಗುವುದೆಂಬ ರೂಢಿಯ ಮಾತು ನಿಶ್ಚಿತವಾದುದು. ಇಂದಿನಿರುಳ ಕನಸಿನಲ್ಲಿ ನಾನು ಶ್ರೀನಾರಾಯಣನ ಅಡಿಗೆರಡಿ ಕೈಮುಗಿದು ನಿಲ್ಲುವಷ್ಟರಲ್ಲಿ 'ಎಲೆ ಅರಸ! ನಿನಗೆ ಇನ್ನೊಂದು ವರವನ್ನೀಯುವೆನು, ನಿನ್ನಿಚ್ಛೆಯನ್ನು ಹೇಳಬೇಕು, ಎಂದು ಆಜ್ಞೆಯಿತ್ತನು. ನಾನೂ ವಿನಯದಿಂದ ಬಾಗಿ ನನ್ನ ಗೆಳೆಯನಾದ ಅಳಹಿಯ ಸಿಂಗರಾರ್ಯನಿಗೆ ಒಳ್ಳೆಯ ಮಗನನ್ನಿತ್ತು ಮನ್ನಿಸಬೇಕೆಂದು ವಿನಂತಿಸಿದನು. ಅದಕ್ಕೆ ನಸುನಗುತ್ತ 'ಎಲೆ ಅರಸ, ಕೇಳು ನಾನು ಅವತರಿಸಿ ಬಂದರೆ ನಿನ್ನ ಬಳಿಗಿರಲು ನನ್ನ ಒಡನಾಡಿ ಈ ಸಂಜ್ಞೆಯನ್ನು ನಿನ್ನ ಮನದಲ್ಲಿ ತಿಳಿದಿರಬೇಕು' ಎಂದು ಬಾಯ್ದೆರೆದು ಹೇಳಿದನು" ಎಂದು ಹೇಳಿದ ರಾಯನೊಡನೆ ಇವನೂ "ಮಹಾರಾಜ, ಹಾಗಾದರೆ ಕೇಳಬೇಕು. ನೀನು ಈವರೆಗೆ ನರಪತಿಯಾಗಿರುವುದರಿಂದ ನಿನ್ನ ಬೇರೊಂದು ದೇಹವೆನಿಸಿದ ನನಗೆ ನರರೆಲ್ಲರೂ ವಿಧೇಯರಾಗಿರುವರು. ಈಗ ನಾರಾಯಣನು ನಿನ್ನ ದೇವರಾಜನೆಂಬ ಹೆಸರನ್ನು ಅನ್ವರ್ಥಕಗೊಳಿಸಿ ತಾನೇ ನಿನ್ನ ಮಗನಾಗುವುದರಿಂದ ಅವನ ಪರಿವಾರದವರು ನನ್ನ ಬಳಿಗೆ ಬರುವುದು ಅಚ್ಚರಿಯಲ್ಲ" ಎಂದು ಬಿನ್ನವಿಸಿದನು.

ಅಷ್ಟರಲ್ಲಿ ಜೋಯಿಸರು ಪ್ರಯಾಣ ಮುಹೂರ್ತವಾಯಿತೆಂದು ನುಡಿದರು. ರಾಜನೂ ಯಾತ್ರಾದಾನಗಳನ್ನು ಕೊಟ್ಟು ಎಲ್ಲ ಬಲದೊಡನೆ ಪಯಣಗತಿಯಿಂದ ಶ್ರೀರಂಗಪಟ್ಟಣಕ್ಕೆ ಬಂದನು. ಆ ರಾಜಧಾನಿಯಲ್ಲಿ ಆಳುತ್ತ ಸುಖದಿಂದಿದ್ದನು.

ಚಿಕ್ಕದೇವರಾಯ ಜನನ

ಶ್ರೀಮನ್ನಾರಾಯಣನ ಪರಿಪೂರ್ಣ ಕೃಪೆಯನ್ನು ಪಡೆದು ದೊಡ್ಡದೇವ ಮಹಾರಾಜನು ಶ್ರೀರಂಗಪಟ್ಟಣದ ರಾಜಧಾನಿಯಲ್ಲಿ ರತ್ನಸಿಂಹಾಸನವನ್ನೇರಿ ಸಾಮ್ರಾಜ್ಯಗೈಯುತ್ತಿದ್ದನು.

ಪ್ರಜೆಗಳು ವೀರರೆನಿಸಿಯೂ ವಿನಯವಂತರೂ ನಲ್ಮಾತಿಗರಾಗಿಯೂ ಸತ್ಯವಂತರೂ ಚೆಲುವರೂ ಆಗಿಯೂ ಪರಸತಿದೂರರೂ ಬೇಡುವವರ ಬರುವಿಕೆಯನ್ನು ಬಯಸಿಯೂ ಬೇರೆಯವರಿಂದ ಬಯಸಿದವರೂ ಬೇಕೆನಿಸಿದ ಒಡವೆಗಳನ್ನೂ ಸಂಪತ್ತನ್ನೂ ಪಡೆದು ಧರ್ಮಪರರೂ ಪರಾಕ್ರಮಿಗಳಾಗಿಯೂ ಪಾಪಭೀರುಗಳೂ ಎನಿಸಿರುವರು ಮತ್ತು ಎಲ್ಲದರಲ್ಲೂ ಬಲ್ಲಿದರೆನಿಸಿ ಎಲ್ಲಾ ನಾಡುಗಳಲ್ಲಿ ಪ್ರಸಿದ್ಧರಾಗಿ ಮೆಲುಮಾತುಗಾರರೂ ಅರಿವುಳ್ಳವರೂ ಸಮರ್ಥರೂ ಉತ್ತಮ ಆಭರಣ ಹೊಂದಿದವರೂ ಆಚಾರ್ಯ ಪುರುಷರೂ ಜ್ಞಾನಿಗಳೂ ಪಂಡಿತರೂ ಸಂಗೀತ-ಸಾಹಿತ್ಯ ನಿಪುಣರೂ ಭಾರತ ರಾಮಾಯಣ ಭಾಗವತ ವಿಷ್ಣು ಪುರಾಣಾದಿಗಳನ್ನು ಶ್ರವಣ ಮಾಡುವವರೂ ಆಗಿದ್ದಾರೆ ಮತ್ತು ಬಿಲ್ಲುಗಳಂತೆ ಕೋಡೆ ಸಾರರೂ (೧. ಒಳ್ಳೆಯ ಕೊಪ್ಪಗಳುಳ್ಳ ೨. ಅಪಾರವಾದ ಸಾರಗುಣವುಳ್ಳ) ಬಾಣಗಳಂತೆ ಲಕ್ಷದಾನಾಸ್ತರೂ (೧. ಗುರಿಯಿಟ್ಟುದನ್ನು ಕೈಗೂಡಿಸುವ, ೨. ಲಕ್ಷಾಂತರ ಧನದಾನ) ಮೈನಾಕದಂತೆ ಪಕ್ಷಪಾತವರಿತವರೂ(ಟಿ. ಸಜ್ಜನರ ಪಕ್ಷವನ್ನು ಮಾತ್ರಕಟ್ಟುವವರು) ಧರ್ಮಶಾಸ್ತ್ರದಂತೆ ದೇವಾಲಯಗಳನ್ನು ಕಾಲುವೆಗಳನ್ನು ಕೆರೆಗಳನ್ನು ಕಟ್ಟೆಗಳನ್ನು ಕೊಳಗಳನ್ನು ಬಾವಿಗಳನ್ನು ಉದ್ಯಾನಗಳನ್ನು ಅರವಟ್ಟಿಗೆಗಳನ್ನು ನಿರ್ಮಿಸುವವರೂ, ತಂಗಾಳಿಯಂತೆ ಯಾವತ್ತೂ ದಾಕ್ಷಿಣ್ಯಶಾಲಿಗಳೂ (೧. ದಕ್ಷಿಣದಿಕ್ಕಿನೆಡೆಗೆ ಬೀಸುವ ೨. ಉಪಕಾರವೆಸಗುವ)

ಹಗಲಿನಂತೆ ಮಿತ್ರಾನುವರ್ತಿಗಳೂ (೧. ಸೂರ್ಯ ೨. ಗೆಳೆಯ) ಆಗಿರುವರು ಮತ್ತು ದೀಪದಲ್ಲಿ ಸ್ನೇಹಹಾಗಿಯೂ (ಸ್ನೇಹ = ೧. ಮೈತ್ರಿ. ೨. ಎಣ್ಣೆ) ಚಕ್ರವಾಕಗಳಲ್ಲಿ ಅಗಲುವಿಕೆಯೂ ರತ್ನದಲ್ಲಿ ಪರೀಕ್ಷೆಯೂ (ಕೆಟ್ಟನೋಟ) ನೈದಿಲೆಯಲ್ಲಿ ಮಿತ್ರ ದ್ವೇಷವೂ ತಾವರೆಯಲ್ಲಿ ರಾಜದ್ವೇಷವೂ (೧. ಅರಸ, ೨. ಚಂದ್ರ) ಖಡ್ಗದಲ್ಲಿ ಕೋಶಾಸಕ್ತಿಯೂ (ಕೋಶ : ೧. ಕತ್ತಿಯ ವರೆ, ೨. ಧನಸಂಗ್ರಹ). ಕೈಗನ್ನಡಿಯಲ್ಲಿ ಕರೆಯೂ (ಕರೆ (ಜಿ ?) = ೧. ದೋಷ ಅಥವಾ ಪಾಪ. ೨. ಅಂಚು) ಹೂವಿನಲ್ಲಿ ಕಟ್ಟೂ (೧. ಬಂಧನ. ೨. ಕಟ್ಟುವಿಕೆ) ಮುಪ್ಪಿನಲ್ಲಿ ದಂಡಗ್ರಹಣವೂ (೧. ಬಡಿಗೆ ಹಿಡಿಯುವುದು ೨. ದಂಡೋಪಾಯವನ್ನನುಸರಿಸುವುದು) ಗಾರುಡವೆಂಬ (ಮಂತ್ರ)ಲ್ಲಿ ದ್ವಿಜ ನಿಗ್ರಹವೂ (೧. ಬ್ರಾಹ್ಮಣ ಪೀಡನೆ. ೨. ಸರ್ಪನಿಗ್ರಹ) ಅಲ್ಲದೆ ಈ ಪ್ರಜೆಗಳಲ್ಲಿ ತೋರದು. ಇಂತು ಧರ್ಮದಿಂದ ಪ್ರಜಾಪಾಲನೆ ಗೈಯುತ್ತಲೂ ತನ್ನ ಮಗನೆನಿಸಲಿರುವ ಶ್ರೀ ನಾರಾಯಣನ ಕಲ್ಯಾಣಗುಣಗಳನ್ನು ಎಣಿಸುತ್ತಲೂ ಇದ್ದನು.

ಅಮೃತಾಂಬೆಯ ದೌಹೃದದ ವರ್ಣನೆ

ಕೆಲವೇ ದಿನಗಳಲ್ಲಿ, ರಾಣಿ ಸತ್ಕರ್ಮಗಳನ್ನು ಗರ್ಭದಲ್ಲಿ ಧರಿಸಿದ ವೇದದಂತೆಯೂ ಯಶ ಹೊಂದಿದ ರಾಜನೀತಿಯಂತೆಯೂ ವಿನಯವನ್ನು ಹೊತ್ತ ವಿದ್ಯೆಯಂತೆಯೂ ಸೂರ್ಯನನ್ನು ಹೊತ್ತ ಮುಂಜಾವಿನಂತೆಯೂ ಪೂರ್ಣಚಂದ್ರನನ್ನು ಹೊತ್ತ ಹುಣ್ಣಿಮೆ ಸಂಜೆಯಂತೆಯೂ ಗರ್ಭದಲ್ಲಿ ಶ್ರೀಮನ್ನಾರಾಯಣನನ್ನು ಹೊತ್ತು ಕಳೆಗೊಂಡಳು. ಕಿರಿದಾದರೂ ಬೇರೆ ಹೊರೆಯನ್ನು ಹೊರಲಾರದ ಬಳ್ಳಿ ತನ್ನ ದೊಡ್ಡಕಾಯನ್ನು ಹೊರುವಂತೆ, ರತ್ನಾಭರಣಗಳನ್ನು ಹೊರಲರರಿಯದಿದ್ದರೂ ಜಗದ್ಗುರುವನ್ನು ಹೊತ್ತಿರುವಳು. ದಿನದಿನದಲ್ಲಿ ಬೆಳಯುವ ಗರ್ಭಭಾರದಿಂದ, ಸಾಗರದ ನೀರುಂಡ ಮೋಡದಂತೆ ಮೆಲ್ಲ ಮೆಲ್ಲನೆ ನಡೆಯುತ್ತ ಬಳಿಬರುವ ರಾಜಹಂಸಗಳ ಬೆಡಗನ್ನು ಜರಿಯುವಳು. ಒಳಗಿರುವ ನಾರಾಯಣನ ಕೈ ಶಂಖದ ಬಿಳಿ ಕಾಂತಿ ಹೊರಹೊಮ್ಮಿತೋ ಮನದಲ್ಲಿ ಹುಟ್ಟಿದ ಚಂದ್ರನ ಕಾಂತಿ ವ್ಯಾಪಿಸಿತೋ ಶಯ್ಯೆಯ ನಾಗೇಂದ್ರನ ಕಾಂತಿ ಮೇರೆ ಮೀರಿತೋ ಕ್ಷೀರಸಾಗರದ ತೆರೆ ಪಸರಿಸಿತೋ ಸತ್ವಗುಣವು ವಿಸ್ತಾರಗೊಂಡಿತೋ ಎಂಬಂತೆ ಮೈ ಬಿಳುಪೇರಿತು ಮತ್ತು, ಉದರದಲ್ಲಿರುವ ಶಿಶುವಿನ ಮಹಿಮೆಗನುಗುಣವಾಗಿ (ಅವಳು) ಬಯಸುವಳು "ಎಲೆ ಸಖಿ, ಎಷ್ಟು ಮುತ್ತುಗಳನ್ನು ಧರಿಸಿದರೂ ತಂಪೆನಿಸದು, ಯುದ್ಧದಲ್ಲಿ ಕಡಿಯಲ್ಪಟ್ಟ ವೈರಿರಾಜರ ಪಟ್ಟದಾನೆಯ ಕುಂಭಸ್ಥಳದಿಂದ ಉದುರಿದ ದೊಡ್ಡ ಮುತ್ತುಗಳಿಂದ ಪವಣಿಸಿದ ಹಾರಗಳನ್ನು ತಂದು ಧರಿಸೆನ್ನುವಳು. ಸಮೀಪಿಸಿ ಸೇವೆಮಾಡುವ ಬೇರೆದೇಶದ ರಾಣಿಯರ ಕೈಯ ಕನ್ನಡಿಯನ್ನು ಕಡೆಗಣಿಸಿ ಅವರ ಹೊಳಪುಳ್ಳ ಗಲ್ಲಗಳಲ್ಲಿ ತನ್ನ ಮುಖಕಾಂತಿಯನ್ನು ನೋಡುವಳು. ಪಂಜರದ ಗಿಳಿಮರಿಗೆ ಒಂದೆರಡು ದಾಳಿಂಬ ಬೀಜಗಳನ್ನು ಕೊಡುತ್ತ ದುಃಖಪಟ್ಟು ಸಕಲಜನರಿಗೂ ಬೇಡಿದುದನ್ನು ಕೊಡಬಯಸುವಳು. ಹೂವಿನ ಹಾಸಿಗೆಯ ಮೇಲೆ ಊರಿದರೂ ಕಂದುವ ಮೃದುಪಾದಗಳಿಂದ ವೈರಿರಾಜರ ಪಟ್ಟದರಸಿಯರ ಬೈತಲೆಮಣಿಗಳನ್ನು ಮೆಟ್ಟಲೆಳಸುವಳು. ಪರಿವಾರ ಜನರಲ್ಲಿ ಕಾರಣವಿಲ್ಲದೆಯೂ ದಯೆದೋರುವಳು. ಎಂಥ ತಪ್ಪನ್ನೂ ಮನ್ನಿಸುವಳು.

ಲೋಕವೆಲ್ಲವೂ ವರ್ಧಿಸುವ ಕಾರ್ಯಗಳನ್ನು ಹೇಳುವಳು. ಇಂತು ಬಯಕೆಗಳನ್ನು ಪರಿಪಾಲಿಸುತ್ತ ನವಮಾಸಗಳನ್ನು ಕಳೆದು ಜನನವೂ ಈಗಲೋ ಆಗಲೋ ಎಂದಿರುವಲ್ಲಿ ಅರಸಿ ರಾಯನ ಪಾದಕಮಲಗಳನ್ನು ಕಾಣಬಯಸಿ ಕರೆಕಳುಹಿದಳು. ಬಂದ ರಾಜನು ತನ್ನನ್ನು ಎದುರುಗೊಳ್ಳಲು ಏಳುವುದನ್ನು ತಡೆದು ತಾನೂ ಆ ಮೆದುಹಾಸಿಗೆಯ ಮೇಲೆ ಕುಳಿತು ನುಡಿದನು. "ಎಲೆ ಅರಸಿ ನಿನ್ನ ಮುಖವು ಬಿಳುಪೇರಿದಂತೆ ವೈರಿರಾಣಿಯರ ಮುಖಗಳು ಕಪ್ಪೇರಿದುವು. ನಿಟ್ಟುಸಿರು ಇಷ್ಟು ಹಿರಿದಾಗುವಲ್ಲಿ ಅವರ ನಿಟ್ಟುಸಿರು ಮಿತಿ ಮೀರಿತು. ಹಲವು ಜನ ಜೊಯಿಸರು ಒಂದಾಗಿ ಬಂದು ನಿನ್ನ ಗರ್ಭದಲ್ಲಿ ಬಂದ ಕೂಸು ಕೆಲವೇ ದಿನಗಳಲ್ಲಿ ಬೆಳೆದು ಲೋಕದ ದುಷ್ಟರೆಲ್ಲರನ್ನೂ ಹೊಯ್ದು ಕೆಡಹಿ ಯೋಗ್ಯರನ್ನು ಬಲಪಡಿಸಿ ನೂರುವರ್ಷವೂ ಸುಖದಿಂದ ಬಾಳುವನು ಎಂದು ಹೇಳುವರು." ಹೀಗೆ ಸಂತಸದ ಮಾತುಗಳನ್ನು ನುಡಿಯುತ್ತಿದ್ದನು.

ಪರಿಚಾರಿಕೆ ಹೆಣ್ಣೊಬ್ಬಳು ಸಡಗರದಿಂದ ಬಂದು ತನ್ನ ಕೈಯಲ್ಲಿಯ ಹೊನ್ನ ಬೆತ್ತದಿಂದ ನೆಲಗಟ್ಟಿನ ಸ್ಫಟಿಕದ ಹಾಸಿನ ಮೇಲೆ ಮೆಲ್ಲನೆ ಕುಟ್ಟಿ ದನಿಗೈದು ಅಡ್ಡಬಿದ್ದು ಕೈಮುಗಿದು ಹೆಮ್ಮೆಗೊಂಡ ಮುಖವೂ ನಿಡುಗಣ್ಣೂ ಆದ ಸಂತೋಷಭರದಿಂದ "ಜೀಯ, ಪರಾಕು, ಚಿತ್ತೈಸಬೇಕು. ಮಹೋತ್ಸವ" ಎಂದಳು. ರಾಯನು "ಎಲೇ ಹೆಣ್ಣೆ, ಇದರ ವಿವರವನ್ನು ಕದಲದೆ ಹೇಳು ಎಂದನು. ಅವಳು "ದೇವ ಚಿತ್ತೈಸಬೇಕು. ದೇವರ ಗೆಳೆಯಾದ ಅಳಹಿಯ ಸಿಂಗರಾರ್ಯರ ಧರ್ಮಪತ್ನಿ ಸಿಂಗಮ್ಮನಿಗೆ ಸುಮುಹೂರ್ತದಲ್ಲಿ ಗಂಡುಮಗುವಾದನು" ಎಂದು ಬಿನ್ನವಿಸಿದಳು. ಅದಕ್ಕೆ ರಾಜನು ರಾಣಿಯು ಅತಿಹರ್ಷಿತರಾಗಿ ತಾವು ತೊಟ್ಟ ಆಭರಣಗಳನ್ನು ಅವಳಿಗೆ ಕಾಣಿಕೆಯಾಗಿತ್ತು. ಆಮೇಲೆ ಬರುವ ಸೂರ್ಯೋದಯಕ್ಕೆ ಇದು ಅರುಣೋದಯವೆಂದು ಹೇಳಿದನು. ರಾಯನೂ ಈ ಉತ್ಸವವನ್ನು ನೆರವೇರಿಸಲೆಂದು ಹೊರಗಡೆ ಬಂದು ಅಳಹಿಯ ಸಿಂಗರಾರ್ಯರನ್ನು ಕರೆಕಳುಹಿಸಿದನು. ಸಂತಸವು ಇಬ್ಬರಿಗೂ ಸಮಾನವಾಗಿದ್ದುದರಿಂದ ಒಬ್ಬೊಬ್ಬರು ಒಬ್ಬೊಬ್ಬರಿಗೆ ಶುಭಕೋರಿ ಕೆಲವು ಹೊತ್ತು ಇಷ್ಟಾಲಾಪದಲ್ಲಿದ್ದರು.

ಕುಮಾರೋದಯ ಮತ್ತು ಪುತ್ರ ಜನನೋತ್ಸವ ವರ್ಣನೆ

ದಾನ ಮತ್ತು ಉತ್ಸವಗಳಿರಾಗಿ ಹೊನ್ನ ಉಡುಗೆತೊಡುಗೆಗಳನ್ನಿತ್ತು ಅಳಹಿಯ ಸಿಂಗರಾರ್ಯರನ್ನು ಕಳುಹಿಸಿ ರಾಜನು ಅಂತಃಪುರಕ್ಕೆ ಹೋಗುವೆನೆಂದು ವಿಚಾರಿಸುವಷ್ಟರಲ್ಲಿ ಮುಂಚೆ ತಾನು ಕಳುಹಿಸಿದ ಊಳಿಗದ ಬಾಲಕನೊಬ್ಬನು ಬಂದು ಕೈಮುಗಿದು ಬದಿಗೆ ನಿಂತು ರಾಜನ ಸ್ಥಿತಿಯನ್ನು ಗಮನಿಸಿ (ಅವನ) ಮುಖ(ಭಾವ)ದಿಂದ ಅನುಮತಿಯನ್ನೂಹಿಸಿ ಸಮೀಪ ಹೋಗಿ ವಿನಯದಿಂದ ಹೇಳಿದನು "ರಾಯ ಚಿತ್ತೈಸಬೇಕು. ಅರಮನೆಯಲ್ಲಿ ಮುದುಕಿಯೂ ದಾಸಿಯರೂ ಬೀದಿಮನೆಗಳಿಂದ ಬಂದ ಮುತ್ತೈದೆಯರೂ ಒಂದಾಗಿ ಹಿರಿದು ಕಿರಿದಲ್ಲದೆ ಒಂದು ಉತ್ತಮ ರೀತಿಯಲ್ಲಿ ಸುತ್ತುವರಿದ ಗೋಡೆಗಳಿಗೆ ಹೊಸಸುಣ್ಣದ ಲೇಪವನ್ನೂ ಮೇಲ್ಗಡೆ ಬಿಳಿಬಟ್ಟೆಯ ಮೇಲ್ಕಟ್ಟನ್ನೂ ಮುತ್ತಿನಸರದ ಮಾಲೆಗಳನ್ನೂ, ನೆಲಕ್ಕೆ ತಾವರೆ,

ಹಂಸ, ಗಿಳಿ, ಛತ್ರ, ಚಾಮರ ಮೊದಲಾದ ಹಲವು ತೆರದ ರಂಗವಲ್ಲಿಗಳನ್ನೂ ಅಲಂಕರಿಸಿ, ಹಿಮಾಲಯದ ಗವಿಯ ಸ್ಫಟಿಕದ ಹಾಸುಬಂಡೆಯನ್ನೇ ವಿಸ್ತರಿಸಿ ಹಾಸಿದ (ಹಾಸಿದಂತಿರುವ) ಮೃದುಹಾಸಿಗೆಯಲ್ಲಿ ಮುನ್ನ ಕಡೆಯುವಾಗ ಹಾಲುಗಡಲ ತೆರೆನೊರೆಯಲ್ಲಿ ತೇಲುವ ಲಕ್ಷ್ಮಿಯನ್ನು ಹೋಲುವ ರಾಣಿಯನ್ನು (ಕುಳ್ಳಿರಿಸಿ ಅವಳನ್ನು) ಬಳಸಿ ಅಪ್ಸರೆಯಂತೆ ಕುಳಿತು, ಮುನ್ನ ದಶರಥನ ಕೌಸಲ್ಯ ರಾಮಚಂದ್ರನನ್ನು ಹಡೆಯುವಾಗ ನಡೆನುಡಿಗಳಲ್ಲಿ ಹೀಗೆಯೇ ಇದ್ದಳು. ವಸುದೇವನರಸಿ ದೇವಕಿಯೂ ಹೀಗೆಯೇ ಇದ್ದಳು. ಮತ್ತು ನಮ್ಮ ರಮನೆಯ ದೇವರಾಜರಸರ, ಮುದುಕ ದೇವರಾಜರಸರ ರಾಣಿಯೂ ಹಾಗೆಯೇ ಇದ್ದರು' ಎಂದು ಸಂತಸದ ಮಾತುಗಳಿಂದ ಹೊತ್ತುಗಳೆಯುತ್ತಿದ್ದರು. ಊಳಿಗದ ಹೆಣ್ಣುಗಳೂ ಭಯಭಕ್ತಿಗಳಿಂದುಂಟಾದ ತವಕದಿಂದ 'ಎಲೆ, ಬಿಳಿಹೂವನ್ನು ಬಿಳಿಯ ಸಾಸುವೆಯನ್ನು ಭತ್ತದರಳುಗಳನ್ನು ಬೆರಸಿ ಮನೆಯಲ್ಲೂ ಅಂಗಳದಲ್ಲೂ ಚೆಲ್ಲು ' ಎಂದೂ, 'ಹಾವಿನ ಪೊರೆಯನ್ನೂ ಹಸುವಿನ ತುಪ್ಪವನ್ನೂ ಸಾಮ್ರಾಣಿಯಲ್ಲಿ ಬೆರಸಿ ಹೊಗೆಗೊಳಿಸು' ಎಂದೂ 'ಪಾದ ತೊಳೆದುಕೊಂಡು ಅಗ್ನಿಯನ್ನು ಮುಟ್ಟಿದಲ್ಲದೆ ಈ ಮನೆಯನ್ನು ಹೊಗಬೇಡ' ಎಂದೂ 'ಮಾವು ಬೇವಿನ ಎಲೆಗಳಿಂದ ಹಸಿರುತೋರಣವನ್ನು ಕಟ್ಟಬೇಕು' ಎಂದೂ ಬಾಗಿಲ ಇಕ್ಕೆಲ ಗೋಡೆಗಳಲ್ಲಿ ಶಂಖ ಚಕ್ರಗಳನ್ನು ಬರೆಯಿಸು' ಎಂದೂ 'ಜೋಯಿಸರುಗಳಿಗೆ ಬಟ್ಟಲನ್ನು ಎಚ್ಚರಿಕೆಯಿಂದ ಕಾಯುತ್ತಿರಲಿ ಎಂದು ಹೇಳು' ಎಂದೂ ಸುಂದರ ಕೊರಳಿನ ಮುತ್ತೈದೆಯರು ಸ್ಫೋಬನದ ಹಾಡು ಹಾಡಲಿ' ಎಂದೂ 'ಪಂಡಿತರಿಂದ ಸಹಸ್ರನಾಮ ಪಠಣಗೈಸಬೇಕು' ಎಂದೂ ಹೊಸತಿಲ ಹೊರಗಿನ ಇಕ್ಕೆಲಗಳಲ್ಲಿ ಚಿಗುರುಗರಿಕೆಯಿಂದಲಂಕರಿಸಲ್ಪಟ್ಟ ಕುಂಭಗಳನ್ನು ಇರಿಸಬೇಕು' ಎಂದೂ ರಕ್ಷೆಗೈಯುವುದಕ್ಕೆ ಶ್ರೀಮನ್ನಾರಾಯಣನ ಅಡಿಯ ಕಪ್ಪುರದ ಹುಡಿಯನ್ನು ತರಬೇಕು' ಎಂದೂ ಅರಸಿಯ ಅತಿಮುದ್ದಿನ ದಾಸಿ ರಾಯನಲ್ಲಿಗೆ ಹೋಗಿ ಶುಭ ಹೇಳಬೇಕೆಂದೂ ಅತ್ತಿತ್ತ ಓಡಾಡುತ್ತಿದ್ದಾರೆ" ಎಂದು ಬಿನ್ನವಿಸಿದನು. ರಾಜನೂ ಆಪ್ತರಾದ ಸಾಮಾಜಿಕರನ್ನೂ ಜೋತಿಷ್ಯ ನಿಪುಣರನ್ನೂ ಪುರೋಹಿತರನ್ನೂ ಬರಿಸಿ ಅವರೊಡನೆ " ಈ ವೇಳೆಯ ಪಂಚಾಂಗ ಶುದ್ಧಿಯ ಸ್ಥಿತಿಯೆಂದು ? ಲಗ್ನ ಯಾವುದು ? ಗ್ರಹಾನುಕೂಲತೆ ಯಾವ ರೀತಿಯದು ? ಎಂದು ವಿಚಾರಿಸುತ್ತಿದ್ದನು. ರಾಣಿಯ ಸಂಜೆಯೂಳಿಗದ ದಾಸಿಯೊಬ್ಬಳು ಸಂತಸದಿಂದ ಬಂದು ವಂದಿಸಿ 'ಮಹಾರಾಯನಿಗೆ ಪಟ್ಟದ ಕುಮಾರನು ಹುಟ್ಟಿದನು' ಎಂದಳು. ಆ ಅಮೃತದ ನುಡಿ ರಾಯನ ಕಿವಿಹೊಕ್ಕು ಮನದಲ್ಲಿ ಪಸರಿಸಲು ತಾನೂ ದೇವತೆಯೊಂದೂ ಬ್ರಹ್ಮನೆಂದೂ ಬಗೆದು ಹೆಚ್ಚಿ ಆ ಭಂಡಾರದಲ್ಲಿರುವ ದೊಡ್ಡ ಕೋಶದ ಹೊನ್ನರನ್ನದ ತೊಡುಗೆಗಳನ್ನು ಆಕೆಗೆ ಕೊಟ್ಟು ಕಳುಹಿಸಿ ಜಾತಕದ ಸ್ಥಿತಿಯನ್ನು ವಿಚಾರಿಸಿದನು.

ಅತಿಹರ್ಷದಿಂದ ಜೋಯಿಸರು "ದೇವ ಚಿತ್ತೈಸಬೇಕು. ಲಗ್ನ- ಹೋರಾದ್ರೇಕ್ಕಾಣಾದಿ ಭೇದ ವಿಭಾಗದ ಸೂಕ್ಷ್ಮಕಾಲದ ಸ್ವರೂಪಗಳಲ್ಲಿರುವ ಗ್ರಹಾನುಕೂಲತೆಯ ಹೆಚ್ಚಳವನ್ನು ಭಾವಿಸಲು ಬೇರೆ ಬೇರೆ ಸಂಹಿತೆಗಳ ರಾಜಯೋಗದ ಅದಾಯಗಳ ಶ್ಲೋಕಗಳೆಲ್ಲಕ್ಕೂ ಈ ಜಾತಕವೊಂದೇ ಉದಾಹರಣೆಯಾಗಿದೆ. ನಾವೆಷ್ಟು ಹೊಗಳುವೆವು ? (ಹೋಗಳೋಣ) ಎಂದು ಹೇಳಿದರು.

ಅಳಹಿಯ ಸಿಂಗರಾರ್ಯರೂ "ಈ ಜ್ಯೋತಿಷ್ಯವೆಂತಾದರೂ ಇರಲಿ. ಸಾಹಿತ್ಯ ಪರಂಪರೆಯಿಂದ ನಾನು ಓದಿದ ಜಾತಕ ಫಲಗಳನ್ನು ಹೇಳುವೆನು. ಈ ರಾಜಕುಮಾರನು ತನ್ನ ಜಾತಕದಲ್ಲಿ, ಪಾರ್ಥಿವ ವರ್ಷದಿಂದ ಸಕಲ ಪಾರ್ಥಿವ(ರಾಜ)ರಿಗೆ ಶ್ರೇಷ್ಠನೂ ದಕ್ಷಿಣಾಯನದಿಂದ ದಕ್ಷಿಣದ ಚಕ್ರವರ್ತಿಯೂ ಅಶ್ವಯುಜಮಾಸದಿಂದ ಅಸಂಖ್ಯಾತ ಅಶ್ವಸೇನಾಧೀಶನೂ ಶುದ್ಧ ಪಕ್ಷದಿಂದ ಅಂತರ್ಬಾಹ್ಯ ಪರಿಶುದ್ಧನೂ ವೈಷ್ಣವನೂ ಭದ್ರತಿಥಿಯಿಂದ ಸಕಲ ವೈಷ್ಣವ ಕುಲೋದ್ಧಾರಕರನೂ ಚಂದ್ರವಾರದಿಂದ ಎಲ್ಲ ಸಜ್ಜನರ ಚಿತ್ತಕ್ಕೆ ಆಹ್ಲಾದವುಂಟು ಮಾಡುವವನೂ ಎನಿಸುವನು ಮತ್ತು ಈ ಕುಮಾರನು ಅಪರಿಮಿತ ಕನ್ಯಾದಾನ ಮಾಡುವುದರಿಂದ ತಾನು ದಾನ ಕೊಳ್ಳಲು ಬಯಸಿದಂತೆ ಸೂರ್ಯನು ಕನ್ಯಾರಾಶಿಗೆ ಬಂದಿರುವನು. ಮುನ್ನ ತನ್ನ ವಂಶದ ಪುರೂರವ, ನಹುಷ, ಯಯಾತಿ, ರಂತಿ, ಶಶಿಬಿಂದು ಮುಂತಾದವರಂತೆ ಈಗಲೂ ಅಖಂಡ ಭೂಮಂಡಲಕ್ಕೆ ಒಡೆಯನಾಗುವನು. ಅದಕ್ಕೆ ನಾನೇ ಸಾಮ್ರಾಜ್ಯಾಭಿಷೇಕ ಗೈಯುವೆನು. ಎಂದು ಪ್ರತಿಜ್ಞೆಗೈದಂತೆ ಚಂದ್ರನು ತನ್ನ ಮೈಕಾಂತಿಯಿಂದ ಕುಂಭ ಹಿಡಿದಿರುವನು (ಕುಂಭರಾಶಿಗೆ ಬಂದಿರುವನು) ಮತ್ತು ಇವನು ಹದಿನಾರು ಮಹಾದಾನಗಳನ್ನು ಮಾಡುವುದಲ್ಲದೆ ತನ್ನನ್ನು ಆಶ್ರಯಿಸಿದ ವಿದ್ವತ್ಕವಿಗಳಿಂದ ತುಲಾದಾನ ಮಾಡಿಸುವನು ಎಂಬುದನ್ನು ತಿಳಿಸುವಂತೆ ಬುಧ, ಕವಿ (ಶುಕ್ರ)ಗಳು ಮಂಗಳ ಸಹಿತ ತುಲಾರಾಶಿಗೆ ಸಂದರು. ಈ ರಾಜಕುಮಾರನು ರಾಜ್ಯವಾಳುವೆಡೆಯಲ್ಲಿ ಅಧ್ಯಯನ ಮತ್ತು ಅಧ್ಯಾಪನಗಳನ್ನುಳಿದು ಮಿಥುನ (೧. ಮಿಥುನರಾಶಿ, ೨. ಜತೆ ಬಯಸುವ) ಭಾವದಲ್ಲಿದ್ದರೆ ಗೌರವವು ದಕ್ಕಲಾರದೆಂದೂ ಆಳುಕಿದಂತೆ ಬೃಹಸ್ಪತಿಯೂ ವಿಷುಕರ್ಕಾಟಕ ಮಧ್ಯದಲ್ಲಿ ಹೆದರಿಕೊಂಡಿರುವನು. ಇಂತಹ ತೇಜಸ್ವೀ ಕುಮಾರನಾದರೂ ಇವನ ಅರಸುತನದಲ್ಲಿ ಮಂದನಿಗೆ (೧. ಮಂದಬುದ್ಧಿಯುಳ್ಳವ ೨. ಶನಿಗ್ರಹ) ಮಂದಾದಿಕಾರವಲ್ಲದೆ ಮುಖ್ಯಾಧಿಕಾರ ವಿಲ್ಲವೆಂಬುದನ್ನು ತೋರಿಸುವಂತೆ ಶನಿಯು ಮೇಷಾಧಿಷ್ಠಿತನಾದನು. ಈ ದಿನ ತಾಮಸವೃತ್ತಿಯವರಿಗೆ ಹಾನಿಯೆಂಬುದನ್ನು ತೋರುವಂತೆ ರಾಹುಕೇತುಗಳು ಕರ್ಕಾಟಕ ಮಕರ (೧. ಎರಡು ರಾಶಿಗಳು ೨. ಏಡಿ ಮತ್ತು ಮೊಸಳೆಗಳಿಂದ) ಗ್ರಸ್ತರಾದರು. (ತೊಂದರೆಗೊಳಗಾದರು) ಎಂದು ನುಡಿದ ಅಳಹಿಯ ಸಿಂಗರಾರ್ಯರ ಮಾತು ಕೇಳಿ ಸಂತಸಗೊಂಡು ರಾಜನು ಕಳುಹತಕ್ಕವರನ್ನು ಕಳುಹಿಸಿದನು. ತಾನು ತನ್ನ ಚಿಕ್ಕ ಮಗನ ಮುದ್ದು ಮುಖವನ್ನು ನೋಡಿ ದಾನಗಳನ್ನಿತ್ತು ಪಿತೃಋಣ ತೀರಿಸುವೆನೆಂದು ಪುರೋಹಿತ, ಪರಿವಾರದವರೊಡನೆ ಮುಂದೆ ಸಾಗುತ್ತಿರುವ ಹಲವಾರು ಸುಗಂಧದೆಣ್ಣೆಯ ದೀಪಗಳ ಬೆಳಕಿನಲ್ಲಿ ನಡೆದು ಸೂತಿಕಾಗೃಹದ ಬಾಗಿಲ ಹೊರಗಿನ ದೊಡ್ಡ ಜಗಲಿಯಲ್ಲಿ ರತ್ನದ ಮಣೆಯ ಮೇಲೆ ಕುಳಿತನು. ಅಲ್ಲಿ, ಹೊಸತಿಲ ಸನಿಹದಲ್ಲಿ ಸಾವಧಾನವಾಗಿ ಕುಳಿತುಕೊಂಡ ಬ್ರಾಹ್ಮಣಮುತ್ತೈದೆಯೊಬ್ಬಳ ತೊಡೆಯ ಮೇಲೆ ತನ್ನ ಮೈಕಾಂತಿಯಿಂದ ಸುತ್ತುವರಿದ ದೀವಿಗೆಗಳನ್ನು ಹೀಗಳೆಯುತ್ತ, ಮೈಯ ಕೆಂಪಡರಿದುದರಿಂದ ಮುಂಜಾವಿನ ಕೆಂಪುಕಿರಣ ಗಳನ್ನು ಹೊಂದಿದ ಸೂರ್ಯನಂತೆಯೂ ಸಂಜೆಯ ಕೆಂಪುಕಾಂತಿಯಿಂದೊಡಗೂಡಿ ಹುಟ್ಟುವ ಚಂದ್ರನಂತೆಯೂ ಕೋಮಲತೆಯಿಂದೊಡಗೂಡಿದ ಕಲ್ಪವೃಕ್ಷದ ಕೆಂದಳಿರಿನ

ಕೊಂಬೆಯಂತೆಯೂ ಆಗ ಮಾತ್ರ ಅರಳಿದ ಕೆಂದಾವರೆಯ ಸಮೂಹದಂತೆಯೂ ಹೊಮ್ಮಿ ಹೊಳೆಯುತ್ತಿರುವ ಹೊಸಬಗೆಯ ಮಂಗಳ (ಅಗ್ನಿದೇವ ?) ನಂತೆಯೂ ತೋರುವ ಮೈಯೂ ಎಳಬಿಸಿಲಿಂದ ಅಥವಾ ಹವಳದ ಕುಡಿಗಳಿಂದ ಇಲ್ಲವೆ ಕೆಂಪುರತ್ನಗಳಿಂದಲಾದರೂ ಸಿದ್ಧಗೊಳಿಸಿದಂತಿರುವ ಕೈಕಾಲು ಬೆರಳುಗಳೂ ಆಗಿ ತನಗುಳ್ಳ ನಾಲ್ಕು ತೋಳುಗಳನ್ನು ತೋರಿಸದೆ ಯಶೋದೆಯ ಮಡಿಲಲ್ಲಿ ಎರಡು ತೋಳುಗಳಿಂತಿದ್ದ ಆ ಕೃಷ್ಣನಂತೆ ಹಲವು ಮಹಾಪುರುಷಲಕ್ಷಣಗಳಿಂದ ಶೋಭಿಸುವ ಎಳೆಶಿಶುವನ್ನು ನೋಡುವಲ್ಲಿ ನಿರ್ನಿಮೇಷನಾಗಿ, ಅಡಿಗಡಿಗೆ ಒರೆಸಿದರೂ ಹರಿಯುವ ಸುಖಾಶ್ರುವಿನಿಂದ ನೆನೆದ ತದೇಕದೃಷ್ಟಿಯಾಗಿ ಸ್ನೇಹರಸದಿಂದ ನುಡಿಸುವಂತೆಯೂ ತಬ್ಬಿಕೊಳ್ಳುವಂತೆಯೂ ಈಂಟುವಂತೆಯೂ ನಿಟ್ಟಿಸಿ ನಿಟ್ಟಿಸಿ ಹರ್ಷಪಟ್ಟನು.

ಅಳಹಿಯ ಸಿಂಗರಾರ್ಯನು ಈ ರಾಜಕುಮಾರನ ಅಂಗಾಂಗಗಳ ಚಕ್ರವರ್ತಿ ಲಕ್ಷಣಗಳನ್ನು ನಿರೀಕ್ಷಿಸಿ ಹೇಳಿದನು. "ಮಹಾರಾಜ ಚಿತ್ತೈಸಬೇಕು. ಅರೆಬಿರಿದ ಕೆಂದಾವರೆಯನ್ನು ಹೋಲುವ ಮುದ್ದುಮುಖದಲ್ಲಿ ಕಪ್ಪಾಗಿ ಸಣ್ಣದೆನಿಸುವ ಎವೆ ಸಾಲ್ಗೊಂಡು ಕಿವಿಯವರೆಗೆ ದೀರ್ಘಿಸಿದ ಬೊಗಸೆಗಣ್ಣುಗಳೂ ತಳತಳಿಸುತ್ತವೆ. ಕಪ್ಪುರ ಕಮಲಗಳ ಪರಿಮಳಗಳನ್ನು ಬೆರೆಸಿದಂತೆ ತೋರುವ ಕೆಂಪಾದ ಬಾಯಿಯ ತನಿಗೆಂಪು ಸವಿಯಲೆಂಬಂತೆ ನೀಳಗೊಂಡು ನಸುಬಾಗಿದ ಮೂಗು ಮಿಗೆ ಸೊಗಸುತ್ತಿದೆ. ಸರಿಗೆ ಧ್ವಜ ತಾವರೆಯ ರೇಖೆಯಿಂದೊಡಗೂಡಿದ ಮೆಲ್ಲಡಿಗಳು ಎಲ್ಲಾ ರಾಜರ ಶಿರೋಮಣಿಗಳ ಸೋಂಕಿಗೆ ಯೋಗ್ಯವಾಗಿವೆ. ಮುಗಿಲ ಮೊಳಗಿನಂತೆಯೂ ಭೇರಿಯ ನಾದದಂತೆಯೂ ದನಿ ಹೆಚ್ಚಳ ಪಡೆದಿದೆ. ಇವೆಲ್ಲವೂ ಚಕ್ರವರ್ತಿಗಳ ಲಕ್ಷಣಗಳು. ಇಂತಿರುವ ಕುಮಾರನ ಜನನದಲ್ಲಿ ದೇವರೂ ಅಂತಃಪುರವೂ ನಾವೂ ಊರವರೂ ನಾಡುಬೀಡಿನವರೂ ಸಂತಸಪಡುವುದು ಸಹಜವಷ್ಟೇ ? ದೇವರು ಚೇತನ ಅಚೇತನ ಭೇದಭಾವವಿಲ್ಲದೆ ಸಕಲಲೋಕಗಳ ಸಂತಸವನ್ನು ಕಾಣಬೇಕು. ಹಿಂದಿನ ರಾಜರು ಉಡಿಸಿದ ಯಶವೆಂಬ ದುಕೂಲವು ಹಳೆಯದಾಗಿ ಮಾಸಿದೆ. ಈಗ ಈ ಕುಮಾರನು ಹೊಸ ಯಶದ ದುಕೂಲವನ್ನೀಯುವನು ಎಂಬ ಹರ್ಷದಿಂದೆಂಬಂತೆ ಹತ್ತೂದಿಕ್ಕುಗಳು ಪ್ರಸನ್ನಗೊಂಡವು. ಈ ಕುಮಾರನು ದಾಳಿಯಿಡುವೆಡೆಯಲ್ಲಿ ವೈರಿರಾಜರ ಪಟ್ಟಣಗಳನ್ನು ನನಗೆ ಆಹುತಿ ಕೊಡುವನೆಂಬ ನಂಬುಗೆಯಿಂದ ಅಗ್ನಿ ಬಲಮುರಿಗೊಂಡು ಹೊಗೆಗಳೆದು ತೊಳಗಿದುದು. ಸಕಲ ಸಜ್ಜನರ ಮನದ ಕಲುಷವನ್ನು ಕಳೆದು ಸುಪ್ರಸನ್ನಗೊಂಡುದಿದನ್ನು ಅಭಿನಯಿಸಿ ತೋರಿಸುವಂತೆ ಹಲವಾರು ಹೊಳೆ ಕೊಳಗಳ ನೀರು ಕಲಕುಗಳೆಂದೂ ತಿಳಿಯಾದವು. ತಮಸ್ಸು ತಗ್ಗಿ ಸತ್ವವು ಏಳಿಗೆ ಹೊಂದುವುದೆಂಬುವುದನ್ನು ತೋರುವಂತೆ ಆಕಾಶದಲ್ಲಿ ಕತ್ತಲೆ ಕಳೆದು ಚಂದ್ರ ತಾರೆಗಳು ಕಾಂತಿದಳೆದವು. ಅಷ್ಟೂ ಜನಕ್ಕೆ ಧರ್ಮ, ಅರ್ಥಗಳ ಬಯಕೆಯನ್ನು ಪೂರ್ಣಗೊಳಿಸುವನೆಂಬುದನ್ನು ಎಚ್ಚರಿಸುವಂತೆ ಎಲ್ಲ ಸಸ್ಯಗಳು ಫಲಭರಿತವಾದವು. ತೆಂಕಣನಾಡು ತೇಜಸ್ಸು ಪಡೆಯಿತೆಂಬುದನ್ನು ತಿಳಿಸುವಂತೆ ಅಗ್ಗಳಿಕೆ ಅತಿಶಯವಾಯಿತು. ಭಗವಂತನ ಅವತಾರವೆಂಬುದನ್ನು ಪ್ರಕಟಿಸುವಂತೆ ದುಷ್ಟಜನರು ಕ್ಷೀಣಿಸಿ ಶಿಷ್ಟರು ಸಮೃದ್ಧರಾದರು" ಎಂದು ಹೀಗೆ ಹೊಗಳಿ ಹರಸಿದರು.

ರಾಯನೂ ಅತಿಹರುಷದಿಂದೆದ್ದು ಇವರೊಡನೆ ಹೊರಗಡೆಗೆ ಬಂದನು. ಅಲ್ಲಿ ಸಮ್ಮುಖದ ಪಂಡಿತರಿಗೂ ಊರವರಿಗೂ ನಾಡು ಬೀಡುಗಳವರಿಗೂ, ಹೆಚ್ಚೇನು ? ಹಾರುವರೆಂದು ಹೆಸರುಳ್ಳ ಎಲ್ಲರಿಗೂ ಅವರವರ ಅಂತಸ್ತು ಅರಿತು ಅಗ್ರಹಾರಗಳನ್ನು ಬೆಳೆಯುವ ಹೊಲಗಳನ್ನು ಉದ್ಯಾನಗಳನ್ನು ಹೊನ್ನುಗಳನ್ನು ಕೊಟ್ಟು ಮನ್ನಿಸಿ ತೃಪ್ತಿಗೊಳಿಸಿ ಕಳುಹಿಸಿದನು. (ತಾನು) ಸುಖದಿಂದ ಪುತ್ರಜನ್ಮೋತ್ಸವವನ್ನಾಚರಿಸುತ್ತಿದ್ದನು.

ಸೂತಕವನ್ನು ಕಳೆದು ಸುಮುಹೂರ್ತದಲ್ಲಿ ನಾಮಕರಣ ಮಹೋತ್ಸವವನ್ನಾರಂಭಿಸಿ ಮುನ್ನ ತನ್ನ ಮೇಲೆ ಪಿತೃಋಣಭಾರವಿದ್ದುದರಿಂದ ಆಯಾ ಉತ್ಸವಗಳಲ್ಲಿ ನಾನು ನೆರವೇರಿಸುವ ಪುಣ್ಯಕಾರ್ಯಗಳೆಲ್ಲವೂ ಆ ಸಾಲದ ಕ್ರಮಕ್ಕೆ ಸಾಲದೆ ಇದೆ. ಈಗ ಋಣ ನಿಶ್ಶೇಷವಾಗಿ ತೀರಿಹೋದುದರಿಂದ ಈಗ ಮಾಡುವ ಕಾರ್ಯಗಳು ಸಾರ್ಥಕವಾದುವೆಂದು ಸಂತಸದಿಂದ ಮಾಡಿ ಸುಮುಹೂರ್ತದಲ್ಲಿ ಶ್ರೀಚಿಕ್ಕದೇವರಾಯನೆಂಬ ಒಳ್ಳೆಯ ಹೆಸರಿಟ್ಟನು. ಆ ಹೆಸರಿನಲ್ಲಿ ಅರ್ಥವನ್ನು ಪರೀಕ್ಷಿಸಲು, ಎಲ್ಲ ಲೋಕಗಳಿಗೆ ರಂಜಕನಾದುದರಿಂದ ರಾಯನೆಂದೂ ಯಾವತ್ತೂ ಲೀಲೆಯೂ ಗೆಲುವೂ ಒಳ್ನಡತೆಯೂ ಕೀರ್ತಿಯೂ ಸಂತಸವೂ ಕಳೆಯೂ ಉಂಟಾಗಿರುವುದರಿಂದ ದೇವನೆಂದೂ, ಇವೆಲ್ಲವೂ ಚಿಕ್ಕಂದಿನಲ್ಲಿ ಒದಗುವುದರಿಂದ ಚಿಕ್ಕದೇವರಾಯನೆನಿಸುವನೆಂದೂ ಉಪೇಂದ್ರ (ಇಂದ್ರನ ತಮ್ಮ) ನ ಅವತಾರವಾದುದರಿಂದ (ದೇವರಾಯನೆಂಬುದು) ಸಹಜವಾದ ಹೆಸರೆಂದೂ ಪಂಡಿತರು ಹಿಗ್ಗುವರು. ಬಳಿಕ ಮಹೋತ್ಸವದೊಡನೆ ಅಳಹಿಯ ಸಿಂಗರಾರ್ಯರೂ ಕುಮಾರನಿಗೆ, ರಾಜಕುಮಾರನ ಗೆಳೆತನಕ್ಕೆ ತಕ್ಕ ಶಕ್ತಿಯೂ ಸಾಮರ್ಥ್ಯವೂ ದೊರಕೊಂಡಿರುವುದರಿಂದ ಸಾರ್ಥಕವಾದ 'ತಿರುಮಲೆಯಾರ್ಯ'ನೆಂಬ ಒಳ್ಳೆಯ ಉಡುಗೆಗಳನ್ನು ಕೊಟ್ಟು ಮನ್ನಿಸಿ ಸಂತಸದಿಂದಿದ್ದನು.

ಚಿಕ್ಕದೇವರಾಯನ ಬಾಲಲೀಲೆ

ದಿನಕ್ರಮದಿಂದ ಕುಮಾರನು ಚಂದಿರನಂತೆ ಬೆಳೆಯುತ್ತ, ತನ್ನ ಹೊನ್ನಸರಪಳಿಯಿಂದ ಕಟ್ಟಿದ ರತ್ನದ ತೊಟ್ಟಿಲಲ್ಲಿ ದೃಷ್ಟಿದೋಷ ತಟ್ಟದಂತೆ ಎರಡೂ ಮೆದುವಾದ ಗಲ್ಲಗಳಲ್ಲಿಟ್ಟ ಕಾಡಿಗೆಯ ಬಟ್ಟೂ ಕೊರಳಲ್ಲಿ ಕಟ್ಟಿದ ಪಂಚಾಯುಧ ಮುದ್ರೆಯಿಂದಂಕಿತವಾದ ಚಿಕ್ಕಚಿನ್ನದ ಬಟ್ಟೂ, ಹಣೆಯಲ್ಲಿ ರಕ್ಷೆಗೊಳಿಸಿದ ನಾರಾಯಣನ ಪಾದದ ಕಪ್ಪುರದ ಹುಡಿಯ ಬಿಂದುವೂ ಒಪ್ಪಿರಲು ತನ್ನಷ್ಟಕ್ಕೆ ತಾನು ಕಾರಣವಿಲ್ಲದೆ ನಗುತ್ತಲೂ ಮೈಕೈ ಕಾಲುಗಳನ್ನು ನೀಡುತ್ತ ಮಲಗಿರುವ ಬಗೆಯನ್ನು ತನ್ನ ಕುಲವರ್ಧನನಾದ ಕುಮಾರನನ್ನು ಕಾಯಲೆಂದು ಪ್ರೇಮಪೂರಿತನಾದ ಚಂದ್ರನು ಬಂದನೆಂಬ ಸಂದೇಹವನ್ನುಂಟುಮಾಡುತ್ತ ನಿಲುಕಿಯೂ ನಿಲುಕದಂತೆ ಜೋಲುವ ರತ್ನದ ಚಂಡನ್ನು ಹಿಡಿಯುವುದಕ್ಕೆ ಎಳೆಬಳ್ಳಿಯಂಥ ಕೈ ನೀಡುತ್ತ ಹವಣಿಸುವ ಮರಿಸಿಂಹವನ್ನು ಹೋಲುವ ರೀತಿಯನ್ನು । ಅಂತಃಪುರದ ಸ್ತ್ರೀಯರು ಒಬ್ಬರ ಕೈಯಿಂದೊಬ್ಬರು ಕೊಂಡು ಉತ್ತಮರತ್ನದಂತೆ ಎದೆಯಲ್ಲಿ ಅಪ್ಪಿಕೊಂಡು ಸಂತಸದಿಂದ ಮಾತನಾಡಿಸುವಾಗ ಅರಳಿದ ಕಮಲದಂತೆ ಶೋಭಿಸುವ ಕೆಂಪು ಬಾಯಿಂದ ಸಿಹಿರಸದಂತೆ ನಸು ಜೊಲ್ಲು ಸುರಿಯುತ್ತಿರಲು ತೊದಲು ನುಡಿಯುವ ಸೊಗಸನ್ನು । ಸ್ಫಟಿಕದ ಗೋಡೆಯ ಮರೆಯಲ್ಲಿರುವ ಅರಸಂಚೆಯ

ಮರಿಯನ್ನು ಹಿಡಿಯಲು, ನೀಡಿದ ಕೈ ನಿಲುಕದಿದ್ದರು ಪ್ರತಿಬಿಂಬವನ್ನು ಕಂಡು ಅಂಜಿ ಅದು ಅತ್ತಿತ್ತ ಚಲಿಸುತ್ತಿರಲು ತಾನು ಓಡೋಡಿ ಬೆನ್ನು ಬಿಡದೆ ಮೊಗಸಾಲೆ ಹೊನ್ನ ಜಗುಲಿಯ ಪಚ್ಚೆಗಂಬದ ಮುಂಭಾಗದಲ್ಲಿ ವಜ್ರಗಳಿಂದ ರಚಿಸಿದ ಹಂಸಮರಿಯನ್ನು ಹಿಡಿದು ಎಳೆದೆಳೆದು ತೊಂದರೆಪಡಿಸುವ ಸಂಭ್ರಮವನ್ನು । ಬೆದರುಗಣ್ಣುಗಳೂ ನುಣುಪಾದ ಮೈಯೂ ಚಿಕ್ಕಕಾಲುಗಳೂ ಆಗಿ ತನ್ನ ಕೊರಳ ಕಿರುಗಂಟೆಯ ದನಿಗೆ ಬೆಚ್ಚಿದಂತೆ ಸಮೀಪದಲ್ಲಿ ನಿಲ್ಲದೆ ನೆಗೆಯುವ ಎರಳೆಯ ಮರಿಯ ಹಿಂಗಾಲುಗಳೆರಡನ್ನೂ ಹಿಡಿದೆಳೆಯುವ ಪರಾಕ್ರಮವನ್ನು ಕಂಡು ದಾಸಿ ಆತುರದಿಂದ 'ಬೇಡಬೇಡಲೆ ಕಂದ ! ಬೇಡ ಬೇಡ ನನ್ನ ಆನೆಯೇ ! ಬೇಡ ಬೇಡೆನ್ನ ಮರಿಸಿಂಹವೇ ! ಬೇಡ ಬೇಡ !!' ಎನ್ನುತ್ತ ಬೆಂಬತ್ತಿ ತಡೆದರೂ ಅವಳ ಕೈಗೆ ಸಿಕ್ಕದೆ ಅಂಗಳದಲ್ಲಿ ಸುತ್ತಿ ಸುತ್ತಿ ದಣಿಸಿ ಬಳಲಿಸುವ ಶಕ್ತಿಯನ್ನು । ಎರಡೂ ನಿಡುದೋಳುಗಳನ್ನು ನೀಡಿ ಕರೆಯುವ ಹಲವು ಜನ ರಾಜರ ಸಾಲುಗಳನ್ನು ಕಡೆಗಣ್ಣಿನಿಂದ ಕಡೆಗಣಿಸಿ ಕೌತುಕದಿಂದ ಒಂದೇ ಸಲಕ್ಕೆ ಕವಿಯುವ ದಿವ್ಯಾಸ್ಥಾನದ ಹಲವು ಜನರ ಸ್ನೇಹದ ದೃಷ್ಟಿಯೆಂಬ ಮಹಾವೃಷ್ಟಿಯಲ್ಲಿ ನೆನೆದು ಒಯ್ಯಾರದಿಂದ ತನ್ನ ರತ್ನದ ಸಿಂಹಮಣೆಯನ್ನು ಸೇರಿ ನಿಲ್ಲುವ ಅಂದವನ್ನು ಕಂಡು ರಾಜನು ವೈಭವದಲ್ಲಿ ಇಂದ್ರನನ್ನು ಸರಿಗಟ್ಟಿದ್ದು ಕಣ್ಣುಗಳಿಂದಲೂ ಸರಿಗಟ್ಟಬಯಸಿದನು. (ಇಂದ್ರನಂತೆ ಸಹಸ್ರ ಕಣ್ಣುಗಳುಳ್ಳವನಾಗ ಬಯಸಿದನು ಎಂದು ಭಾವ.)

ಇಂತು ಸಂತಸದಿಂದ ಬೆಳೆಯುವ ರಾಜಕುಮಾರನೊಡನೆ ಅಳಹಿಯ ಸಿಂಗರಾರ್ಯನ ಕುಮಾರ ತಿರುಮಲೆಯಾರ್ಯನು ಸಮಾನವಾದ ತೊಟ್ಟಿಲಲ್ಲಿ ಬೆಳೆದು ಅಂಬೆಗಾಲಿಕ್ಕುವಿಕೆ ಯಲ್ಲೂ ತೊದಲು ನುಡಿಯಲ್ಲೂ ಜೊತೆಗೂಡಿ ಹಲವು ಬಾಲಲೀಲೆಗಳಲ್ಲಿ ಪ್ರತಿಬಿಂಬ ದಂತಿದ್ದನು.

ಚಿಕ್ಕದೇವರಾಯನ ವಿದ್ಯಾಭ್ಯಾಸ, ಲಿಪಿಗ್ರಹಣ

ಕ್ರಮದಿಂದ ಚಿಕ್ಕದೇವರಾಯನ ಉಪನಯನಾದಿ ವರ್ಣಧರ್ಮ ಪರಿಕರ್ಮ ಮಾಡಲ್ಪಟ್ಟವನಾಗಿ ವಿದ್ಯೆ ಕಲಿಯುವಲ್ಲಿ ಬುದ್ಧಿಕೌಶಲ್ಯವನ್ನು ಕಂಡು ಅತಿಹರ್ಷದಿಂದ ಕಲಿಸುವ ಉಪಾಧ್ಯಾಯರ ವಿದ್ಯೆಗಳೆಲ್ಲವನ್ನೂ ದೋಷಕಳೆದ ಕೈಗನ್ನಡಿಯನ್ನು ಹೋಲುವ ತನ್ನ ಚಿತ್ತದಲ್ಲಿ ಧರಿಸಿ ಹೊಸಕಾಂತಿಯನ್ನು ಹೊಮ್ಮಿಸಿದನು. ಹಲವು ವಿದ್ಯೆಗಲಿಸುವ ಉಪಾಧ್ಯಾಯರಲ್ಲಿ ಕಾವ್ಯ ಕಲಿಸುವವರು ಮಹಾರಾಜನ ಸನ್ನಿಧಿಗೆ ಬಂದು ಸಂತಸದಿಂದ "ದೇವ ಚಿತ್ತೈಸಬೇಕು. ಕುಮಾರ ಚಿಕ್ಕದೇವರಾಯನು ಓದುವಲ್ಲಿ ಉಸಿರು, ನಾದ, ಘೋಷ (ಮೃದು), ಅಘೋಷ (ಕರ್ಕಶ) ಅಲ್ಪಪ್ರಾಣ, ಮಹಾಪ್ರಾಣತ್ವಗಳು ತೋರ್ಪಡುವಂತೆ ಅಕ್ಷರಗಳು ಒಂದರೊಳಗೊಂದು ಬೆರೆತು ಸಂಕರವಾಗದಂತೆಯೂ ಒಂದಕ್ಕೊಂದು ಅಗಲಿ ಅಸಂಗತವಾಗದಂತೆಯೂ ಅತಿವೇಗವನ್ನೂ ವಿಳಂಬವನ್ನೂ ಉಳಿದು ಮಧ್ಯವೇಗದಲ್ಲೋದುವ ವಾಚಕಶಕ್ತಿಯೂ ನುಡಿಯಲ್ಲಿ ಹುದುಗಿದ ಅರ್ಥವನ್ನು ಅಂಗೈನಲ್ಲಿಯೆ ತೋರುವಂತೆ ಪದ

ವಾಕ್ಯದ ವಿಭಜನೆಯಲ್ಲಿ ನಿಲ್ಲಿಸುವ ನೆಟ್ಟನೆ ಓದುವ ಅರ್ಥಕನುಸಾರವಾಗಿ ಧ್ವನಿಯಲ್ಲಿ ಮೃದು, ಕಠಿಣ, ನುಣುಪು, ಜೋರುಗಳನ್ನುಂಟುಮಾಡುವ ಓದುಗಾರಿಕೆಯ ಸೊಬಗು ಕೇಳುವ ಅರ್ಥವನ್ನು ಮನನಗೊಳಿಸಿ ಊಹೆಯಿಂದ ಈ ಪ್ರಕರಣಕ್ಕೆ ಇದು ತಾತ್ಪರ್ಯವೆಂಬುದನ್ನು ನಿಶ್ಚಯಿಸಿ ಗುರುತಿಸಿಕೊಂಡು ಮರೆಯದೆ ನೆನೆದಿರುವ ಧಾರಣಶಕ್ತಿಯೂ ಬೇರೆಯವರಿಗೆ ತಿಳಿಸುವಲ್ಲಿ ಪದ ಪದಕ್ಕೆ ಅರ್ಥವನ್ನು ಬೇರ್ಪಡಿಸಿ ವಿಸ್ತರಿಸಿ ಹೊಚ್ಚಿಸಿ ತಾತ್ಪರ್ಯವೆಲ್ಲವನ್ನೂ ಒಂದುಗೂಡಿಸಿ ಒಂದೆರಡು ಮಾತುಗಳಲ್ಲಿ ಅಡಕಗೊಳಿಸಿ ತಿಳಿಯುವಂತೆ ಸಮಗ್ರವಾದ ಅರ್ಥ ಹೇಳುವ ಸಾಮರ್ಥ್ಯವು ಅತ್ಯದ್ಭುತವಾಗಿದೆ. ಈ ಬುದ್ಧಿಕೌಶಲವು ಎಲ್ಲಿಯೂ ಕಂಡು ಕೇಳಿದುದಿಲ್ಲ" ಎಂದು ಹೊಗಳಿದರು.

ವಾಚನಾರ್ಥಗ್ರಹಣ

ಪದವಾಕ್ಯ ಪ್ರಮಾಣಗಳನ್ನು ಓದಿಸುವವರೂ "ಚಿತ್ತೈಸಬೇಕು ಮಹಾರಾಜ.ಈ ರಾಜಕುಮಾರನು ಓದಿದ ಒಂದೊಂದು ಪ್ರಕರಣಗಳಲ್ಲಿ ಪೂರ್ವಪಕ್ಷಸಿದ್ಧಾಂತದ ಯುಕ್ತಿಗಳೆಲ್ಲವನ್ನೂ ಕ್ರೋಢೀಕರಿಸಿ ಅವುಗಳಲ್ಲಿಯ ಜಳ್ಳನ್ನು ಕಳೆದು ಸಾರಗಳನ್ನು ಸಂಗ್ರಹಿಸಿ ಅವುಗಳಲ್ಲಿ ಇದು ಪ್ರಬಲ, ಇದು ದುರ್ಬಲವೆಂಬ ತಾರತಮ್ಯವನ್ನು ಕಂಡುಕೊಂಡು ಮೂಲಯುಕ್ತಿಗಳನ್ನೆ ಗುರುತಿಸಿಕೊಂಡಿರುವ ಪಾಂಡಿತ್ಯವನ್ನೂ, ವಾದ, ಕಥೆ ವಿನೋದಗಳಲ್ಲಿ ಪ್ರತಿವಾದದಲ್ಲಿ ಮಾಡುವ ಉಪನ್ಯಾಸವನ್ನು ಕೇಳಿ ಅದರಲ್ಲಿ ಸಂದರ್ಭಕ್ಕೆ ಉಪಯೋಗವಿಲ್ಲದ ಯುಕ್ತಿಗಳನ್ನು ಬೇರ್ಪಡಿಸಿ ಕಳೆದು ಉಪಯುಕ್ತವಾದುದರಲ್ಲಿ ಸಾಧಿಸಬೇಕಾದುದು ಮತ್ತು ಸಾಧನೆಗಳ ಅರ್ಥಗಳಲ್ಲಿ ಯುಕ್ತಿಯ ಆಭಾಸಗಳನ್ನು ಕಡೆಗಣಿಸಿ ಮೂಲಯುಕ್ತಿಗಳನ್ನು ಗುರುತಿಸಿಕೊಂಡು ಅದನ್ನು ಪ್ರತಿಯುಕ್ತಿಯಿಂದ ಜಯಿಸುವ ಕೌಶಲವನ್ನೂ, ಸ್ವಪಕ್ಷವನ್ನು ಉಪನ್ಯಾಸಿಸುವಲ್ಲಿ ಸಂದರ್ಭಕ್ಕೆ ಹೆಚ್ಚು ಕಡಿಮೆಯಿಲ್ಲದೆ ಸಮರ್ಥವಾದ ಮೂಲಯುಕ್ತಿಗಳನ್ನೇ ಹೊಂದಿಸಿ ವಾದಿಯನ್ನು ನಿರುತ್ತರಗೊಳಿಸುವ ನೈಪುಣ್ಯ ಮುಂತಾದ ಹಲವು ವಾದ ಚಾತುರ್ಯಗಳನ್ನು ಹೊಗಳಬೇಕೆಂದರೆ ಎಷ್ಟೋ ಇವೆ. ಅವು ಹಾಗಿರಲಿ. ಮುಂಜಾನೆ ನಾವು ಓದಿಸಿದುದನ್ನು ಮರುದಿನ ಕೇಳುವಲ್ಲಿ ಅವುಗಳಲ್ಲಿ ಊಹಾಪೋಹಗೈದು ತಾತ್ಪರ್ಯವನ್ನು ಗ್ರಹಿಸಿ ಒಪ್ಪಗೊಳಿಸಿ ತಿಳಿಯುವಂತೆ ಹೇಳುವುದರಿಂದ ಅಧ್ಯಾಪಕ ವಿದ್ಯಾರ್ಥಿಕ್ರಮವು ಪಲ್ಲಟವಾಗಿ ತೋರುವುದು" ಎಂದು ಹೇಳಿ ಅತ್ಯಾಶ್ಚರ್ಯಗೊಳಿಸಿದರು.

ಪುರಾಣ ಪರಿಶ್ರಮ

ಪುರಾಣಿಕರೂ "ನಾವು ವಿದ್ಯೆ ಕಲಿತಂದಿನಿಂದ ಈವರೆಗೂ ಹಲವು ಪುರಾಣಗಳನ್ನು ಹಲವು ಬಾರಿ ಮೊದಲಿಂದ ತುದಿಯವರೆಗಾದ ಹಲವು ವ್ಯಾಖ್ಯಾನಗಳ ಮೂಲಕ ಅರ್ಥನಿಶ್ಚಯ ಮಾಡಿ ಬೇರೆಯವರಿಗೆ ಹಲವು ಬಾರಿ ಹೇಳಿದ್ದೇವೆ. ಆದರೂ ಮಹತ್ತಿನಿಂದಾರಂಭಗೊಂಡು ಬ್ರಹ್ಮನಿಂದಂತ್ಯವಾಗುವ ಇಡಿಯ ಸೃಷ್ಟಿಯನ್ನು, ಮನ್ವಂತರಗಳನ್ನು,

ದೇವ ಮಾನವರಾದಿ ವಂಶಗಳನ್ನು, ಆ ವಂಶಗಳಲ್ಲಿ ಪ್ರಸಿದ್ಧರಾದವರ ಹೆಸರುಗಳನ್ನು ಚರಿತ್ರೆಗಳನ್ನು ತಿಳಿದಿರುವೆವಲ್ಲದೆ ವಿವರವಾಗಿ ನೆನಪಾಗದು. ಈ ಕುಮಾರನು ಸೃಷ್ಟಿಗೈಯುವ ನಾರಾಯಣನೆಂಬ ಪರಬ್ರಹ್ಮದ ಸ್ಥಿತಿಯನ್ನು, ಸೃಷ್ಟಿಸಿದ ಪ್ರಕೃತಿ, ಮಹತ್ತು, ಅಹಂಕಾರಗಳು ಪಂಚತನ್ಮಾತ್ರಗಳೂ ಎಂಬ ಎಂಟು ಪ್ರಕೃತಿಗಳೂ ಹನ್ನೊಂದು ಇಂದ್ರಿಯಗಳೂ ಪಂಚಮಹಾಭೂತಗಳೆಂಬ ಹದಿನಾರು ವಿಕಾರಗಳೂ ಆಗಿ ಇಪ್ಪತ್ನಾಲ್ಕು ತತ್ವಗಳ ಕ್ರಮವನ್ನು ಅವುಗಳ ಗುಣಭೇದಗಳನ್ನು ಇವುಗಳಿಂದ ನಿರ್ಮಿಸಿದ ಬ್ರಹ್ಮಾಂಡವನ್ನು ಅದರಲ್ಲಿ ಹುಟ್ಟಿದ ಬ್ರಹ್ಮನ ರೀತಿಯನ್ನು ಅವನು ಹೊಮ್ಮಿಸಿದ ಮಾನಸಿಕ, ಆಂಗಿಕ ಸೃಷ್ಟಿ ಭೇದಗಳನ್ನು ಅಲ್ಲಿ ಹುಟ್ಟಿದ ಸತ್ವರಜಸ್ತಮೋರೂಪದ ಗುಣಭೇದಗಳಾದ ದೇವ, ಮಾನುಷ, ತಿರ್ಯಕ್ ಸ್ಥಾವರ ರೂಪದ ಪ್ರಾಣಿಗಳನ್ನು ಅವುಗಳಲ್ಲಿ ಒಂಭತ್ತು ಪ್ರಜಾಪತಿಗಳ ಮನುಗಳ ಜೋಡು ಸೃಷ್ಟಿಯಿಂದ ಹುಟ್ಟಿದ ವಂಶಭೇದಗಳನ್ನು ಅವುಗಳಲ್ಲಿ ಜನಿಸಿದ ದೇವತೆಗಳ ಮುನಿಗಳ ರಾಜರ ಹೆಸರುಗಳನ್ನು ಅವರವರು ಈ ಕಾಲದಲ್ಲಿ ಈ ದೇಶದಲ್ಲಿ ಈ ಊರುಗಳಲ್ಲಿ ಇದ್ದು ಈ ಕಾರ್ಯಗಳನ್ನೆಸಗಿದರೆಂಬುದನ್ನು ಅವೆಲ್ಲಕ್ಕೂ ಆಧಾರವಾದ ಹದಿನಾಲ್ಕು ಲೋಕಗಳ ವಿಸ್ತಾರವನ್ನು ಅದರಲ್ಲಿ ಭೂಲೋಕದ ಹಲವು ದ್ವೀಪಗಳಲ್ಲಿರುವ ಭೋಗಭೂಮಿಗಳನ್ನು, ಹೊಳೆ ಬೆಟ್ಟಗಳಿಂದಲೂ ಹಿಮಾಲಯದಿಂದ ದಕ್ಷಿಣದ ಸಾಗರದವರೆಗೂ ಆಗಿ ವ್ಯಾಪಿಸಿದ ಭಾರತದೇಶದಲ್ಲಿ ಈ ಎಡೆಯಲ್ಲಿ ಈ ಘಟ್ಟ ಈ ಬೆಟ್ಟಗಳು, ಈ ಹೊಳೆಗಳು, ಪಟ್ಟಣಗಳು, ಇವನ್ನಾಳುವ ದೊರೆಗಳ, ಹೆಸರಿದು, ಇವರ ಸಾಹಸವಿದು, ಇವರು ಆಳಿದ ಕಾಲವಿಷ್ಟು. ಈ ಘಟ್ಟ ಹೊಳೆಗಳು ಒಂದಕ್ಕೊಂದು ಇಷ್ಟಿಷ್ಟು ಗಾವುದದಲ್ಲಿವೆ, ಎಂದು ಈ ಮುಂತಾದ ವಿಶೇಷಗಳೆಲ್ಲವನ್ನೂ । ಆಯಾ ಪುರಾಣಗಳ ಸೂಕ್ಷ್ಮಾರ್ಥಗ್ರಹಣದಿಂದಲೂ ಆಯಾ ನೆಲೆಗಳನ್ನು ಬಲ್ಲವರಿಂದಲೂ ತಿಳಿದು ಮನದಲ್ಲಿ ಶಾಶ್ವತಗೊಳಿಸಿ ಅದರಲ್ಲಿ ಏನಾದರೊಂದು ಸಂದೇಹ ತೋರಲು ಬಂದು ನಮ್ಮನ್ನು ಕೇಳಲು ನಮಗೆ ನೆನಪಿಲ್ಲದಿದ್ದರೂ ಹೆಮ್ಮೆಯಿಂದ ಗುಟ್ಟು ತಿಳಿಸದೆ ಇದನ್ನು ಹಿಂದೆ ಹೇಳಿರುವೆನೆಂದೂ ಆಮೇಲೆ ಹೇಳುವೆನೆಂದೂ ಈ ತೆರದ ಒಣ ಸಂದೇಹಗಳನ್ನು ಕೇಳಲಾಗದೆಂದೂ ಕೆಕ್ಕರಿಸಿ ನೋಡಿಯೂ ಬೆದರಿಸಿ ನುಡಿದೂ ಗದ್ದರಿಸಿಯೂ ಕಾಲ ಕಳೆಯುವೆವು. ನಮಗೆ ಇನ್ನೇನು ದಾರಿ" ಎಂದು ಹೇಳಿ ಆನಂದಪಡಿಸಿದರು.

ವೀಣಾ ಪರಿಶ್ರಮ

ವೈಣಿಕರೂ "ತಮ್ಮ ಜನ್ಮಗಳು ಇಂದು ಸಫಲವಾದವು. ವೀಣಾವಾದ್ಯವು ನಿರ್ದುಷ್ಟವಾದುದೆಂಬುದು ಇಂದು ನಿಶ್ಚಿತವಾಯಿತು. ಗಾನವು ಮನೋಹರವೆಂಬುದು ಅನುಭವಕ್ಕೆ ಬಂದಿತು. ರೈವತಕರಾಜನು ಬ್ರಹ್ಮಸಭೆಯಲ್ಲಿ ಸಂಗೀತವನ್ನಾಲಿಸುತ್ತ ಕಳೆದ ಹೊತ್ತರಿಯೆನೆಂದುದು ಯೋಗ್ಯವೆನಿಸಿದೆ. ಗೋಕುಲದಲ್ಲಿ ಕೃಷ್ಣನ ಕೊಳಲೂದಲು ಆ ದನಿಯನ್ನು ಸವಿದು ಮೈಸೋತು - ಹಸು - ಹುಲಿಗಳು, ಆನೆ - ಸಿಂಹಗಳು ಮೊದಲಾದುವು ತಮ್ಮ ತಮ್ಮ ಬಿಗುವು ಹಗೆತನಗಳನ್ನುಳಿದು ಒಂದುಗೂಡಿರುವವು. ಅಪ್ಸರೆಯರೂ ಅಚ್ಚರಿಗೊಂಡು

ಗೋಪಕನ್ಯೆಯರೊಡನೆ ಜಾಗರಣದಲ್ಲಿರುವರು. ಮರಗಳೂ ಮಾನವರಂತೆ ರೋಮಾಂಚಗೊಂಡಿರುವವೆಂಬ ಸಂಗತಿಗಳು ಕರಬದರ (?) ಸದೃಶವಾದವು. ಈ ಅತಿಶಯವನ್ನು ಎಷ್ಟೆಂದು ಬಣ್ಣಿಸುವೆವು? ವಿದ್ಯಾಶಾಲೆಯಲ್ಲಿ ಕುಮಾರನು ವೀಣೆ ಹಿಡಿಯುವಷ್ಟರಲ್ಲಿ ಎಲ್ಲ ತಂತಿಗಳಲ್ಲೂ ಕೊರಳುಗಳಲ್ಲೂ ಒಂದೇ ಇಂಪಾದ ದನಿ ಹೊರ ಹೊಮ್ಮಿತೆಂಬಂತೆ ಕೂಡಿದ ಶ್ರುತಿಯ ಸೊಬಗೂ ಕಸ್ತೂರಿಯ ವೀಣೆಯನ್ನು ಬಿಚ್ಚಿದೊಡನೆ ಹೊಮ್ಮುವ ತನಿಗಂಪಿನಂತೆ ಗಮ್ಮನೆ ಕವಿಯುವ ನಾದವೂ ಗಿಳಿಮೂಗನ್ನು ಹೋಲುವ ಬಲಗೈಯುಗುರುಗಳಿಂದ ತಂತಿಗಳನ್ನು ಮಿಡಿಯುವ ಮೀಟುವ ಸೊಗಸಿನಿಂದಲೂ ಹಿಂಗೈ ಬೆರಳುಗಳಲ್ಲಿ ಆಹತ ಪ್ರತ್ಯಾಹತ ಸ್ಫುರಿತ ಕಂಪಿತ್ಯಾದಿ ಗಮಕಗಳನ್ನು ಹವಣುಗೊಳಿಸುವ ಚಾತುರ್ಯದಿಂದಲೂ ಸ್ವರಗಳು ತಕ್ಕ ತಕ್ಕ ಸ್ಥಾನದಲ್ಲಿ ಕೋಮಲತೆಯನ್ನು ಬಿಗುವನ್ನು ನುಣುಪನ್ನು ಭರವನ್ನು ಪಡೆದು ಸುಂದರಿಯ ದೇಹದಂತೆ ಎಲ್ಲೆಡೆಯಲ್ಲೂ ಚೆಲುವು ಹೊಂದಿ ಆಕರ್ಷಕವೆನಿಸುವವು. ಕ್ರಮದಿಂದ ಒಂದಕ್ಕೊಂದು ಹೆಚ್ಚಳ ಪಡೆದು ಬೆಳೆಯುವ ತಾನಗಳು ಯೋಗ್ಯವಾದ ಆಯಾಸ್ಥಾನಗಳಲ್ಲಿ ಬಿಗಿಯೇರುವ ತೂಗುವ ತೊನೆಯುವ ನಯಗೊಳ್ಳುವ ದೀರ್ಘಿಸುವ ಸೊಂಪುಗೊಳ್ಳುವ ಹೆಗ್ಗಳಿಸುವ ಜೀವಸ್ವರಗಳಲ್ಲಿ ನಿಂತು ನಿಂತು ನಯವೇರುವ ಸೊಗಸು ಬಣ್ಣಿಸಲರಿದು. ಮತ್ತೆ ಆ ನಾದವು ವಿದ್ಯಾಶಾಲೆದಲ್ಲಿ ಬಂದು ನಲಿದು ನರ್ತಿಸುವ ಸರಸ್ವತಿಯ ಕಾಲಂದುಗೆ, ಕಿರುಗೆಜ್ಜೆಗಳ ಇಂಪಾದ ದನಿಯೂ ಅವಳ ಮುಂಗೈಯಲ್ಲಿದ್ದ ಅರಗಿಳಿಯ ಮುದ್ದುದನಿಯೂ ಕರ್ಣಪೂರದ ಕೆಂಪುಕಮಲದಿಂದ ಒಸರುವ ಸವಿರಸಕ್ಕೆ ಮುತ್ತುವ ಹೆಣ್ದುಂಬಿಗಳ ನುಣ್ದನಿಯೂ ಒಂದುಗೂಡಿ ಮುಪ್ಪುರಿಗೊಂಡಂತೆ ಒಗ್ಗೂಡಿದೆ. ಅದೇನು ವಿಚಿತ್ರವೋ ! ತಂತಿಯನ್ನು ಮೀಟಿದ ಬೆರಳುಗಳು ಅಂದು ಹೃದಯದ ಆನಂದ ನಾಡಿಗಳ ಒಡನಾಡುವಂತೆ ಮನವನ್ನು ಸೋಲಿಸಿ ಸೊರಗಿಸಿ ಸೊಕ್ಕಿಸಿ ಸುಖಪಡಿಸಲು ನಾವೂ ಅಲುಗದ ದೇಹವೂ ಚಲಿಸದ ಕಣ್ಣೆವೆಯೂ ಆಗಿ ಚಿತ್ರಿಸಿದಂತಿದ್ದು ಹೊಮ್ಮುವ ರೋಮಾಂಚನದಿಂದಲೂ ಹೊನಲಿಡುವ ಆನಂದಾಶ್ರುಗಳಿಂದಲೂ ಬಿಗಿಯುವ ಕೊರಳ ಸೆರೆಗಳಿಂದಲೂ ಬಿಡದೆ ಕಿವಿಯ ಮಾರ್ಗದಿಂದ ಗೋಚರಿಸುವ ಮನೋವೃತ್ತಿಯಿಂದಲೂ ಸಚೇತನರೆನಿಸಿರುವೆವು. ಕಿವಿಯಲ್ಲಿ ತುಂಬಿದ ಆನಂದವು ಎದೆಗಿಳಿದು ಹೃತ್ಕಮಲವನ್ನು ವ್ಯಾಪಿಸಲು ಚೈತನ್ಯವು ಅದರಲ್ಲಿ ಲೀನವಾಗಿ ಪರಿಣಮಿಸಿತು. ಅದರಿಂದ ಪ್ರಪಂಚವೆಲ್ಲವೂ ನಾದಮಯವಾಗಿ ತೋರುವುದು. ಬೇರನ್ನು ತುದಿಯನ್ನು ಬಿರಿದುದನ್ನು ಬೆಂಡಾದುದ್ನು ಕಳೆದು ಆರಿಸಿ ಹೊರೆಗಟ್ಟಿದ ಒಳ್ಳೆಯ ಕಬ್ಬಿನ ಸಿಹಿಯೂ ಚೆನ್ನಾಗಿ ಕಾಸಿ ಸಕ್ಕರೆ ಬೆರಸಿ ಗಟ್ಟಿಗೊಳಿಸಿದ ಹಾಲ ಸವಿಯೂ ಆಗ ಬಿಡಿಸಿತಂದು ಹಿಂಡಿದ ಹೊಸಜೇನುಮಳೆಯ ಇಂಪೂ (ಯೋಗ್ಯ) ಕಾಲದಲ್ಲಿ ಅಸಂಖ್ಯವಾಗಿ ಬೆಳೆದು ಪದದಲ್ಲಿ ಹಣ್ಣಾಗಿ ಸವಿಯೆನಿಸಿ ಹೆಸರಾದ ಮಾವಿನ ಹಣ್ಣಿನ ಸವಿಯೂ ಇದರ ಸಾವಿರದ ಸಾವಿರದಲ್ಲಿ ಒಂದೂ ಪಾಲಿಗೆ ಸರಿಬಾರದು. ನಾದವಾಗಿಯೂ ಕಿವಿಯೊಂದರಲ್ಲಿಯೇ ಸಲ್ಲುವುದಿಲ್ಲ, ಸಕಲೇಂದ್ರಿಯಗಳನ್ನು ಒಂದೇ ಕಾಲಕ್ಕೆ ಆನಂದಸಾಗರದಲ್ಲಿ ಮುಳುಗಿಸುವುದು ವಸಂತದಲ್ಲಿ ಹೂ ಬಿಟ್ಟ ಮಲ್ಲಿಗೆಯ ಹೊಸ ಹೂಗೊನೆಯಲ್ಲಿ ಹೆಚ್ಚಿ ಹೊರಹೊಮ್ಮುವ ತನಿಗಂಪಿನಂತೆಯೂ ಆ ಕಂಪನ್ನು ಸೆಳೆದು

ಸೊಕ್ಕಿಸುತ್ತಲೂ ಸುಳಿಯುವ ತುಂಬಿಗಳ ಪಕ್ಕಗಳ ಹೊಡೆತದಿಂದ, ಮುನ್ನ ಚಂದನ ಕಾಡಿನಲ್ಲಿ ಹಾವುಗಳನ್ನು (ಗಾಳಿಯನ್ನು ನುಂಗಿದುದರಿಂದುಂಟಾದ ಬಡತನವನ್ನು ಕಳೆದುಕೊಂಡು ವರ್ಧಿಸಿ) ಮಾವಿನ ತೋಪಿನಲ್ಲಿ ಸುರಿಯುವ ಹೂ ಜೇನಿನ ತುಂತುರದಲ್ಲಿ ನೆನೆದು ಮೆಲ್ಲನೆ ತೀಡುವ ತಂಗಾಳಿಯ ಸೋಂಕಿನಂತೆಯೂ ಆ ಸೋಂಕಿನಿಂದ ಮುನ್ನ ಮನದಲ್ಲುದಿಸಿದ ಕಾಮಾಗ್ನಿ ದಳ್ಳುರಿಗೊಂಡು ಹೊರಹೊಮ್ಮುವಷ್ಟರಲ್ಲಿ ಅದಕ್ಕೆ ತಳಿರುಗೊನೆಗಳನ್ನೂ ತಾವರೆಯ ದೇಟುಗಳನ್ನೂ ಧರಿಸಿಯೂ ಪರಿಮಳದ ನೀರಲ್ಲಿ ನೆನೆದೂ ಹೂವಿನ ಹಾಸಿಗೆಯಲ್ಲಿ ಹೊರಳಿಯೂ ತಂಪುಗಾಣದ ವಿರಹಿಗಳ ಆ ವಿರಹವು ಕಳೆದು ಒಡಗೂಡುವಾಗ ತಮ್ಮ ತಮ್ಮ ಮೈ ಬಿಸಿ ತಣಿದು ತಂಪುಗೊಳ್ಳುವವರೆಗೂ ತಮ್ಮ ತಮ್ಮ ತೋಳುಗಳು ತಣಿಯುವವರೆಗೂ ಮತ್ತೇನು ! ಬೆಳಗಿನವರೆಗೂ ಪ್ರೀತಿಯಿಂದ ನಡೆಸುವ ಅಪ್ಪುಗೆಯಲ್ಲಿ ಮತ್ತೆ ಮತ್ತೇರುವ ಬಿಗಿಯಂತೆಯೂ ಸುಖವನ್ನು ಸೂರೆಗೊಡುತ್ತಿದೆ. ಎಂತಹ ಕಲ್ಲೆದೆಯವರಾದರೂ ಈ ತಾನವನ್ನು ಕೇಳುವಷ್ಟರಲ್ಲಿ ಹಗಲನ್ನು ಕಂಡ ಚಕ್ರವಾಕದಂತೆಯೂ ಬೆಳದಿಂಗಳನ್ನು ಹೀರುವ ಚಕೋರದಂತೆಯೂ ಮಳೆಗಾಲದ ನವಿಲಂತೆಯೂ ಮುಂಗಾರಿನ ಹನಿಯುಂಡ ಚಾತಕದಂತೆಯೂ ನಿಧಿಯನ್ನು ಕಂಡ ಬಡವನಂತೆಯೂ ವರ ಪಡೆದ ತಪಸ್ವಿಯಂತೆಯೂ ಸಿದ್ಧಿ ಪಡೆದ ಯೋಗಿಯಂತೆಯೂ ಇಷ್ಟದೇವತಾ ಸಾಕ್ಷಾತ್ಕಾರ ಪಡೆದ ಉಪಾಸಕನಂತೆಯೂ ನಲಿದು ನಲವೇರಿ ಹಿಗ್ಗಿ ಹೆಗ್ಗಳಿಸಿ ಸೊಕ್ಕಿ ಸೊರಗುವರು. ಕೋಮಲ ಹೃದಯಿಗಳು ಆಲಿಸುವ ಮುನ್ನವೇ ಮನ ಕರಗಿ ಪರವಶಗೊಂಡು ಮಾಡಬೇಕಾದುದು ಇದು, ಮಾಡಬಾರದುದು ಇದು ಎಂಬ ವಿವೇಕವನ್ನುಳಿದು ರಸಾವೇಶದಿಂದ ಈ ತಾನದ ಸವಿಯನ್ನು ಬೊಗಸೆಯಲ್ಲಿ ಮೊಗೆಮೊಗೆದು ಈಂಟಲೂ ಮೈಗೆಲ್ಲ ಲೇಪಿಸಿಕೊಳ್ಳಲೂ ಮುಡಿಯಲ್ಲಿ ಧರಿಸಲೂ ಕಿವಿಯ ಕುಹರದಲ್ಲಿ ತುಂಬಿಕೊಳ್ಳಲೂ ಬಯಸಿದಂತೆ ಹಲವು (ರೀತಿಯ) ತೊಂದರೆ ಪಡುವರು. ಸುವರ್ಣದಲ್ಲಿ ಎಳೆದ ಹೊಸಹೊನ್ನಿನ ಸಲಾಕೆಯಂತೆಯೂ ಎಡಬಿಡದೆ ಒಂದೇ ರೀತಿಯಾಗಿ ಸುರಿಯುವ ಹೊಸ ಜೇನ ಹೊನಲಂತೆಯೂ ಆದ್ಯಂತದಲ್ಲಿ ಏಕನಾದವೆನಿಸುವ ತಾನದ ಸವಿಯ ಅತಿಶಯತೆಯ ತಪ್ಪೆಂದು ತಿಳಿಯಬೇಕು. ಈಗ ಈ ಮಾನವ ಲೋಕದಲ್ಲಿ ಪ್ರಸಿದ್ಧರಾದ ವೀಣೆಕಾರರೂ ಮುಂಚೆ ಇದ್ದವರೂ ಈ ತೆರದಲ್ಲಿ ಬಿಗುವನ್ನೂ ಒಲವನ್ನೂ ಕಳೆಯನ್ನೂ ನಾದವನ್ನೂ ಹೊಸ ಬಗೆಯ ತಾನಗಳನ್ನೂ ಸಾದರಪಡಿಸಿದ್ದು ವಿದಿತವಾಗಿದೆಯಷ್ಟೆ ? ಕಿನ್ನರರೂ ಗಂಧರ್ವರೂ ಅವರಲ್ಲಿ ಪ್ರಸಿದ್ಧಿ ಪಡೆದ ಹಾಹಾ ಮತ್ತು ಹೂಹೂ ಎಂಬುವರೂ ತುಂಬುರು ನಾರದರೂ ಆ ಸರಸ್ವತಿ ತಾನೂ ರಚಿಸಿದುದಿಲ್ಲವೆಂಬುದು ನಿಶ್ಚಯ. ಅನಾದಿಕಾಲದಲ್ಲಿಲ್ಲದ ಸಾಹಿತ್ಯಾಭಿರುಚಿ ವಿಶೇಷವು ವಾಲ್ಮೀಕಿಯಿಂದ ಹೊಮ್ಮಿದಂತೆ ಸಂಗೀತದ ಅಭಿರುಚಿ ವಿಶೇಷವೂ ಈಗ ಈ ರಾಜಕುಮಾರನಿಂದ ಹೊಮ್ಮಿತು. ಮುನ್ನ ಸ್ವರಭೇದವನ್ನೂ ಲಯಭೇದವನ್ನೂ ರಾಗಭೇದವನ್ನೂ ಅರಿಯದ ಪಶುಗಳೂ ಬಂಗಾರದ (ಜಿಂಕೆ) ಮರಿಯೂ ಮೋಸಗೊಂಡುದು ವಿದ್ಯೆಯ ಬಿನ್ನಾಣವಲ್ಲೆಂದು ಆ ಕೃಷ್ಣನು ಈಗ ಈ ಹೊಸರೂಪದಲ್ಲಿ ಪಂಡಿತರೆಲ್ಲರೂ ಅಚ್ಚರಿಪಡುವಂತೆ ಆನಂದಲತೆಯ ಸಮೂಹಗಳೆನಿಸುವ ತಾನಗಳನ್ನು ಬಿತ್ತರಿಸಿದನು. ಅಲ್ಲದಿದ್ದರೆ ಇವು

ಸಂಗೀತಶಾಸ್ತ್ರದ ಮಂತ್ರದಂತೆ ಎಲ್ಲರನ್ನೂ ಸಮ್ಮೋಹಿಸಿ ಮೈಮರೆಸುವ ರೀತಿ ಯಾವುದು ? ಈ ಜಗಮ್ಮೋಹನವಾದ ತಾನದ ಇರವು ಅಂತಿರಲಿ. ಈ ರಾಜಕುಮಾರನು ವೀಣೆ ನುಡಿಸಲು ನಿರ್ಧರಿಸಿದ ಭಂಗಿಯೂ ಆ ಮೈಸಿರಿಯೂ ಆ ಮುಖರಸವೂ ನನ್ನ ಕಣ್ಣುಗಳಿಗೆ ಆನಂದದಾಯಕವಾಗಿದೆ. ಸಂತಸದಿಂದ ಮೆಲ್ಲನೆ ಕೈಯಲ್ಲಿ ಎತ್ತಿಹಿಡಿದು ಸಮೀಪ ತಂದು ತೊಡೆಯ ಮೇಲಿಟ್ಟು ಹರವಾದ ಎದೆಗೆ ಹಚ್ಚಿಕೊಂಡು ಪ್ರೇಮದಿಂದ ಮೈದಡವಿ ರಾಗಾಲಾಪನೆ ಗೈಸಿ ಕೇಳುತ್ತ ಅರಳುವ ಮುಖವೂ ಚಲಿಸುವ ಕಣ್ಣೂ ಸುರಿಯುವ ಆನಂದಾಶ್ರುವೂ ಆಗಿ ಯೋಗ್ಯಸ್ಥಾನಗಳನ್ನು ಉಗುರುಗಳಿಂದ ಒತ್ತುವ ರೀತಿಯನ್ನೂ, ಆ ಕಲಾವತಿ ಎಂಬ ಹೆಸರಿನ ವೀಣೆ ಜಯಲಕ್ಷ್ಮಿಯಂತೆ ಇವನ ಭುಜಸಂಗದಿಂದ ಕೊಬ್ಬಿ ಕಲರವಪೂರ್ಣವಾದ ನಾದಗಳನ್ನೊದಗಿಸುವ ಸೊಗಸನ್ನೂ ಕಂಡರೆ ಸಾಕ್ಷಾತ್ ಕೃಷ್ಣಾವತಾರವೆಂಬುದೇ ನಿಶ್ಚಯ ಎಂದು ಬಿನ್ನವಿಸಿ ಆನಂದಪಡಿಸಿದರು.

ಶಸ್ತ್ರಾಭ್ಯಾಸ ಪರಿಶ್ರಮ

ಗರುಡಿಯಲ್ಲಿ ಸಾಧಕವನ್ನು ಕಲಿಸುವ ಜಟ್ಟಿಗಳು "ಮಹಾರಾಜ! ಚಿತ್ತೈಸಬೇಕು. ಗರಡಿಯಲ್ಲಿ ತಮಗೆ ತಾವು ಮಾಡುವ ಸಾಧನೆಗಳನ್ನು ಬಿಟ್ಟು ಚಿತ್ರದ ಗೊಂಬೆಗಳಂತೆ ನಟ್ಟನೋಟವಲುಗದೆ ಕಂಬ ಲೋಡುಗಳನ್ನು ತಿರುಗಿಸುವ ಚಳಕವೂ ಆನೆಯ ಸೊಂಡಿಲಂತೆಯೂ ಹೆಬ್ಬಾವಿನಂತೆಯೂ ಹತ್ತಿ ಸುತ್ತಿ ಬಿಗಿಗೊಳ್ಳುವ ತೋಳುತೊಡೆಗಳ ಸೊಗಸೂ ಮತ್ತು ಸಂಗರಣಗಳನ್ನು ಎತ್ತುವಲ್ಲಿ ಗೋವರ್ಧನ ಗಿರಿಯನ್ನು ಎತ್ತಿ ನಿಂದ ಆ ಗೋಪಾಲನ ರೀತಿಯಲ್ಲಿ ಮಿಂಚುವ ಮುಖವೂ ತೋರುವ ವಿಸ್ತರದ ವಿದ್ಯೆಯೂ ಒಯ್ಯಾರದಿಂದೂರಿದ ಪಾದಗಳೂ ಆಗಿ ನಿಂತ ನೆಲೆಯಲ್ಲಿ ಒಂದೊಂದು ತೋಳನ್ನು ತಿರುಗಿಸಿ ಎತ್ತುವ ರೀತಿಯಿಂದ ಎಡಬಲಗಳಲ್ಲಿ ಇಷ್ಟಿಷ್ಟೆ ಮುರಿಗೊಳ್ಳುವ ಚಿಕ್ಕನಡುವೂ ಹಿಂದೆ ಸರಿಯುವ ದೇಹವೂ ಒಲೆಯುವ ಕೊರಳೂ ಆದ ಮೈಸಿರಿ ಜಟ್ಟಿಗಳ ಗರುಡಿಯಲ್ಲೂ ನೃತ್ಯದ ಗರುಡಿಯಲ್ಲೂ ಕಾಣುವಂಥದಲ್ಲ. ನೋಡುವವರ ಕಣ್ಣುಗಳಲ್ಲಿಯೇ ನಟ್ಟಂತೆ ನೆಲೆಗೊಳ್ಳುವವು. ಆ ರೇಖೆಯೂ ಆ ಭಂಗಿಯೂ ಜಗನ್ಮೋಹನವಾಗಿದೆ. ಆದರೂ ಅವುಗಳಿಂದ ಕಾಳಗಕ್ಕೆ ಉಪಯೋಗವಿಲ್ಲವೆಂಬುದರಿಂದ ಅವನ್ನು ಬಣ್ಣಿಸುವುದನ್ನು ಬಿಟ್ಟು ಬೆಳೆಯುವ ದೇಹಬಲವನ್ನು ದೃಷ್ಟಿಯ ಎಚ್ಚರಿಕೆಯನ್ನೂ ಕಾರ್ಯಕೌಶಲವನ್ನೂ ವಿವರಿಸಲು ಅವು ಲೋಕೋತ್ತರವಾಗಿದೆ. ಇಮ್ಮಡಿ ಬಲಶಾಲಿಗಳೂ ಕುಂದಿ ಬಲಹೀನಗೊಳ್ಳುವುದರಿಂದ ಪರಾಕ್ರಮಿಗಳೆಲ್ಲರೂ ಹಿಂದೆಗೆದರು. ಅದು, ರೋಷದಿಂದೊಮ್ಮೆ ಜಗಜಟ್ಟಿಯಾದ ಕೃಷ್ಣನು ಎದುರಿಸಿ, ಮುನ್ನ ಮಧುರೆಯಲ್ಲಿ ಕುವಲಯಾಪೀಡವೆಂಬ ಆನೆಗೂ ಚಾಣೂರನೆಂಬ ಮಲ್ಲನಿಗೂ ಎದುರಾದಂತೆ ಪಟ್ಟುಹೂಡಿ ಸಾಧನೆಯ ಹೆಚ್ಚಳವನ್ನು ಮೆರೆಯುತ್ತ ಎಡಕ್ಕೂ ಬಲಕ್ಕೂ ಮೆಲ್ಲನೆ ಒಂದೊಂದು ಹೆಜ್ಜೆ ಸರಿದು, (ಹುಸಿ) ಆಸೆ ತೋರಿಸಲು ಅವನು ಏರಿಬಂದನು. ಎದುರಿಸಿ ನಿಂತು ಚಳಕದಿಂದ ಹುಸಿಗೈ ತೋರಿಸಲು ಅದಕ್ಕವನು ತನ್ನಲ್ಲಿರುವ ಸರ್ವಬಲದಿಂದ ಮುಂದೆ ನಿಂತು ಮುಷ್ಟಿ ಇಡುವಷ್ಟರಲ್ಲಿ, ಮುನ್ನ ಕುವಲಯಾಪೀಡದ ಕೋರೆಯನ್ನು ಹೊರನೂಕಿದಂತೆ ತಪ್ಪಿಸಿ ತನ್ನ

ಅಂಗೈಯನ್ನು ಅವನ ಮುಖಕ್ಕೆ ತಾಕಿಸುವಲ್ಲಿ, ಅವನ ಬಲವೇ ಅವನಿಗೆ ವೈರಿಯಾಗಿ ಮೂಗಿನ ನಾಳವೊಡೆದು ಹೊಸನೆತ್ತರು ಹರಿಯತೊಡಗಿತು. (ಅವನು) ನಡುಗಿ ಹಿಂಜರಿದು ಗೋಡೆಗೆ ಆಸರೆಯಾಗಿ ನಿಂತು ದಣಿವಾರಿಸಿಕೊಂಡು ಅಚ್ಚರಿಪಟ್ಟನು. (ಮತ್ತು) ಕೈಮುಗಿದು ಕಾಲಿಗೆ ಬಿದ್ದು (ಇವನು) ಸಾಕ್ಷಾತ್ ಕೃಷ್ಣನೇ ಎಂದು ಹೇಳಿ ನಾಚದೆ ಸಂತಸಪಟ್ಟನು. ಮತ್ತೊಮ್ಮೆ ನಡುಗರಡಿಯ ಗೌರವ ಪಡೆದ ಬಿರುದಿನ ಪಟ್ಟುಗಾರನೊಬ್ಬನು, ತನ್ನ ದೇಹದ ಹಿರಿಮೆಯನ್ನೂ ಪಟ್ಟಿನ ಶಕ್ತಿಯನ್ನೂ ನಂಬಿ ಹೋರಾಡಲೆಂದು ಕೆಮ್ಮಣ್ಣಿನ ಕಣ ಹೊಕ್ಕು ಸರಿಯಾದ ಸಿದ್ಧತೆಯಿಂದ ನಿಲ್ಲುವಷ್ಟರಲ್ಲಿ, ಪಾರುಗಟ್ಟಿಗೆಯವನು ಉಪ್ಪಿನಿಂದ ಮೇಲೆರಗುವ ಮದ್ದಾನೆಯ ಕೋಡಿಗೆ ಎದೆಯೊಡ್ಡಿ ಸೋಂಕದ ಮುಂಚೆಯೆ ಬಂದು ಬದಿಗೆ ಬಂದು ತಪ್ಪಿಸಿ ಬದಿಗೆ ಬೀಳುವಂತೆ ಕೆಡಹಿ ಬೆನ್ನೇರಿ ಉಸಿರಾಟದಲ್ಲಿ ಬಿಗಿದು ತನ್ನ ಸಾಧನೆಯ ಚಳಕವನ್ನು ತೋರಲು ಸಡಿಲುಕೊಟ್ಟು ಅದನ್ನವನು ನೂಕುವಷ್ಟರಲ್ಲಿಯೇ ಒಂದಾದ ಮೇಲೆ ಇನ್ನೊಂದು ಪಟ್ಟಿನಂತೆ ಒಂದೆರಡು ಗಳಿಗೆಯವರೆಗೆ ಹಿಡಿದು ಮೈಬಿಡದೆ ಬಳಲಿಸಿ ಬಸವಳಿಸಿ ಡೊಕ್ಕರದಿಂದ ಬಿಗಿದನು. ಅವನು, ಕವಿಯುತ್ತಿರುವ ಕಣ್ಣುಕತ್ತಲೆಯೂ ಜೋಲುವ ಕೈಕಾಲುಗಳೂ ಆಗಿ ಎಚ್ಚರದಪ್ಪಿ ಒರಗಿದನು. ಇದನ್ನು ಗರಡಿಗೆ ಹೋದವರೆಲ್ಲ ಬಲ್ಲರು. ಈ ಮಾತುಗಳಲ್ಲಿ ಮುಖಸ್ತುತಿ ಕೂಡಿದೆಯೆಂದು ತಿಳಿಯಲಾಗದು. ಈ ಮಾತಿಗೆ ನಮ್ಮ ಕುಲದೇವತೆ ಚಂಡಿಯ ಪಾದಗಳೂ ನಮ್ಮ ಗರಡಿ ಕೃಷ್ಣನ ಪಾದಗಳೂ ಸಾಕ್ಷಿ" ಎಂದು ತಿಳಿಸಿದರು.

ಇಂತು ನುಡಿಯುವ ಹಲವು ಜನ ಶಿಕ್ಷಕರ ನುಡಿಗಳಿಂದುಕ್ಕುವ ಸಂತಸದಿಂದ ಹೆಗ್ಗಳಿಸಿ ಒಡನೆ ಪರಿಜ್ಞಾನದಿಂದ ಅಚ್ಚರಿಪಡುತ್ತ ಆಲೋಚಿಸಿದನು. "ಬೇರೆಯವರು ಬಂದು ವಸ್ತುವನ್ನು ಉತ್ತಮವೆಂದು ಬಗೆದು ಅದರ ಗುಣಗಳಿಗೆ ಹಿಗ್ಗುತ್ತಿದ್ದರೂ ಆ ವಸ್ತುವಿನೊಡನೆ ವಿಶೇಷ ಸಂಬಂಧಪಟ್ಟವರಿಗೆ ಸಂತಸವೂ ಅತಿಶಯವಾಗಿರುವುದೆಂಬುದು ಸತ್ಯವಾಗಿದೆ. ಚಂದ್ರಸೂರ್ಯರೂ ಕಾರ್ಮುಗಿಲೂ ಲೋಕಕ್ಕೆ ಆನಂದಕರವಾಗಿದ್ದರೆ ಚಕೋರಕ್ಕೂ ಚಕ್ರವಾಕಕ್ಕೂ ನವಿಲಿಗೂ ಹರ್ಷವು ಅತಿಶಯವಾಗುವುದೆಂಬುದು ಯುಕ್ತವಾಗಿದೆ. ಪರಶುರಾಮನು ದಿಗ್ವಿಜಯಗೈದನೆಂದು ಹೇಳಿದರೆ ಬ್ರಾಹ್ಮಣರೂ ರಘುರಾಮನು ಪ್ರಸಿದ್ಧನಾದನೆನ್ನಲು ನಮ್ಮ ರಾಜಕುಮಾರರಲ್ಲಿ ಹೆಗ್ಗಳಿಸುವುದು ತಕ್ಕುದೆನಿಸಿದುದು, (ಕತೆ ಕೇಳುವಾಗ) ರಾವಣನು ಸೀತೆಯನ್ನು ಕೊಂಡೊಯ್ದನೆನ್ನಲು ಕುಲಶೇಖರ (ಆಳ್ವಾರ)ನು ದಂಡೆತ್ತಿದನೆಂಬುದು ಯೋಗ್ಯವೆನಿಸಿತು. ಕೃಷ್ಣನು ಬೆಣ್ಣೆಗಳವಿನಲ್ಲಿ ಕಡೆಯುವ ಹಗ್ಗದಿಂದ ಒರಳಿಗೆ ಕಟ್ಟಲ್ಪಟ್ಟನೆಂಬುದನ್ನು ಭಾವಿಸಿ ಪರಾಂಕುಶನು ಮೋಹಪರವಶನಾದನೆಂಬುದು ಉಚಿತವಾದುದು. ಶ್ರೀಮನ್ನಾರಾಯಣನು ಸರ್ವಜ್ಞನು, ಸರ್ವಶಕ್ತನು, ಸಕಲ ವಿದ್ಯೆಗಳನ್ನು ಪ್ರವರ್ತನಗೊಳಿಸಿದನೆಂಬುದನ್ನು ತಿಳಿದಿದ್ದರೂ ಈ ಅವತಾರದಲ್ಲಿ ವಿದ್ಯೆ ಕಲಿತನು ವಿನಯಹೊಂದಿದನು ವೀರನೆನಿಸಿದನು ಎಂದು ಹೇಳಿದರೂ ಆಶ್ಚರ್ಯವೂ ಆನಂದವೂ ದಟ್ಟೈಸುತ್ತಿದೆ. ರಕ್ಷಿತ ರಕ್ಷಕನೆಂಬ ಭಾವನೆ, ಮೊದಲಾದ ಕಾಣದ ಹಲವು ಸಂಬಂಧಗಳಿಂದ ಈ ತಂದೆ ಮಗ ರೂಪದ ದೃಷ್ಟಿಸಂಬಂಧವೇ ಪ್ರೀತಿ ವಿಶೇಷಕ್ಕೆ ಕಾರಣವಾದುದರಿಂದ

ಶ್ಲಾಘನೀಯವಾದುದು. ಅದರಿಂದಲ್ಲವೇ ಶುಕ ವ್ಯಾಸ ಪರಾಶರಾದಿಗಳೂ ತಮ್ಮ ಋಷಿ ಜನ್ಮವನ್ನು ಕಡೆಗಣಿಸಿ ಕುಂದ ಕದಂಬ ಗೋಪಿಕೆಯರಾದಿಯಾಗಿ ಜನ್ಮಗಳನ್ನು ಇಚ್ಛಿಸಿದರು. ಆದುದರಿಂದ ನಾನು ನನ್ನ ಕುಲದೇವತೆಯೆಂದು ಪ್ರೀತಿಸದೆ ಕುಮಾರನೆಂದೇ ಕೊಂಡಾಡುವೆನೆಂದು ನಿಶ್ಚಯಿಸಿ ನಂದನಂತೆ ಆನಂದದಿಂದಿರುವೆನು."

ಮತ್ತೆ ! ಆ ರಾಜಕುಮಾರನು ಧರ್ಮಶಾಸ್ತ್ರಗಳಲ್ಲೂ ರಾಜನೀತಿಯಲ್ಲೂ ಬಿಲ್ಲು ಕತ್ತಿ ಮೊದಲಾದ ಹಲವು ಆಯುಧಗಳ ಪ್ರಯೋಗದಲ್ಲೂ ಆನೆ ಕುದುರೆಗಳ ಏರಾಟದಲ್ಲೂ ಸಂಗೀತಶಾಸ್ತ್ರದಲ್ಲೂ ನಾಟಕ ಅಲಂಕಾರಗಳಲ್ಲೂ ಹಲವು ನಾಡಿನ ಭಾಷೆಗಳಲ್ಲೂ ಹಲವು ಕಲಾವಿದ್ಯೆಗಳಲ್ಲೂ ಪ್ರವೀಣನೆನಿಸಿದನು. ತಿರುಮಲೆಯಾರ್ಯನೂ ಅವನ ನೆರಳಿನಂತೆ ಎಲ್ಲಾ ವಿದ್ಯೆಗಳಲ್ಲೂ ಜೊತೆಗೂಡಿ ಹೆಸರು ಪಡೆದನು. ಬಳಿಕ ರಾಜಕುಮಾರನ ದೇಹದಲ್ಲಿ ಬಾಲ್ಯವು ಅಷ್ಟಿಷ್ಟು ಹಿಂದೆಗೆಯಲು ಹರೆಯವು ಅಡಿಯಿಟ್ಟಿತು. ಅದು ಹೇಗೆಂದರೆ-

ಯೌವನೋದಯ

ತನ್ನ ಸಂಗಾತಿ ಶಾಮನಿಗೆ ಇನ್ನು ಏಳಿಗೆಯಾಗುವುದೆಂದು ಬಗೆದು ಮುಖಚಂದ್ರನು ಕಾಂತಿದುಂಬಿದನು. ಮುಖದಲ್ಲಿ ನೆಲೆಸಿದ ಸರಸ್ವತಿಯ ಕರ್ಣಪೂರದ ಕಪ್ಪುನೈದಿಲೆಯು ಪ್ರತಿಬಿಂಬಿಸಿದಂತೆ ಸವಿಯುವ ಹೆಣ್ಣುದುಂಬಿ ತನಗೆ ಪ್ರತಿಭಟಿಸಿತೆಂದು ಸಿಟ್ಟಾದಂತೆ ಕಣ್ಣಂಚು ಕೆಂಪುರೇಖೆ ಹೊಂದಿತು. (ಟಿ. ಇಲ್ಲಿ ಕಪ್ಪುನೈದಿಲೆಯ ಪ್ರತಿಬಿಂಬದಂತಿರುವ ಹೆಣ್ಣುತುಂಬಿ ಎಂದರೆ ಕಣ್ಣಾಲಿ. ಚಂಚಲವಾದ ಆ ಕಣ್ಣಾಲಿ ಕಣ್ಣಂಚನ್ನು ಪ್ರತಿಭಟಿಸಿತೆಂಬುದು ಕವಿ ಕಲ್ಪನೆ) ಸವಿನುಡಿಯ ಸಿಹಿತುಂತುರವನ್ನು ಸುರಿಯುವ ಕೆಂಪಾದ ಬಾಯ್ದೆರೆಯನ್ನು ದಾಸವಾಳವೆಂದು ಭಾವಿಸಿ ಸುತ್ತಿಮುತ್ತಿದ ದುಂಬಿಯ ಮರಿಗಳಂತೆ ಮೀಸೆ ಕಾಂತಿಗೊಂಡಿತು. ಇವನು ಕೆಲದಿನಗಳಲ್ಲಿಯೇ ವೈರಿರಾಜರ ಪಟ್ಟಣಗಳ ಹೆಬ್ಬಾಗಿಲನ್ನು ಮುರಿಯುವನೆಂದು ಹೆದರಿ ಅದರ ಹಿರಿಮೆಯನ್ನು ಸಾರಿತೆಂಬಂತೆ ಎದೆ ವಿಸ್ತರಿಸಿತು. ಅಲ್ಲಿ ದೊಡ್ಡ ಅಗುಳಿಯ ದುಂಡುತೊಲೆಗಳ ಶಕ್ತಿ ಒಗ್ಗೂಡಿದಂತೆ ತೋಳುಗಳು ವರ್ಧಿಸಿದವು. ನಾಲ್ಕು ದಿಕ್ಕುಗಳನ್ನು ಗೆಲ್ಲಬಯಸಿದೊಡನೆ ನನ್ನನ್ನು ಬಿಗಿದು ಕಟ್ಟುವನೆಂಬ ಚಿಂತೆಯಿಂದ ನಡು ಬಡವಾಯಿತು. ಎಂಥ ಪ್ರವೀಣ ರಾವುತರೂ ಏರಲಾರದ ಒರಟು ಕುದುರೆಗಳು ನಮಗೆ ವಶವರ್ತಿಯಾಗುವವೆಂದು ತೊಡೆಗಳು ಮಹಿಮೆ ಹೊಂದಿದವು. ಈ ರೀತಿ ತೋರದೊಡೆಗಳೂ ಬಡನಡುವೂ ಹರವಾದ ಎದೆಯೂ ದುಂಡುದೋಳೂ ದೊಡ್ಡ ಹೆಗಲೂ ಹವಣು ಮೀಸೆಯೂ ಹೊಳೆಯುವ ಮುಖವೂ ಹೊಗರೇರುವ ಮನವೂ ಆದ ಹೊಸಹರೆಯದ ರೀತಿಯನ್ನು ನಿರೀಕ್ಷಿಸಿ ರಾಜನು ಮನದಲ್ಲಿ ಆಲೋಚಿಸಿದನು. ನಮ್ಮ ಕುಲದಲ್ಲಿ ಪ್ರಸಿದ್ಧರಾದ ರಾಜರೆಲ್ಲರೂ ಎಳವೆಯಲ್ಲಿ ವಿದ್ಯೆಕಲಿತು, ಯೌವನದಲ್ಲಿ ನಾಲ್ಕುದಿಕ್ಕುಗಳನ್ನು ಗೆದ್ದು ಶರಣಾಗತರನ್ನು ರಕ್ಷಿಸಿ ದೇವರನ್ನೂ ಬ್ರಾಹ್ಮಣರನ್ನೂ ಉಜ್ವಲಗೊಳಿಸಿ ನಾಡು ರಕ್ಷಿಸಿ ಮುಪ್ಪಿನಲ್ಲಿ ತಾವು ಹೊತ್ತ ಹೊರೆಯನ್ನು ತಮ್ಮ ಉತ್ತಮರಾದ ಮಕ್ಕಳ ಮೇಲಿಟ್ಟು ಮುಕ್ತಿಯನ್ನು ಬಯಸಿ ವ್ರತಸ್ಥರಾಗುವರು. ನಾನೂ ಹಾಗೆಯೇ ಮಾಡಬೇಕು" ಎಂದು ವಿಚಾರಿಸಿ ಅಳಹಿಯ ಸಿಂಗಾರಾರ್ಯರನ್ನು

ಕರೆಯಿಸಿ ನುಡಿದನು. ನಾನೊಂದು ಕಾರ್ಯ ಹೇಳುವೆನು. ಪ್ರತ್ಯುತ್ತರ ಕೊಡದೆ ಅದನ್ನು ಅಂಗೀಕರಿಸಬೇಕು. ನನ್ನ ಗೆಳೆಯ, ನನ್ನ ಒಡನಾಡಿ, ನನ್ನ ಪಡಿನೆಳಲು, ನನ್ನ ಸಂಘದ, ನನ್ನ ಪ್ರಾಣವೆನಿಸಿದ ನನ್ನ ನಂತರದ ತಮ್ಮ ಚಿಕ್ಕದೇವರಸಯ್ಯನು ಮುಕ್ತಿ ಪಡೆದ ಮೇಲೆ, ನಾನು ಹೊತ್ತ ಹೊರೆಯನ್ನನಿಳಿಸಲು ಎಡೆಗಾಣದೆ ನನ್ನ ಮನದ ಕಳವಳನ್ನು ಅವನ ತರುವಾಯ ಹುಟ್ಟಿದ ದೇವರಾಜನು ಇಂದು ತೀರಿಸಿದನು. ಇವನ ವಿನಯವನ್ನು ಇವನ ವಿವೇಕವನ್ನು ಇವನ ಪ್ರಜಾವಾತ್ಸಲ್ಯವನ್ನು ಇವರ ಸೋದರ ಪ್ರೇಮವನ್ನು ಇವನ ಸ್ಥೈರ್ಯ ಧೈರ್ಯ ಶೌರ್ಯಾದಿ ಗುಣಗಳನ್ನು ನೋಡಲು ನಮ್ಮ ಹಿರಿಯ ಚಾಮರಾಜರಸ, ನರಸರಾಜರಸ, ಮುದುಕ ದೇವರಾಜರಸರಿಗೆ ಸರಿಮಿಗಿಲೆನಿಸುವನು. ಅದರಿಂದ ಇವನಿಗೆ ಹಿರಿಯರಸುತನ ವನ್ನಿತ್ತು ಇವನ ಅಂಗರಕ್ಷೆಗೆ ಇವನ ತಮ್ಮನಾದ ಮರಿಯದೇವರಾಜರಸನನ್ನು ನಿಯಮಿಸಿ ಕಿರಿಯರಸುತನವನ್ನು (=ಯುವರಾಜ ಪದವಿಯನ್ನು) ಕುಮಾರ ಚಿಕ್ಕದೇವರಾಯನಿಗೆ ಕೊಟ್ಟು, ಇವನ ತಮ್ಮನಾದ ಕಂಠೀರವರಸಯ್ಯನನ್ನು ಇವನ ರಕ್ಷಣೆಗಿಟ್ಟು ನಾನೂ ತೀರ್ಥಯಾತ್ರೆ ಮುಂತಾದ ತಪಸ್ಸಾಮ್ರಾಜ್ಯವನ್ನನುಭವಿಸುವೆನು" ಎಂದನು. ಅದನ್ನು ಕೇಳಿ ಅಳಹಿಯ ಸಿಂಗಾರಾರ್ಯನು ನುಡಿದನು 'ಎಲೆ ಮಹಾರಾಯ! ನೀನು ಇನ್ನೂ ಹಲವುವರ್ಷ ಅರಸುಗೈಯ್ಯುವುದೇ ಲೇಸು. ಆದರೂ ಪ್ರತ್ಯುತ್ತರವೀಯದೆ ಸಮ್ಮತಿಸಬೇಕೆಂದು ನಿರೂಪಿಸಿದುದರಿಂದ ಒಪ್ಪಿ ಹೇಳುವೆನು. ನಿನ್ನ ತಮ್ಮ ದೇವರಾಜನು ಮಹಾರಾಜಲಕ್ಷಣ ಸಂಪನ್ನನಾಗಿ ನಳ, ನಹುಷ, ಯಯಾತಿ, ದುಂದುಮಾರ ಭಗೀರಥರನ್ನು ಸರಿಗಟ್ಟಿ ಮತಿವಂತನೂ ಉತ್ಸಾಹಿಯೂ ನೀತಿಶಾಸ್ತ್ರನಿಪುಣನೂ ಸಕಲಧರ್ಮ ತಿಳಿದವನೂ ದಯಾಳುವೂ ದಾಕ್ಷಿಣ್ಯಪರನೂ ಎಂದು ಎಲ್ಲ ಪ್ರಜೆಗಳೂ ಆನಂದಿಸುವರು. ಪ್ರಜಾನುರಾಗದಿಂದಲೇ ರಾಯನಿಗೆ ಜಯವೂ ಯಶವೂ ಪಸರಿಸುವವು. ಅದರಿಂದ ದೇವರಾಜನಿಗೆ ಮಹಾರಾಜ ಪದವಿಯನ್ನೀಯುವುದೇ ಲೇಸು" ಎಂದು ಹೇಳಿದನು.

ರಾಜನು ಅತಿಹರ್ಷದಿಂದ ಸುಮುಹೂರ್ತದಲ್ಲಿ ಪಟ್ಟಾಭಿಷೇಕಗೈದು ನುಡಿದನು : "ಎಲೆ ತಮ್ಮ ! ಮೈಸೂರಿನ ಯಾದವ ವಂಶವೆಂಬ ಕ್ಷೀರಸಾಗರದಲ್ಲಿ ಚಂದ್ರನಂತೆ ಉದಿಸಿದೆ. ತಂಪುಕಿರಣಗಳನ್ನು ಹೋಲುವ ನಿನ್ನ ಗುಣಗಳಿಂದ ಎಲ್ಲ ಪ್ರಜೆಗಳೂ ಆಹ್ಲಾದ ಪಡೆದಿರುವರು. ನಾನೂ ನನ್ನ ಹೊರೆಯನ್ನು ನಿನ್ನ ಮೇಲೆ ಇಳಿಸಿದೆನು. ಈವರೆಗೆ ಅರಸುತನಗೈದುದು ಇಂದು ಸಫಲವಾಯಿತು. ಎಲ್ಲ ಶ್ರೇಯಸ್ಸುಗಳೂ ಕೈಗೂಡಿದವು. ಪೂರ್ವಜನ್ಮದ ಪುಣ್ಯಫಲಗಳು ಹೊಮ್ಮಿದವು. ಕುಲದೇವತೆಗಳೂ ಪ್ರಸನ್ನವಾದವು. ಅಬ್ಬಬ್ಬ ! ಪ್ರಜೆಗಳು ಏನು ಪುಣ್ಯವಂತರೋ! ಕಲ್ಯಾಣ ಗುಣಗಳಿಂದ ರಾಮಚಂದ್ರನನ್ನು ಹೋಲುವಂತೆ (ರಾಜ್ಯ) ಪರಿಪಾಲಿಸುವೆ. ಭೂಮಿ ಏನು ಪುಣ್ಯವಂತೆಯೋ ! ದೊಡ್ಡ ಆಮೆಯೆಂಬ ಹಾಸುಗಲ್ಲಿನಲ್ಲೂ ದಿಗ್ಗಜಗಳ ಕುಂಭಸ್ಥಳಗಳೆಂಬ ಗುಂಡುಗಲ್ಲುಗಳಲ್ಲೂ ನಾಗೇಂದ್ರನ ಹೆಡೆಮಣಿಗಳೆಂಬ ಜಡಗಲ್ಲುಗ್ಗಳಲ್ಲೂ ವರಾಹನ ಹರಿತವಾದ ಕೋರೆಯಲ್ಲೂ ಕುಳಿತಿರುವ ಕಷ್ಟವನ್ನು ಮರೆತು ನಿನ್ನ ದುಂಡುದೋಳುಗಳಲ್ಲಿ ನೆಲೆ ನಿಂತು ಸುಖಹೊಂದಿದಳು. ನೀನು ಸಕಲಶಾಸ್ತ್ರಗಳನ್ನೋದಿ

ತಿಳಿಯ ತಕ್ಕುದೆಲ್ಲವನ್ನೂ ತಿಳಿದಿರುವೆ. ನಿನಗೆ ನಾನು ಉಪದೇಶಕೊಡುವುದು ಏನುಳಿದಿದೆ? ಆದರೂ ಪ್ರೀತಿಯಿಂದ ಪುನರುಕ್ತಿಗೊಳಿಸಿ ಹೇಳುವೆನು. ಪಟ್ಟವನ್ನೇರಿದುದಕ್ಕೆ ಹಣ ಸೆಳೆಯುವುದು ಭೋಗಿಸುವುದು ಫಲವೆಂದು ವಿಚಾರಿಸದೆ ದೇವರನ್ನೂ ಬ್ರಾಹ್ಮಣರನ್ನೂ ಬೆಳೆಯಿಸಿದವನನ್ನೂ ಸೇವಿಸಬೇಕು. ಮಕ್ಕಳಂತೆ ಪ್ರಜೆಗಳನ್ನು ದಯೆಯಿಂದ ಕಾಪಾಡಬೇಕು. ಅದರಿಂದ ಬರುವ ಹಣವೂ ಬಲವೂ ಗೆಲವೂ, ಅದರಿಂದ ಬೆಳೆದ ದೇಶ ಕೋಶಗಳೂ ಅದರಿಂದ ಬರುವ ಕೀರ್ತಿ ಪುಣ್ಯಗಳೂ ಫಲವೆಂದು ತಿಳಿಯಬೇಕು" ಎಂದು ನಿರೂಪಿಸಿ ತನ್ನ ಚಿಕ್ಕತಮ್ಮ ಮರಿಯದೇವರಾಜರಸನನ್ನೂ, ತನ್ನ ಮಕ್ಕಳಾದ ಚಿಕ್ಕದೇವರಾಜ, ಕಂಠೀರರಾಜರನ್ನೂ ಕೈಯಲ್ಲಿಟ್ಟು ದಕ್ಷಿಣದೇಶದ ಕೌಂಡಿನಿಯೆಂಬ ನದಿಯ ದಡದಲ್ಲಿ ಕೆಲವು ಕಾಲ ತಪಸ್ಸುಗೈದು ಪರವಾಸುದೇವನ ಪಾದ ಸೇರಿದನು.

ದೇವರಾಜರಸನ ಚರಿತ್ರೆ

ಬಳಿಕ ಈ ದೇವರಾಜನು ಸಾಕ್ಷಾತ್ ದೇವರಾಜನಾದ ಇಂದ್ರನಂತೆ ಸುಧರ್ಮ (೧. ಒಳ್ಳೆಯ ಧರ್ಮ ೨. ಇಂದ್ರನ ಸಭೆ)ದಲ್ಲಿ ನೆಲೆಸಿದವನೂ ಅಗ್ನಿಯಂತೆ ಶುಚಿಯೂ ತೇಜಸ್ವಿಯೂ ಯಮಧರ್ಮನಂತೆ ದಂಡಧಾರಿಯೂ ನಿಷ್ಪಕ್ಷಪಾತಿಯೂ ನಿಋತಿಯಂತೆ ದೇವತೆಗಳ ಸಮೂಹದಲ್ಲಿ ಗಣ್ಯನೂ ಪೂಜ್ಯಜನರಿಂದೊಡಗೂಡಿದವನೂ ವರುಣನಂತೆ ಎಲ್ಲೆಡೆ ಸಂಪದ್ಭರಿತನಾದವನೂ ಚೈತನ್ಯಶಾಲಿಯೂ ಕುಬೇರನಂತೆ ರಾಜರಾಜ (= ಅಧಿರಾಜ)ನೂ ಸಂಪತ್ತುಳ್ಳವನೂ ಈಶಾನನಂತೆ ಸರ್ವಜ್ಞನೂ ಕಲ್ಯಾಣಕಾರನೂ ಎನಿಸಿ ಪ್ರಸಿದ್ಧನಾದನು ಮತ್ತು ವಿಷ್ಣುವಿನ ಮತ್ಸ್ಯಾವತಾರದಂತೆ ವೇದಗಳನ್ನು ಸಂರಕ್ಷಿಸುವವನು. ಕೂರ್ಮಾವತಾರದಂತೆ ಗೋತ್ರವನ್ನು ಎತ್ತರಿಸುವವನು (೧. ಗೊತ್ರ = ೧. ವಂಶ. ೨. ಪರ್ವತ) ಮಹಾವರಾಹನಂತೆ ಭೂಮಿಯನ್ನು ಮೇಲೆತ್ತುವವನು. ನರಸಿಂಹನಂತೆ ಬಲಶಾಲಿವೈರಿಗಳ ಎದೆಗಳನ್ನು ಬಗಿಯುವವನು, ವಾಮನನಂತೆ ಒಂದೇ ಪಾದದಿಂದ ಭೂಮಂಡಲವೆಲ್ಲವನ್ನೂ ಆಕ್ರಮಿಸುವವನು, ಪರಶುರಾಮನಂತೆ ದುಷ್ಟರಾಜರನ್ನು ನಿರ್ನಾಮಗೊಳಿಸುವವನು, ರಾಮನಂತೆ ಧರ್ಮದಿಂದ ರಾಜ್ಯವಾಳುವವನು, ಬಲರಾಮನಂತೆ ಬಲಭದ್ರ (-ಸೈನ್ಯಸನ್ನದ್ಧ)ನೆನಿಸುವನು. ಕೃಷ್ಣನಂತೆ ಧರ್ಮಪ್ರತಿಷ್ಠಾಪನೆ ಗೈಯುವವನು. ಕಲ್ಕಿಯಂತೆ ಧರ್ಮಬಾಹಿರರನ್ನು ಸಂಹರಿಸುವನು ಮತ್ತು ತಾನು ಹಲವು ವೈರಿಪಟ್ಟಣಗಳನ್ನು ಗೆದ್ದುದರಿಂದ ತ್ರಿಪುರಗಳನ್ನು ಗೆದ್ದು ಶಿವನನ್ನು ಪರಿಹಾಸ ಮಾಡುವನು. ತಾನು ಮೂರು ಶಕ್ತಿಗಳಿಂದ ಸಂಪನ್ನನಾದುದರಿಂದ ಒಂದೇ ಶಕ್ತ್ಯಾಯುಧ ಧರಿಸಿದ ಷಣ್ಮುಖನನ್ನು ಕಡೆಗಣಿಸುವನು. ತಾನು ಅಖಂಡ ಪರಾಕ್ರಮಿಯಾದುದರಿಂದ ಸಮಯಕ್ಕೊಂದು ರೀತಿಯಾಗುವ ರವಿಯನ್ನು ಧಿಕ್ಕರಿಸುವನು. ತಾನು ಸಕಲ ರತ್ನಗಳನ್ನು ಸಂಗ್ರಹಿಸಿ ಅವುಗಳಿಂದ ಕಾರ್ಯ ನೆರವೇರಿಸಿಕೊಳ್ಳುವುದರಿಂದ ಜಡನಾದ ರತ್ನಾಕರ (ಸಮುದ್ರ)ನನ್ನು ಜರೆಯುವನು. ತಾನು ತೇಜಸ್ವಿಯಾಗಿಯೂ ಸನ್ಮಾರ್ಗದಲ್ಲಿ ಚಲಿಸುವನಾದುದರಿಂದ ಕಪ್ಪುಮಾರ್ಗ (ಹೊಗೆ)ವನ್ನು ಅನುಸರಿಸುವ ಅಗ್ನಿಯನ್ನು ಗಣಿಸನು. ತನ್ನವರೆಲ್ಲರೂ ಉಟ್ಟು ತೊಟ್ಟು ತನ್ನಂತಿರುವುದರಿಂದ

ಗೆಳೆಯನೊಬ್ಬ (ಶಿವ)ನನ್ನು ನರಶಿರ ಹಿಡಿದುಕೊಂಡಿರುವವನಾಗಿಯೂ ಚರ್ಮಧಾರಿಯಾಗಿಯೂ ಮಾಡಿ ತೋರಿಸಿದ ಕುಬೇರನನ್ನು ಅಪಹಾಸ್ಯಗೈಯ್ಯುವನು. (=ಪರ್ವತವೈರಿ) ಯಾದ ದೇವೇಂದ್ರನನ್ನು ಬಡವೆನಿಸುವನು. ತಾನು ವ್ಯಸನದೂರನಾದುದರಿಂದ ಪಗಡೆಯಲ್ಲಿ ಅಪಮಾನಿತನಾದ ನಳನನ್ನು ಕೀಳೆನಿಸುವನು. ತಾನು ಸತ್ಯದಲ್ಲಿ ಸಾರ್ವಭೌಮನಾದುದರಿಂದ ಸತ್ಯದಿಂದ ವಿಚಲಿತನಾದ ಹರಿಶ್ಚಂದ್ರನನ್ನು ಹಳಿಯುವನು. ತಾನು ಸತಾತನಧರ್ಮನೆನಿಸಿದ ಕೃಷ್ಣನನ್ನು ನಂಬಿ ನೆಲೆಗೊಂಡಿರುವುದರಿಂದ ಧರ್ಮತ್ಯಾಗ ತತ್ಪರನಾದ ಅರ್ಜುನನನ್ನು ಕೀಳ್ಗಳೆಯುವನು. ಮತ್ತೆ, ಶುಚಿಯಾಗಿಯೂ ಪ್ರಜೆಗಳನ್ನು ರಂಜಿಸುವನು. ನಿರ್ಮಲನಾಗಿಯೂ ವೈರಿಗಳ ಮುಖದಲ್ಲಿ ಮಲಿನತೆ (ಕಪ್ಪಿಡುವಿಕೆ)ಯನ್ನುಂಟುಮಾಡುವನು. ಭೂಮಿ ಧರಿಸಿದವನಾಗಿಯೂ ಮೃದುಪ್ರಕೃತಿಯವನೆನಿಸುವನು. ದಾನಶ್ರೇಷ್ಠನಾಗಿಯೂ ಮದುರಹಿತನೆನಿಸುವನು. ಸನ್ಮಾರ್ಗಿಯಾಗಿಯೂ ವೈರಿಗಳ ದುರ್ಗಗಳನ್ನು ಅತಿಕ್ರಮಿಸುವವನೆನಿಸುವನು. ಘನನಾಗಿಯೂ (೧. ಮೋಡ. ೨. ಚಂಚಲತೆ) ಚಂಚಲತೆಯಿಲ್ಲದವನಾಗಿದ್ದಾನೆ. ದೇವರಾಜನೆಂದು ಹೆಸರಿದ್ದೂ ನರಪತಿಯೆನಿಸಿ ಪ್ರಸಿದ್ಧನಾಗಿದ್ದಾನೆ.

ಹೀಗಿರುವ ಮಹಾರಾಜನು ಧರ್ಮದಿಂದ ನೆಲವನ್ನು ಪಾಲಿಸಲಿಕ್ಕೂ ಅಷ್ಟದಿಕ್ಕುಗಳನ್ನು ಗೆಲ್ಲಲಿಕ್ಕೂ ನೆರವಾಗಿ ಮುನ್ನ ಹಿರಿಯಣ್ಣನು ಹೇಳಿದಂತೆ ಚಿಕ್ಕದೇವರಾಯನನ್ನು ಯುವರಾಜ ಪದವಿಯಲ್ಲಿ ಅಲಂಕರಿಸಿದನು.

ಯುವರಾಜ ಚಿಕ್ಕದೇವರಾಯನ ದಂಡಯಾತ್ರೆ

ಇವನೂ ವಿಷ್ಣುವಿನಂತೆ ರಾಜ್ಯಭಾರದ ಹೊರೆಯೆಲ್ಲವನ್ನೂ ಹೊತ್ತು ದಿಗ್ವಿಜಯ ಯಾತ್ರೆಗಳನ್ನು ನೆರವೇರಿಸುತ್ತಿದ್ದನು. ರಾಜನೂ ದೇವೇಂದ್ರನಂತೆ ನಿರಾತಂಕವಾಗಿ ದಿವ್ಯ ಭೋಗಗಳನ್ನು ಅನುಭವಿಸುತ್ತಿದ್ದನು.

ಒಮ್ಮೆ ಮಹಾನವಮಿಯ ಉತ್ಸವದಲ್ಲಿ ಎಂಟುದಿಕ್ಕುಗಳ ದೊರೆಗಳೆಲ್ಲರೂ ಕಪ್ಪಕಾಣಿಕೆಗಳನ್ನು ತಂದೊಪ್ಪಿಸುವಲ್ಲಿ, ಇಕ್ಕೇರಿಯ ಶಿವಪ್ಪನಾಯಕನು ತನ್ನರಸನಾದ ವೀರಭದ್ರನಾಯಕನಿಗೆ ದ್ರೋಹ ಬಗೆದು ಅವನನ್ನು ಮೋಸದಿಂದ ಕೊಂದು ಆ ಅರಸೊತ್ತಿಗೆಯನ್ನು ಕೊಂಡು ತಾನೂ (ಮೈಸೂರರಸರಿಗೆ) ಉಡುಗೊರೆಗಳನ್ನೂ ಕಪ್ಪಕಾಣಿಕೆಗಳನ್ನು ಕಳುಹಿಸಲು, ಅವನ ತಪ್ಪುಕಾರ್ಯಗಳನ್ನು ನೆನೆದು (ಅವನ್ನು) ನಿರಾಕರಿಸಿ, ಬಂದ ಹರಿಕಾರನನ್ನು ಬಂದಂತೆ ಮರಳಿ ಕಳುಹಿಸಿದನು. ಅದಕ್ಕೆ ಆ ದೊರೆ ತೀರ ಬಿಗಿದುಕೊಂಡು ನೆರವನ್ನು ಬಯಸಿ, ಮುನ್ನ ತನ್ನಂತೆ ವಿಜಯನಗರದ ರಾಜ್ಯವನ್ನಾಳಿದ ತೆಲುಗು (ಅರವೀಡು ವಂಶದ) ರಾಜರ ರೀತಿಯಲ್ಲಿ ಶ್ರೀರಂಗರಾಜನೆಂಬವನು ತನ್ನ ಬೇಲೂರು, ಚಂದ್ರಗಿರಿ ಮುಂತಾದ ಕೋಟೆದುರ್ಗಗಳನ್ನು ತುರುಕರಿಗೆ ಸೂರೆಗೊಟ್ಟು ತನ್ನ ಪರಿವಾರ ಸಮೇತ ಮಹಾಭಿಕ್ಷುಕನೆನಿಸಿ, ಜಿಂಜಿ, ತಂಜಾವೂರು, ಮಧುರೆಯ (ರಾಜ) ಮನೆತನಗಳಲ್ಲಿ ಬೇಡಿ ಅವರಿತ್ತುದನು ತಿಂದನು. (ಮತ್ತು) ಅವರನ್ನು ಬೆಸ.....ಗಣೆಂದ ಎಂದು ಅತ್ತಿತ್ತ

ತಿರುಗಿ ಎಲ್ಲಿಯೂ ನೆಲೆ ಸಿಗದಿರಲು ಅವನೊಬ್ಬನನ್ನು ಹುಡುಕಿಸಿ ಕಂಡು ನಮಸ್ಕರಿಸಿ ಕರೆದುಕೊಂಡು ಬಂದು ತನ್ನ ಮುಂದಿನ ಕಡೆಗಡಿಯಾದ ಹಾಸನ ಬೇಲೂರುಗಳನಿತ್ತನು (ಮತ್ತು) ಅವನಿಂದ ಐಗೂರು ತರಿಯಕೆರೆ ಹರಪನಹಳ್ಳಿ ಬೆಂತನಕಲ್ಲು ಮದಗಿರಿ ಗಿಡುಗ....ದ ಹಲವು ಹಟ್ಟಿ ಕೊಟ್ಟಿಗೆಗಳ ದೊರೆಗಳ ಸೈನ್ಯವನ್ನೂ ತನ್ನ ಮೂಲ ಬಲವನ್ನೂ ತನ್ನನ್ನಾಶ್ರಯಿಸಿದ ತುಳುವ, ಕೊಂಕಣ, ಕೊಡಗು, ಮಲೆಯಾಳಗಳ ಮೂಲಬಲವನ್ನೂ ತೆಗೆದುಕೊಂಡು ಶ್ರೀರಂಗಪಟ್ಟಣಕ್ಕೆ ನಡೆತಂದು.....

.–. .–. .–.

ಟಿಪ್ಪಣಿ ಮತ್ತು ಕಠಿಣಪದ ಕೋಶ

ಅದಿತಿ-ಕಶ್ಯಪರು : ಕಶ್ಯಪನು ಮರೀಚಿಯ ಮಗ. ಅದಿತಿ ಮೊದಲಾದ ಹನ್ನೆರಡು ಜನ ದಕ್ಷಪುತ್ರಿಯರು ಈತನ ಹೆಂಡಂದಿರು. ಇವರು ದೇವತೆಗಳು, ದಾನವರು, ಮಾನವರು, ಪಶು-ಪಕ್ಷಿಗಳ ಸೃಷ್ಟಿಗೆ ಕಾರಣಕರ್ತರು. ಆದಿತ್ಯ ದೇವತೆಗಳೂ, ಇಂದ್ರ ವಿಷ್ಣುಗಳೂ ಇವರ ಮಕ್ಕಳು. ಇವರು ಶಾಪಗ್ರಸ್ತರಾಗಿ ದೇವಕಿ-ವಸುದೇವರಾಗಿ ಹುಟ್ಟಿದರು. (ಪು. ೮೮)

ಅಂತೆಂಬರ ಗಂಡ ನೋಡು....... ಸ್ವಸ್ತಿ.....(ಪು. ೧೮)

ಆವರಣಗಳು : ಒಂದಾದಮೇಲೆ ಒಂದರಂತೆ ಭೂಮಂಡಲ (ಅಥವಾ ಬ್ರಹ್ಮಾಂಡ)ದ ಸುತ್ತ ಇರುವ ಆವರಣಗಳು. ಇವು ಲವಣ, ಇಕ್ಷು, ಸುರಾ, ಸರ್ಪಿಸ್, ದಧಿ, ಕ್ಷೀರ ಮತ್ತು ನೀರ ಎಂದು ಏಳು ಇವೆಯೆಂಬುದು ನಮ್ಮ ಪುರಾಣಗಳ ಹೇಳಿಕೆ. (ಪು. ೫೫)

ಕಲ್ಲಚಿಕಣ್ದೆರೆದುದು : ಶಿಲಾರೂಪದ ಅಹಲ್ಯೆ ಸಜೀವಗೊಂಡಳು. (ಪು. ೮೩)

ಆಹತ ಪ್ರತ್ಯಾಹತ :.... ೭, ೧೦ ಅಥವಾ ೧೫ ಸಂಗೀತದ ಗಮಕಗಳೆಂದು ಹೇಳಲಾಗುತ್ತದೆ. ಕಂಪಿತ, ಸ್ಫುರಿತ, ಲೀನ, ತ್ರಿಭಿನ್ನ, ತಿರಿಪ, ಆಂದೋಲಿತ ಮುಂ. (ಪು. ೧೦೪.)

ಕುಂದ-ಕದಂಬ : ಪರಬ್ರಹ್ಮನ ಅವತಾರ ವೈಭವವನ್ನು ಆನಂದಿಸಲು ಗಿಡಮರಬಳ್ಳಿಗಳ ಗೋಪಿಕೆಯರಾದಿಯಾಗಿ ರೂಪಧರಿಸಿ ಅನೇಕ ಋಷಿ-ಮುನಿಗಳೂ ದೇವತೆಗಳೂ ಭೂಲೋಕದಲ್ಲಿ ಅವತರಿಸಿದರೆಂದು ಭಾಗವತ-ಪುರಾಣಾದಿಗಳ ನಂಬಿಕೆ. (ಪು. ೧೦೮)

ಕಾಂಚೀಪೂರ್ಣ : ಯಾಮುನಾಚಾರ್ಯರ ಶಿಷ್ಯರಲ್ಲಿ ಒಬ್ಬ ಕಂಚಿಯ ವಿಷ್ಣು ದೇವಸ್ಥಾನದಲ್ಲಿ ಕೈಂಕರ್ಯವೆಸಗುತ್ತಿದ್ದನು. ಶ್ರೀರಾಮಾನುಜಾಚಾರ್ಯರಿಗೆ ಶ್ರೀವೈಷ್ಣವ ಮತದ ತತ್ವರಹಸ್ಯಗಳನ್ನು ತಿಳಿಸುತ್ತಿದ್ದವರಲ್ಲಿ ಈತನೂ ಒಬ್ಬನು. ವೈಶ್ಯಜಾತಿಯವನು, ವರದರಾಜಸ್ವಾಮಿಯು ಪ್ರತ್ಯಕ್ಷ ಈತನೊಡನೆ ಮಾತನಾಡುತ್ತಿದ್ದನೆಂದು ನಂಬಿಕೆ. (ಪು. ೭೮)

ಕುಱುಂಬರಾಯರು : ವಿಜಯನಗರ ಸಂಸ್ಥಾಪಕರಾದ ಹುಕ್ಕ-ಬುಕ್ಕರು ಜಾತಿಯಿಂದ ಕುರುಬರಾಗಿದ್ದರು. ಸಂಗಮವಂಶವೆಂತಲೂ ಯಾದವವಂಶವೆಂತಲೂ ಶಾಸನಗಳಲ್ಲಿ ಇವರ ವಂಶವನ್ನು ಸಾಮಾನ್ಯವಾಗಿ ಹೆಸರಿಸಲಾಗುತ್ತದೆ. (ಪು. ೧)

ಕೊಂಚವೆಟ್ಟ-ಕ್ರೌಂಚಪರ್ವತ : ಹಿಮಾಲಯನ ಮೊಮ್ಮಗನೂ ಮೈನಾಕನ ಮಗನೂ ಆದ

ಒಂದು ಪರ್ವತ. ಷಣ್ಮುಖನಿಂದ ಹತವಾದಂತೆ ಕಥೆಯಿದೆ. (ಪು. ೩೦)

ಚೇತನೆ-ಈಶ್ವರರು : ವ್ಯೂಹದಲ್ಲಿ ನಾಲ್ಕನೆಯವನಾದ ಅನಿರುದ್ಧನಿಗೆ ಈಶ್ವರನೆಂದು ಹೆಸರಿದೆ. ಶುದ್ಧರೂಪದ ಸೃಷ್ಟಿ ಪ್ರಾರಂಭಗೊಳ್ಳುವುದು ಈಶ್ವರ ಮತ್ತು ಚೇತನೆಯರಿಂದ. ಈಶ್ವರರೂಪೀ ವಿಷ್ಣು ಬ್ರಹ್ಮಾಂಡಕ್ಕೆ ಒಡೆಯನು. (ಪು. ೨೩)

ಚೋಳನ ಗರ್ವನ ಗರ್ವದೊಡನೆ...... ಇಟಿ'ತೆಗೆಯ್ದಂ : ಶೈವನಾದ ಕುಲೋತ್ತುಂಗ ಚೋಳ ದೊರೆಯು (ರಾಮಾನುಜರ ಸಮಕಾಲೀನ) ಶ್ರೀವೈಷ್ಣವರಿಂದ 'ಶಿವಾತ್ಪರಮನಾಸ್ತಿ' ಎಂದು ಒತ್ತಾಯದಿಂದ ಬರೆಯಿಸಿಕೊಳ್ಳತೊಡಗಿದನು. ಅದೇ ರೀತಿ ರಾಮಾನುಜರಿಂದಲೂ ಬರೆಯಿಸಿಕೊಳ್ಳಬೇಕೆಂಬುದು ಅವನ ಬಯಕೆ. ಅದಕ್ಕಾಗಿ ಅವರನ್ನು ಹಿಡಿದು ತರಲು ಶ್ರೀರಂಗಕ್ಕೆ ದೂತರು ಬಂದರು. ಅವರ ಕೈಗೆ ಮಹಾಪೂರ್ಣ ಮತ್ತು ಶ್ರೀವತ್ಸಾಂಕರು ಸಿಕ್ಕಿಕೊಂಡರು. ರಾಜನು ಅವರನ್ನು ಒತ್ತಾಯಿಸಿ ಶಿವ ಪಾರಮ್ಯದ ವಚನ ಬರೆದುಕೊಡಲು ಹೇಳಿದನು. ಅವರಿಬ್ಬರೂ ಒಪ್ಪದಿರಲು ರಾಜನು ಅವರನ್ನು ತೀವ್ರವಾಗಿ ಹಿಂಸಿಸಿದನು. (ಪು. ೭೨)

ಜನಮೇಜಯ : ಜನಮೇಜಯನು ಪರೀಕ್ಷಿತನು ಮಗನು. ಅಭಿಮನ್ಯು-ಉತ್ತರೆಯರ ಮಗನಾದ ಪರೀಕ್ಷಿತನು ಸರ್ಪ ಕಚ್ಚಿ ಸಾಯಲು ಜನಮೇಜಯ ಅದರ ಸೇಡಿಗಾಗಿ ಸರ್ಪಯಾಗ ಮಾಡಲು ಪ್ರಾರಂಭಿಸಿದನು. ಅದು ಅಪೂರ್ಣಗೊಂಡುದರ ಪ್ರಾಯಶ್ಚಿತ್ತಕ್ಕಾಗಿ ಮಹಾಭಾರತ ಕೇಳಿದನು. (ಪು. ೪೮)

ತಿರುಕುಱುಂಗುಡಿ ನಂಬಿಗೆ ಉಪದೇಶವಿತ್ತುದು : ಮದ್ರಾಸಿನ ಸಮೀಪದಲ್ಲಿ ತಿರುಕುರುಂಗುಡಿ ಎಂಬ ಊರಿದೆ. ರಾಮಾನುಜರು ಸಂಚಾರ ಮಾಡುತ್ತ ತಿರುಕುಱುಂಗುಡಿಗೆ ಬಂದರು. ಅಲ್ಲಿಯ ದೇವತೆಯಾದ ಕುಱುಂಗುಡಿ ನಂಬಿಯು ಅರ್ಚಕನ ಮುಖಾಂತರ ರಾಮಾನುಜರು ಸಾಧಿಸಿದ ಮತಪ್ರಸಾರ ಕಾರ್ಯವನ್ನು ಮೆಚ್ಚಿ, ತಾನು ಹಲವು ಅವತಾರ ತಾಳಿ ಸಾಧಿಸಲಾಗದ ಕಾರ್ಯವನ್ನು ನೀವು ಸಾಧಿಸಿದ್ದು ಹೇಗೆ ? ಎಂದು ಪ್ರಶ್ನಿಸಿದನು. ಆಚಾರ್ಯರು ತಾವು ಹೀಗೆ ಕೇಳಿದರೆ ಹೇಳಲಾಗುವುದಿಲ್ಲವೆಂದೂ ಪ್ರತ್ಯಕ್ಷ ಕಾಣಿಸಿಕೊಂಡರೆ ಹೇಳುವುದಾಗಿಯೂ ಹೇಳಿದರು. ಆಗ ಪರಮಾತ್ಮನು ಪ್ರತ್ಯಕ್ಷನಾದನು. ಆಚಾರ್ಯರು ಅವನ ಕಿವಿಯಲ್ಲಿ, ಆ ಕಾರ್ಯಸಾಧಿಸಿದ್ದು ಮಂತ್ರದ್ವಯದ ಬಲದಿಂದ ಎಂದು ಶಿಷ್ಯನಂತೆ ಕುಳಿತುಕೊಂಡಿದ್ದ ಪರಮಾತ್ಮನಿಗೆ ಕಿವಿಯಲ್ಲಿ ಉಸುರಿದರು. (ಪು. ೫೧)

ದೀಹದ ಮೃಗ, ಹಕ್ಕಿಗಳು : ಬೇಟೆಗಾಗಿ ಸಾಕಿದ ಪ್ರಾಣಿಪಕ್ಷಿಗಳು. ಇದಕ್ಕಾಗಿ ಪ್ರಾಚೀನ ಕರ್ನಾಟಕದಲ್ಲಿ ಹುಲಿಗಳನ್ನು ಕೂಡ ಪಳಗಿಸಲಾಗುತ್ತಿತ್ತು. (ಪು. ೪)

ಧ್ವನಿನೂತನಪುರ : ಶ್ರೀ ವಿಲ್ಲಿಪುತ್ತೂರು, ವಿಷ್ಣುಚಿತ್ತರ ಊರು. ಗೋದಾದೇವಿಯು ಶ್ರೀವಿಷ್ಣು ತನ್ನ ಪತಿಯಾಗಲೆಂದು ಹರಕೆ ಹೊತ್ತಿದ್ದಳೆಂದೂ ಆ ಹರಕೆಯನ್ನು ರಾಮಾನುಜರು

ಇಲ್ಲಿ ತಾವು ತೀರಿಸಿದ್ದರಿಂದ ರಾಮಾನುಜರು ಗೋದಾದೇವಿಗೆ ಸಹೋದರರಾದರೆಂದು ಸಂಬಂಧ ಕಲ್ಪಿತವಾಯಿತು. (ಪು. ೭೯)

ನಾಥಮುನಿಯ ಬಿನ್ನಣ : ನಾಥಮುನಿ ಸಂಸತ, ತಮಿಳುಗಳಲ್ಲಿ ಉದ್ದಾಮ ಪಂಡಿತನಾಗಿದ್ದನು. ಯೋಗದಲ್ಲಿ ನಿಷ್ಣಾತನಾಗಿ ಯೋಗರಹಸ್ಯ, ನ್ಯಾಯತತ್ವ ಮುಂತಾದ ಗ್ರಂಥಗಳನ್ನು ರಚಿಸಿದನು. ಶಠಕೋಪನು ರಚಿಸಿದ ಪದ್ಯಗಳನ್ನು ಸಂಕಲಿಸಿದನು. (ಪು. ೭೮)

ಪದವಾಕ್ಯ ಪ್ರಮಾಣ : ವ್ಯಾಕರಣ, ತರ್ಕ ಮತ್ತು (ಪೂರ್ವ-ಉತ್ತರ) ಮೀಮಾಂಸೆಗಳನ್ನು ಸಂಯುಕ್ತವಾಗಿ ಪದವಾಕ್ಯ ಪ್ರಮಾಣಗಳೆಂದು ಕರೆಯಲಾಗುತ್ತದೆ. ಕೆಲವರ ಅಭಿಪ್ರಾಯದಲ್ಲಿ ವಾಕ್ಯವೆಂದರೆ ಮೀಮಾಂಸೆಯೆಂದೂ, ಪ್ರಮಾಣವೆಂದರೆ ತರ್ಕವೆಂದೂ ಅರ್ಥ. (ಪು. ೧೦೨)

ಪರವಿಭವ ವ್ಯೂಹಾದಿ ಮೂರ್ತಿಗಳು : ವ್ಯೂಹ ಚತುಷ್ಟಯ (ಪು. ೩೯) ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ ಈ ನಾಲ್ಕು ರೀತಿಯ ಪರಮಾತ್ಮನ ರೂಪಗಳು. ಇವುಗಳಿಂದ ಸೃಷ್ಟಿರಚನೆಯಾಗುವುದು.

ಪೂರ್ಣ-ಮಹಾಪೂರ್ಣ : ಯಮುನಾಚಾರ್ಯರ ಪ್ರಮುಖ ಶಿಷ್ಯರಲ್ಲಿ ಇವನೂ ಒಬ್ಬ. ರಾಮಾನುಜಾಚಾರ್ಯರಿಗೆ ಮಂತ್ರೋಪದೇಶ ಮಾಡಿದವನು. (ಪು. ೭೯)

ಪ್ರಭಾಸ ಕ್ಷೇತ್ರ : ದ್ವಾರಕೆಯ ಸಮೀಪದ ಒಂದು ಕ್ಷೇತ್ರ. ಕೃಷ್ಣನು ಸಮುದ್ರ ಪ್ರವೇಶಿಸಿ ಬ್ರಾಹ್ಮಣ ಕುಮಾರನ (ರ)ನ್ನು ಬಿಡಿಸಿ ತಂದುದು ಇಲ್ಲಿಯೇ. (ನೋ. ಸಾಂದೀಪನಿ) (ಪು. ೫೨)

ಪೃಶ್ನಿ-ಸುತಪ : ಅದಿತಿ-ಕಶ್ಯಪರ ಪರ್ಯಾಯನಾಮಗಳು. ತಿರುಮಲಾರ್ಯನ ಅಭಿಪ್ರಾಯದಲ್ಲಿ ಇವರೇ ಬೇರೆ. ಅದಿತಿ-ಕಶ್ಯಪರೇ ಬೇರೆ ಎಂದು ವ್ಯಕ್ತವಾಗಿದೆ. ಅದಿತಿ-ಕಶ್ಯಪರಂತೆ ಇವರೂ ಪ್ರಜಾಪತಿಗಳು. (ಪು. ೮೮)

ಬಿರುದು : ನೋಡು ಸ್ವಸ್ತಿ........ (ಪು. ೧೮)

ಭೃಗುಮುನಿಯ ಪಾದಧರಿಸಿದ್ದು : ತ್ರಿಮೂರ್ತಿಗಳಲ್ಲಿ ಬ್ರಾಹ್ಮಣರಿಗೆ ಪೂಜ್ಯನಾದವನು ಯಾರು ಎಂಬುದನ್ನು ನಿರ್ಧರಿಸಲು ಭೃಗುಮುನಿ ನಿಯಮಿತನಾದನು. ಬ್ರಹ್ಮ ಮತ್ತು ಶಿವರು ಬೇರೆಬೇರೆ ಪರೀಕ್ಷೆಗಳಿಂದ ಅಯೋಗ್ಯರೆನಿಸಿದರು. ಭೃಗು ಮಲಗಿಕೊಂಡಿದ್ದವನಲ್ಲಿಗೆ ಹೋಗಿ ಅವನ ಎದೆಯ ಮೇಲೆ ತನ್ನ ಪಾದವೂರಿದನು. ಬ್ರಹ್ಮ-ಶಿವರಂತೆ, ಕೋಪಿಸಿಕೊಳ್ಳುವ ಬದಲು 'ನಿನ್ನ ಪಾದಕ್ಕೆ ನೋವಾಯಿತೆ ?' ಎಂದು ಆರ್ದ್ರನಾಗಿ ಕೇಳಿದನು ಮತ್ತು ಅದನ್ನು ಒತ್ತತೊಡಗಿದನು. ಇದರಿಂದ ಸುಪ್ರೀತನಾದ ಭೃಗು ವಿಷ್ಣುವೇ ಪೂಜ್ಯ ದೇವತೆಯೆಂದು ಸಾರಿದನು. (ಪು. ೬ : ೮೩)

ಭೋಗಭೂಮಿ : ಅತ್ಯಂತ ಸುಖ-ಸಂತೋಷಗಳಿಂದ ತುಂಬಿರುವ ಪ್ರದೇಶ ಅಥವಾ ಭೂಖಂಡ. ಪುಣ್ಯಮಾಡಿದವರು ಇಂಥ ಪ್ರದೇಶಗಳಲ್ಲಿ ಹುಟ್ಟಿ ಸುಖವನ್ನನುಭವಿಸುತ್ತಾರೆಂದು ಜೈನ ಪುರಾಣಗಳು ಹೇಳುತ್ತವೆ. (ಪು. ೧೦೩)

ಮಹದಾದಿ ಸೃಷ್ಟಿ : ಕೂಟಸ್ಥಪುರುಷ ಮತ್ತು ಮಾಯಾಶಕ್ತಿಯಿಂದ (ಅಥಃ) ಸೃಷ್ಟಿ ಪ್ರಾರಂಭಗೊಳ್ಳುವಾಗ ಮಹತ್, ಅಹಂಕಾರಾದಿ ತತ್ವಗಳು ಹುಟ್ಟುವವೆಂದೂ ಅಲ್ಲಿಂದ ಬೆಳವಣಿಗೆ ಮುಂದುವರಿಯುವುದೆಂದೂ ವೈಷ್ಣವ ಮತದ ನಂಬಿಕೆ. (ಪು. ೧೦೩)

ಮಾನೌಮಿಯೊಸಗೆ : ಮಹಾನವಮಿ ಹಬ್ಬ. ವಿಜಯನಗರದ ರಾಜರು ಪರಂಪರೆಯಿಂದ ಆಚರಿಸುತ್ತಿದ್ದ ಬಹುಪ್ರಸಿದ್ಧವಾದ ಹಬ್ಬ. ಅದಕ್ಕಾಗಿ ದೇಶವಿದೇಶಗಳಿಂದ ಆಮಂತ್ರಿತರೂ ದರ್ಶನಕಾಂಕ್ಷಿಗಳೂ ಬರುತ್ತಿದ್ದರು. (ಪು. ೧೪)

ಮೈನಾಕನ ಪಕ್ಷಪಾತ : ಸಾಗರರಾಜನ ಮಿತ್ರನಾದ ಪರ್ವತ. ಹಿಮಾಲಯದ ಮಗ. ಇಂದ್ರನ ದಾಳಿಯಿಂದ ತನ್ನ ರೆಕ್ಕೆಗಳನ್ನು ಉಳಿಸಿಕೊಂಡು ಸಾಗರದಲ್ಲಿ ಅಡಗಿದನು. ಹನುಮಂತ ಸಾಗರೋಲ್ಲಂಘನ ಮಾಡಿದಾಗ ಆಕಾಶದಲ್ಲಿಯೇ ಆತನನ್ನು ಸನ್ಮಾನಿಸಿ ಸಜ್ಜನ ಪಕ್ಷಪಾತವನ್ನು ತೋರಿದನು. (ಪು. ೯೪)

ಯಾಮುನಾಚಾರ್ಯರ ಇಚ್ಛೆಗಳು : ೧. ಬ್ರಹ್ಮಸೂತ್ರಗಳಿಗೆ ಶ್ರೀ ವೈಷ್ಣವ ಪರವಾದ ಭಾಷ್ಯಗಳನ್ನು ಬರೆಯುವುದು. ೨. ವಿಷ್ಣುಪುರಾಣದ ಕರ್ತೃ ಪರಾಶರರ ಹೆಸರನ್ನು ಶಾಶ್ವತಗೊಳಿಸುವುದು, ೩. ಶಠಕೋಪನ ಹೆಸರನ್ನು ಶಾಶ್ವತಗೊಳಿಸುವುದು. ಇವು ಮೂರೂ ಯಾಮುನಾಚಾರ್ಯರ ಇಚ್ಛೆಗಳಾಗಿದ್ದವು. ಮರಣ ಸಮಯದಲ್ಲಿ ರಾಮಾನುಜರನ್ನು ಕಾಣಬೇಕೆಂದಿದ್ದ ಅವರ ಬಯಕೆ ಈಡೇರದೆ ಹೋಯಿತು. ಆದರೂ ರಾಮಾನುಜರು ಅವರ ಅಂತ್ಯವಿಧಿಯ ಕಾಲಕ್ಕೆ ಉಪಸ್ಥಿತರಾದರು. ಶವದ ಮೂರು ಬೆರಳುಗಳು ಮುಚ್ಚಿದ್ದುದರಿಂದ ಅವರ ಮೂರು ಬಯಕೆಗಳು ರಾಮಾನುಜಾಚಾರ್ಯರಿಗೆ ಗೊತ್ತಾದವು. ಅವನ್ನು ತಾವು ಈಡೇರಿಸುವುದಾಗಿ ಪ್ರತಿಜ್ಞೆ ಮಾಡಿ ಅದರಂತೆ ತಾವು ಮತ್ತು ತಮ್ಮ ಶಿಷ್ಯರಿಂದ ಮೂರೂ ಕಾರ್ಯಗಳನ್ನು ಪೂರ್ಣಗೊಳಿಸಿದರು. (ಪು. ೭೮)

ವರನಂದಿ : ಇವಳು ದಿಲ್ಲಿಯ ಬಾದಶಹನ ಮಗಳು. ಇವಳಲ್ಲಿ ಚೆಲುವನಾರಾಯಣನ ವಿಗ್ರಹವಿದ್ದುದು ರಾಮಾನುಜರಿಗೆ ಗೊತ್ತಾಯಿತು. ಆ ವಿಗ್ರಹವನ್ನು ತಮ್ಮ ಉತ್ತರ ಭಾರತ ಯಾತ್ರೆಯಲ್ಲಿ ಸಂಪಾದಿಸಿ ತಂದು ಮೇಲುಕೋಟೆಯಲ್ಲಿ

ಸ್ಥಾಪಿಸಿದರು. ಇವಳನ್ನು ಬೇಬಿ ನಾಚ್ಚಿಯಾರ್ ಎಂದು ಕರೆಯುವುದು ರೂಢಿ. (ಪು. ೭೯)

ವೈಶಂಪಾಯನ : ಜನಮೇಜಯನ ಪುರೋಹಿತನಾದ ಋಷಿ. ವ್ಯಾಸರ ಶಿಷ್ಯ, ಯಾಜ್ಞವಲ್ಕ್ಯನ ಗುರು. (ಪು. ೪೮)

ವೆಂಕಟೇಶ್ವರನಿಗೆ ಶಂಖ ಚಕ್ರ : ಲಾಂಛನಗಳನ್ನು ಅರ್ಪಿಸಿದ್ದು ತಿರುಪತಿಯ ದೇವರ ಬಗ್ಗೆ ವಿವಾದ ಉಂಟಾದಾಗ ದೇವರಿಗೆ ಶಿವ ಮತ್ತು ವಿಷ್ಣು ಪರವಾದ ಲಾಂಛನಗಳನ್ನು ಇಟ್ಟು ದೇವಾಲಯಕ್ಕೆ ಕೀಲಿ ಹಾಕಲಾಯಿತು. ಮರುದಿನ ಬಾಗಿಲು ತೆರೆದು ನೋಡಿದಾಗ ಶಂಖ-ಚಕ್ರಗಳು ದೇವರ ಹಸ್ತದಲ್ಲಿದ್ದುದರಿಂದ ತಿರುಪತಿಯ ದೇವರು ವೈಷ್ಣವದೇವರೆಂದು ಸಿದ್ಧವಾಯಿತು. ಈ ಕಾರ್ಯ ರಾಮಾನುಜರ ಸಮಕ್ಷಮದಲ್ಲಿ ನಡೆದುದರಿಂದ ಶಂಖ-ಚಕ್ರಗಳು ಅವರಿಂದಲೇ ವೆಂಕಟೇಶನಿಗೆ ಅರ್ಪಿತವಾದುವೆಂದು ಪ್ರಸಿದ್ಧಿಯುಂಟಾಯಿತು. (ಪು. ೭೯)

ಶ್ರೀವತ್ಸಾಂಕ : ಶೂರೇಶ ಅಥವಾ ಶೂರಕುಲವಲ್ಲಭನೆಂಬ ಹೆಸರಾದ ಒಬ್ಬ ಶ್ರೀಮಂತ ಬ್ರಾಹ್ಮಣ. ತನ್ನ ಸಂಪತ್ತೆಲ್ಲವನ್ನು ದಾನಮಾಡಿ ಶ್ರೀರಂಗಕ್ಕೆ ಬಂದು ನಿಂತನು. ರಾಮಾನುಜರ ಶಿಷ್ಯನಾಗಿ ಅವರೊಡನೆ ಉತ್ತರ ಭಾರತದ ಪ್ರವಾಸ ಕೈಗೊಂಡನು. ಶ್ರೀಭಾಷ್ಯಾದಿ ಗ್ರಂಥರಚನೆಯಲ್ಲೂ ಶ್ರೀ ವೈಷ್ಣವಮತ ಪ್ರಚಾರ ದಲ್ಲೂ ಅವರಿಗೆ ಸಹಾಯ ಮಾಡಿದನು. (ಪು. ೭೨)

ಸಿದ್ಧಾಶ್ರಮ : ಚೆಂಗಲ್‌ಪೇಟೆ ಜಿಲ್ಲೆಯ 'ಮಧುರಾಂತಕಂ' ದೇವಸ್ಥಾನ. ಇಲ್ಲಿ ಪೆರಿಯ ನಂಬಿ ಅಥವಾ ಮಹಾಪೂರ್ಣನೆಂಬ ಯಾಮುನಾಚಾರ್ಯರ ಪ್ರಸಿದ್ಧ ಶಿಷ್ಯನು ದೇವರ ಸೇವೆ ಮಾಡುತ್ತ ವಾಸಿಸುತ್ತಿದ್ದನು. ರಾಮಾನುಜರಿಗೆ ಸಂಸ್ಕಾರವಿತ್ತು ರಹಸ್ಯಾರ್ಥ ಗಳನ್ನು ಬೋಧಿಸಿದನು. (ಪು. ೭೯)

ಸೀದ ಕಂಡ ಶಿಶುವಾದುದು : ಅಶ್ವತ್ಥಾಮನು ಪ್ರಯೋಗಿಸಿದ ಅಸ್ತ್ರದಿಂದ ಉತ್ತರೆ ಗರ್ಭದ ಮೇಲೂ ಪರಿಣಾಮವಾಯಿತು. ಅದರ ಅಳಿವನ್ನು ತಪ್ಪಿಸುವುದಾಗಿ ಕೃಷ್ಣನು ಪ್ರತಿಜ್ಞೆ ಮಾಡಿದ್ದನು. ಪ್ರಸವವಾಗುತ್ತಲೇ ತೀರಿಹೋಗಿದ್ದ ಆ ಕೂಸು ಕೃಷ್ಣನ ಮಹಿಮೆಯಿಂದ ಪುನರ್ ಜನ್ಮಪಡೆಯಿತು. (ಪು. ೮೩)

ಸ್ವಸ್ತಿಸಮಸ್ತ .... ಬಿರುದ(ದೆ)ಂತೆಂಬರ ಗಂಡ : ಇದು ಮೈಸೂರು ದೊರೆಗಳ ಬಿರುದಾವಳಿ. ವಿಶೇಷವಾಗಿ ಅಂದು ಬಳಕೆಯಲ್ಲಿದ್ದುದು. ಅರ್ಥ : ಸಾಮಂತ ರಾಜರ ಶಿರಸಮೂಹದಿಂದ ಶೋಭಿಸುವ ಪಾದಕಮಲವುಳ್ಳವನು (ಸಾಮಂತ ರಾಜರಿಂದ ನಮಸ್ಕರಿಸಲ್ಪಡುವವನು) ; ಸೂರ್ಯನ ಗರ್ವವೆಲ್ಲವನ್ನು ದೂರಗೊಳಿಸಬಲ್ಲ ಸಾಮರ್ಥ್ಯವುಳ್ಳಂಥ ಮಹಾತೇಜಸ್ಸುಳ್ಳವನು ; ದಯಾರಸದ ತೆರೆಯೆಬ್ಬಿಸುವ ಕಡೆಗಣ್ಣನೋಟದಿಂದ ಕರ್ನಾಟಕ ದೇಶವನ್ನು ಆನಂದಪಡಿಸುವವನು.

ಖಡ್ಗಧಾರೆಯಿಂದ ಕತ್ತರಿಸಲಾದ ವೈರಿರಾಜರ ಕೊರಳೆಂಬ ಕಾಂಡದಿಂದ ಚಿಮ್ಮುವ ರಕ್ತಧಾರೆಯಿಂದ ತನ್ನ ಬಿರುದನ್ನು ತೊಳೆದು ಶುಚಿಗೊಳಿಸುವವನು. (=ಮೇಲಿಂದ ಮೇಲೆ ವಿಜಯಯಾತ್ರೆ ಮಾಡುವವನು) 'ನಿಮ್ಮ ಬಿರುದು ಅಂತಹದೆ ?' ಅಥವಾ ನಿಮ್ಮ ಬಿರುದು ಎಂಥದು ?') ಎಂದು ಪ್ರಶ್ನಿಸುವವರಿಗೇ ಗಂಡನಾಗಿರುವವನು. (= ಪ್ರಶ್ನಾತೀತವಾದ ಅಧಿಕಾರ ಮತ್ತು ದರ್ಪವುಳ್ಳವನು) (ಪು. ೧೮)

ಹನ್ನೆರಡು ಜನ ಆಳ್ವಾರರು : ಮೊದಲ ಮೂವರು ಸೂರಿಗಳು : ಸರೋಯೋಗಿ, ಭೂತಯೋಗಿ ಮತ್ತು ಮಹಾಯೋಗಿ ಅಥವಾ ಹೊಯ್ಗೈಯಾಳ್ವಾರ್, ಪೂದತ್ತಾಳ್ವಾರ್ ಮತ್ತು ಪೇಯಾಳ್ವಾರ್ ಎಂಬ ಮೂವರು ಆಳ್ವಾರರು. ಇವರು ಅಯೋನಿಜರೆಂದು ಶ್ರೀವೈಷ್ಣವರ ನಂಬಿಕೆ. ಮೊದಲನೆಯವರು ಕಂಚಿಯ ಸರೋವರದ ಒಂದು ಸುವರ್ಣಕಮಲದಲ್ಲಿ ಜನಸಿದರು, ಎರಡನೆಯವರು ಮಲ್ಲಾಪುರಿಯಲ್ಲಿಯೂ, ಮೂರನೆಯವರು ಮೈಲಾಪುರಿಯಲ್ಲೂ ಹುಟ್ಟಿದರು. ಮೂವರೂ ಭೂಪ್ರದಕ್ಷಣೆ ಮಾಡುತ್ತ, ದಿವ್ಯಜ್ಞಾನಿಗಳಾಗಿ ಭಗವದ್ಗುಣಾನುಭವ ಗೈಯುತ್ತಿದ್ದರು. ಮೂವರೂ ಶ್ರೀವಲ್ಲಿಕ್ಕೇಣಿ ಎಂಬಲ್ಲಿ ಸಂಧಿಸಿ ಕೆಲದಿನ ಒಟ್ಟಾಗಿದ್ದು ಪುನಃ ಯಾತ್ರೆ ಹೋದರು. ಶ್ರೀಕೋವಿಲೂರು ಅಥವಾ ಗೋವಲೂರಲ್ಲಿ ಮತ್ತೆ ಸೇರಿದರು. ಅಲ್ಲಿ ಒಬ್ಬ ಭಕ್ತನ ಮನೆಯಲ್ಲಿ ನೆರೆದರು. ಮಳೆ ಹೊಯ್ಯುತ್ತಿದ್ದುದರಿಂದ ರಾತ್ರಿಯನ್ನು ಕಳೆಯಲು ಪೊಯ್ಗೈಯಾಳ್ವಾರರು ಆ ಮನೆಯಲ್ಲಿ ಮೊದಲು ಪ್ರವೇಶಿಸಿ ಮಲಗಿಕೊಂಡರು. ತರುವಾಯ ಪೂದತ್ತಾಳ್ವಾರರು ಅಲ್ಲಿಗೆ ಬಂದರು. ಅಲ್ಲಿ ಹೆಚ್ಚು ಸ್ಥಳವಿಲ್ಲದ್ದರಿಂದ ಮುಂಚೆ ಮಲಗಿದ್ದ ಪೊಯ್ಗೈಯಾಳ್ವಾರರು ಎದ್ದು ಕುಳಿತು ಅವರಿಗೆ ಸ್ಥಳವ ಮಾಡಿಕೊಟ್ಟು ತಮ್ಮ ಸೌಜನ್ಯ ತೋರಿದರು. ಅಷ್ಟರಲ್ಲಿ ಪೊಯ್ಗೈಯಾಳ್ವಾರರೂ ಅದೇ ಮನೆಗೆ ಬಂದರು. ಅಂಥ ಇಕ್ಕಟ್ಟಿನ ಸ್ಥಳದಲ್ಲಿ ಮೂವರೂ ಸಂತೋಷದಿಂದ ಹೇಗೊ ಕಾಲಕಳೆಯುತ್ತಿರಷ್ಟರಲ್ಲಿ ಸಾಕ್ಷಾತ್ ವಿಷ್ಣು ಲಕ್ಷ್ಮಿಸಮೇತನಾಗಿ ಅಲ್ಲಿ ಅವರ ಸೌಜನ್ಯವನ್ನು ಅನುಭವಿಸಲು ಬಂದನು. ಬಂದವರು ಯಾರೆಂದು ತಿಳಿಯ ಬಯಸಿ ಪೊಯ್ಗೈಯಾಳ್ವಾರರು ಭೂಮಿಯನ್ನು ಪ್ರಣತೆಯನ್ನಾಗಿಸಿ ಸಮುದ್ರವನ್ನು ತುಪ್ಪಗೈದು ಸೂರ್ಯನನ್ನೇ ಜ್ಯೋತಿಯನ್ನಾಗಿಸಿದರು. ಪೂದತ್ತರು ಭಕ್ತಿಯೆಂಬ ಪಾತ್ರೆಯಲ್ಲಿ ಶ್ರದ್ಧೆಯ ತುಪ್ಪವಿಟ್ಟು ಜ್ಞಾನವನ್ನು ಜ್ಯೋತಿಯನ್ನಾಗಿಸಿದರು. ಪೇಯಾಳ್ವಾರರು ಭಗವಂತನನ್ನು ಮೊದಲು ಕಂಡು ಸಂತೋಷಗೊಂಡರು. ಹೀಗೆ ಮೂವರು ಭಗವಂತನನ್ನು ಪ್ರತ್ಯಕ್ಷಕಂಡು ಪ್ರಬಂಧಗಳ ಮುಖಾಂತರ ಸ್ತುತಿಗೈದರು. ಕೊನೆಯಲ್ಲಿ ಭಗವಂತನೊಡನೆ ಐಕ್ಯಪಡೆದರು. (ಪು. ೭೩)

ಭಕ್ತಿಸಾರರು : ಇವರು ತಿರುಮಳಿಶಿ ಎಂಬ ಊರಲ್ಲಿ ಋಷಿದಂಪತಿಗಳಿಗೆ ಮಗುವಾಗಿ ಜನಿಸಿದರು. ಜನಿಸಿದಾಗ ಮಾಂಸದ ಮುದ್ದೆಯಂತಿದ್ದುದರಿಂದ ಅವರು ಅದನ್ನು ಬೆತ್ತದ ಮೆಳೆಯಲ್ಲಿ ಚೆಲ್ಲಿ ಬಿಟ್ಟರು. ತಿರುವಾಳ್‌ಶಾರ್ವನೆಂಬ ಮೇದರವನು ಬೆತ್ತ ಕೊಯ್ಯಲೆಂದು ಅಲ್ಲಿಗೆ ಬಂದು ಅಳುತ್ತಿರುವ ಕೂಸನ್ನು ಕಂಡನು. ನಿಪುತ್ರಕನಾದ ಅವನು ಸಂತಸದಿಂದ ಅದನ್ನು ಎತ್ತಿ ತಂದು ತನ್ನ ಹೆಂಡತಿಯಾದ ಪಂಗಯಚೆಲ್ವಿಯ ಕೈಗೆ ಕೊಟ್ಟನು. ಅವಳು ಮೊಲೆಯೂಡ ಬಯಸಿದಾಗ ಕೂಸು ಮೊಲೆ ಕುಡಿಯಲಿಲ್ಲ. ಮೊದಲೇ ಪರಮಾತ್ಮನು, ಆ ಕೂಸನ್ನು ದಯಾದೃಷ್ಟಿಯಿಂದ ನೋಡಿದ್ದುದರಿಂದ ಅದಕ್ಕೆ ಸಾಮಾನ್ಯ ಕೂಸುಗಳಿಗಿರುವಂಥ ಹಸಿವು ಬಾಯಾರಿಕೆಗಳಿರಲಿಲ್ಲ. ಆದರೂ ಆ ಕೂಸು ತೇಜಸ್ವಿಯಾಗಿ ಬೆಳೆಯುತ್ತಿರುವಲ್ಲಿ ಅಂತ್ಯಜ ದಂಪತಿಗಳಿಬ್ಬರೂ ಅಲ್ಲಿಗೆ ಬಂದರು. ಅವರು ಆ ಕೂಸನ್ನು ಸ್ತುತಿಸಿ ಅದರ ಮುಂದೆ ಹಾಲನ್ನಿಟ್ಟರು. ಕೂಸು ಅರ್ಧದಷ್ಟು ಕುಡಿದು ಉಳಿದುದನ್ನು 'ನಿನ್ನ ಹೆಂಡತಿಗೆ ಕೊಡು' ಎಂದು ಹೇಳಿತು. ಅದೇ ರೀತಿ ಅಂತ್ಯಜನು ತನ್ನ ಹೆಂಡತಿಗೆ ಕೊಡಲು ಅವಳು ಅದನ್ನು ಸೇವಿಸಿ ತಾನು ಗರ್ಭ ಧರಿಸಿದಳು ಮತ್ತು ಕಣಿಕಣ್ಣನೆಂಬ ಮಗನಿಗೆ ಜನ್ಮವಿತ್ತಳು. ಅವನು ತನ್ನ ಜನನಕ್ಕೆ ಕಾರಣವಾದ ಋಷಿಕುಮಾರನ ಸೇವೆಗಾಗಿ ಅವನಲ್ಲಿಯೇ ಬಂದು ನಿಂತನು. ಭಕ್ತಿಸಾರರು ತಿರುವಲ್ಲಿಕ್ಕೇಣಿ ಎಂಬಲ್ಲಿಗೆ ಬಂದು ಪೇಯಾಳ್ವಾರರ ಸನ್ನಿಧಿಯಲ್ಲಿ ಜ್ಞಾನೋಪದೇಶ ಹೊಂದಿದರು. ಏಳುನೂರು ವರ್ಷಗಳವರೆಗೆ ವಿಷ್ಣು ಧ್ಯಾನನಿರತನಾಗಿದ್ದರು. ಒಮ್ಮೆ ಆಕಾಶದಲ್ಲಿ ಪಾರ್ವತೀಸಮೇತನಾಗಿ ಸಂಚರಿಸುತ್ತಿದ್ದ ಶಿವನು ಇವರನ್ನು ಕಂಡು ಮೆಚ್ಚಿ ನೋಡುವ ಸಂಭ್ರಮದಿಂದ ಭೂಮಿಗಿಳಿದನು. ಇವರು ಶಿವನನ್ನು ನುಡಿಸದಿದ್ದರೂ ಅವನು ಬೇಡಿದ ವರವೀಯುವುದಾಗಿ ತಿಳಿಸಿದನು. ಇವರು ನಕ್ಕು 'ಹಾಗಾದರೆ ಕಂತೆ ಹೊಲಿಯುವುದಕ್ಕೆ ಸೂಜಿಯೊಡನೆ ದಾರವೂ ಬರಲಿ' ಎಂದು ಬೇಡಿದರು. ಶಿವನು ಇದರಿಂದ ಕೋಪಗೊಂಡು ತನ್ನ ಉರಿಗಣ್ಣು ತೆರೆದನು. ಇವರೂ ತಮ್ಮ ಎಡಗಾಲನ್ನೆತ್ತಿದರು. ಶಿವನಿಂದ ಹೊರಟ ಉರಿಗಣ್ಣಿನ ಜ್ವಾಲೆ ಮಸುಳಿಸಿ ಇವರ ಪಾದಜ್ವಾಲೆ ಶಿವನನ್ನು ಆವರಿಸಿ ಘಾಸಿಗೊಳಿಸಿತು. ಹೆದರಿದ ಶಿವನು ಕೈಲಾಸಕ್ಕೆ ಹೊರಟುಹೋದನು. ಇದೇ ರೀತಿ ಭಕ್ತಿಸಾರರು ಹಲವು ಪವಾಡಗಳನ್ನು ಮಾಡಿದರು. ಕೊನೆಯಲ್ಲಿ ಕುಂಭಕೋಣಕ್ಕೆ ಬಂದು ಅಲ್ಲಿಯ ಶ್ರೀ ವಿಷ್ಣುವನ್ನು ಭಜಿಸಿ ಮೋಕ್ಷ ಹೊಂದಿದರು. (ಪು. ೭೩)

ಶಠಕೋಪರು : ಇವರು ಹುಟ್ಟುತ್ತಲೇ ಮಾಂಸದ ಮುದ್ದೆಯಾಗಿದ್ದುದರಿಂದ ತಂದೆ-ತಾಯಿಗಳು ಆ ಮುದ್ದೆಯನ್ನು ತೊಟ್ಟಲಲ್ಲಿಟ್ಟು ತಂದು ತಿರುಕ್ಕುರುಂಗುಡಿಯ ದೇವಾಲಯದಲ್ಲಿ ದೇವರಿಗೆ ಅರ್ಪಿಸಿದರು. ಆ ಮುದ್ದೆ ಬಾಲಕನ ರೂಪ ಧರಿಸಿ ಸಮೀಪದ ಗಿಡದ ಹೊದರಿನಲ್ಲಿ ಸೇರಿಕೊಂಡಿತು. ಅವನೇ ಶಠಕೋಪರು.

ಮಧುರಕವಿಯಾಳ್ವಾರರು ಇವರನ್ನು ಸಂದರ್ಶಿಸುವವರೆಗೂ ಅಲ್ಲಿಯೇ ಇದ್ದು ನಿರಾಹಾರಿಗಳಾಗಿದ್ದರು. ಇವರು ಶೂದ್ರರು. 'ತಿರುವಾಯ್ಮೊಳಿ'ಯ ಕರ್ತೃ ಇವರೇ. (ಪು. ೭೩)

ಕೊಲ್ಲಿನಗರದ ಕುಲಶೇಖರಾಳ್ವಾರರು : ಕೇರಳದ ವಂಜಿಕ್ಕಳ ಅಥವಾ ಕೊಲ್ಲಿನಗರದ ಚೇರ ರಾಜಕುಲದಲ್ಲಿ ಹುಟ್ಟಿದರು. ತಂದೆಯಿಂದ ಪಟ್ಟಾಭಿಷಿಕ್ತರಾದ ಮೇಲೆ ಒಮ್ಮೆ ರಾಮಾಯಣ ಕೇಳುತ್ತಿದ್ದರು. ರಾವಣನು ಸೀತೆಯನ್ನು ಕದ್ದೊಯ್ದನೆಂದೂ ಅದಕ್ಕೆ ರಾಮನು ವಾನರ ಸೈನ್ಯ ಸಮೇತ ಲಂಕೆಯ ಮೇಲೆ ದಾಳಿ ಮಾಡಲು ಸಿದ್ಧನಾದನೆಂದೂ ಪುರಾಣಿಕರು ಹೇಳಿದರು. ಅದನ್ನು ಕೇಳುವುದೇ ತಡ ಕುಲಶೇಖರರು ರಾಮನಿಗೆ ಸಹಾಯಕರಾಗಿ ಹೊರಡಲು ಸಿದ್ಧರಾಗಿ ತಮ್ಮ ಸೈನ್ಯಕ್ಕೆ ಅದೇ ರೀತಿ ಆಜ್ಞಾಪಿಸಿ ಬಿಟ್ಟರು. ಹೀಗೆ ಸನ್ನದ್ಧರಾಗಿ ಹೊರಟ ಕುಲಶೇಖರರನ್ನು ಕಂಡು ದಿಗ್ಭ್ರಾಂತರಾದ ಪರಿವಾರದವರು ಪುರಾಣಿಕರಿಗೆ 'ರಾಮನು ಯುದ್ಧದಲ್ಲಿ ವಿಜಯಿಯಾಗಿ ಅಯೋಧ್ಯೆಯಲ್ಲಿ ಪಟ್ಟಾಭಿಷಕ್ತನಾಗಿರುವನೆಂದೂ ರಾಮ-ಸೀತೆಯರು ಈಗ ಸುಖವಾಗಿದ್ದಾರೆಂದೂ' ಹೇಳಲು ಹೇಳಿದರು. ಪುರಾಣಿಕರು ಅದೇ ಪ್ರಕಾರ ಹೇಳಲು ಕುಲಶೇಖರರು "ಸ್ವಾಮಿಗೆ ಜಯವಾಯಿತೆ?" ಎನ್ನುತ್ತ ಸೈನ್ಯಸಮೇತ ಪಟ್ಟಣಕ್ಕೆ ಪುನಃ ಬಂದರು. (ಪು. ೧೦೮)

ವೈಷ್ಣವರು ಕಳವು ಮಾಡುವವರಲ್ಲ : ಕುಲಶೇಖರರ ಭಕ್ತಿಪರವಶತೆಯಿಂದಾಗಿ ಮಂತ್ರಿ ಮೊದಲಾದವರಿಗೆ ರಾಜ್ಯಭಾರ ಮಾಡುವುದೇ ಕಷ್ಟವಾಗತೊಡಗಿತು. ಇದನ್ನು ಏನಾದರೂ ಉಪಾಯದಿಂದ ತಪ್ಪಿಸಬೇಕೆಂದು ಅವರು ನಿರ್ಧರಿಸಿದರು. ರಾಜನ ಈ ವರ್ತನೆಗೆ ಆತನ ಅರಮನೆಯಲ್ಲಿ ಯಾವತ್ತೂ ಇರುವ ವೈಷ್ಣವರೇ ಕಾರಣರೆಂದು ಅವರು ಭಾವಿಸಿದ್ದರು. ಕಾರಣ ಒಂದು ದಿನ ರಾಜನ ಆಭರಣವೊಂದನ್ನು ಮುಚ್ಚಿಟ್ಟರು. ಸ್ನಾನಾನಂತರ ಪೂಜೆಯಾದ ಮೇಲೆ ರಾಜನು ಆ ಆಭರಣವನ್ನು ತರಲು ಆಜ್ಞಾಪಿಸಿದನು. ಪರಿಚಾರಕರು ಅದು ಕಳುವಾಗಿದೆಯೆಂದೂ ಅರಮನೆಯಲ್ಲಿ ಯಾವತ್ತೂ ಇರುವ ವೈಷ್ಣವರೇ ಅದನ್ನು ಕದ್ದಿರಬೇಕೆಂದೂ ತಿಳಿಸಿದರು. ಅದನ್ನು ಕೇಳಿದ ಕುಲಶೇಖರನು 'ವೈಷ್ಣವರು ಕಳವು ಮಾಡುವವರಲ್ಲ. ಈ ಮಾತಿಗೆ ನಾನೇ ಸಾಕ್ಷಿ' ಎಂದು ಹೇಳಿ ಹಾವಿದ್ದ ಕೊಡದಲ್ಲಿ ಕೈಹಾಕಿದರು. ಇದನ್ನು ಕಂಡ ಮಂತ್ರಿ ಮೊದಲಾದವರು ಹೆದರಿದರು. (ಪು. ೭೩)

ವಿಷ್ಣುಚಿತ್ತರು ಅಥವಾ ಪೆರಿಯಾಳ್ವಾರರು : ಪಾಂಡ್ಯರಾಜನು ಒಮ್ಮೆ ದರ್ಶನದಲ್ಲಿ ಯಾವುದು ಶ್ರೇಷ್ಠ ಎಂಬ ಪ್ರಶ್ನೆಯನ್ನೆತ್ತಿ ಒಂದು ಪಣವನ್ನೊಡ್ಡಿದನು. ಪಟ್ಟಣದ ನಡುವೆ ಒಂದು ಕಂಬ ನೆಟ್ಟು ಅದರ ತುದಿಗೆ ಸಾವಿರ ವರಹಗಳಿಂದ ತುಂಬಿ

ಚೀಲವೊಂದನ್ನು ಸರಪಣಿಯ ಸಹಾಯದಿಂದ ಕಟ್ಟಿ ತೂಗುಬಿಟ್ಟನು. ತನ್ನ ಮತದ ಶ್ರೇಷ್ಠತೆಯನ್ನು ಸ್ಥಾಪಿಸುವ ವಿದ್ವಾಂಸನು ಸಭೆಯಲ್ಲಿ ತನ್ನ ವಾದ ಮಂಡಿಸಬೇಕು. ಹಾಗೆ ವಾದ ಮಂಡಿಸಿ ಮುಗಿದಾಕ್ಷಣ ಕಂಬಕ್ಕೆ ಕಟ್ಟಿ ನೇತಾಡುವ ಆ ಚೀಲವು ನೆಲಕ್ಕೆ ಬೀಳಬೇಕು. ಬಿದ್ದರೆ ಆ ಮತಸ್ಥನ ಮತವೇ ಶ್ರೇಷ್ಠವೆಂದು ನಿರ್ಣಯವಾದಂತೆ. ಇಲ್ಲದಿದ್ದರೆ ಇಲ್ಲ. ಈ ಪಣ ನಡೆಯುವ ಸಮಾಚಾರ ವಿಲ್ಲಿಪುತ್ತೂರಲ್ಲಿರುವ ಪೇರಿಯಾೞ್ವಾರರಿಗೆ ವಟಪತ್ರಶಾಯಿಯಾದ ವಿಷ್ಣು ಸ್ವಪ್ನದಲ್ಲಿ ತಿಳಿಸಿದ್ದರಿಂದ ಗೊತ್ತಾಯಿತು ಹಾಗೂ ಪಾಂಡ್ಯಸಭೆಗೆ ಹೋಗಲು ಆಜ್ಞೆಯಾಯಿತು. ಅದೇ ರೀತಿ ಪೇರಿಯಾೞ್ವಾರರು ಪಾಂಡ್ಯಸಭೆಗೆ ಹೋಗಿ ವಿಷ್ಣುವೇ ಸರ್ವೋತ್ತಮನೆಂದು ಸಾರಿದರು. ಹಣದ ಚೀಲವು ಕಂಬದಿಂದ ಹರಿದು ಅವರಿದ್ದಲ್ಲಿಗೆ ಬಂದು ಬಿತ್ತು. (ಪು. ೭೩)

ಭಕ್ತಾಂಘ್ರಿರೇಣು ಅಥವಾ ತೊಂಡರಡಿಪ್ಪೊಡಿಯಾೞ್ವಾರ್ : ಕಾವೇರಿ ತಟ ಮಂಡಂಗುಡಿಯೆಂಬ ಅಗ್ರಹಾರದಲ್ಲಿ ಪುರಶ್ಚೂಣ ವೈಷ್ಣವಕುಲದಲ್ಲಿ ಹುಟ್ಟಿದರು. ತಾಯಿ-ತಂದೆಗಳಿಗೆ ತಿಳಿಸದೇ ಶ್ರೀರಂಗಕ್ಕೆ ಬಂದು ನೆಲಸಿದರು. ದಿನಾಲು ಶ್ರೀರಂಗನಾಥನಿಗೆ ಮಾಲೆ ಅರ್ಪಿಸುವ ಕೈಂಕರ್ಯ ಕೈಗೊಂಡಿದ್ದರು. ಕಾರಣಾಂತರಗಳಿಂದ ಈ ಕಾರ್ಯದಿಂದ ಚ್ಯುತರಾಗಿ ಕಷ್ಟಪಡುತ್ತಿದ್ದಾಗ ಶ್ರೀರಂಗನಾಥನು ವಟುರೂಪದಿಂದ ಇವರ ಕಷ್ಟ ನಿವಾರಿಸಿದನು. (ಪು. ೭೩)

ಮುನಿವಾಹನರು ಅಥವಾ ತಿರುಪ್ಪಾಣಾೞ್ವಾರರು : ಅಂತ್ಯಜರಾದ ಇವರು ಸಂಗೀತದಿಂದ ಶ್ರೀರಂಗನಾಥನನ್ನು ಮೆಚ್ಚಿಸಿ ಸಾಕ್ಷಾತ್ಕರಿಸಿಕೊಂಡರು. ಇವರು ಶ್ರೀರಂಗಕ್ಕೆ ಹೋಗದೆ ಕಾವೇರಿಯ ದಕ್ಷಿಣತೀರದಲ್ಲಿ ಶ್ರೀರಂಗನಾಥನನ್ನು ಸ್ತುತಿಸುತ್ತಿದ್ದರು. ರಂಗನಾಥಸ್ವಾಮಿಯ ಆಜ್ಞೆಯಂತೆ ಇವರನ್ನು ಕರೆಯಲೆಂದು ದೇವಾಲಯದ ಅಧಿಕಾರಿಗಳು ಸಕಲ ಸಿದ್ಧತೆಗಳೊಂದಿಗೆ ಬಂದರು. ತಿರುಪ್ಪಾಣರು ಅದನ್ನೊಪ್ಪದೆ ಕಣ್ಣುಮುಚ್ಚಿ ಓಡಿಹೋದರು. ಆಮೇಲೆ ಶ್ರೀರಂಗನಾಥನು ತ್ರಿಲೋಕ ಸಾರಂಗರೆಂಬ ಮಹಾಮುನಿಗಳಿಗೆ ಆಜ್ಞಾಪಿಸಿದನು. ಅವರು ತಿರುಪ್ಪಾಣರಿದ್ದಲ್ಲಿಗೆ ಬಂದರು. ತಿರುಪ್ಪಾಣರು ಆಗ ಭಗವಂತನ ಗುಣಾನುಭವದಲ್ಲಿ ಮೈಮರೆತಿದ್ದರು. ಅದೇ ಸಮಯವೆಂದು ತಿರುಪ್ಪಾಣರನ್ನು ತಮ್ಮ ತೋಳುಗಳ ಮೇಲೆ ಕೂಡಿಸಿಕೊಂಡು ಶ್ರೀರಂಗ ದೇವಾಲಯಕ್ಕೆ ಬಂದರು. ಎಚ್ಚರಗೊಂಡು ತಿರುಪ್ಪಾಣರು ಪರಿಸ್ಥಿತಿಯನ್ನರಿತು ದೇವರಿಚ್ಛೆಯಿದ್ದಂತಾಗಲಿ ಎಂದು ಸುಮ್ಮನಾದರು. ತ್ರಿಲೋಕಸಾರಂಗರು ತಿರುಪ್ಪಾಣಾರನ್ನು ದೇವಾಲಯದ ಒಳಗಿರುವ 'ಆಮೋದ'ವೆಂಬ ಕಂಬದ ಸಮೀಪ ಇಳಿಸಿದರು. ಇವರು ಮುಂದೆ ಹೋಗಿ ಶ್ರೀರಂಗನಾಥನನ್ನು ಪ್ರತ್ಯಕ್ಷ ಕಂಡು ಪ್ರಬಂಧಗಳನ್ನು ಹಾಡಿ ಆತನಲ್ಲಿಯೇ ಐಕ್ಯಹೊಂದಿದರು. (ಪು. ೭೩)

ಪರಕಾಲ ಅಥವಾ ತಿರುಮಂಗೈಯಾಳ್ವಾರರು : ಶ್ರೀಕುರೈಯಲೂರಲ್ಲಿ ಶೂದ್ರಕುಲದ ಗುರಿಕಾರ ಮನೆತನದಲ್ಲಿ ಪರಕಾಲರು ಹುಟ್ಟಿದರು. ವೈದ್ಯನಾದ ವೈಷ್ಣವ ಬ್ರಾಹ್ಮಣನಿಗೆ ದೊರೆತ ಕುಮುದವಲ್ಲಿಯನ್ನು ಬಯಸಿ ಅವಳ ಇಚ್ಛೆಯಂತೆ ವೈಷ್ಣವ ಸಂಸ್ಕಾರಗಳನ್ನು ಪಡೆದು ಲಗ್ನವಾದರು. ಆದರೆ ಅವಳಿಂದ ಶಯ್ಯಾಸುಖ ದೊರೆಯದೇ ಇರಲು, ಅದನ್ನು ಪಡೆಯುವುದಕ್ಕಾಗಿ ಸಹಸ್ರ ವೈಷ್ಣವ ಭೋಜನ ವ್ಯವಸ್ಥೆ ಮಾಡಬೇಕೆಂದು ಹೇಳಲು ಅದಕ್ಕೆ ಪ್ರಯತ್ನಪಡತೊಡಗಿದರು. ಲಕ್ಷ್ಮಿಯ ಆಜ್ಞೆಯಂತೆ ಅದು ಪೂರ್ಣಗೊಳ್ಳದಿರಲು ಪ್ರತಿದಿನವೂ ಸಹಸ್ರ ವೈಷ್ಣವ ಭೋಜನಕ್ಕೆ ವ್ಯವಸ್ಥೆ ಮಾಡುತ್ತ ಹೋದುದರಿಂದ ಹಣವೆಲ್ಲವೂ ತೀರಿತು. ಅಧಿರಾಜನಾದ ಚೋಳದೊರೆಗೆ ಸಂದಾಯವಾಗ ಬೇಕಾಗಿದ್ದ ಕಂದಾಯ-ಕಾಣಿಕೆಗಳು ಬಾಕಿ ನಿಂತವು. ಚೋಳರಾಜನು ಇವರನ್ನು ಹಿಡಿಯಲು ಸೈನ್ಯಸಮೇತ ಬಂದು ಯುದ್ಧ ಹೂಡಿದನು. ಪರಕಾಲರು ಯುದ್ಧದಲ್ಲಿ ಒಳ್ಳೆ ಪರಾಕ್ರಮದಿಂದ ಹೋರಾಡುವುದನ್ನು ಕಂಡು ಮೆಚ್ಚಿ ಚೋಳರಾಜನು ಪರಕಾಲರು ತನಗೆ ಕೊಡಬೇಕಾದ ಹಣವನ್ನು ಕೊಟ್ಟರೆ ಈಗಲೂ ಬಿಡುವುದಾಗಿ ಹೇಳಿ ಬಂಧನದಲ್ಲಿಟ್ಟನು. ಆಗ ಕನಸಿನಲ್ಲಿ ರಂಗನಾಥನು ಕಾಣಿಸಿಕೊಂಡು ಕಂಚೀಪಟ್ಟಣ ಸಮೀಪದ ವೇಗವತಿಯದ ದಡದ ಮೇಲೆ ನಿಧಿಯಿರುವುದಾಗಿ ತಿಳಿಸಿದನು. ಪರಕಾಲರು ತನ್ನ ಕಾವಲಿಗಿದ್ದ ಮಂತ್ರಿಗೆ ಹೇಳಿ ಕಂಚಿಗೆ ಬಂದು ಕಂಚಿಯ ವಿಷ್ಣುವನ್ನು ಪೂಜಿಸಿ ಆ ನಿಧಿ ಪಡೆದರು ಹಾಗೂ ಚೋಳರಾಜನ ಋಣ ತೀರಿಸಿದರು. ಇಷ್ಟಾದರೂ ಸಹಸ್ರ ವೈಷ್ಣವ ಭೋಜನದ ವ್ರತ ಪೂರ್ತಿಗೊಳ್ಳಲಿಲ್ಲ. ಆ ಪ್ರಯತ್ನದಲ್ಲಿ ಪರಕಾಲರು ಕಳವು, ಸುಲಿಗೆಗಳನ್ನು ನಡೆಸತೊಡಗಿದರು. ಹೀಗಿರುತ್ತ, ಈತನಿಗೆ ಇನ್ನು ಕಷ್ಟ ಕೊಟ್ಟು ಪ್ರಯೋಜನವಿಲ್ಲವೆಂದು ಭಾವಿಸಿದ ಪರಮಾತ್ಮನು ಬ್ರಾಹ್ಮಣ ಮದುವಣಿಗನ ವೇಷದಿಂದ ಇವರು ದಾರಿ ಬಡಿಯುತ್ತಿದ್ದ ಪ್ರದೇಶಕ್ಕೆ ಬಂದನು. ಅಲ್ಲಿಯೆ ತನ್ನ ಜೊತೆಗಾರರಿಂದೊಡಗೂಡಿ ಕಾಯುತ್ತಿದ್ದ ಪರಕಾಲರು ಆ ಬ್ರಾಹ್ಮಣನ ಪರಿವಾರವನ್ನು ಅವರಲ್ಲಿದ್ದದೆಲ್ಲವನ್ನು ಸುಲಿದು ಇಂದು ಗಂಟುಕಟ್ಟಿ ಎತ್ತಬೇಕೆಂದು ನೋಡಲು ಆ ಗಂಟು ಕದಲಲೇ ಇಲ್ಲ. ಒಂದು ಬ್ರಾಹ್ಮಣನ ಮಂತ್ರದ ಪ್ರಭಾವವೆಂದು ಬಗೆದು ಆ ಮಂತ್ರವನ್ನು ಹೇಳಬೇಕೆಂದು ಪೀಡಿಸಿದರು. ಆ ಬ್ರಾಹ್ಮಣರೂಪಿ ಪರಮಾತ್ಮನು ಆ ಮಂತ್ರವನ್ನು ಹೀಗೆ ಬಹಿರಂಗವಾಗಿ ಹೇಳಲಾಗುವುದಿಲ್ಲವೆಂದೂ ಗೌಪ್ಯದಲ್ಲಿ ಹೇಳಬೇಕಾದು ದೆಂದೂ ಹೇಳಿದನು. ಅದನ್ನು ಕೇಳಲು ಉತ್ಸುಕರಾಗಿದ್ದ ಪರಕಾಲರನ್ನು ಮರೆಯಲ್ಲಿ ಕರೆದೊಯ್ದು 'ಅಷ್ಟಾಕ್ಷರೀ ಮಂತ್ರ' ಮೊದಲಾದ ಮಂತ್ರಗಳನ್ನು ರಹಸ್ಯವಾಗಿ ಉಪದೇಶಿಸಿದನು. ಇದರಿಂದ ಪರಕಾಲರ ಮೊದಲಿನ ಬುದ್ಧಿ ತೊಲಗಿ ಪರಮ ವೈಷ್ಣವರಾದರು. (ಪು. ೭೩)

ಗೋದಾದೇವಿ ಅಥವಾ ಶೂಡಿಕ್ಕುಡತ್ತನಾಚ್ಚಿಯಾರ್ : ವಿಷ್ಣುಚಿತ್ತರು ಅಥವಾ ಪೆರಿಯಾಳ್ವಾರರಿಗೆ ನೆಲ ಅಗಿಯುವಾಗ ಪೆಟ್ಟಿಗೆಯೊಂದರಲ್ಲಿ ದೊರಕಿದವಳು. ತಂದೆ ವಿಷ್ಣುಚಿತ್ತರು ರಂಗನಾಥನಿಗೆ ಸಮರ್ಪಿಸುವುದಕ್ಕೆ ಸಿದ್ಧಗೊಳಿಸಿಟ್ಟ ಮಾಲೆಯನ್ನು ಭಕ್ತಿಭರದಲ್ಲಿ ತಾನೆ ಧರಿಸಿ ಆನಂದಪಡುತ್ತಿದ್ದಳು. ಇವಳು ಅಯೋನಿಜೆಯಾದುದರಿಂದ ಲಕ್ಷ್ಮಿಯ ಅವತಾರವೆಂದೇ ನಂಬಿಕೆ. (ಪು. ೭೩)

ಮಧುರ ಕವಿಗಳು : ಶ್ರೀಕೋಳೂರೆಂಬ ಗ್ರಾಮದವರು. ಶಠಕೋಪರು ಕೋಟರದ ಮರೆಯಲ್ಲಿರುತ್ತಿದ್ದಾಗ ಅವರನ್ನು ಹುಡುಕಿ ಅವರ ಮಹಿಮೆಯನ್ನು ಕಂಡುಕೊಂಡರು. ಅವರಿಂದ ಮಂತ್ರರಹಸ್ಯಗಳನ್ನರಿತುಕೊಂಡು ಗುರುವೆಂದು ಭಾವಿಸಿ ಸೇವೆ ಸಲ್ಲಿಸುತ್ತಿದ್ದರು. (ಪು. ೭೩)

ಹಸ್ತಿಗಿರಿನಾಥ : ಕಾಂಚೀಪಟ್ಟಣದ ವಿಷ್ಣುದೇವತೆ, ವರದರಾಜಸ್ವಾಮಿ (ನೋಡು. ಕಾಂಚೀಪೂರ್ಣ) ಕಾಂಚೀಪೂರ್ಣರ ಸಹಾಯದಿಂದ ಅರ್ಥಪಂಚಕಗಳನ್ನು ತಿಳಿದುಕೊಂಡುದು ಈ ದೇವಸ್ಥಾನದಲ್ಲಿಯೆ. ಕಾಂಚೀಪೂರ್ಣರು ವರದರಾಜನಿಂದ ಕೇಳಿ ತಿಳಿದು ಅವನ್ನು ರಾಮಾನುಜರಿಗೆ ಹೇಳಿದರೆಂದು ನಂಬಿಕೆ. (ಪು. ೫೧)

.–. .–. .–.

ಕಠಿಣ ಪದಕೋಶ

ಅಗರ ಅಗ್ರಹಾರ, ಬ್ರಾಹ್ಮಣರು ವಾಸಿಸುವ ಭಾಗ, ಆದಾಯವನ್ನು ಬ್ರಾಹ್ಮಣರಿಗೆ ಬಿಟ್ಟ ಊರು.

ಅಗರಂಗೆಯ್ (ಬೇರೆ ಊರನ್ನು) ಅಗ್ರಹಾರವಾಗಿ ಪರಿವರ್ತಿಸು.

ಅಟ್ಟ ಅಗಟು ಕೋಟೆಗೋಡೆಯ ಸುತ್ತ ಅಗ್ಗಿದ ತಗ್ಗು.

ಅಟ್ಟಣೆ ಅಟ್ಟಳೆ : ಮಂಚಿಕೆ.

ಅಡಿಗೋಂಟೆ ಮುಖ್ಯವಾದ ಕೋಟೆ.

ಅಣುಗ ಮಗ ; ತಮ್ಮ; ಪ್ರೀತಿಯ ವ್ಯಕ್ತಿ

ಅಣೆ ಇರಿ, ಚುಚ್ಚು ; ಪ್ರತಿಭಟಿಸು.

ಅಂಟುಗಳೆ ಒಂದು ಬಗೆಯ ಬಲೆ ; ಪ್ರಾಣಿಗಳನ್ನು ಹಿಡಿಯುವ ಸಾಧನ.

ಅಣ್ಪು ಲೇಪ, ಲೇಪನ.

ಅನುರಾಗ ಪ್ರೀತಿ ; ಕೆಂಪು ಬಣ್ಣ.

ಅನುವಾಕಗಳು ವೇದಸೂಕ್ತ ಸಮುದಾಯಗಳು.

ಅನುವೇಟ್ ಸಾಮೋಪಾಯದಿಂದ ಕೆಲಸ ಸಾಧಿಸು, ಮಾತುಕತೆಯಿಂದ ಕೆಲಸ ಸಾಧಿಸು.

ಅನುಸಂಧಾನ ಪಾರಾಯಣ, ವಿವೇಚನೆ, ಚರ್ಚೆ,

ಅಂದಳ ಅಂದಣ : ದಂಡಿಗೆ, ಪಲ್ಲಕ್ಕಿ, ಮೇಣೆ.

ಅಂದುಗೆ ನೂಪುರ, ಪೈಜಣ.

ಅಪೂಪ ಖಾದ್ಯ ವಿಶೇಷ, ಸಿಹಿವಡೆ ಅಥವಾ ಗಾರಿಗೆ.

ಅಪ್ರಮೇಯ ಅಳೆಯಲಾಗದ, ನಿರ್ಧರಿಸಲಾಗದ, ತಿಳಿಯಲಸಾಧ್ಯವಾದ, ಅಮಿತವಾದ.

ಅಂಬರೀಷ ಸೂರ್ಯವಂಶದ ಒಬ್ಬದೊರೆ, ವಿಷ್ಣುಭಕ್ತ, ದೂರ್ವಾಸಮುನಿಯಿಂದ ಶಪಿತನಾಗಿ ಆನೆಯಾಗಿ ಹುಟ್ಟಿದ. ಆಗಲೂ ವಿಷ್ಣುಭಕ್ತಿಯನ್ನು ಆಚರಿಸಿ ಮೊಸಳೆಯಿಂದ ಹಿಡಿಯಲ್ಪಟ್ಟು ವಿಷ್ಣುವಿನಿಂದ ಮೋಕ್ಷಪಡೆದ.

ಅರಿದಾಳ ಹರಿದಾಳ=ಹರದಾಳ ; ಹಳದೀಬಣ್ಣದ ಒಂದು ಲೋಹ, ಶಂಕಪಾಪಾಷಣ= ಗಂಧಕಗಳ ಮಿಶ್ರಣದಿಂದಾದುದು.

ಅ(ಆ)ರ್ಚಾರೂಪ ಗೃಹಾರ್ಚಾರೂಪ ಮನೆ

ಅರ್ಚಾವತಾರ ದೇವಾಲಯಗಳಲ್ಲಿ ಪೂಜಿಸಲ್ಪಡುವ ಮೂರ್ತಿ ರೂಪದ ವಿಷ್ಣು.

ಅರ್ಥಪಂಚಕ ಸ್ವಸ್ವರೂಪ, ಪರಸ್ವರೂಪ ಪುರಾಷಾರ್ಥಗಳ ಸ್ವರೂಪ ಉಪಾಯಗಳ ಸ್ವರೂಪ ವಿರೋಧೀ ಸ್ವರೂಪ ಎಂಬವು.

ಅರ್ಥಾಪಾದನ ಅಡಕಗೊಳಿಸಿದ, ಸಮಗ್ರವಾದ ಅರ್ಥ.

ಅಱಿಕೆಗಾಳಗ ಪೂರ್ವಸೂಚನೆಕೊಟ್ಟು ಆಹ್ವಾನಿಸಿ ಮಾಡುವ ಯುದ್ಧ.

ಅಲಂಕರ್ಮೀಣ ಯೋಗ್ಯ, ಸಮರ್ಥ, ಹೊಂದಿಕೆಯಾಗುವ.

ಅಲುಂಕು ಉಳುಕು, ಬಲಗುಂದು.

ಅಶೋಕವನ ಲಂಕೆಯಲ್ಲಿ ಸೀತೆಯನ್ನು ರಾವಣನು ಬಂಧಿಸಿಟ್ಟಿದ್ದ ಉಪವನದ ಹೆಸರು.

ಅಸ್ರುಷ್ಟಂದನ ಕೆಂಪು, ಚಂದನ, ರಕ್ತಚಂದನ.

ಅಷ್ಟಾಕ್ಷರೀಮಂತ್ರ 'ಓಂ ನಮೋ ನಾರಾಯಣಾಯ' ಎಂಬ ಮಂತ್ರ.

ಅಟ್ಕು ಹೆದರಿಕೆ.

ಆಳ್ಳಿಗ (L ಅಳ್ = ಸಂಬಂಧಿಸು, ಸಂಬಂಧಪಡೆ) ಸಮಾಧಿಸ್ಥ, ಧ್ಯಾನಸ್ಥ, ತಪಸ್ವಿ.

ಆಜಿ ಯುದ್ಧ

ಆಣಕ ದೊಡ್ಡ ನಗಾರಿ, ಭೇರಿ.

ಆಪಸ್ತಂಬ ಕೃಷ್ಣಯಜುರ್ವೇದಕ್ಕೆ ಸಂಬಂಧಿಸಿದ ಧರ್ಮಸೂತ್ರ, ಗೃಹ್ಯಸೂತ್ರ, ಶ್ರೌತ ಸೂತ್ರಗಳ ಕರ್ತೃ, ಆ ಹೆಸರಿನ ಶಾಖೆಯ ಪ್ರವರ್ತಕ.

ಆರುದರ್ಶನಗಳು ನ್ಯಾಯ, ವೈಶೇಷಿಕ, ಸಾಂಖ್ಯ, ಯೋಗ, ಪೂರ್ವಮೀಮಾಂಸೆ, ಉತ್ತರ ಮೀಮಾಂಸೆ ಅಥವಾ ವೇದಾಂತ ಎಂಬ ಆರು ತತ್ವಜ್ಞಾನ ಶಾಖೆಗಳು.

ಆಟ್ವೇರಿ ಕೋಟೆಯ ಗೋಡೆ.

ಇಕ್ಷ್ವಾಕುಕುಲ ಸೂರ್ಯವಂಶದಲ್ಲಿ ಆಗಿ ಹೋದ ಪ್ರಸಿದ್ಧ ದೊರೆ ಇಕ್ಷ್ವಾಕು ಎಂಬ ಅರಸನಿಂದ ಉಂಟಾದ ವಂಶ, ಸೂರ್ಯವಂಶ.

ಇಂಗಡಲು ಕ್ಷೀರಸಾಗರ.

ಇಜ್ಯಾ ಹೋಮಾಹುತಿ ; ಯಜ್ಞದಲ್ಲಿ ಸಮರ್ಪಿಸಬೇಕಾದ ವಸ್ತು ; ನೈವೇದ್ಯ.

ಇಡಿಕಿರಿ ಒತ್ತೊತ್ತಾಗಿ ತುಂಬು.

ಇತಿಹಾಸ ರಾಮಾಯಣ-ಮಹಾಭಾರತ ಕಾವ್ಯಗಳು.

ಈಚಲುಪುಟು ರೆಕ್ಕೆಯುಳ್ಳ ಒಂದು ಹುಳು, ಮಳೆಗಾಲದಲ್ಲಿ ದೀಪಕ್ಕೆ ಮುತ್ತುವ ಹುಳು

ಉಗಿದ ಸುಲಿದ.

ಉಚಿತ ಕಾಣಿಕೆ, ಮರ್ಯಾದೆ ; ಯೋಗ್ಯ.

ಉತ್ಕೋಚ ಲಂಚ.

ಉತ್ತಮರ್ಣಾಯಿತ ಸಾಲಕೊಡುವಂತಿರುವ ; ಹೆಚ್ಚಳವನ್ನುಂಟುಮಾಡುವ ; ಶ್ರೇಷ್ಠ.

ಉತ್ತಮಾಶ್ರಮ ಸನ್ಯಾಸಾಶ್ರಮ, ಅರಣ್ಯದಲ್ಲಿರುವ ಆಶ್ರಮ.

ಉದ್ದಂಡ ಅತಿಯಶ, ಶ್ರೇಷ್ಠ, ಸೊಕ್ಕಿನ.

ಉದ್ವೃತ್ತ ಗರ್ವದ, ಸೊಕ್ಕಿದ.

ಉಭಯವೇದಾಂತ ಎರಡು ವೇದಾಂತ - ಸಂಸತ ವೇದಾಂತ, ತಮಿಳು ವೇದಾಂತ.

ಉಭಯವಿಭೂತಿ ವೈಕುಂಠದಲ್ಲಿರುವ ನಿತ್ಯವಿಭೂತಿ ಮತ್ತು ಲೀಲೆಗಾಗಿ ಅವತರಿಸುವ ವಿಭೂತಿ. ದೇವರೂಪ.

ಉಪರೋಧ ತೊಂದರೆ.

ಉಯ್ ಹೊಟ್ಟು, ಜಳ್ಳು, ತವುಡು.

ಉರಾಟ ಕುಸ್ತಿಯ ಒಂದು ಪಟ್ಟು.

ಉಲುಪೆ ಆಹಾರ ಪದಾರ್ಥಗಳ ಕಚ್ಚಾಸಾಮಗ್ರಿ ; ಹಿಟ್ಟು, ಅಕ್ಕಿ ಮುಂತಾದವು.

ಉಷ್ಣೀಷ ಮುಂಡಾಸು.

ಊಣೆಯ ಕುಂದು, ದೋಷ, ಕೊರತೆ.

ಊರ್ಧ್ವಪುಂಡ್ರ ಬಿಳಿಯ ನಾಮ, ಶ್ರೀವೈಷ್ಣವರ ನಾಮ.

ಊರ್ಮಿ ತೆರೆ.

ಎಗ್ಗ ಮೂರ್ಖ, ದಡ್ಡ, ಹೆಡ್ಡ.

ಎಡೆದು ಕೊಂದು, ಕಿತ್ತು.

ಎಂಟು ಪ್ರಕೃತಿಗಳು ಪ್ರಕೃತಿ, ಮಹತ್ತು, ಅಹಂಕಾರ, ಶಬ್ದ, ರೂಪ, ರಸ, ಗಂಧ, ಸ್ಪರ್ಶ (ತನ್ಮಾತ್ರಗಳು) ಹೀಗೆ ಒಟ್ಟು ಎಂಟು.

ಎರಡು ವಿಭೂತಿ ಉಭಯ ವಿಭೂತಿ.

ಎರಡು ವೇದಾಂತ ಉಭಯ ವೇದಾಂತ.

ಎರವು ಅಡ್ಡಿ, ಬಾಧಕ, ದೂರೀಕೃತ-ಸಂಬಂಧ.

ಎಱಂಕೆ ರೆಕ್ಕೆ, ಪಕ್ಕೆ.

ಏಕಾದಶ ಇಂದ್ರಿಯಗಳು, ಅಯ್ದು ಜ್ಞಾನೇಂದ್ರಿಯಗಳು, ಅಯ್ದು ಕರ್ಮೇಂದ್ರಿಯಗಳು ಮತ್ತು ಮನಸ್ಸು.

ಏಱು ಗಾಯ, ನೋವು.

ಐಕಿಲ್ವೆಟ್ಟ ಹಿಮಾಲಯ ಪರ್ವತ.

ಐವರು ಮಹಾಭಾಗವರು ಪ್ರಹ್ಲಾದ, ಪರಾಶರ, ಅಂಬರೀಷ, ರುಕ್ಮಾಂಗದ, ವ್ಯಾಸ ಅಥವಾ ವಿಭೀಷಣ.

ಒಡಲ್ಪಡೆ-ಒಡಲ್ವಡೆ : ದೇಹಧರಿಸು, ಆಕಾರ ತಾಳು.

ಒಳ್ಳೆ ನೀರಹಾವು, ವಿಷವಿಲ್ಲದ ಸಾಮಾನ್ಯ ಹಾವು.

ಒಟಿಸಲ್ಲದು ಉಳಿಯಲಾಗದು, ಉಳಿಗಾಲವಿಲ್ಲದು. ರಕ್ಷಣೆಗೆ ಬಾರದ್ದು.

ಒಟ್ಟು ಒಂದುಗೂಡಿದ್ದು, ಸಮೂಹ.

ಒಟ್ಟುಗೆಯ್ ಒಂದುಗೊಳಿಸು, ಒಟ್ಟುಗೂಡಿಸು, ಸಂಗ್ರಹಿಸು.

ಓಜೆ ಹೆಚ್ಚಳ, ಕಾಂತಿ, ತೇಜಸ್ಸು, ಗೌರವ.

ಔರಸಪುತ್ರ ಹೊಟ್ಟೆಯ ಮಗ, ಧರ್ಮಪತ್ನಿಯಲ್ಲಿ ಹುಟ್ಟಿದವ.

ಔರ್ಧ್ವದೌಹಿಕ ಮರಣೋತ್ತರದ, ಅಗ್ನಿಸಂಸ್ಕಾರಾದಿ ಕಾರ್ಯಗಳು.

ಕಟ್ಟುಱಿ ಅತಿರಭಸ ; ಅತ್ಯಾವೇಶ.

ಕಡೆಗಾಣಿಸು ಮುಗಿಸು, ತೀರಿಸು.

ಕಣಾದ ವೈಶೇಷಿಕ ದರ್ಶನ, ಪ್ರವರ್ತಕ ಋಷಿ.

ಕತ್ತಿಯ ಪರಜು ಕತ್ತಿಯ ಹಿಡಿ, ಅಲಗು-ಮೊನೆ.

ಕದಂಬ ಕಡಹದ ಮರ.

ಕದುಬು ಕದುಂಬು, ವ್ಯಾಪನೆ, ರೋಮಾಂಚನ, ಆತುರ, ಆನಂದ.

ಕದುಬುಗೊಳ್ ವ್ಯಾಪಿಸು, ಆವರಿಸು, ಆನಂದಿಸು, ರೋಮಾಂಚನಗೊಳ್ಳು.

ಕನಕಾಚಲ ಮೇರು ಪರ್ವತ.

ಕನಲ್ಕೆ ರೋಷ, ಕೋಪ.

ಕಪ್ಪುಕುಳಿ, ತಗ್ಗು, ಖೆಡ್ಡಾ,

ಕರಬದರ (ಕರಬದ ?) ಆನೆಮರಿ ?

ಕರುಣತ್ರಯ ಮಾತು, ಮನಸ್ಸು ಮತ್ತು ದೇಹ.

ಕರುವಿಡು ಎರಕಹೊಯ್ಯು

ಕರೆಗಣ್ಮು ಪೂರ್ಣತುಂಬು, ಅಂಚಿನವರೆಗೆ ತುಂಬು.

ಕರ್ಮಡಿದೀವಿ ನೀಲದ್ವೀಪ, ನೀಲಮಣಿಯ ದ್ವೀಪ.

ಕಜಿ ಕಪ್ಪು ; ಪಾಪ. ದೋಷ.

ಕಲ್ಲೋದಧಿ ಮಹಾಸಾಗರ

ಕವಲ್ನಂಬುಗೆ ಬೇರೆ ಆಸರೆ, ಜಾಗ

ಕಾಂಚೀಕಲಾಪ ಕಾಂಚೀಬಂಧ, ಒಡ್ಯಾಣ, ನಡುವಿನ ಆಭರಣ.

ಕಾಯಸ್ಥ ಕರಣಿಕ ವೃತ್ತಿಯ ಒಂದು ಜಾತಿಯವನು ; ಕರಣಿಕ, ಶಾನುಭೋಗ.

ಕಾಯಸ್ಥಪ್ರಾಡ್ವಿವಾಕಾದಿ ಕರಣಿಕರು, ನ್ಯಾಯಾಧೀಶರು ಮುಂತಾದವರು.

ಕಾಲಕರ್ಬಟ್ಟೆ ಮುಂಡಾಸದ ಜತೆಗೆ ಸುತ್ತುವ ಕಪ್ಪುಬಟ್ಟೆ.

ಕಾಲ್ಗಣ್ಣಿ ಹಗ್ಗದಿಂದ ಮಾಡಿದ ಕಣ್ಣಿ, ಬಲೆ ; ಕಾಲಿಗೆ ತೊಡಕಿಕೊಳ್ಳುವ ಕಣ್ಣಿ.

ಕಾಳಾಂಜಿ ಪೀಕದಾನಿ, Spittoon

ಕಿಙುದೊಡೆ ಮೀನಗಂಡ, ಮೊಳಕಾಲ ಕೆಳಭಾಗ, ಜಂಘೆ.

ಕೀಱು ಚೀರು, ಕೂಗು, ದುಂಬಾಲುಬೀಳು.

ಕುಂದ ಒಂದು ಜಾತಿಯ ಮಲ್ಲಿಗೆ.

ಕುಲಾಚಲ ಭೂಮಂಡಲ (ಭಾರತ)ದ ಮೇಲಿರುವ ಏಳು ಪರ್ವತಗಳಲ್ಲಿ ಒಂದು. ಮಹೇಂದ್ರ, ಮಲಯ, ಸಹ್ಯ, ಶಕ್ತಿಮಾನ್ ಋಕ್ಷ, ವಿಂಧ್ಯ, ಪಾರಿಯಾತ್ರ ಎಂಬ ಏಳು ಪರ್ವತಗಳಲ್ಲಿ ಒಂದು. ಇವು ಭೂಮಿಗೆ ಆಧಾರವಾಗಿವೆಯೆಂಬುದು ನಮ್ಮ ಪುರಾಣಗಳ ಕಲ್ಪನೆ.

ಕೂರ್ಮೆ ಪ್ರೇಮ ; ಪರಾಕ್ರಮ ; ತೀಕ್ಷ್ಣತೆ

ಕೆಟಿವಿ ಗೆಳತಿ, ಮುದಿದಾಸಿ

ಕೇಣ ಮತ್ಸರ ; ಸ್ಪರ್ಧೆ

ಕೈಜೀತ ಕೈಯುಂಬಳಿ

ಕೈಪಜಿ ಚಪ್ಪಾಳೆ

ಕೈವಾರಿ ಭಟ್ಟಂಗಿ, ಹೊಗಳುಭಟ್ಟ.
ಕೈವಲ್ಯ ಮೋಕ್ಷ ; ಮೋಕ್ಷಕ್ಕಿಂತ ಕಡಿಮೆಯದಾದ ಒಂದು ಸ್ಥಿತಿ.
ಕೊಟ್ಟಿಗೆ ಹೇರೆತ್ತು, ಭಾರ ಸಾಗಿಸುವ ಎತ್ತು.
ಕೊನರಿಸು ಚಿಗಿಸು, ಬೆಳೆಯಿಸು.
ಕೊಳವಿ ಕೋವಿ.
ಕೊಳಗುಳ ಯುದ್ಧ.
ಕೋಟೀರಕೋಟಿ ಕಿರೀಟಗಳ ಸಮೂಹ ; ಶಿರಗಳ ಸಮೂಹ.
ಕೌಮೋದಕಿ ವಿಷ್ಣುವಿನ ಗದೆಯ ಹೆಸರು.
ಕೌಸ್ತುಭ ವಿಷ್ಣುವಿನ ಎದೆಯ ಮೇಲಿರುವ ಕೆಂಪುರತ್ನ.
ಖಾನಖಾನ ರಣದುಲ್ಲಾಖಾನನೆಂಬ ವಿಜಾಪುರದ ಸೇನಾಪತಿ.
ಗಂಡೂಷೋದಕ ಎಂಜಲು ನೀರು, ಬಾಯಿ ಮುಕ್ಕಳಿಸಿದ ನೀರು.
ಗರ್ತ ತಗ್ಗು.
ಗಾಂಪ ಮೂರ್ಖ, ದಡ್ಡ, ಗ್ರಾಮೀಣ.
ಗಾವಳಿಪುದು ರಗಳೆಮಾಡುವುದು, ಗಳಹುವುದು, ಗೊಂದಲವುಂಟುಮಾಡುವುದು.
ಗಾವುದ ನಾಲ್ಕು ಹರಿದಾರಿ, ೧೦-೧೨ ಮೈಲಿಗಳ ದೂರ.
ಗುಡಿ ಧ್ವಜ.
ಗುಂಡುಗೋವಿ ಕೋವಿ, ತುಬಾಕಿ
ಗುಜೆವಾನಸ ಸೇವಕರ ಮುಖ್ಯಸ್ಥ.
ಗೃಹಾರ್ಚಾರೂಪ ಅವತಾರ, ಅ(ಆ)ರ್ಚಾವತಾರ.
ಗೆಂಡೆಮೀನು ಒಂದು ಬಗೆಯ ಮೀನು.
ಗೋತ್ರಾರಿ ಇಂದ್ರ ; ಕುಲವೈರಿ.
ಗೋಮುಖ ಒಂದು ವಾದ್ಯ
ಗೌತಮ ನ್ಯಾಯದರ್ಶನ ಪ್ರವರ್ತಕನಾದ ಋಷಿ, ಅಹಲ್ಯೆಯ ಪತಿ.
ಗ್ರೈವೇಯಕ ಕಂಠಹಾರ, ಕೊರಳುಸರ.
ಚರಮಶ್ಲೋಕ ಭಗವದ್ಗೀತೆಯ ೧೮ನೆಯ ಅಧ್ಯಾಯದ ೬೬ನೆಯ ಶ್ಲೋಕ.
ಚತುರ್ವರ್ಗ ಕುದುರೆ, ಆನೆ, ರಥ ಮತ್ತು ಕಾಲ್ಬಲ ಎಂಬ ನಾಲ್ಕು ಪ್ರಕಾರದ ಸೈನ್ಯ.
ಚಮ್ಮಟಿಗೆ ಒಂದು ಸಾಮಾನ್ಯ ಆಯುಧ ; ಚರ್ಮದ ಪಟ್ಟಿಕೆ.
ಚಿನಿವಾಲು ಚೆನ್ನಾಗಿ ಕಾಯಿಸಿದ ಹಾಲು, ಕೆನೆಹಾಲು.
ಚುನ್ನ ಕಟಕಿ, ವ್ಯಂಗ್ಯ
ಚೌವೀಧಿ ಮುಖ್ಯ ಬೀದಿ. ಒಂದನ್ನೊಂದು ಲಂಬವಾಗಿ ಛೇದಿಸುವ ಬೀದಿ, ಚಚ್ಚೌಕು ಬೀದಿ.
ಜಕ್ಕಂದೊಳಲಿ ಕೋಣ
ಜಗುನೆ ಯಮುನಾ ನದಿ

ಜಂಘೆ ಕಿಱುದೊಡೆ.

ಜೈಮಿನಿ ಮೀಮಾಂಸಾ ಅಥವಾ ಪೂರ್ವಮೀಮಾಂಸಾದರ್ಶನದ ಪ್ರವರ್ತಕ.

ಜೊಂಪ ಗೊಂಚಲು, ಗೊನೆ, ಸಮೂಹ.

ಜೋಡುತನ ವೇಶ್ಯಾಗಮನ, ವಿಷಯಲಂಪಟತ್ವ.

ಢಕ್ಕೆ ಒಂದು ರೀತಿಯ ದುಡಿ, ಚರ್ಮವಾದ್ಯ, ಡಮರು.

ತಕ್ಕು ಯೋಗ್ಯತೆ, ಸಾಮರ್ಥ್ಯ, ಸೊಕ್ಕು.

ತಕ್ಕುಮಿಗು ಯೋಗ್ಯತೆ ಹೆಚ್ಚು. ಸೊಕ್ಕೇರು.

ತಟ್ಟುಚುರ್ ನಟ್ಟುಪಾರಾಗು, ಆರುಪಾರಾಗು, ತುಂಡುಗಡಿ.

ತಲೆವಳ್ಳಿ ಮುಖ್ಯವಳ್ಳಿ, ಮೂಲ ಕೋಟೆ.

ತಾರ್ಕ್ಷ್ಯ ಗರುಡ.

ತಿಱಿಕಲ್ಲು ಒಂದು ಆಟ.

ತಿರ್ಯಕ್ ಪ್ರಾಣಿ-ಪಕ್ಷಿಗಳು.

ತುಂಡೀರದೇಶ ಕರ್ನಾಟಕದ ಪೂರ್ವಕ್ಕಿರುವ ಆಂಧ್ರ ತಮಿಳು ನಾಡುಗಳ ಪ್ರದೇಶ.

ತುತ್ತು ನುಂಗು.

ತುಂಬುರು ಗಾನವಿಶಾರದನಾದ ಒಬ್ಬ ಗಂಧರ್ವ.

ತುರುಷ್ಕ ಯವನ, ಮುಸಲ್ಮಾನ.

ತುಟಿಲಾಳ್ ಬಂಟ, ವೀರ.

ತೆತ್ತಿಸು ಕೊಡಹಚ್ಚು ; ನಿರ್ಮಿಸು, ಮಾಡಿಸು.

ತೆತ್ತೈಸು ಒಟ್ಟುಗೂಡು.

ತೆಲುಂಗರಾಯರು ತೆಲುಗುರಾಜರು, ತಾಳೀಕೋಟೆಯ ಯುದ್ಧಾನಂತರ ಅಧಿಕಾರಕ್ಕೆ ಬಂದ ವಿಜಯನಗರದ ಅರಸರು.

ತೇಜಂಗೆಯ್ ಬಹುಮಾನಿಸು, ಮರ್ಯಾದೆಮಾಡು.

ತ್ರಿದಂಡ ಮುಕ್ಕೋಲು, ಸನ್ಯಾಸಿಗಳು ಹಿಡಿಯುವ ಟಿಸಿಲಾದ ಕೋಲು.

ತ್ರಿವರ್ಗ ಸತ್ವ, ರಜಸ್ಸು, ತಮಸ್ಸೆಂಬ ಮೂರು ಗುಣಗಳು.

ತ್ರೈವರ್ಗಿಕ ಫಲ ಲೌಕಿಕ, ಸ್ವರ್ಗೀಯ, ಪರಮಪದ ಎಂಬ ಫಲಗಳು.

ದಟ್ಟಿಗಟ್ಟಿಸು ಟೊಂಕಕಟ್ಟಿಸು, ಹುರಿದುಂಬಿಸು.

ದಡಿವಲೆ ಒಂದು ಬಗೆಯ ಬಲೆ.

ದಂಡಿಗೆ ಅಂದಣ, ಅಂದಳ.

ದಂಡಿಗೆಯಿಕ್ಕು (ಕುಳಿತುಕೊಳ್ಳಲು) ಪಲ್ಲಕ್ಕಿಯನ್ನು ಸಿದ್ಧಗೊಳಿಸು ; ಮರ್ಯಾದೆಮಾಡು.

ದಾಮೋದರ ಕೃಷ್ಣ.

ದಾಮೋದರ ಬಂಧನ ಪೊಡೆಕಟ್ಟು, ಹೊಟ್ಟೆಯ ಮೇಲಿರುವ ಹಗ್ಗದ ಕಟ್ಟು.

ದಿಂಟೆ ತಗ್ಗು ನೀರು ಹರಿದ ಪ್ರದೇಶ.

ದಿವ್ಯ ಪ್ರಬಂಧ, ದ್ರಾವಿಡ ದಿವ್ಯ ಪ್ರಬಂಧ=ದ್ರಾವಿಡ ಪ್ರಬಂಧ, ಆಟ್ವಾರರಿಂದ ರಚಿತವಾದ ಗೀತರೂಪದ ಸ್ತುತಿಗಳು. ಇವು ನಾಲ್ಕು ಸಾವಿರ ಇರುವುದರಿಂದ 'ನಾಲಾಯಿರ ದಿವ್ಯ ಪ್ರಬಂಧಂ' ಎಂದು ಕರೆಯಲಾಗುತ್ತಿದೆ. ವಿಷ್ಣುಭಕ್ತಿ ಮತ್ತು ತತ್ವ ವಿಚಾರಗಳು ಇವುಗಳಲ್ಲಿ ಪ್ರತಿಪಾದಿತವಾಗಿವೆ.

ದುಂಧುಮಾರ ಸೂರ್ಯವಂಶದ ಶತ್ರುಜಿತನ ಮಗ. ಋತಧ್ವಜನೆಂಬುದು ಮೊದಲಿನ ಹೆಸರು. ಗಾಲವ (ಉತ್ತಂಕ) ಮುನಿಯ ತಪಕ್ಕೆ ಭಂಗತಂದ ರಾಕ್ಷಸನನ್ನು ಕೊಂದವನು.

ದುವ್ವಾಳಿಪುದು ಮುನ್ನುಗ್ಗುವುದು.

ದೌಹೃದಯ ಬಯಕೆ, ಗರ್ಭಿಣಿಯ ಬಯಕೆ.

ದ್ರವಿಡ ತಮಿಳುಭಾಷೆ, ತಮಿಳುದೇಶ.

ದ್ರಾವಿಡ ಪ್ರಬಂಧ ದಿವ್ಯಪ್ರಬಂಧ

ದ್ರೇಕ್ಕಾಣ ದ್ವಾದಶ ರಾಶಿಗಳಲ್ಲಿ ಪ್ರತಿಯೊಂದನ್ನು ವಿಭಾಗಿಸುವಲ್ಲಿ ಉಂಟಾಗುವ ಒಂದು ಭಾಗ. ಪ್ರತಿರಾಶಿಯ ಮೂರನೆಯ ಒಂದಂಶ

ಧರ್ಮಪಾದಗಳು ಮೂಲತಃ ಇವು ನಾಲ್ಕು ಎಂಬ ಭಾವನೆಯಿತ್ತು. ವಿದ್ಯೆ, ದಾನ (ದಯೆ) ತಪಸ್ಸು, ಸತ್ಯವೆಂಬ ನಾಲ್ಕು ಪಾದಗಳು.

ಧರ್ಮಶಾಸ್ತ್ರ ಸ್ಮೃತಿ, ಸಾಮಾಜಿಕ ನಿಯಮಾವಳಿಗಳನ್ನು ವಿವರಿಸುವ ಗ್ರಂಥಗಳು. ಪ್ರಾಚೀನ ಭಾರತೀಯರ ಕಾಯದೆ ಗ್ರಂಥಗಳು.

ಧೌಮ್ಯ ಪಾಂಡವರ ಪುರೋಹಿತ.

ನಯನ ಒಂದು ಕ್ಷೇತ್ರದ ಹೆಸರು.

ನವಪ್ರಜೇಶರು ಭೃಗು, ಪುಲಸ್ತ್ಯ, ಪುಲಹ, ಕ್ರತು, ಅಂಗೀರಸ, ಮರೀಚಿದಕ್ಷ, ಅತ್ರಿ, ವಶಿಷ್ಟ, ಎಂಬ ೯ ಜನ ಪ್ರಜಾಪತಿಗಳು.

ನವನಿಧಿಗಳು ಕುಬೇರನ ಒಂಬತ್ತು ನಿಧಿಗಳು. ಪದ್ಮ ಮಹಾಪದ್ಮ ಶಂಖ, ಮಕರ, ಕಚ್ಛಪ, ಮುಕುಂದ, ನಂದ, ನೀಲ, ಖರ್ವ ಎಂಬುವು.

ನವಸುಧಾಲೇಪ ಹೊಸಸುಣ್ಣ ಬಳಿಯುವುದು.

ನಹುಷ ಚಂದ್ರವಂಶದ ಒಬ್ಬ ದೊರೆ. ನೂರು ಅಶ್ವಮೇಧ ಯಾಗಗಳನ್ನು ಮಾಡಿ ಇಂದ್ರ ಪದವಿ ಪಡೆದ. ಆದರೆ ಅಲ್ಲಿ ತನ್ನ ದುರ್ನಡತೆಯಿಂದ ಶಪಿಸಲ್ಪಟ್ಟವನಾಗಿ ಹಾವಾಗಿ ಭೂಮಿಗೆ ಬಿದ್ದ. ಧರ್ಮರಾಯನಿಂದ ಶಾಪಮುಕ್ತನಾದ.

ನಳ ಚಂದ್ರವಂಶದ ದೊರೆ. ನಿಷಧ ದೇಶದ ರಾಜ. ಪಗಡೆಯಾಟದಲ್ಲಿ ಸೋತು ಅಪಾರ ಕಷ್ಟನಷ್ಟ ಅನುಭವಿಸಿ ಕೊನೆಗೆ ಸುಖಪಡೆದ.

ನಾಕ ಸ್ವರ್ಗ.

ನಾಗಭುವನ ಪಾತಾಳಲೋಕ.

ನಾಲ್ಕು ಉಪಾಯಗಳು ರಾಜಕಾರಣದಲ್ಲಿ ಬಳಸುವ, ಸಾಮ, ದಾನ, ಭೇದ, ದಂಡ ಎಂಬ ಉಪಾಯಗಳು.

ನಾಭಾಗ ವೈವಸ್ವತ ಮನುವಿನ ಮಗ, ಸೂರ್ಯವಂಶದ ಅರಸು, ಅಂಬರೀಷನ ತಂದೆ.

ನಿಋತಿ-ನಿರಋತಿ, ನೈಋತ್ಯದಿಕ್ಕಿನ ಅಧಿದೇವತೆ.

ನಿತ್ಯಮುಕ್ತರು ಯಾವತ್ತೂ ಮುಕ್ತಸ್ಥಿತಿಯಲ್ಲಿರುವವರು.

ನಿಯೋಗಿ ರಾಜಕಾರ್ಯಕ್ಕಾಗಿ ನಿಯಮಿತನಾದ ವ್ಯಕ್ತಿ, ಅಧಿಕಾರಿ.

ನಿರಪೇಕ್ಷ ಅಪೇಕ್ಷೆಯಿಲ್ಲದ, ಸಂಬಂಧವನ್ನು ಬಯಸದ.

ನಿರವಿಸು ನಿರೂಪಿಸು.

ನಿರುಪಾಧಿಕ ಉಪಾಧಿಯಿಲ್ಲದ, ಬಂಧನ-ಕಟ್ಟಳೆಗಳಿಲ್ಲದೆ.

ನಿರೂಪಿಸು ನಿರವಿಸು : ಆಜ್ಞಾಪಿಸು, ವಿವರಿಸು.

ನೀಟ್ಕರಿಸು ನಿಲುಕು, ಸಮೀಪಿಸು, ಮುಟ್ಟು, ಪಡೆ.

ನೆಗಟ್ ಮಾಡು, ಕಾರ್ಯಸಾಧಿಸು, ಪ್ರಸಿದ್ಧನಾಗು.

ನೆಗಟಿಸು ಮಾಡಿಸು, ಪ್ರಸಿದ್ಧಗೊಳಿಸು.

ಪಂಚತನ್ಮಾತ್ರಗಳು ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳು. ಈ ರೂಪದ ಪಂಚೇಂದ್ರಿಯ ಧರ್ಮಗಳು ; ಅನುಭವದ ಮೂಲ ಅಂಶಗಳು.

ಪಂಚಾಯುಧ ಮುದ್ರೆ ವಿಷ್ಣುವಿನ ಆಯುಧಗಳಾದ, ಶಂಖ, ಚಕ್ರ, ಗದೆ, ನಂದಕ (-ಖಡ್ಗ), ಶಾರ್ಙ್ಗಗಳ ಮುದ್ರೆ

ಪಟ್ಟಸ ಒಂದು ಬಗೆಯ ಆಯುಧ, ಈಟಿ.

ಪಡಿಕ್ರಮ ಪ್ರತಿನಿತ್ಯದ ವ್ಯವಸ್ಥೆ, ಕ್ರಮವಾದ ಆದಾಯ.

ಪಣವ ಆನಕ ಚಿಕ್ಕ-ದೊಡ್ಡ ನಗಾರಿಗಳು, ಭೇರಿಗಳು.

ಪತಂಜಲಿ 'ಅಷ್ಟಾಧ್ಯಾಯಿ'ಯ ಮೇಲೆ 'ಮಹಾಭಾಷ್ಯ' ಎಂಬ ಟೀಕೆ ಬರೆದವನು ; ಯೋಗದರ್ಶನಕಾರ.

ಪದಿನಾಱು ವಿಕಾರಗಳು ೫ ಜ್ಞಾನೇಂದ್ರಿಯಗಳು ೫ ಕರ್ಮೇಂದ್ರಿಯಗಳು ೫ ತನ್ಮಾತ್ರಗಳು ಮತ್ತು ಮನಸ್ಸು.

ಪೆನ್ನರಟ್ನಾಮ-ಹನ್ನೆರಡು ನಾಮಗಳು, ಅಷ್ಟಾಕ್ಷರೀ ಮಂತ್ರವನ್ನು ಹೇಳುತ್ತ ಹಣೆ, ಹೊಟ್ಟೆ, ಹೃದಯ, ಕಂಠಮೂಲ, ಎರಡೂ ಮಗ್ಗುಲುಗಳು, ಎರಡೂ ಭುಜಗಳು, ಎರಡೂ ಕಿವಿಗಳು, ಬೆನ್ನು ಹುರಿ ಈ ಎಡೆಗಳಲ್ಲಿ ಹಚ್ಚಿಕೊಳ್ಳುವ (ಅರಿಷಿಣದಿಂದ ಮಾಡಿದ) ಶ್ರೀಚೂರ್ಣ ಅಥವಾ ಗೋಪೀ ಚಂದನದ ನಾಮಗಳು.

ಪರತತ್ವ ಪರಬ್ರಹ್ಮ ವಿಷ್ಣು

ಪರಮಪಥನಾಥ ಪರಬ್ರಹ್ಮ ವಿಷ್ಣು

ಪರಮೇಷ್ಠಿ ಬ್ರಹ್ಮ ತ್ರಿಮೂರ್ತಿಗಳಲ್ಲಿ ಮೊದಲಿನವ.

ಪರವಾಸುದೇವ ವೈಕುಂಠವಾಸಿಯಾದ ವಿಷ್ಣು.

ಪರಾಶರ ವೇದವ್ಯಾಸರ ತಂದೆ ; ವಿಷ್ಣು ಪುರಾಣದ ಕರ್ತೃ ; ಒಬ್ಬ ಸ್ಮೃತಿಕಾರ.

ಪರಿಕರ್ಮ ಸಜ್ಜುಗೊಳಿಸುವುದು. ಅಲಂಕರಣ ಕಾರ್ಯ.

ಪಚಿಪಚಿ ಒಂದು ಬಗೆಯ ಆಟ, ಮುಟ್ಟಾಟ.
ಪಲಾಶದಂಡ ಮುತ್ತುಗದ ಮರದ ದಂಡಗಳು.
ಪಲ್ವಲ ಹೊಂಡ.
ಪಾಂಚರಾತ್ರಾಗಮಗಳು ಈ ಹೆಸರಿನ ವೈಷ್ಣವಾಗಮಗಳು. ಇವು ೧೦೮ ಇವೆ ಎಂದು ನಂಬಿಕೆ.
ಪಾಡುಪಂತ ಕಷ್ಟದ ಸ್ಪರ್ಧೆ ; ದೊಡ್ಡಪಂತ. ಅತಿಶಯವಾದ ಸ್ಪರ್ಧೆ.
ಪಾಣಿನಿ 'ಅಷ್ಟಾಧ್ಯಾಯಿ' ಎಂಬ ಸಂಸತ ವ್ಯಾಕರಣ ಗ್ರಂಥ ಬರೆದ ಪ್ರಖ್ಯಾತ ವೈಯಾಕರಣಿ.
ಪಾಯಕ ಕಾಲುದಳ
ಪಾರುಗಟ್ಟಿಗೆಯುವನು (=ಪಾರಿ ಹಸ್ತಿಕ ?), ಚತುರ, ಚತುರ ಹೋರಾಟಗಾರ.
ಪಾರ್ವಿತಿ ಬ್ರಾಹ್ಮಣ ಸ್ತ್ರೀ
ಪಾಂಚಕಾಲಿಕ ಅಯ್ದು ಕಾಲಗಳಲ್ಲಿ ಮಾಡಬೇಕಾದ.
ಪಾಂಚಜನ್ಯ ಕೃಷ್ಣನ ಕೈಯಲ್ಲಿಯ ಶಂಖದ ಹೆಸರು.
ಪಾಲಸ (ಸಂ. ಪಾಲಸ್ = ಉಗುಳು, ಎಂಜಲು) ಮಾಲಿನ್ಯ. ಎಂಜಲು.
ಪಾವುಡ ಪಾಗುಡ : ಉಡುಗೊರೆ, ಕಾಣಿಕೆ.
ಪಾೞಂಬಳೆ ಚಕ್ರ
ಪಿತೃಘಾತಿ ಪಿತೃದ್ರೋಹಿ, ತಂದೆ-ತಾಯಿಗಳಿಗೆ ಅನ್ಯಾಯ ಬಗೆಯುವವನು.
ಪುಂಡರೀಕ ಬಿಳಿಯ ಕಮಲ.
ಪುಂಡರೀಕಕರ್ಣಿಕಾಯಮಾನ ಬಿಳಿಯ ಕಮಲದ ಕರ್ಣಿಕೆಯಂತಿರುವ.
ಪುಯ್ನಡು ಸೆಳೆನಡು, ಚಿಕ್ಕದಾದ ನಡು.
ಪುರುಷ ಸೂಕ್ತ ಋಗ್ವೇದದ ಪ್ರಸಿದ್ಧವಾದ ಒಂದು ಸೂಕ್ತ.
ಪುರುಳ್ ಹುರುಳು, ಧನ, ಸಂಪತ್ತು.
ಪುರುಳಿ ಗಿಳಿ, ಹೆಣ್ಣುಗಿಳಿ, ಸಾರಿಕೆ.
ಪೂರ್ವಪಕ್ಷ ವಾದ ಖಂಡನೆಯ ಪೂರ್ವದಲ್ಲಿ ಹೇಳುವ ಪ್ರತಿವಾದಗಳ ವಾದ ಸಾರಾಂಶ. ಪ್ರತಿವಾದಿಗಳ ಪಕ್ಷ.
ಪೆಱಗೆಱ ಚಂದ್ರನಂತಿರುವ ಗೆರೆ, ನಾಮ.
ಪೆಸರ್ಪೇೞು ಹೆಸರು ಹೇಳು, ಬೇರೆಯವನ ಒಡೆತನವನ್ನು ಒಪ್ಪಿ ಅವನ ಹೆಸರು ಹೇಳು.
ಪೇರಾವೆ ದೊಡ್ಡ ಆವೆ, ವಿಷ್ಣು ಈ ರೂಪದಲ್ಲಿ ಭೂಮಿಯನ್ನು ಹೊತ್ತು ನಿಂತಿರುವನೆಂಬುದು ಪುರಾಣಗಳ ಕಲ್ಪನೆ.
ಪೊಂಜಿಳಿ ಹೊನ್ನಸೆಳೆ, ಹೊನ್ನ ಸಲಾಕೆ.
ಪೊಣರ್ ಹೋರಾಡು, ಯುದ್ಧಮಾಡು, ಪ್ರತಿಭಟಿಸು.
ಪೊಸವೇರ್ ಹೊಸಬೇರು.
ಪ್ರಚೇತಸ ವರುಣ ; ಚೈತನ್ಯಶಾಲಿ, ಜಾಗೃತ ವ್ಯಕ್ತಿ.
ಪ್ರಣಿಧಿ ನಿರೀಕ್ಷಕ, ಗೂಢಚಾರ, ಪರೀಕ್ಷಕ.

ಪ್ರಾಕಾರ ಗೋಪುರ, ಸುತ್ತುಗೋಡೆಯ ಮೇಲೆ ಕಟ್ಟಿದ ಗೋಪುರ.

ಪ್ರಾಕೃತ ಮೂಲದ, ನೈಸರ್ಗಿಕವಾದ, ಅಶುದ್ಧವಾದ.

ಪ್ರಾಡ್ವಿವಾಕ ಮುಖ್ಯನ್ಯಾಯಾಧೀಶ, ನ್ಯಾಯಾಧಿಕಾರಿ.

ಪ್ರಾಸ ಒಂದು ಬಗೆಯ ಆಯುಧ.

ಬಟ್ಟಿತ್ತು ದುಂಡುದುಂಡಾದ, ವೃತ್ತಾಕಾರದ.

ಬಣ್ಣಗೊರಳು ಇಂಪಾದ ದನಿಯುಳ್ಳ ಕೊರಳು.

ಬಣ್ಣವಾಡು ಇಂಪಾದ ಹಾಡು, ಬಣ್ಣನೆಯ ಹಾಡು.

ಬರ್ದಿಲ ಸ್ವರ್ಗ.

ಬಲಿಪೀಠ ಬಲಿ ಇಡುವ ಪೀಠ ಅಥವಾ ಜಗುಲಿ ; ಬಲಿ ಕೊಡುವ ಜಗುಲಿ.

ಬಲ್ಪೊಟಿ ದೊಡ್ಡ ಹೊಳೆ.

ಬವಣೆಗೊಳ್ ತೊಂದರೆಪಡು, ಕಷ್ಟಪಡು.

ಬಸೆ ನೆಣ, ಕೊಬ್ಬು.

ಬಾಹತ್ತನಿಯೋಗಿ (ವಿಶೇಷ ?) ಅಧಿಕಾರಿಗಳು. ಕಾರ್ಯನಿರ್ವಾಹಕರು.

ಬಾಳ (ಲ) ಚಲನ ಬಾಲದ ಅಲ್ಲಾಟ.

ಬಿಟ್ಟಿ ಪ್ರತಿಫಲ ಕೊಡದೆ ಮಾಡಿಸಿಕೊಳ್ಳುವ ಕೆಲಸ.

ಬಿನ್ನವತ್ತಳೆ (ಸಂ. ವಿಜ್ಞಾಪನಾ ಪತ್ರಿಕೆ) ವಿನಂತಿ ಪತ್ರ.

ಬಿಂದ ಸಮೂಹ.

ಬಿರಾಡ ಬಿರ್ಹಾಡ : ಬಾಡಿಗೆಯ ಮನೆ ವಸತಿಮನೆ). ಬಾಡಿಗೆಯ ಹಣ ; ಒತ್ತಾಯದಿಂದ ಸಂಗ್ರಹಿಸಿದ ಹಣ.

ಬಿರುದಂತೆಂಬರ ಗಂಡ ಟಿ. ನೋಡು.

ಬಿರ್ದು ಔತಣ, ಆತಿಥ್ಯ.

ಬೀಯ ವ್ಯಯ, ಹಾನಿ, ನಿರರ್ಥಕತೆ, ವ್ಯರ್ಥತೆ.

ಬುರುಗು ಒಂದು ವಾದ್ಯ.

ಬೆಳ್ದೀವಿ ಶ್ವೇತದ್ವೀಪ, ವಿಷ್ಣುವಿನ ಆವಾಸಸ್ಥಾನ. ಅನಂತಾಸನ, ವೈಕುಂಠ ಮತ್ತು ಶ್ವೇತದ್ವೀಪಗಳು ವಿಷ್ಣುವಿನ ವಾಸಸ್ಥಾನಗಳೆಂದು ಪೌರಾಣಿಕ ನಂಬಿಕೆ.

ಬೆಳ್ಪುಮಾಸ ಶರದೃತು.

ಬೇರ ವೈರ.

ಬೇಡಿಗೆ ಒತ್ತಾಯದ ಧಾನ್ಯ ಸಂಗ್ರಹ.

ಬೋಧಾಯನ ವೇದಾಂತದರ್ಶನಕಾರ ; ಒಬ್ಬ ಸ್ಮೃತಿಕಾರ.

ಬ್ರಹ್ಮವಿದ್ಯೆಗಳು (ಬ್ರಾಹ್ಮಣರು ಅಭ್ಯಸಿಸಬೇಕಾದ) ಉಪನಿಷತ್ತುಗಳು. ಇವು ಮೂವತ್ತೆರಡೆಂದು ತಿರುಮಲಾರ್ಯನ ಹೇಳಿಕೆ.

ಬ್ರಾಹ್ಮೀಮುಹೂರ್ತ ಬ್ರಹ್ಮನೇ ಅಧಿದೇವತೆಯಾಗಿರುವ ಸಮಯ, ಬೆಳಗಿನ ಸಮಯ.

ಭರದ್ವಾಜ ವಾಲ್ಮೀಕಿಯ ಶಿಷ್ಯನಾದ ಒಬ್ಬ ಮುನಿ, ಅರಣ್ಯವಾಸಕ್ಕೆ ಹೋಗುವಾಗ ರಾಮನು ಇವನು ಆತಿಥ್ಯಪಡೆದನು.

ಭಿಂಡಿವಾಳ ದೊಣ್ಣೆ, ಉದ್ದಗುದಿಗೆ, ಒಂದು ಬಗೆಯ ಆಯುಧ.

ಮಂಗಳವರ ಅಶ್ವತ್ಥ ವೃಕ್ಷ, ದೇವಾಲಯದ ಒಂದು ಭಾಗದಲ್ಲಿರುವ ಅರಳಿಮರ.

ಮಣಿಘೃಣಿ ರತ್ನಕಾಂತಿ, ರತ್ನಪ್ರಕಾಶ.

ಮಂಡನಾಯಿತ ಶೋಭಿಸಿರುವ, ಮಂಡಿಸಿರುವ, ಒಪ್ಪಿರುವ.

ಮಂಡೆ ತಲೆ, ಶಿರ.

ಮಂತ್ರರತ್ನ ಶ್ರೀ ವೈಷ್ಣವರು ಶ್ರೇಷ್ಠವೆಂದು ಭಾವಿಸುವ ಮಂತ್ರ.

ಮಱೆ ವಂಚನೆ ; ಮರವೆ, ಮೋಸ, ವಂಚಿಸು ಕಣ್ಣುತಪ್ಪಿಸು, ಮರೆಸು.

ಮಱೆವಳ್ಳಿ ಮರೆಯಲ್ಲಿಯ ಹಳ್ಳಿ, ಚಿಕ್ಕಹಳ್ಳಿ.

ಮಱೆವುಯಿಲು = ಮಱೆಹುಯಿಲು, ಮೋಸದ ಯುದ್ಧ, ಪ್ರಚ್ಛನ್ನಯುದ್ಧ.

ಮಲಗು ಮಲಗಿಕೋ ; ತಲೆದಿಂಬು, ಆಸರೆ.

ಮಲಂಗು -- " --

ಮಹಾದಾನಗಳು ಇವು ಹದಿನಾರು ಎಂದು ಹೇಳಲಾಗುತ್ತದೆ. ತುಲಾಪುರುಷ, ಹಿರಣ್ಯಾಗರ್ಭ, ತಿಲಪರ್ವತ, ಸುವರ್ಣಮೇದಿನಿ, ಕಲ್ಪವೃಕ್ಷ, ಗಣೇಶೇಶ. ಸುವರ್ಣಧೇನು, ಲಕ್ಷ್ಮಿ, ತಿಲಧೇನು. ಗೋಸಹಸ್ರ, ಹಿರಣ್ಯಾಶ್ವ, ಕನ್ಯಾ, ಹಿರಣ್ಯ ವೃಷಭ, ಆನೆ, ಲೋಕಪಾಲಾಷ್ಟಕ, ತ್ರಿಮೂರ್ತಿದಾನ.

ಮಹಾವರ್ತ ದೊಡ್ಡಸುಳಿ, ತಿರುಗುಣಿ.

ಮಹಾಹ್ರದ ದೊಡ್ಡಮಡು.

ಮುಕ್ಕೋಲು ತ್ರಿದಂಡ.

ಮುದ್ರೆವಹಿಸು ಅಧಿಕಾರಮುದ್ರೆ ಧರಿಸು, ಅಧಿಕಾರವನ್ನು ಒಪ್ಪಿಕೋ.

ಮುಂಜಿ ಮುಂಜ (ಮೆದೆ)ವೆಂಬ ಹುಲ್ಲಿನಿಂದ ಮಾಡಿದ ಉಡುದಾರ.

ಮುನ್ನೀರು ಸಮುದ್ರ.

ಮುಪ್ಪುರಿಗೊಳ್ಳು ಮೂರು ಹುರಿ ಕೂಡಿಸು, ಬಲಗೊಳಿಸು. ಸಮರ್ಥವಾಗು.

ಮೂಗುಬ್ಬಸ ಅತಿಯಾದ ಆಯಾಸ, ದಣಿವು.

ಮೂಲಮಂತ್ರ 'ಓಂ ನಮೋ ನಾರಾಯಣಾಯ' ಎಂಬ ಮಂತ್ರ.

ಮೊಗವೀಣೆ ಮುಖವೀಣೆ, ಒಂದು ವಾದ್ಯ.

ಮೊದಲ ಮೂವರು ಸೂರಿಗಳು ಸರೋಯೋಗಿ, ಭೂತಯೋಗಿ, ಮಹಾಯೋಗಿ ಎಂಬ ಮೂವರು ಆಳ್ವಾರರು.

ಮೊರಸುಸೈನ್ಯ ಬೆಂಗಳೂರು, ಕೋಲಾರ, ಮಾಗಡಿ ಪ್ರದೇಶದ ಸೈನ್ಯ.

ಮೊಲ್ಲೆ ಒಂದು ಜಾತಿಯ ಮಲ್ಲಿಗೆ.

ಮೋಡಿ ಬಿಗುವು, ಬಿಗುಮಾನ.

ಮೋಸ ತಪ್ಪು, ಮರವೆ. ಅಜ್ಞಾನ ; ವಂಚನೆ.
ಯದುರಾಜ ಚಂದ್ರವಂಶದ ಪ್ರಸಿದ್ಧ ದೊರೆ ಯಯಾತಿಯ ಹಿರಿಯಮಗ.
ಯವನ ತುರುಷ್ಕ.
ಯಾಜ್ಞವಲ್ಕ್ಯ ಒಬ್ಬ ಸ್ಮೃತಿಕಾರ ; ಪ್ರಸಿದ್ಧನಾದ ಒಬ್ಬ ಋಷಿ.
ಯೋಗ ಪತಂಜಲಿಯಿಂದ ಪ್ರವರ್ತನೆಗೊಂಡ ಪ್ರಖ್ಯಾತ ದರ್ಶನ. ಅಷ್ಟಾಂಗ ಯೋಗ.
ರತ್ನಗಳು ರಾಜನಲ್ಲಿರುವ ಶ್ರೇಷ್ಠವಾದ ವಸ್ತುಗಳು. ಚಕ್ರ ಅಥವಾ ಆಯುಧ ಅಥವಾ ಸೈನ್ಯ, ರಥ, ರತ್ನಗಳು, ಸ್ತ್ರೀ, ನಿಧಿಗಳು, ಅಶ್ವ, ಗಜ ಮುಂತಾದ ವಸ್ತು ವಾಹನಾದಿಗಳು.
ರಸ ರಸ ಪದಾರ್ಥಗಳು.
ರಾಜಾವರ್ತ ನೀಲಿರತ್ನ, ನೀಲಮಣಿಯಲ್ಲಿಯ ಒಂದು ಪ್ರಕಾರ.
ರಾಯಸ ರಾಜನಿಂದ ಹೊರಟ ಪರಿಪತ್ರ, ಆಜ್ಞೆ ಮುಂತಾದವು.
ರಾಯಸಿಗ ರಾಯಸದವ, ರಾಯಸದ ಅಧಿಕಾರಿ.
ರಾಯಸದ-ಅಕ್ಷರಚಣರು ರಾಯಸದ ಲೇಖನ ಮತ್ತು ಲಿಪಿಗಳಲ್ಲಿ ತಜ್ಞರಾದವರು.
ರಾವುತ ಅಶ್ವಾರೋಹಿ, ಅಶ್ವಾರೋಹಿ ಸೈನ್ಯ.
ರುಕ್ಮಾಂಗದ ಏಕಾದಶೀ ವ್ರತಮಾಡಿ ಹೆಸರಾದ ಒಬ್ಬ ರಾಜ.
ರೈವತಕ ಒಂದು ಮನ್ವಂತರದ ಒಡೆಯ, ಬ್ರಹ್ಮಸಭೆಗೆ ಹೋದವನು.
ಲಗ್ನ ಸಮಯ, ಗಳಿಗೆ, ಜ್ಯೋತಿಷ್ಯದಲ್ಲಿ ನಿಶ್ಚಿತವಾದ ಕ್ಷಣ.
ಲಂಬಣಮಾಲೆ ; ಮಾಲೆಗಳ ಸಮೂಹ ; ತೂಗು ಬಿಟ್ಟ ಮಾಲೆಗಳು.
ಲಾವಣಿಗೆ ಸಂಗ್ರಹಣೆ ; ದರ್ಶನ ; ನೋಟ ; ನೋಡಿ ಅಂದಾಜು ಮಾಡುವುದು, ಪರಾಂಬರಿಕೆ.
ಲಾವಣಿಗೆಗೊಳ್ ಸಂಗ್ರಹಿಸು ; ನಿರೀಕ್ಷಿಸು ; ಭೆಟ್ಟಿಯಾಗು.
ಲಾವುಗೆ ಒಂದು ಹಕ್ಕಿ, ಲಾವಕ್ಕಿ.
ವಂಕಿ ಒಂದು ಬಗೆಯ ಕತ್ತಿ ; ಹರವಾದ ಕತ್ತಿ.
ವಜೀರ ಮಂತ್ರಿ.
ವಾರಾಹ ಪಶ್ಚಿಮ ಕರಾವಳಿಯ ಕುಮಾರಸ್ವಾಮಿಯ ಕ್ಷೇತ್ರ.
ವಿದ್ಯಾನಗರಿ, ವಿದ್ಯಾನಗರ, ಹಂಪೆ, ವಿಶ್ವವಿಖ್ಯಾತ ವಿಜಯನಗರ ಸಾಮ್ರಾಜ್ಯದ ರಾಜಧಾನಿ.
ವಿಪಶ್ಚಿತ್ ಪಂಡಿತ, ವಿದ್ವಾಂಸ.
ವಿಭವ ವೈಭವ, ಅವತಾರ, ಅವತಾರರೂಪಿ ದೇವರು.
ವಿವಾಕ ನ್ಯಾಯಾಧೀಶ, ನ್ಯಾಯಾಧಿಕಾರಿ.
ವಿಷ್ವಕ್ಸೇನ ವಿಷ್ಣುವಿನ ಸೇನಾಪತಿ ; ವಿಷ್ಣು.
ವಿಷುಕರ್ಕಾಟಕ ಕರ್ಕಾಟಕದ ಮಧ್ಯಸ್ಥಾನ ; ಕರ್ಕಾಟಕರಾಶಿಯ ಮಧ್ಯರೇಖೆ.
ವೃಷ್ಯ ಕಾಮೋದ್ದೀಪಕ.
ವೇದತ್ರಯ ಋಗ್ವೇದ, ಸಾಮವೇದ, ಯಜುರ್ವೇದ.
ವೇಲೆ ಅಂಚು, ದಂಡೆ, ತರಂಗ.

ವೈಮಾನಿಕರು ವಿಮಾನದಲ್ಲಿರುವವರು, ದೇವತೆಗಳು.

ವೈಯಾಳಿ ವೈಹಾಳಿ, ವಿಹಾರ, ಕುದುರೆಯ ಸವಾರಿ.

ವೈಷ್ಣವಭದ್ರತಿಥಿ ದ್ವಾದಶಿ

ವ್ಯಾಜ ನೆವ, ಕಾರಣ.

ವ್ಯಾಸ ಮಹಾಭಾರತಾದಿ ಕೃತಿಗಳ ಕರ್ತೃ ; ವೇದಾಂತದರ್ಶನ ಪ್ರವರ್ತಕನಾದ ಋಷಿ.

ಷಾಡ್ಗುಣ್ಯ ಸಂಧಿ, ವಿಗ್ರಹ= ಯುದ್ಧ, ಯಾನ=ದಾಳಿ, ಆಕ್ರಮಣ, ಆಸನ=ಬೀಡು ಬಿಡುವುದು, ತಳವೂರುವುದು, ಸಂಶ್ರಯ=ಆಶ್ರಯ ಪಡೆಯುವುದು.

ದ್ವೈಧೀಭಾವ ಇಬ್ಬಗೆಯ ನೀತಿ.

ಷೋಡಶೋಪಚಾರಗಳು ಹದಿನಾರು ಬಗೆಯ ಉಪಚಾರಗಳು : ಆಸನ, ಸ್ವಾಗತ, ಪಾದ್ಯ, ಅರ್ಘ್ಯ, ಆಚಮನೀಯ, ಮಧುಪರ್ಕ, ಆಚಮನ, ಸ್ನಾನ, ವಸನ, ಆಭರಣ, ಗಂಧ, ಪುಷ್ಪ, ಧೂಪ, ದೀಪ, ನೈವೇದ್ಯ, ವಂದನೆ ಎಂಬ ಸೇವೆಗಳು.

ಶಕ್ತಿತ್ರಯ ರಾಜನಾಗಿರಬೇಕಾದ ಪ್ರಭು, ಮಂತ್ರ, ಉತ್ಸಾಹಗಳೆಂಬ ಮೂರು ಶಕ್ತಿಗಳು.

ಶಚಿ ದೇವೇಂದ್ರನ ರಾಣಿ.

ಶಠಕೋಪ, ಶಠಾರಿ } ಆಳ್ವಾರರಲ್ಲಿ ಒಬ್ಬ ; ಈ ಹೆಸರಿನ ಪಾದುಕೆಗಳು

ಶತಘ್ನಿ ತೋಪು

ಶಬರ ಬೇಡ, ಮೀಮಾಂಸಾದರ್ಶನದ ಸೂತ್ರಗಳಿಗೆ ಭಾಷ್ಯ ಬರೆದವನು.

ಶಶಿಬಿಂದು ವೃಷ್ಣಿವಂಶದ ರಾಜರ್ಷಿ, ಇವನ ನ್ಯಾಯ-ನೀತಿಗಳನ್ನನುಸರಿಸಿ ಅನೇಕ ರಾಜರು ರಾಜರ್ಷಿಗಳೆನಿಸಿದರು.

ಶಾಕ ಕಾಯಿಪಲ್ಲೆ, ತರಕಾರಿ.

ಶಾರ್ಙ್ಗ ವಿಷ್ಣುವಿನ ಬಿಲ್ಲು

ಶಾರ್ಙ್ಗಧರ, ಶಾರ್ಙ್ಗಿ } ವಿಷ್ಣು

ಶೂಡಿಕ್ಕುಡುತ್ತೆನಾಚ್ಚಿಯಾರ್ ಅಂಡಾಳ್ ಅಥವಾ ಗೋದಾದೇವಿ.

ಶೂರ ಯಾದವ ದೊರೆ, ವಸುದೇವನ ತಂದೆ.

ಶೇಷತಲ್ಪ ವಿಷ್ಣುವಿನ ಹಾಸಿಗೆಯಾಗಿರುವ ಆದಿಶೇಷನ ಮೈಹಾಸಿಗೆ.

ಶೇಷತ್ವ ಪಾರತಂತ್ರಗಳು ಪರಮಾತ್ಮನ ಅಂಶ (=ಶೇಷ)ವೇ ತಾನು ಎಂಬ ಮತ್ತು ಆ ಅಂಶಕ್ಕೆ ಪರಮಾತ್ಮನನ್ನು ಮೀರಿದ ಸ್ವಾತಂತ್ರ್ಯವಿಲ್ಲವೆಂಬ ಭಾವನೆ.

ಶೌನಕ ಒಬ್ಬ ಋಷಿ, ಋಗ್ವೇದ ಪ್ರಾತಿಶಾಖ್ಯದ ಕರ್ತೃ.

ಶ್ರಿಯಃಪತಿ ವಿಷ್ಣು.

ಶ್ರೀಚೂರ್ಣ (ಹಣೆಯ) ನಾಮದ ನಡುವಿನ ಗೆರೆ, ಅರಿಶಿನದಿಂದ ಮಾಡಿದ ಲೇಪನದ ಗೆರೆ.

ಶ್ರೀಮೃತ್ತಿಕೆ ಸಿರಿವಣ್, ನಾಮಕ್ಕಾಗಿ ಬಳಸುವ ಬಿಳಿಮಣ್ಣು.

ಶ್ರುತಪ್ರಕಾಶಿಕೆ ಶ್ರೀಭಾಷ್ಯೆಯ ಮೇಲಿನ ವ್ಯಾಖ್ಯಾನ. ಸುದರ್ಶನ ಇದರ ಕರ್ತೃ.

ಶ್ರುತಿನಿಶ್ಚಿಯ ವೇದಗಳ ನಿಶ್ಚಿತಾರ್ಥ.

ಶ್ರೌತಸ್ಮಾರ್ತಕರ್ಮ ಶ್ರುತಿ ಮತ್ತು ಸ್ಮೃತಿಗಳಿಗನುಸಾರವಾಗಿ ಮಾಡಬೇಕಾದ ವಿಧಿಗಳು, ಕರ್ಮಗಳು, ಕ್ರಿಯೆಗಳು.

ಶ್ವೇತದ್ವೀಪ ಬೆಳ್ದೀವಿ.

ಸಕಲರತ್ನಗಳು ರತ್ನಗಳು, ರಾಜನಲ್ಲಿರಬೇಕಾದ ಶ್ರೇಷ್ಠ ವಸ್ತುಗಳು.

ಸಂಗರಣ ವ್ಯಾಯಾಮದ ಒಂದು ಸಾಧನ.

ಸತತ ಪ್ರತ್ಯಂಗ ನರ್ತಿತ ನಿಜಲಕ್ಷ್ಮೀಶ ಎಲ್ಲ ಅಂಗಾಂಗಗಳಲ್ಲಿ ಯಾವತ್ತೂ ಕಾಂತಿದುಂಬಿರುವ, ಕಾಂತಿ ನರ್ತಿಸುತ್ತಿರುವ.

ಸನತ್ಕುಮಾರ ಸೃಷ್ಟಿಯ ಆದಿಯಲ್ಲಿದ್ದರೆಂದು ಹೇಳಲಾದ ನಾಲ್ಕು ಜನ ಬ್ರಹ್ಮಪುತ್ರರಲ್ಲಿ ಒಬ್ಬ ಮುನಿ.

ಸಪ್ತಾಂಗ ಸ್ವಾಮಿ, ಅಮಾತ್ಯ, ಜನಪದ, ದುರ್ಗ, ಕೋಶ, ಸೈನ್ಯ, ಮಿತ್ರರೆಂಬ ಏಳು ಅಂಗಗಳು, ರಾಜ್ಯದ ಅಂಗಗಳು.

ಸಬಳ ದೊಣ್ಣೆ, ಕೊಂತ, ಒಂದು ಆಯುಧ.

ಸಮಾಶ್ರಯಣ ಆಚಾರ್ಯರನ್ನು ಆಶ್ರಯಿಸುವುದು ; ದೀಕ್ಷೆಹೊಂದುವುದು, ಸಂಸ್ಕಾರ ಪಡೆಯುವುದು.

ಸರಗೋವಿ ಒಂದು ಪ್ರಕಾರದ ಕೋವಿ, ಬೇಟೆಯ ಕೋವಿ.

ಸರಿಗೆ ಸಲಾಕೆ, ತ್ರಿಶೂಲ ?

ಸಲಗೆ ಬಂಗಾರದ ಎಳೆ, ಬಂಗಾರದ ತಂತಿ.

ಸವಣ ಅಕ್ಕಸಾಲಿಗರ ಲೋಹಫಲಕ ; ಒಂದು ಸಾಧನ ; ಕಂಬಚ್ಚು.

ಸಂಹಾರನ್ಯಾಸ ಸೃಷ್ಟಿನ್ಯಾಸ : ವಿಧಿಪೂರ್ವಕವಾದ ಸ್ಪರ್ಶಕ್ರಿಯೆ, ಶುದ್ಧೀಕರಣ ಕ್ರಿಯೆ.

ಸಾಂಖ್ಯ ಕಪಿಲಋಷಿಯಿಂದ ಪ್ರಣೀತವಾದ ದರ್ಶನ.

ಸಾಂದೀಪ(ನಿ) ಕೃಷ್ಣ-ಬಲರಾಮರ ಗುರು. ಪಂಚಜನನೆಂಬ ರಾಕ್ಷಸನು. ಇವನ ಮಗನನ್ನು ಅಪಹರಿಸಿಕೊಂಡು ಹೋಗಿರಲು ಕೃಷ್ಣನು ಸಮುದ್ರ ಪ್ರವೇಶಿಸಿ ಅವನನ್ನು ತಂದನು.

ಸಿಲೌನ್ನತ್ಯ ಸೌಧಗಳ ಎತ್ತರ.

ಸಿಡಿದಲೆ (ಸಿಡಿವಲೆ ?) ಒಂದು ಪ್ರಕಾರದ ಬಲೆ.

ಸಿರಿವಣ್ ಶ್ರೀಮೃತ್ತಿಕೆ, ತಿರುಮಣ್ಣು.

ಸೀತಾರಣ್ಯ ಒಂದು ಕ್ಷೇತ್ರ, ವಿಜಾಪುರ ಜಿಲ್ಲೆಯ ಸೀತೀಮನಿ ?

ಸೀರ್ಮೀನು ಹಾರುವ ಜಾತಿಯ ಒಂದು ಮೀನು, ಸಿಡಿಯುವ ಮೀನು.

ಬುಂಟಿಗೆ ಗುಂಡಿಗೆ, ಹೃದಯ.

ಬುಂಟಿಗೆಗಳೆ ಗುಂಡಿಗೆಯನ್ನು ತೆಗೆ, ಗುಂಡಿಗೆಯನ್ನು ಕೀಳು.

ಸುದರ್ಶನ ಶ್ರೀಭಾಷ್ಯದ ಮೇಲಿನ ಟೀಕೆಯಾದ 'ಶ್ರುತಪ್ರಕಾಶಿಕೆಯ ಕರ್ತೃ.'

ಸೂಪ ರಸ ಅಥವಾ ಸಾರು.

ಹನ್ನೆರಡು ನಾಮಗಳು ಪನ್ನೆರಟಿನ್ನಾಮ.

ಹರಿವುಕಾಣಿಸು ಗೊತ್ತಿಗೆ ಹಚ್ಚು, ಮುಗಿಸು.

ಹಾಹಾ, ಹೂಹೂ ಇಬ್ಬರು ಗಂಧರ್ವರು.

ಹುಯಿಲು ಯುದ್ಧ.

ಹೋರಾ ಕುಂಡಲಿಯಲ್ಲಿ ಒಂದು ಗಂಟೆಯ ಸಮಯ ; ಒಂದು ನಿಶ್ಚಿತ ಅವಧಿ.

❄ ❄ ❄



ಕನ್ನಡ ಸಾಹಿತ್ಯ ಪರಿಷತ್ತು

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು - ೫೬೦ ೦೧೮

ರಕ್ಷಾಪುಟ ವಿನ್ಯಾಸ : ಕೆ.ವಿ. ಪುಂಡಲೀಕ